A BRIEF HISTORY AND GUIDE TO THE CITY OF BANGALORE IN KANNADA

ನಮ್ಮ ನಿಮ್ಮ

ಬೆಂಗಳೂರು

ನಡೆದು ಬಂದ ದಾರಿ

ಪ್ರವಾಸೀ ಮಾರ್ಗದರ್ಶಿ

‘ಚಿರಂಜೀವಿ’







ಬೆಂಗಳೂರು ಸ್ಥಳ ಪರಿಚಯ ಕನ್ನಡ ಭೂಪಟಗಳು

SHOUT
SHARE
IT





ನಮ್ಮ ನಿಮ್ಮ
ಬೆಂಗಳೂರು

ನಡೆದು ಬಂದ ದಾರಿ
ಪ್ರವಾಸೀ ಮಾರ್ಗದರ್ಶಿ



'ಚಿರಂಜೀವಿ'

ವಸಂತ ಪ್ರಕಾಶನ
ನಂ. ೧೦, ತುಳಸೀವನಂ, ಬೆಂಗಳೂರು-೫೬೦೦೫೩

NAMMA NIMMA BANGALORE
-A Historical perspective and guide to the city of Bangalore.
Written by: **'CHIRANJEEVI'**
Published by: Vasantha Prakashana, No. 10, Tulasivanam, Bangalore-560053

First Edition : August 2004

Pages : vi+162

© Author

Price : Rs. 80/-

ನಮ್ಮ ನಿಮ್ಮ ಬೆಂಗಳೂರು
-ಐತಿಹಾಸಿಕವಾಗಿ, ಸಾಮಾಜಿಕವಾಗಿ ನಡೆದುಬಂದ ದಾರಿ ಮತ್ತು ಪ್ರವಾಸೀ ಮಾರ್ಗದರ್ಶಿ

ಲೇಖಕರು: **'ಚಿರಂಜೀವಿ'**
ಪ್ರಕಾಶಕರು: ವಸಂತ ಪ್ರಕಾಶನ, ನಂ. ೧೦, ತುಳಸೀವನಂ,
ಬೆಂಗಳೂರು-೫೬೦೦೫೩

ಪ್ರಥಮ ಮುದ್ರಣ : ಆಗಸ್ಟ್ ೨೦೦೪

ಪುಟಗಳು : vi+೧೬೬

© ಲೇಖಕರದು

ಬೆಲೆ : ರೂ. ೮೦/-

ಮುಖಪುಟ ವಿನ್ಯಾಸ : ಮೋನಪ್ಪ

ಛಾಯಾಕ್ಷರ ಜೋಡಣೆ:
ವರ್ಷಿಣಿ ಗ್ರಾಫಿಕ್ಸ್, ಬೆಂಗಳೂರು-೪೦ ✆ : 23402575

ಮುದ್ರಣ:
ಸ್ನೇಹಾ ಪ್ರಿಂಟರ್ಸ್, ಬೆಂಗಳೂರು-೪೦ ✆ : 23392814

ಪ್ರಕಾಶಕರ ಮಾತು

ಬೆಂಗಳೂರು ನಗರ ದರ್ಶನಕ್ಕೆ ನಿಮಗೆಲ್ಲರಿಗೂ ಸ್ವಾಗತ!

ಬೆಂಗಳೂರು ನಗರವನ್ನು ಐತಿಹಾಸಿಕ ವಾಗಿ ಮತ್ತು ಸಾಮಾಜಿಕವಾಗಿ ಪರಿಚಯಿಸುವ ಮತ್ತು 'ಗೈಡ್' ಆಗಿಯೂ ಮಾರ್ಗದರ್ಶಕವೂ ಆಗಬಲ್ಲ ಪುಸ್ತಕವೊಂದು ಕನ್ನಡದಲ್ಲಿ ಇರಲಿಲ್ಲ. ಸಾಮಾನ್ಯ ಓದುಗರಿಗೆ, ಇದೀಗ ಬೆಂಗಳೂರಿಗೆ ಬಂದಿರುವ ಪ್ರವಾಸಿಗರಿಗೆ, ಬೆಂಗಳೂರ ಬಗ್ಗೆ ಎಲ್ಲವನ್ನೂ ತಿಳಿಸುವಂಥ ಪುಸ್ತಕವೊಂದು ಬೇಕು ಎಂದು ಅನ್ನಿಸಿದ್ದರಿಂದ ಈ ಪ್ರಯತ್ನ ಮಾಡಿದ್ದೇವೆ.

ಈ ಪುಸ್ತಕದಲ್ಲಿ ಬೆಂಗಳೂರು ಇತಿಹಾಸದ ಕುರಿತು ಮತ್ತು ಬೆಂಗಳೂರು ನಗರ ನಡೆದು ಬಂದ ಮೈಲುಗಲ್ಲುಗಳ ಕುರಿತು ವಿವರಣಾತ್ಮಕ ಲೇಖನಗಳಿವೆ. ಬೆಂಗಳೂರು ನಗರದಲ್ಲಿ ನೋಡುವಂಥದ್ದು ಏನೇನಿದೆ, ಎಲ್ಲೆಲ್ಲಿದೆ, ಹೋಗಿ ನೋಡುವುದು ಹೇಗೆ? -ಬೆಂಗಳೂರಿನ ಜನ-ಜಾಗಗಳ ದರ್ಶನ ಮಾಡುವುದು ಹೇಗೆ? ಓಡಾಡಿ ಸುಸ್ತಾದರೆ ಒಳ್ಳೆಯ ರುಚಿಕರ ತಿಂಡಿ ತಿನಿಸು ಕಾಫಿ ಮತ್ತು ಊಟ ಎಲ್ಲೆಲ್ಲಿ ಸಿಗುತ್ತವೆ? ವಸತಿ ಸೌಕರ್ಯ ಚೆನ್ನಾಗಿರುವ ಹೋಟಲ್‌ಗಳು ಯಾವುವು? ಬೆಂಗಳೂರಿನಲ್ಲಿ ಮನರಂಜನಾ ತಾಣಗಳು, ಸಿನಿಮಾ, ನಾಟಕ, ನೃತ್ಯ, ಸಾಹಿತ್ಯ- ಸಂಸ್ಕೃತಿ ಕಾರ್ಯಕ್ರಮಗಳು ಎಲ್ಲೆಲ್ಲಿ ನಡೆಯುತ್ತವೆ? ಬೆಂಗಳೂರಿನಲ್ಲಿ ಸಿನಿಮಾ ನೋಡಬೇಕಾದರೆ, ಓದಲು ಪುಸ್ತಕ ಕೊಳ್ಳಬೇಕಾದರೆ ಎಲ್ಲಿಗೆ ಹೋಗಬೇಕು? ಬೆಂಗಳೂರಿನ ಪತ್ರಿಕೆಗಳು ಹೇಗೆ-ಏನು?

-ಹೀಗೆ ಎಲ್ಲ ವಿವರಗಳನ್ನೂ ಈ ಪುಸ್ತಕ ಕೊಡುತ್ತದೆ. ಜೊತೆಗೆ, ಉದ್ಯಾನಗಳು ಮತ್ತು ಬೆಂಗಳೂರಿನ ಬಡಾವಣೆಗಳ ಪರಿಚಯ, ಬೆಂಗಳೂರು ನಗರದ ಹೊರವಲಯದಲ್ಲಿ ನೋಡ ಬೇಕಾದ ತಾಣಗಳು ಮತ್ತು ಬೆಂಗಳೂರಿನಲ್ಲಿ ಇದ್ದು ನೋಡಬಹುದಾದ ದೂರ ದೂರದ ಕರ್ನಾಟಕ ಪ್ರವಾಸೀ ತಾಣಗಳು -ಇವುಗಳ ಬಗ್ಗೆಯೆಲ್ಲ ತುಂಬಾ ಆತ್ಮೀಯವಾದ ವಿವರಣೆ ಇದೆ.

ಕನ್ನಡದಲ್ಲಿ ಹೀಗೊಂದು ಆತ್ಮೀಯ ಪರಿಚಯ ನೋಟ ಪ್ರಕಟವಾಗುತ್ತಿರುವುದು ಇದೇ ಮೊದಲು ಎಂದು ನಾವು ಭಾವಿಸಿಕೊಂಡಿದ್ದೇವೆ.

ನಮ್ಮ ಕೋರಿಕೆಯನ್ನು ಪುರಸ್ಕರಿಸಿ ಈ ಪುಸ್ತಕವನ್ನು ರಚಿಸಿಕೊಟ್ಟ ಲೇಖಕ-ಪತ್ರಕರ್ತ ಶ್ರೀ 'ಚಿರಂಜೀವಿ' ಅವರಿಗೆ ಧನ್ಯವಾದಗಳು.

-ಪ್ರಕಾಶಕರು

ಪರಿವಿಡಿ

೧. ಹಲೋ, ಬೆಂಗಳೂರು! ... ೧

೨. ಹಾಯ್, ಬೆಂಗಳೂರು! ... ೧೦

೩. ನಡೆದಾಡು, ಬೆಂಗಳೂರು! ... ೧೮

೪. ಪಿನ್‌ಕೋಡ್, ಬೆಂಗಳೂರು! ... ೨೨

೫. ಹಸಿರು, ಬೆಂಗಳೂರು! ... ೩೩

೬. ಸಂಚಾರ, ಬೆಂಗಳೂರು! ... ೪೫

೭. ತಿಂಡಿತೀರ್ಥ, ಬೆಂಗಳೂರು! ... ೫೮

೮. ಎಂಟಿಆರ್, ಬೆಂಗಳೂರು! ... ೬೫

೯. ಹೋಟಲ್, ಬೆಂಗಳೂರು! ... ೭೧

೧೦. ತರಕಾರಿ, ಬೆಂಗಳೂರು! ... ೭೮

೧೧. ನೋಡುವ, ಬೆಂಗಳೂರು! ... ೮೩

೧೨. ಪಬ್, ಬೆಂಗಳೂರು! ... ೯೮

೧೩. ನಮಸ್ಕಾರ, ಬೆಂಗಳೂರು! ... ೧೦೭

೧೪. ಅಧ್ಯಾತ್ಮ, ಬೆಂಗಳೂರು! ... ೧೧೧

೧೫. ಸಿನಿಮಾ, ಬೆಂಗಳೂರು! ... ೧೧೬

೧೬. ಅಕ್ಷರ, ಬೆಂಗಳೂರು! ... ೧೨೩

೧೭. ಪ್ರವಾಸೀ, ಬೆಂಗಳೂರು! ... ೧೩೦

೧೮. ಸಾಧನೆ, ಬೆಂಗಳೂರು! ... ೧೪೪

೧೯. ೨೦೨೦, ಬೆಂಗಳೂರು! ... ೧೫೦

೨೦. ಬೈ, ಬೈ ಬೆಂಗಳೂರು! ... ೧೫೪



ವಿಧಾನಸೌಧ

ಬಡಾವಣೆಗಳು ಆಗುವ ಮೊದಲು ಬೆಂಗಳೂರು ಹೀಗಿತ್ತು!

ಲಾಲ್‌ಬಾಗ್ ಬಂಡೆಗಳ ಮೇಲೊಂದು ಕೆಂಪೇಗೌಡ ಗೋಪುರ!

೧. ಹಲೋ, ಬೆಂಗಳೂರು!

ಭಾರತದ ಅತ್ಯಂತ ಸುಂದರ ನಗರ, ಕರ್ನಾಟಕದ ರಾಜಧಾನಿ, ಉದ್ಯಾನಗಳ ನಗರ, ವಿಶ್ರಾಂತರ ವಿಶ್ರಾಂತಿಧಾಮ, ಭಾರತದ 'ಸಿಲಿಕಾನ್' ನಗರ, ಪ್ರಪಂಚದ ಪ್ರಮುಖ ನಗರಗಳಲ್ಲಿ ಒಂದು...

-ಬೆಂಗಳೂರು ಸ್ಥಾಪನೆಯಾದಾಗಿನಿಂದಲೂ ಅತ್ಯಂತ ಜನಪ್ರಿಯ ನಗರ. ಮೊದಲ ಕೆಂಪೇಗೌಡ ಸ್ಥಾಪಿಸಿದ ಊರು ಬಹಳ ಚೆನ್ನಾಗಿದೆ, ಮಾದರಿ ಊರಾಗಿದೆ ಎಂದು ವಿಜಯನಗರದ ಅರಸರು ಹೊಗಳಿದಾಗಲೇ ಇದರ ಮೇಲೆ 'ದೃಷ್ಟಿ' ತಾಗಿತ್ತು. ಕೆಂಪೇಗೌಡನಿಗೆ ಸೆರೆಮನೆ ವಾಸವಾಯಿತು. ಮರಾಠಿಗರು, ಮುಸ್ಲಿಮರು, ಮೈಸೂರು ಒಡೆಯರು, ಇಂಗ್ಲೀಷರು ಬೆಂಗಳೂರಿನ ಮೇಲೆ 'ಕಣ್ಣು' ಹಾಕಿದರು. ಅದು ಎಲ್ಲ ಜಾತಿಯವರ, ಎಲ್ಲ ಧರ್ಮದವರ, ಎಲ್ಲ ಭಾಷಿಗರ ನಗರವಾಗಿ ಹೋಯಿತು. ಮುನ್ನೂರು ವರ್ಷಗಳಿಗೂ ಹಿಂದೆ ದೆಹಲಿಯ ಬಾದಶಹಾ ಔರಂಗಜೇಬನ ಕಣ್ಣು ಬೆಂಗಳೂರಿನ ಮೇಲೆ ಬಿದ್ದಮೇಲಂತೂ ಭಾರತದ ಕಣ್ಣು ಬೆಂಗಳೂರಿನ ಮೇಲೆ ಬಿದ್ದಂತಾಯಿತು. ಅದು ಇಂದಿಗೂ ಮುಂದುವರೆದಿದೆ. ರಾಷ್ಟ್ರಮಟ್ಟದ ಯಾವುದೇ ಪ್ರಮುಖ ಆಗುಹೋಗುಗಳಿಗೆ ಬೆಂಗಳೂರು ಉತ್ತಮ ರಂಗಮಂಟಪವಾಗಿದೆ. ರಾಜಕೀಯ ಸಮ್ಮೇಳನಗಳು, ಕ್ರೀಡಾ ತರಬೇತಿ, ಅಂತಾರಾಷ್ಟ್ರೀಯ ಶೃಂಗಸಭೆಗಳು ಎಂದು ಎಲ್ಲದಕ್ಕೂ ಬೆಂಗಳೂರು ಸಾಕ್ಷಿಯಾಗಿದೆ. ಆಧುನಿಕ ತಾಂತ್ರಿಕ ಬೆಳವಣಿಗೆ, ಹೋಟಲ್ ಉದ್ಯಮ, ಫ್ಯಾಷನ್ -ಬೆಂಗಳೂರಿನ ಕಡೆ ದೃಷ್ಟಿ ಹಾಯಿಸಿವೆ.

೨೦೨೦ನೆ ಇಸವಿಯಲ್ಲಿ ಬೆಂಗಳೂರು ಭಾರತದ ಅತಿಮುಖ್ಯ ನಗರ ಆಗುತ್ತದೆ, ಪ್ರಪಂಚದ ಎಲ್ಲ ತಾಂತ್ರಿಕ ಬೆಳವಣಿಗೆಯ ಪರಿಪೂರ್ಣ ದರ್ಶನ ಬೆಂಗಳೂರಿನಲ್ಲಿ ಆಗುತ್ತದೆ. ಕಾಗದಗಳಿಲ್ಲದ, ಕಛೇರಿಗಳಿಲ್ಲದ, ಕಾಲೇಜ್‌ಗಳಿಲ್ಲದ, ನಿರ್ದಿಷ್ಟ ಉದ್ಯೋಗ ವೇಳೆಗಳಿಲ್ಲದ, ತಾಂತ್ರಿಕ ಉನ್ನತಿಯ ಮುಕ್ತ ನಗರ ಇದಾಗುತ್ತದೆ ಎಂದು ದೂರದರ್ಶಿಗಳು ಹೇಳತೊಡಗಿದ್ದಾರೆ.

ವಿಚಿತ್ರವೆಂದರೆ, ಬೆಂಗಳೂರು ಸ್ಥಾಪನೆಗೊಂಡ ಇನ್ನೂರು ವರ್ಷಗಳ ಅನಂತರವೂ ಕೆಂಪೇಗೌಡನ 'ಹೊಸ ಬೆಂಗಳೂರು' ಇದ್ದಂತೆಯೇ ಇದ್ದಿತು. ಇಂಗ್ಲಿಷರು ಬಂದಮೇಲೆ ಬೆಂಗಳೂರು ದಂಡು ಬೆಳೆಯಿತೇ ವಿನಃ ಬೆಂಗಳೂರು ನಗರ ಪ್ರದೇಶ ಬೆಳೆಯಲಿಲ್ಲ.

ಅದೇ ರಾಜಭಕ್ತಿ, ತಗ್ಗಿಬಗ್ಗಿ ನಡೆಯುವ ವ್ಯಕ್ತಿತ್ವ, ಮುನ್ನುಗ್ಗಲು ಅಧೈರ್ಯ, ಸಂಪ್ರದಾಯ -ಕಲೆ ಸಂಗೀತ ನಾಟಕ ಸಂಸ್ಕೃತಿ ಪ್ರೇಮ, ತಾತ ಮುತ್ತಾತಂದಿರ ಕಾಲದಿಂದಲೂ ಬಂದ ನೆಲಕ್ಕೇ-ಮನೆಗೇ ಅಂಟಿಕೊಂಡು ಉಳಿಯುವ ಭಾವುಕ ಮೃದುತ್ವ, ಅರಮನೆ-ಇತಿಹಾಸ ಪ್ರೇಮ... ಇದು ಬೆಂಗಳೂರು ನಗರ ಪ್ರಜೆಯ ಹೃದಯ. ಇದರ ಪ್ರಭಾವ ಹಳೆ ಮೈಸೂರು ಭಾಗದವರಲ್ಲಿ ಇಂದಿಗೂ ಮೆತ್ತಿಕೊಂಡಿದೆ. ಉತ್ತರ ಕನ್ನಡಿಗರು, ದಕ್ಷಿಣ ಕನ್ನಡಿಗರು, ಹೈದರಾಬಾದ್-ಮುಂಬೈ ಕನ್ನಡಿಗರು ಬಂದಮೇಲೆ ಬೆಂಗಳೂರು ಕನ್ನಡಿಗನ ವ್ಯಕ್ತಿತ್ವ ಹೊಸ ಸ್ವರೂಪ ಪಡೆದುಕೊಂಡಿತು. ಈಗಿನ ಹೊಸ ತಲೆಮಾರು ತಗ್ಗದ, ಬಗ್ಗದ, ಬೆದರದ ವಿಶ್ವಮಾನವರಾಗಿಯೇ ರೂಪುಗೊಂಡಿದ್ದಾರೆ, ಬೆಳೆದಿದ್ದಾರೆ.

ಬರೀ ಐವತ್ತು ವರ್ಷಗಳಲ್ಲಿ ಬೆಂಗಳೂರು ದಿಢೀರನೆ ವಿಶ್ವಮಟ್ಟದ ಆಧುನಿಕ ವ್ಯಕ್ತಿತ್ವ ಪಡೆದುಕೊಂಡುಬಿಟ್ಟಿದೆ- ಜೀವನಶೈಲಿ, ನಡವಳಿಕೆ, ವಿದ್ಯಾಭ್ಯಾಸಕ್ಕೆ ಸ್ಪರ್ಧೆ, ಹಣ ಸಂಪಾದನೆಗೆ ಕಾತರ, ಎಲ್ಲಕ್ಕೂ ನುಗ್ಗುವ ಆತುರ, ಊಟತಿಂಡಿಗಳ ಮಾನಸಿಕ ಗೋಡೆಗಳಿಲ್ಲ. ಬೆಂಗಳೂರು ತನ್ನತನವನ್ನು ಬದಲಾಯಿಸಿಕೊಂಡು ಬಿಟ್ಟಿರುವ ಹಾಗೆ, ಬೆಂಗಳೂರಿಗನೂ ತನ್ನತನವನ್ನು ಬದಲಾಯಿಸಿಕೊಂಡು ಬಿಟ್ಟಿದ್ದಾನೆ. ಬೆಂಗಳೂರಿನ ಜನ ಬದುಕಲು ಪಟ್ಟ ಕಷ್ಟ ನೋವುಗಳಿಲ್ಲ ಈಗ ಬರೀ ನೆನಪಾಗಿಯೇ ಉಳಿದಿದೆ.

ಕೆಂಪೇಗೌಡನ 'ಹೊಸ ಬೆಂಗಳೂರು' ಈಗ ವ್ಯಾಪಕ ಬೆಂಗಳೂರಿನ ಒಂದು ತಟ್ಟೆಯಗಲದ ತಾಣ-ಪೇಟೆ ಪ್ರದೇಶ. ತಾನು ಸ್ಥಾಪಿಸಿದ ಬೆಂಗಳೂರು ಮುಂದೆ ಇಷ್ಟು ದೂರ ಬೆಳೆದರೂ ಬೆಳೆಯಬಹುದು ಎಂದು ಕೆಂಪೇಗೌಡ ಸ್ಥಾಪಿಸಿದ ನಾಲ್ಕು (ಕಾವಲು) ಎಲ್ಲೆ ಮಂಟಪಗಳು ಇಂದು ನಗರದ ಮೊದಲ ಸುತ್ತಿನಲ್ಲೇ ಸೇರಿಹೋಗಿವೆ. ಮಹಾರಾಜರ ಕಾಲದ ಯೋಜಿತ ಬಡಾವಣೆ ನಕ್ಷೆಯ 'ಹಿತ್ತಲ ಬೀದಿಗಳು' (ಕನ್ಸರ್‌ವೆನ್ಸಿ ರೋಡ್ ಎನ್ನುತ್ತಿದ್ದರು. ಆಗಿನ ಜನ ಇದನ್ನು ಕಕ್ಕಸು ಬೀದಿ ಎನ್ನುತ್ತಿದ್ದರು. ಪ್ರಾಯಶಃ, ಮಲಹೊರುವವರು ಮನೆ ಹಿಂದಿನ ಜಾಗದಿಂದಲೇ ಬುಟ್ಟಿಗಳಲ್ಲಿ ಮಲಹೊತ್ತು ಹೋಗುವುದಕ್ಕಾಗಿ ಮಾಡಿದ್ದ ವ್ಯವಸ್ಥೆ ಇರಬೇಕು) ಈಗ ಸಂಪೂರ್ಣವಾಗಿ ಮೂಲ ವ್ಯಕ್ತಿತ್ವ ಕಳೆದುಕೊಂಡು, ವಾಸದ ಹೊರಬಾಗಿಲ ಮುಖ್ಯ ಬೀದಿಗಳಾಗಿ ಹೋಗಿವೆ. ರಾಜಾಜಿನಗರ, ಜಯನಗರ, ವಿಜಯನಗರ ಮೊದಲಾದ ಈಚಿನ ಬಡಾವಣೆಗಳನ್ನು ನಿರ್ಮಿಸುವಾಗ ಈ 'ಹಿತ್ತಿಲ ಬೀದಿ' ಸೇರಿಸಲೇ ಇಲ್ಲ. ಆ ಕಾಲದ ಹೆಂಚಿನ ಮನೆಗಳು, ಮದ್ರಾಸ್ ತಾರಸಿ ಮನೆಗಳು, ಕಪ್ಪು ಹೆಚ್ಚಿನ ಮನೆಗಳು ಕೆಲವನ್ನು, ಬಸವನಗುಡಿ, ಮಲ್ಲೇಶ್ವರ, ಚಾಮರಾಜಪೇಟೆ, ಶೇಷಾದ್ರಿಪುರ ಅಂಥ ಹಳೆಯ ಬಡಾವಣೆಗಳಲ್ಲಿ ಮಾತ್ರ ಕಾಣಬಹುದು. ಹಾಗೆ ನೋಡಿದರೆ, ಬೆಂಗಳೂರು ದಂಡು ಪ್ರದೇಶದಲ್ಲಿ ಈಗಲೂ ನೂರಿನ್ನೂರು ವರ್ಷದ ವಾಸದ ಮನೆಗಳ ಮಾದರಿಗಳು (ಒಂದು ರೀತಿ ತಮಿಳುನಾಡಿನ ಶೈಲಿಯ ಜಗಲಿ ಮನೆಗಳು) ಇನ್ನೂ ಉಳಿದಿವೆ. ಬೆಂಗಳೂರು ನಗರದಲ್ಲಿ ಒಂದೂ ಜಗಲಿ ಮನೆಗಳು (ಕೆಂಪೇಗೌಡನ ಕಾಲದಲ್ಲಿ ಎಲ್ಲವೂ ಜಗಲಿ ಮನೆಗಳೇ!) ಉಳಿದಿಲ್ಲ.

ಬೆಂಗಳೂರು ನಗರ ಬಹುಬೇಗ ಬೆಳವಣಿಗೆಗೆ ಹೊಂದಿಕೊಂಡುಬಿಟ್ಟಿತು. ಬ್ರಿಟಿಷರ ಕಾಲದಲ್ಲಿ ಬೆಂಗಳೂರು ದಂಡು ಎಲ್ಲ ವಿಷಯಗಳಲ್ಲೂ ಆಧುನಿಕ-ಮುಂದುವರಿದ ಪ್ರದೇಶವಾಗಿತ್ತು. ಬೆಂಗಳೂರು ನಗರ ಪ್ರದೇಶ ಇನ್ನೂ ಗ್ರಾಮೀಣ ವ್ಯಕ್ತಿತ್ವವನ್ನೆ ಕಾಣಿಸುತ್ತಿತ್ತು. ಆದರೆ, ಈಚಿನ ಐವತ್ತು ವರ್ಷಗಳಲ್ಲಿ ಬೆಂಗಳೂರು ನಗರ ಎಲ್ಲ ಬೆಳವಣಿಗೆಯಲ್ಲಿ ಕಂಟೋನ್ಮೆಂಟ್ ಪ್ರದೇಶವನ್ನು ಹಿಂದಕ್ಕೆ ಹಾಕಿದೆ: ವ್ಯಾಪಾರ ವಹಿವಾಟು, ವಿದ್ಯಾಭ್ಯಾಸ, ಉದ್ಯಮಗಳು, ಕಟ್ಟಡ ವಿನ್ಯಾಸಗಳು, ರಸ್ತೆಗಳು, ಫ್ಯಾಷನ್ -ಎಂದು ಎಲ್ಲವೂ ಸಮಕಾಲೀನ ಪ್ರಪಂಚದೊಂದಿಗೆ ಹೆಜ್ಜೆ ಹಾಕುತ್ತಿವೆ.

೪೫೦ ವರ್ಷಗಳಿಗೆ ಹಿಂದೆ ಎತ್ತಿನ ಗಾಡಿ ಸಾರಿಗೆಯಾಗಿದ್ದದ್ದು, ಮುಸ್ಲಿಮ್ ಆಡಳಿತದಲ್ಲಿ ೧೫೦ ವರ್ಷಗಳ ಅನಂತರ ಜಟಕಾ ಗಾಡಿಗಳಿಗೆ ದಾರಿಯಾಯಿತು. ಶ್ರೀಮಂತರು ಕೋಚ್ ಗಾಡಿಯಲ್ಲಿ ಓಡಾಡಿದರೆ, ಶ್ರೀಸಾಮಾನ್ಯರು ಜಟಕಾ ಗಾಡಿಯಲ್ಲಿ ಓಡಾಡುತ್ತಿದ್ದರು. ಇದಾಗಿ ೨೦೦ ವರ್ಷಗಳ ಅನಂತರ ಬೆಂಗಳೂರು ಮೋಟರ್ ವಾಹನ ಕಂಡಿತು (೧೯೦೩ರಲ್ಲಿ ಬೆಂಗಳೂರಿನ ಮೊಟ್ಟಮೊದಲ ಮೋಟರ್ ಕಾರ್ ಸಂಚರಿಸಿತು). ಕೆಂಪೇಗೌಡ ಸ್ಥಾಪಿಸಿದ ೩೫೦ ವರ್ಷಗಳ ಅನಂತರವೂ ಬೆಂಗಳೂರು ಬರೀ ಎಣ್ಣೆ ದೀಪಗಳಲ್ಲೆ ಮೆರೆಯುತ್ತಿತ್ತು. ೧೯೦೫ರಲ್ಲಿ ಮೊಟ್ಟಮೊದಲ ಬಾರಿಗೆ ಪ್ರಾಯೋಗಿಕವಾಗಿ ಬೆಂಗಳೂರು ನಗರ (ದಂಡು ಪ್ರದೇಶಕ್ಕೆ ಅನಂತರ) ವಿದ್ಯುಚ್ಛಕ್ತಿ ಕಂಡಿತು -ಇಡೀ ಭಾರತದಲ್ಲಿ ಆಗ ವಿದ್ಯುತ್ ಉತ್ಪಾದನೆ-ಉಪಯೋಗ ಇರಲಿಲ್ಲ. ಅಂದರೆ, ೧೯೦೩ರವರೆಗೂ ಭಾರತದ ವೈಭವವೆಲ್ಲ ಬರೀ ಬುಡ್ಡಿ ದೀಪಗಳಲ್ಲಿ, ಎಣ್ಣೆ ದೀಪಗಳಲ್ಲಿ ಬೆಳಗಿತು ಎಂದಾಯಿತು. ರಾಜಮಹಾರಾಜರು, ಚಕ್ರವರ್ತಿಗಳು, ಅರಮನೆಗಳು, ರಾಜಭೋಗಗಳೆಲ್ಲವೂ ಮಿಣುಕು ದೀಪಗಳಲ್ಲಿಯೇ ಆಗಿಹೋಗಿದೆ. ಇಡೀ ದೇಶಕ್ಕೆ ಮೈಸೂರು ಮಹಾರಾಜರು ಬೆಳಕು ತೋರಿಸಿದರು. ಪ್ರಾಯೋಗಿಕವಾಗಿ ಶಿವನ ಸಮುದ್ರದಲ್ಲಿ ವಿದ್ಯುತ್ ಉತ್ಪಾದನೆಯಾಗಿ ಬೆಂಗಳೂರು ರಸ್ತೆಗಳಲ್ಲಿ, ಮನೆಗಳಲ್ಲಿ ವಿದ್ಯುತ್ ದೀಪಗಳು ಬೆಳಗಿದವು. (ಸರ್ ಎಂ. ವಿಶ್ವೇಶ್ವರಯ್ಯನವರು ಬೀದಿ ದೀಪದಡಿ ಕುಳಿತು ಓದುತ್ತಿದ್ದರು ಎಂದಿದೆ. ಅಂದರೆ ಅವರು ಎಣ್ಣೆ ದೀಪಗಳ ಕೆಳಗೆ ಕುಳಿತು ಓದಿರಬೇಕು. ಎಂಥ ಅದ್ಭುತ ಅಲ್ಲವೇ? ಅವರ ಪರಿಶ್ರಮದ ನಿಜವಾದ ಬೆಲೆಯನ್ನು ಈ ದೃಷ್ಟಿಯಲ್ಲಿ ನೋಡಿ ಕಟ್ಟಬಹುದು!)

ನಗರ ಸಾರಿಗೆ ಬಸ್ಸು-ಆಟೋಗಳು ಬಂದಿದ್ದೆಲ್ಲ ಈಚಿನ ಐವತ್ತು ವರ್ಷಗಳಲ್ಲಿ. ಆಟೋಗಳು ಬಂದು ಜಟಕಾ ಗಾಡಿ ಇತಿಹಾಸ ಸೇರಿತು. ಈಗ ಯಾರೂ ಜಟಕಾದಲ್ಲಿ ಪ್ರಯಾಣ ಮಾಡುವುದಿಲ್ಲ. ಅವೀಗ ಬರೀ ವಸ್ತು ಸಾಗಾಣಿಕೆಯ ಒಂದು ಅಂಗವಾಗಿದೆ-ಬಹುಶಃ ಇನ್ನು ಕೆಲವೇ ವರ್ಷ!

ಐವತ್ತು ವರ್ಷಗಳಲ್ಲಿ ಬೆಂಗಳೂರು ಹೊಸ-ಆಧುನಿಕ ರೂಪ ತಾಳಿಬಿಟ್ಟಿದೆ. ಎಲ್ಲವೂ ವ್ಯವಸ್ಥಿತವಾಗಿದೆ. ಬಸ್‌ಸ್ಟಾಂಡ್‌ಗಳು, ಫುಟ್‌ಪಾತ್‌ಗಳು, ಸಾರಿಗೆ ವ್ಯವಸ್ಥೆ,

ವಾಹನ ನಿಲುಗಡೆ, ಕುಡಿಯುವ ನೀರು ಸರಬರಾಜು, ವಿದ್ಯುತ್ ಪೂರೈಕೆ -ಇವೆಲ್ಲವೂ ಈಚಿನ ದಶಕಗಳ ಬೆಳವಣಿಗೆ.

ಇಂಗ್ಲಿಷರು ಟೀಪೂಸುಲ್ತಾನನ ಪತನಾನಂತರ ಶ್ರೀರಂಗಪಟ್ಟಣವನ್ನು ಬಿಟ್ಟು ಬೆಂಗಳೂರು ಪ್ರದೇಶವನ್ನು ತಮ್ಮ ಸೈನಿಕ ನೆಲೆಯಾಗಿ ದತ್ತು ತೆಗೆದುಕೊಂಡರು. ಬೆಂಗಳೂರು ಪೇಟೆಯಿಂದ ಬಹುದೂರದಲ್ಲಿ ಕಂಟೋನ್ಮೆಂಟ್ ನಿರ್ಮಿಸಿಕೊಂಡರು (೧೮೦೯). ಆ ಕಾಲದಲ್ಲಿ ದಂಡು ಪ್ರದೇಶವೆಲ್ಲವೂ ಅನೇಕ ಚಿಕ್ಕ ಚಿಕ್ಕ ಹಳ್ಳಿಗಳಾಗಿದ್ದವು. (ಈಗಿನ ರಾಜಭವನ, ಆಕಾಶವಾಣಿ, ವಿಧಾನಸೌಧ, ಕಬ್ಬನ್‌ಪಾರ್ಕ್ ಪ್ರದೇಶಗಳೆಲ್ಲವೂ ಸಂಪಿಗೆ ಹಳ್ಳಿ ಆಗಿತ್ತು). ಮದ್ರಾಸ್‌ನಲ್ಲಿ ಇಂಗ್ಲಿಷರ ಆಡಳಿತ ಕಛೇರಿಗಳು ಇದ್ದುದರಿಂದ ಬೆಂಗಳೂರಿನ ಮೊಟ್ಟಮೊದಲ ರೈಲ್ವೇ ನಿಲ್ದಾಣ, ಕಂಟೋನ್ಮೆಂಟ್ ರೈಲ್ವೇ ಸ್ಟೇಷನ್ ೧೮೬೨ರಲ್ಲಿ ನಿರ್ಮಾಣಗೊಂಡಿತು- ಇಲ್ಲಿಂದ ಜೋಲಾರಪೇಟೆವರೆಗೆ ರೈಲು ಹಾಕಿದರು. ೧೮೫೩ರಲ್ಲಿ ಟೆಲಿಗ್ರಾಫ್ ಕೆಲಸಗಳು ನಡೆಯತೊಡಗಿತ್ತು. ಇಂಗ್ಲಿಷರು ಬಂದ ಮುಂದಿನ ಅರವತ್ತು ವರ್ಷಗಳಲ್ಲಿ ಕಂಟೋನ್ಮೆಂಟ್ ಇಡೀ ಕರ್ನಾಟಕದಲ್ಲಿಯೇ ಆಧುನಿಕ ನಡವಳಿಕೆಯ ಊರಾಗಿ ಹೋಗಿತ್ತು. ಅಠಾರಾ ಕಛೇರಿ (ಈಗಿನ ಹೈಕೋರ್ಟ್, ವಿಧಾನಸೌಧದ ಎದುರಿನ ಕೆಂಪು ಕಟ್ಟಡ), ಟೆಲಿಗ್ರಾಫ್ ಮತ್ತು ಪೋಸ್ಟಾಫೀಸ್ ಕಟ್ಟಡ, ನ್ಯೂ ಪಬ್ಲಿಕ್ ಆಫೀಸ್ (ನೃಪತುಂಗ ರಸ್ತೆ), ರೆಸಿಡೆಂಟರ ಬಂಗಲೆ (ಈಗಿನ ರಾಜಭವನ) ಕಮಿಷನರ್ ವಾಸಗೃಹ (ಈಗಿನ ಆಕಾಶವಾಣಿ ಕಟ್ಟಡ), ಬೌರಿಂಗ್ ಆಸ್ಪತ್ರೆ -ಹೀಗೆ ಅನೇಕ ಪ್ರಮುಖ ಕಟ್ಟಡಗಳು, ಇಂಗ್ಲಿಷ್ ಅಧಿಕಾರಿಗಳ ವಾಸಕ್ಕೆ ದೊಡ್ಡ ದೊಡ್ಡ ಬಂಗಲೆಗಳೂ ನಿರ್ಮಾಣವಾದವು. ಇಂಗ್ಲಿಷ್ ವಿದ್ಯಾಭ್ಯಾಸಕ್ಕೆ ದೊಡ್ಡ ಅನುಕೂಲ-ಪ್ರೋತ್ಸಾಹ ದೊರಕಿತು. ಇಡೀ ರಾಜ್ಯದ ಎಲ್ಲ ಆಡಳಿತವೂ ದಂಡು ಪ್ರದೇಶದಲ್ಲಿಯೇ ಇದ್ದಿತು. ಬೆಂಗಳೂರು ಪೇಟೆಗಿಂತಲೂ ದಂಡು ಪ್ರದೇಶ ವಿಸ್ತಾರವಾಗಿತ್ತು. ರಾಜಕೀಯವಾಗಿ ಮುಖ್ಯವಾಗಿತ್ತು.

ಬೆಂಗಳೂರು ಪೇಟೆ (ನಗರ) ಪ್ರದೇಶ ನಿಧಾನವಾಗಿ ಮೈಕೈ ತುಂಬಿಕೊಳ್ಳುತ್ತಿತ್ತು. ಇಂಗ್ಲಿಷರಿಂದ ಮೈಸೂರು ಮಹಾರಾಜರ ಕೈಗೆ ಸಂಪೂರ್ಣವಾಗಿ ರಾಜ್ಯದ ಆಡಳಿತ ಬರುವವರೆಗೂ (೧೯೮೧) ಪೇಟೆ ಪ್ರದೇಶ ಹೆಚ್ಚು ಬೆಳವಣಿಗೆ ಕಾಣದೆ ಹಿಂದುಳಿದಿತ್ತು. ಮೈಸೂರರಸರ ಕೈಗೆ ಬಂದ ಕೂಡಲೇ, ಇಂಗ್ಲಿಷರು ದಂಡಿನ ಆಡಳಿತವನ್ನೂ ಮಹಾರಾಜರಿಗೆ ಒಪ್ಪಿಸಿದ ಮೇಲೆ, ಬೆಂಗಳೂರಿಗೆ ಹೆಚ್ಚು ಪ್ರಾಮುಖ್ಯತೆ ಬಂದಿತು. ಮೈಸೂರರಸರಿಗೆ ಬೆಂಗಳೂರು ಮುಖ್ಯವಾದ ತಾಣವಾಯಿತು. ಬೆಂಗಳೂರು ಅರಮನೆಯನ್ನು ಅವರು ಖಾಸಗಿಯವರಿಂದ ಕೊಂಡುಕೊಂಡರು -ಇದು ಅದೇತಾನೆ (೧೮೮೦) ಆಂಗ್ಲೇಯ ವ್ಯಕ್ತಿಯೊಬ್ಬರಿಂದ ನಿರ್ಮಾಣವಾಗಿತ್ತು.

೧೯೦೦ರ ಅನಂತರ ಬೆಂಗಳೂರು ಬೆಳೆಯಿತು. ಆಗಲೂ ಅದು ತನ್ನ ಹಿಂದಿನ ಗ್ರಾಮೀಣ ವ್ಯಕ್ತಿತ್ವವನ್ನು ಉಳಿಸಿಕೊಂಡಿತ್ತು - ಕೆರೆಗಳಿದ್ದವು, ಗದ್ದೆ- ತೋಟಗಳಿದ್ದವು,

ಇನ್ನೂರು ವರ್ಷಗಳಿಗಿಂತಲೂ ಹಿಂದೆ ಇದ್ದ ಬೆಂಗಳೂರಿನ ನೆನಪು ತರುವ
ಪೇಟೆ ಮನೆಗಳು!

ಇನ್ನೂರು ವರ್ಷಗಳಿಗಿಂತಲೂ ಹಿಂದೆ ಇದ್ದ ಬೆಂಗಳೂರಿನ ನೆನಪು ತರುವ
ಪೇಟೆ ಮನೆಗಳು!

ಬೆಂಗಳೂರು ನಗರ ಪಾಲಿಕೆ ಮುಂದೆ ಕೆಂಪೇಗೌಡ ಪ್ರತಿಮೆ

ಕಾಡಿನ ಭಾಗಗಳಿದ್ದವು. ಪ್ರತಿ ಮನೆಯಲ್ಲೂ ಒಂದೊಂದು ಸಮೃದ್ಧ ನೀರಿನ ಆಳವಾದ ಭಾವಿಯಿದ್ದಿತು. ದೊಡ್ಡ ಕಾಂಪೌಂಡಿನ, ಬೇಕಾದಷ್ಟು ಮರಗಿಡಗಳ ವಾಸದ ಮನೆಗಳು. ಹತ್ತಿರದಲ್ಲೆ ತೋಟಗಳು, ಗದ್ದೆ-ಹೊಲಗಳು.

ಆದರೆ, ದಶಕದಿಂದ ದಶಕಕ್ಕೆ ಬೆಂಗಳೂರಿನ ವ್ಯಕ್ತಿತ್ವ ಬದಲಾಗುತ್ತ ಹೋಯಿತು. ಮೋಟರ್ ಕಾರುಗಳು, ಬಸ್ಸುಗಳು ನಗರದ ರಸ್ತೆಗಳಲ್ಲಿ ಓಡಾಡತೊಡಗಿದವು. ಮಹಡಿ ಮನೆಗಳು ಬಂದವು. ಅಂಗಡಿಗಳು ಆದವು. ಹೊಸ ಬಡಾವಣೆಗಳು ಆದವು. ಎಲ್ಲ ಹೊಸ ಬಡಾವಣೆಗಳಲ್ಲೂ ಎತ್ತರವಾದ ಐದು ದೀಪಗಳ ಕಂಭವಿರುವ, ಸುತ್ತಲೂ ದೊಡ್ಡ ಹೂತೋಟದ ವೃತ್ತ -ಇವು ಬೆಂಗಳೂರಿನ ಸ್ಥಳ ಗುರುತುಗಳಾದವು. 'ಆ ಐದು ದೀಪದ ಕಂಭದ ಸರ್ಕಲ್ ಇದ್ಯಲ್ಲಪ್ಪ, ಅದರ ಬಲಗಡೆ ಇರೋದೇ ನಮ್ಮ ರಸ್ತೆ, ಅಲ್ಲಿಗೆ ಹೋಗಪ್ಪ!' ಎಂದು ಜನ ಐವತ್ತರ ದಶಕದಲ್ಲೂ ಜಟಕಾ ಸಾರಥಿಗೆ ಹೇಳುತ್ತಿದ್ದುದುಂಟು. ಶೇಷಾದ್ರಿಪುರ, ಮಲ್ಲೇಶ್ವರ, ಆನಂದರಾವ್ ಸರ್ಕಲ್, ಕೃಷ್ಣರಾಜೇಂದ್ರ ರಸ್ತೆ, ಸರ್ಕಾರಿ ಪಾಲಿಟೆಕ್ನಿಕ್ ಮುಂದೆ -ಹೀಗೆ ಕೆಲ ಪ್ರಮುಖ ವೃತ್ತಗಳು ಇಂಥ ದೊಡ್ಡ ಹೂದೋಟ ವೃತ್ತದ ಐದು ದೀಪದ ಕಂಭಗಳನ್ನು ಹೊಂದಿದ್ದವು.

೧೯೫೦ರ ಅನಂತರ ಬೆಂಗಳೂರು ಬೆಳೆಯಿತು. ನಗರವೊಂದರ ನೋಟ ಕಾಣಿಸತೊಡಗಿತು. ನಗರಾಭಿವೃದ್ಧಿ ಬೋರ್ಡ್ ಅಸ್ತಿತ್ವಕ್ಕೆ ಬಂದು ನಗರವನ್ನು ಹೊಸ ಹೊಸ ಬಡಾವಣೆಗಳಿಂದ ಬೆಳೆಸಿತು. ಅನಂತರ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಹುಟ್ಟಿ ಬೆಂಗಳೂರಿಗರಿಗೆ ಮಾತ್ರವಲ್ಲದೆ ಬೆಂಗಳೂರಿಗೆ ಬಂದವರಿಗಾಗಿ ಸೈಟ್‌ಗಳನ್ನು ನೀಡಿತು. ಬರೀ ಹತ್ತಿಪ್ಪತ್ತು ವರ್ಷಗಳಲ್ಲಿ ಹೊಸ ಹೊಸ ಬಡಾವಣೆಗಳು ಆಗಿ ಬೆಂಗಳೂರು ಎರಡರಷ್ಟು ಮೂರರಷ್ಟು ಬೆಳೆಯಿತು. ಕೆಂಪೇಗೌಡ ನಿರ್ಮಿಸಿದ ಬೆಂಗಳೂರು ಪೇಟೆಯ ಮತ್ತು ಇಂಗ್ಲಿಷರ ದಂಡು ಪ್ರದೇಶದ ಸುತ್ತಮುತ್ತಲಿದ್ದ ಎಲ್ಲ ಹಳ್ಳಿಗಳನ್ನು ತನ್ನ ಗರ್ಭದಲ್ಲಿ ಎಳೆದುಕೊಂಡು ಎಲ್ಲ ಜಾಗಗಳಿಗೂ ನಗರದ ಮುಖ ನೀಡಿತು. ೧೯೭೦-೮೦ರ ಅನಂತರ ಬೆಂಗಳೂರು ದಿಢೀರನೆ ಆಧುನಿಕ ನಗರವಾಗತೊಡಗಿತು. ನೆಲದ ಬೆಲೆ ಗಗನಕ್ಕೇರಿತು. ಜನರ ಸಂಬಳ, ವರಮಾನಗಳು ಹೆಚ್ಚಿದವು. ದೊಡ್ಡ ದೊಡ್ಡ, ಸುಂದರ-ಅಪೂರ್ವ ವಿನ್ಯಾಸಗಳ ಮನೆಗಳು ಹುಟ್ಟಿಕೊಂಡವು.

೧೯೯೦ರ ದಶಕದ ಅನಂತರ ಬೆಂಗಳೂರು ದಾಪುಗಾಲು ಹಾಕಿತು. ಕಂಪ್ಯೂಟರ್ ಎನ್ನುವ ತಾಂತ್ರಿಕ ದೈತ್ಯ (೬೦ರ ದಶಕದಲ್ಲೆ ಇದು ಬರೀ ಲೆಕ್ಕಪತ್ರವಿಡಲು ವಾಮನ ರೂಪದಲ್ಲಿತ್ತು) ವಿಶ್ವರೂಪ ತಾಳಿತು. ತಾಂತ್ರಿಕ ಪರಿಣತರಿಗೆ ಚೀಲದ ತುಂಬಾ ಸಂಬಳ ದೊರಕಿತು. ಸಾವಿರಾರು ರೂಪಾಯಿ ಎನ್ನುವುದೇ ಕನಸಾಗಿದ್ದ ಬೆಂಗಳೂರಿಗರಿಗೆ ಲಕ್ಷವೆನ್ನುವುದು ಸಾಮಾನ್ಯವಾಯಿತು. ಲಕ್ಷ ರೂಪಾಯಿ ವರ್ಷಕ್ಕೆ ಸಂಪಾದಿಸುತ್ತಿದ್ದವರು ಕೋಟಿ ರೂಪಾಯಿ ವ್ಯಾಪಾರ ಮಾಡತೊಡಗಿದರು. ಕೋಟಿ ರೂಪಾಯಿಯವರು

ಹತ್ತು ಕೋಟಿ ನೂರು ಕೋಟಿ ಎಂದು ಎತ್ತಕ್ಕೇರಿದರು. ಎರಡು ಸಾವಿರ ಕೋಟಿ-ಇಪ್ಪತ್ತು ಸಾವಿರ ಕೋಟಿ ಎಂದರೆ ಜನ ಈಗ ಬೆಚ್ಚುವುದಿಲ್ಲ.

ಹಣದ ಶಕ್ತಿ ಬೆಳೆದಂತೆ ಮನುಷ್ಯ ಶಕ್ತಿಯೂ ಬೆಳೆಯಿತು. ಬೆಂಗಳೂರಿಗ ತನಗೇನು ಬೇಕೊ ಅದನ್ನು ಕೊಂಡುಕೊಂಡ, ಅತ್ಯುತ್ತಮವಾದ್ದನ್ನೇ ಕೊಂಡುಕೊಂಡ, ಸಾಮಾನ್ಯವಾದುದತ್ತ ಕಣ್ಣೆತ್ತಿಯೂ ನೋಡದವನಾದ. ಒಂದು ಲಕ್ಷ ರೂಪಾಯಿಗೆ ಒಂದು 'ಫ್ಲಾಟ್'ನ್ನು ಕೊಳ್ಳಲು ಯೋಚಿಸುತ್ತಿದ್ದ ಜನ ಈಗ ಒಂದು ಕೋಟಿ ಬೆಲೆಯ 'ಶ್ರೀಮಂತ ಫ್ಲಾಟ'ನ್ನು ಕೊಳ್ಳುತ್ತಿದ್ದಾರೆ. ಜನರ ಶ್ರೀಮಂತಿಕೆಯ ಮಟ್ಟಕ್ಕೆ ತಕ್ಕಂತೆ, ಅವರಿಗಾಗಿ ಅನುಕೂಲಗಳು, ಸುಖಗಳು ನಗರದಲ್ಲಿ ಹುಟ್ಟಿವೆ, ಬೆಳೆದಿವೆ. ಮಹಾನಗರ ಪಾಲಿಕೆ ಜನರ ಆಶೋತ್ತರಗಳನ್ನು ಈಡೇರಿಸಲು ತುದಿಗಾಲ ಮೇಲೆ ನಿಂತಿದೆ. ರಾಜ್ಯಸರ್ಕಾರ ನಗರವನ್ನು ದೇಶದಲ್ಲೆ ಅತ್ಯುತ್ತಮ, ವಿಶ್ವದಲ್ಲೆ ಕೀರ್ತಿಶಾಲಿ ನಗರವನ್ನಾಗಿ ಬೆಂಗಳೂರನ್ನು ಪರಿವರ್ತಿಸಲು ಕಾತುರವಾಗಿದೆ.

ಬೆಂಗಳೂರು ಈಗ ದೊಡ್ಡ ನಗರದಂತೆ ಕಾಣಿಸುತ್ತಿದೆ!

ದೇಶವಿದೇಶಗಳಿಂದ ಬಂದ ಅತಿ ಗಣ್ಯವ್ಯಕ್ತಿಗಳೆಲ್ಲರೂ ಬೆಂಗಳೂರಿನ ಅನುಕೂಲಗಳನ್ನು ಮೆಚ್ಚಿಕೊಳ್ಳುತ್ತಿದ್ದಾರೆ. ಪ್ರಪಂಚದ ಅತ್ಯುತ್ತಮ-ಅತಿ ಶ್ರೀಮಂತ ಸಂಸ್ಥೆಗಳು ಬೆಂಗಳೂರಿನಲ್ಲಿ ವಹಿವಾಟು ಪ್ರಾರಂಭಿಸಿವೆ. ಲಕ್ಷಾಂತರ ಜನರಿಗೆ ದೊಡ್ಡ ಸಂಬಳದ ಉದ್ಯೋಗಗಳು ದೊರಕಿವೆ. ಗುಡಿಸಲಿನಲ್ಲಿದ್ದವರೂ ಅರಮನೆಯ ಯೋಚನೆ ಮಾಡುವಂತಾಗಿದ್ದಾರೆ. ವಿದ್ಯಾಭ್ಯಾಸ-ಸ್ಥಾನಮಾನಗಳು ಬರೀ ಉಳ್ಳವರಿಗೆ ಮಾತ್ರವಲ್ಲ, ಯಾರಿಗೆ ಬೇಕಾದರೂ ಸಿಗಬಹುದು ಎನ್ನುವುದನ್ನು ಬೆಂಗಳೂರು ಸಾಧ್ಯ ಮಾಡಿಸಿ ತೋರಿಸಿದೆ. ಹತ್ತು ಸಾವಿರ ರೂಪಾಯಿ ಹೂಡಲು ದಾರಿಯಿಲ್ಲದೆ ಇದ್ದವರು ಹತ್ತು ಸಾವಿರ ಕೋಟಿ ಸಂಸ್ಥೆ ಸ್ಥಾಪಿಸಿದ್ದಾರೆ. ರೈತನ ಮಗ, ಶಿಕ್ಷಕನ ಮಗಳು, ಕಾರಕೂನನ ಮಗ, ಜವಾನನ ಮಗಳು, ಬೀದಿ ಕಸಗುಡಿಸುವವನ ಮಗ, ಊರಾಚೆ ಗುಡಿಸಲಿನಲ್ಲಿ ಅತಿ ಕೆಳಗಿನ ಜೀವನ ನಡೆಸುತ್ತಿದ್ದವನ ಮಗ -ಹೀಗೆ ಎಲ್ಲರೂ ಐಶ್ವರ್ಯವಂತರಾಗಿದ್ದಾರೆ. ಅಮೆರಿಕಾ- ಇಂಗ್ಲೆಂಡ್‌ಗಳಿಗೆ ಹೋಗಿದ್ದಾರೆ. ಅತಿ ಕಷ್ಟದಿಂದ ತಮ್ಮನ್ನು ಬೆಳೆಸಿದ ತಂದೆತಾಯಿಗೆ ಸಂತೋಷ ನೀಡುತ್ತಿದ್ದಾರೆ.

ಇದಕ್ಕೆ ಕಾರಣ- ವಿದ್ಯಾಭ್ಯಾಸ. ಇದೀಗ ಎಲ್ಲರಿಗೂ ಎಟುಕುತ್ತಿದೆ. ಪ್ರತಿಭಾಶಾಲಿ ಬಡಮಕ್ಕಳು ಮೇಲೇರುವಂತಾಗಿದೆ.

ಕೆಂಪೇಗೌಡನ ಬೆಂಗಳೂರು ಇದಕ್ಕೆಲ್ಲ ಸಾಕ್ಷಿಯಾಗಿ ಉಳಿದುಕೊಂಡಿದೆ!

ತಂಪು ಹವಾಗುಣ, ನವೀಕರಣಗೊಂಡಿರುವ ರಸ್ತೆಗಳು- ಫುಟ್‌ಪಾತ್‌ಗಳು, ನಾಗರಿಕರ ಓಡಾಟಕ್ಕೆ ಸಹಾಯ ಮಾಡಲು ಶ್ರಮಿಸುತ್ತಿರುವ ಸಾರಿಗೆ ವ್ಯವಸ್ಥೆ, ರಾಜ್ಯದ

ಪ್ರವಾಸೀ ತಾಣಗಳನ್ನು ಇಡೀ ಪ್ರಪಂಚಕ್ಕೆ ತಲುಪಿಸಲು ಪ್ರಯತ್ನಿಸುತ್ತಿರುವ ರಾಜ್ಯ ಪ್ರವಾಸೀ ನಿಗಮ, ದೊಡ್ಡ ದೊಡ್ಡ ವಿದ್ಯಾಸಂಸ್ಥೆಗಳು, ಉದ್ಯಮಗಳು ಹೆಚ್ಚು ಅಡಚಣೆಗಳಿಲ್ಲದೆ ಬೆಳೆಯಲು ಸ್ಪರ್ಧಾತ್ಮಕವಾಗಿ ಪ್ರಯತ್ನಿಸುತ್ತಿರುವ ಸರ್ಕಾರ, ಕಾರ್ಪೊರೇಷನ್ ಮತ್ತು ಸರ್ಕಾರದ ಶಾಲೆಗಳನ್ನು ಮೇಲ್ದರ್ಜೆಗೇರಿಸುವುದು ಅನಿವಾರ್ಯವಾಗಿರುವಂಥ ಪರಿಸ್ಥಿತಿ, ನಾನ್ ರೆಸಿಡೆಂಟ್ ಕನ್ನಡಿಗರು (NRK's) ತಾವು ಹುಟ್ಟಿದ ನಗರಕ್ಕೆ, ತಾವು ಓದಿದ ಶಾಲೆಗೆ ಏನಾದರೂ ದೊಡ್ಡದಾಗಿ ಸಹಾಯ ಮಾಡಲೇಬೇಕು ಎಂದು ಮಾಡಿರುವ ಸಂಕಲ್ಪ, ನಗರ ವ್ಯಕ್ತಿತ್ವ ದೊಡ್ಡಸ್ತಿಕೆಯಿಂದಿರಬೇಕು, ಹೊರಗಿನವರು ಬಂದು ನಮ್ಮನ್ನು ನೋಡಿ ನಗಬಾರದು ಎಂದು ಬಯಸಿದವರಂತೆ ನಗರದ ದೊಡ್ಡ ದೊಡ್ಡ ಉದ್ಯಮದವರೆಲ್ಲ ಸೇರಿ ತಾವೇ ಅನೇಕ ಯೋಜನೆಗಳಿಗೆ ಬೆಂಬಲವಾಗಿರುವುದು, ಸ್ವಚ್ಛಬೆಂಗಳೂರು, ನಿರ್ಮಲ ಬೆಂಗಳೂರು ಯೋಜನೆಗಳು, ಕೆರೆಗಳನ್ನು ಉಳಿಸಿ ಯೋಜನೆಗಳು ಬೆಂಗಳೂರು ನಗರಕ್ಕೊಂದು ಹೊಸ ಮುಖ ನೀಡಿದೆ. ಹೊಸ ತಲೆಮಾರು ನಂಬಿಕೆಯಿಂದ, ಆತ್ಮವಿಶ್ವಾಸದಿಂದ ಹೆಜ್ಜೆ ಇಡುವಂತಾಗಿದೆ.

ಇದು ಈಗಿನ ಬೆಂಗಳೂರು!

ಬರೀ ಐದು-ಹತ್ತು ವರ್ಷಗಳಲ್ಲಿ ಎಲ್ಲವೂ ಬದಲಾಯಿಸಿ ಹೋಗಿದೆ. ಇಡೀ ದೇಶಕ್ಕೆ ಬೆಂಗಳೂರು ಮಾದರಿಯಾಗುತ್ತಿದೆ. ದೇಶದ ಇತರರು ಬೆಂಗಳೂರಿಗೆ ಬಂದು 'ಹೀಗಾದದ್ದು ಹೇಗೆ?' ಎಂದು ತಿಳಿದುಕೊಳ್ಳಲು ಬಂದು ಹೋಗುತ್ತಿದ್ದಾರೆ.

ಪರಿಣತಿ, ಆತ್ಮವಿಶ್ವಾಸ, ಅಧ್ಯಯನಶೀಲತೆ, ನಂಬಿಕೆ-ಧೈರ್ಯ ಈಗ ಬೆಂಗಳೂರು ಯುವಪೀಳಿಗೆಯನ್ನು ಲೋಕಸಂಚಾರಿಗಳನ್ನಾಗಿ ಮಾಡಿದೆ. ಬೆಂಗಳೂರಿನ ಇಂಜಿನಿಯರ್‌ಗಳು, ಡಾಕ್ಟರ್‌ಗಳು, ಸಾಫ್ಟ್‌ವೇರ್ ಇಂಜಿನಿಯರುಗಳು, ವಿವಿಧ ಭಾಷಾಪಟುಗಳು ವಿಶ್ವಮಾನ್ಯರಾಗುತ್ತಿದ್ದಾರೆ.

ಇದೇ ಕೆಂಪೇಗೌಡನ ಕನಸೂ ಇದ್ದಿರಬಹುದೇ?

ನಿಮಗೆ ಸ್ವಾಗತ...

೪೬೭ ವರ್ಷಗಳ ಇತಿಹಾಸ, ಸಂಸ್ಕೃತಿ ವೈವಿಧ್ಯ, ಜನ-ಬದುಕು ವೈಶಿಷ್ಟ್ಯ, ಹಳೆ-ಹೊಸ ಹೆಗ್ಗುರುತುಗಳು, ಕೆಂಪೇಗೌಡನ ಪೇಟೆಗಳು ಮತ್ತು 'ಇನ್ಫೋಸಿಸ್' ಕಾಲದ ದಾಪುಗಾಲು... ಎಲ್ಲವನ್ನೂ ನೋಡಬನ್ನಿ!

...ಸ್ವಾಗತ, ಸುಸ್ವಾಗತ!

■■

೨. ಹಾಯ್, ಬೆಂಗಳೂರು!

ಬೆಂಗಳೂರು ನಗರ ಭಾರತದ ಅತ್ಯಂತ ಸುಂದರ ನಗರಗಳಲ್ಲಿ ಒಂದು ಎಂದು ಎಲ್ಲರಿಂದಲೂ ಹೊಗಳಿಸಿಕೊಂಡಿದೆ. ದೇಶವಿದೇಶಗಳಿಂದ ಇಲ್ಲಿಗೆ ಬಂದವರು ಈ ನಗರದ ವಾತಾವರಣ, ತಿಂಡಿ ತಿನಿಸು, ಜನಗಳು, ಶಾಂತ ಪರಿಸರ, ಆಧುನಿಕ ಮೆರುಗು ಇವನ್ನೆಲ್ಲ ಮೆಚ್ಚಿಕೊಂಡು ಎಲ್ಲ ಕಡೆಯೂ ಅದನ್ನು ಮುಕ್ತವಾಗಿ ಹೇಳಿದ್ದಾರೆ. ಮತ್ತೆ ಮತ್ತೆ ಬೆಂಗಳೂರಿಗೆ ಬಂದಿದ್ದಾರೆ ಅಥವಾ ಇಲ್ಲೆ ಒಂದು ಮನೆಯನ್ನೂ, ಫ್ಲಾಟ್‌ಅನ್ನೂ ಕೊಂಡುಕೊಂಡು ನಿರಂತರವಾಗಿಯೇ ಬೆಂಗಳೂರು ನಿವಾಸಿಗಳಾಗಿ ಹೋಗಿದ್ದಾರೆ. ಬೆಂಗಳೂರಿನಲ್ಲಿ ಒಮ್ಮೆ ವಾಸಿಸಲು ತೊಡಗಿದವರು ಮತ್ತೆ ಈ ಊರನ್ನು ಬಿಟ್ಟು ಹೋಗುವುದಿಲ್ಲ. ತಮ್ಮದೇ ಮಾಡಿಕೊಂಡುಬಿಡುತ್ತಾರೆ. ಬೆಂಗಳೂರಿನ ಆಕರ್ಷಣೆ ಅಂಥದ್ದು!

೧೫೩೭ರಲ್ಲಿ ಈ ನಗರವನ್ನು ಸ್ಥಾಪಿಸಿದವನು- ಯಲಹಂಕ ನಾಡಪ್ರಭುಗಳು ಎಂದು ಸುಪ್ರಸಿದ್ಧರಾಗಿದ್ದ ವಂಶದ ಮೊದಲನೆ ಕೆಂಪೇಗೌಡ. ಒಂದೊಂದು ವಂಶದಲ್ಲಿ ಒಬ್ಬೊಬ್ಬರು ಯಶೋವಂತರು ಹುಟ್ಟುತ್ತಾರೆ- ಕೆಂಪೇಗೌಡನದು ಅಂಥ ಒಂದು ಹೆಸರು.

ಯಲಹಂಕ ಬೆಂಗಳೂರಿಗೆ ಅತಿ ಹತ್ತಿರದಲ್ಲಿಯೆ ಇರುವ ಒಂದು ಪುಟ್ಟ ಗ್ರಾಮೀಣ ಪ್ರದೇಶ. ಈಗಲೂ ಯಲಹಂಕ ಇದೆ. ಆದರೆ ಅದು ಬೆಂಗಳೂರು ನಗರದೊಂದಿಗೆ ಸೇರಿಹೋಗಿ, ನಗರದ ಒಂದು ಭಾಗವಾಗಿ ಹೋಗಿದೆ. ಯಲಹಂಕದ ಹಾಗೆಯೇ ಬೆಂಗಳೂರು ನಗರದ ಸುತ್ತಲೂ ಇದ್ದ ಹಳ್ಳಿಗಳೆಲ್ಲವೂ ಬೆಂಗಳೂರಿಗೆ ಸೇರಿಹೋಗಿವೆ. ಬೆಂಗಳೂರು ನಗರ ಸಾರಿಗೆಯ ಕೃಪೆಯಿಂದ ಈ ಪ್ರದೇಶಗಳೆಲ್ಲವೂ ಪ್ರತಿದಿನ-ಪ್ರತಿಕ್ಷಣ ಜನ ಓಡಾಡುವ ತಾಣಗಳಾಗಿ ಹೋಗಿವೆ. ಜೊತೆಗೆ ಆಧುನಿಕ ತಂತ್ರಜ್ಞಾನ ಸಂಸ್ಥೆಗಳೆಲ್ಲವೂ ಬೆಂಗಳೂರಿನ ಹೊರವಲಯದಲ್ಲಿಯೆ ಇರುವ ಈ ಗ್ರಾಮ್ಯ ಪರಿಸರಗಳಲ್ಲಿ, ವಿಸ್ತಾರವಾದ ಆವರಣದಲ್ಲಿ ತಮ್ಮ ಕಛೇರಿಗಳನ್ನು ನಿರ್ಮಿಸಿರುವುದರಿಂದ, ಈ ಗ್ರಾಮೀಣ ಪ್ರದೇಶಗಳೆಲ್ಲವೂ ಬಹುಬೇಗ ಅಭಿವೃದ್ಧಿಗೊಂಡುಬಿಟ್ಟಿವೆ. ಬೆಂಗಳೂರು ನಗರದ ಭೂಮಿಯ ಬೆಲೆಯೆ ಇಲ್ಲಿಯ ಭೂಮಿಗಳಿಗೂ ಬಂದುಬಿಟ್ಟಿದೆ. (ಅಥವಾ ಇನ್ನೊಂದಿಷ್ಟು ಹೆಚ್ಚು!)

ಕೆಂಪೇಗೌಡ ೪೬೭ ವರ್ಷಗಳ ಹಿಂದೆ ಬೆಂಗಳೂರು ಎಂದು ನಿರ್ಮಿಸಿದ ಊರು ತುಂಬ ಪುಟ್ಟ ತಾಣ- ಅವನೂರಿನ ಹಾಗೆಯೆ ಇನ್ನೊಂದು ಗ್ರಾಮ. ಈಗ ಬೆಂಗಳೂರಿನ ಬಸ್‌ಸ್ಟಾಂಡ್, ರೈಲ್ವೇ ಸ್ಟೇಷನ್, ಮೆಜೆಸ್ಟಿಕ್ ಹತ್ತಿರವಿರುವ ಪೇಟೆಗಳೆಲ್ಲ ಸೇರಿ ಕೆಂಪೇಗೌಡನ ಬೆಂಗಳೂರಾಗಿತ್ತು. ಅರಳೆಪೇಟೆಯಿಂದ ಅವೆನ್ಯೂ ರೋಡ್ ದಾಟಿ ಕಾರ್ಪೊರೇಷನ್ ಆಫೀಸ್‌ನಿಂದ-ಸಿಟಿ ಮಾರ್ಕೆಟ್ ಸುತ್ತಮುತ್ತದವರೆಗೂ ಕೆಂಪೇಗೌಡನ ಬೆಂಗಳೂರು ಹರಡಿಕೊಂಡಿತ್ತು. (ಈಗ ಇವೆಲ್ಲ ಸೇರಿ ಬೆಂಗಳೂರಿನ ಒಂದು ಪಿನ್‌ಕೋಡ್ ಸಂಖ್ಯೆಯ ಪ್ರದೇಶ).

ಯಲಹಂಕ ನಾಡ ಪ್ರಭುವಾಗಿ, ವಿಜಯನಗರದ ಅರಸರ ಸಾಮಂತನಾಗಿ ವಿಜೃಂಭಿಸುತ್ತ ಸುಖವಾಗಿದ್ದರೂ, ಇನ್ನೊಂದು ಊರನ್ನು ನಿರ್ಮಿಸಬೇಕು ಎಂದು ಈ ಪುಟ್ಟ ರಾಜನಿಗೆ ಆಸೆಯಾದದ್ದಾದರೂ ಏಕೆ? ಬಹುಶಃ, ಯಲಹಂಕ ತನ್ನ ಪೂರ್ವೀಕರು ಸ್ಥಾಪಿಸಿದ್ದ ನಾಡು, ತನ್ನದೇ ಕನಸಿನ ಒಂದು ಊರು ಇರಬೇಕು ಎಂದು ಅವನ ಮನಸ್ಸಿಗನ್ನಿಸಿರಬೇಕು. ಜೊತೆಗೆ, ಯಲಹಂಕದಿಂದ ತನ್ನ ತಾಯಿ ಮತ್ತು ಹೆಂಡತಿಯ ಊರಾದ 'ಹಳೆ ಬೆಂಗಳೂರು' ಎನ್ನುವ ಅತಿ ಪುಟ್ಟ ಹಳ್ಳಿಗೆ ಬಂದಾಗಲೆಲ್ಲ ಅವನು ಒಬ್ಬಂಟಿಗನಾಗಿ ಕುದುರೆ ಮೇಲೆ ಕುಳಿತು ಸುತ್ತಮುತ್ತಲೆಲ್ಲ ಓಡಾಡಿರಬೇಕು. ಅಲ್ಲಲ್ಲೆ ಪುಟ್ಟ ಪುಟ್ಟ, ಜಕ್ಕೂರು, ಬ್ಯಾಟರಾಯನಪುರ, ದಾಸರಹಳ್ಳಿ, ಹೆಬ್ಬಾಳ, ಬಾಣಸವಾಡಿ, ವರ್ತೂರು, ಪಣತೂರು, ಬಿನ್ನಮಂಗಲ, ದೊಮ್ಮಲೂರು, ಬೇಗೂರು, ಅಗರ, ಮಡಿವಾಳ, ಯಮಲೂರು, ಪೀಣ್ಯ, ಉತ್ತರಹಳ್ಳಿ, ಕೆಂಗೇರಿ, ಸೋಲದೇವನಹಳ್ಳಿ, ಹೆಸರಘಟ್ಟ, ಹುಣಸೆಮಾರನಹಳ್ಳಿ, ಆತ್ತೂರು, ಬೆಟ್ಟ ಹಲಸೂರು, ರಾಜನಕುಂಟೆ, ಕಾಕೋಳು, ಐವರು ಕಂಡಪುರ, ಅಳ್ಳಲಸಂದ್ರ, ತಿಂಡ್ಲು, ದೊಡ್ಡ ಬಿದರಕಲ್ಲು -ಎಂಬೆಲ್ಲ ಹಳ್ಳಿಗಳು ಅಸ್ತಿತ್ವದಲ್ಲಿ ಇರುವುದು ಅವನಿಗೆ ಗೊತ್ತಿತ್ತು. ವಿಜಯನಗರ ಸಾಮ್ರಾಜ್ಯದ ವೈಭವವನ್ನು ಕಂಡಿದ್ದವನು. ಅವನಿಗೂ ತನ್ನದೇ ಆದ ವೈಭವದ, ಇವೆಲ್ಲಕ್ಕಿಂತಲೂ ಭಿನ್ನವಾದ್ದೇ ಆದ ಊರನ್ನು ನಿರ್ಮಿಸಬೇಕೆಂದು ಆಸೆ ಬಂದದ್ದರಲ್ಲಿ ಆಶ್ಚರ್ಯವಿಲ್ಲ.

ಒಮ್ಮೆ ಹೀಗೆ ತನ್ನೂರನ್ನು ದಾಟಿ, ದಟ್ಟಕಾಡುಗಳ ನಡುವೆ, ತನ್ನ ಕುದುರೆ ಸವಾರರೊಂದಿಗೆ ಯಲಹಂಕ ದಾಟಿ ದೂರ ದೂರ ಬಂದಾಗ ಅವನಿಗೊಂದು ವಿಸ್ತಾರವಾದ, ನೋಡಿದಷ್ಟು ದೂರವೂ ಮಟ್ಟಸವಾಗಿದ್ದ ಮೈದಾನ ಪ್ರದೇಶ ಕಂಡಿತು. ಅಲ್ಲಲ್ಲಿ ವೃಕ್ಷಗಳು, ಪೊದೆ ಕುರುಚಲು, ಬಂಡೆಗಳು ಕಾಣಿಸಿದವು. ಇದನ್ನು ಕೆಲಕ್ಷಣ ನಿಂತು ನೋಡುತ್ತಿದ್ದಂತೆಯೇ ಅವನಿಗೆ ಅವನ ಕನಸಿನ ಊರು ಕಾಣಿಸಿಬಿಟ್ಟಿತ್ತು. 'ಇಲ್ಲಿ ನನಗಾಗಿ, ನನ್ನಿಷ್ಟದಂತೆ ಒಂದೂರನ್ನು ಏಕೆ ಕಟ್ಟಿಕೊಳ್ಳ ಬಾರದು?' -ಎನ್ನುವ ಆಸೆ ಥಟ್ಟನೆ ಅವನ ಮನಸ್ಸಿನಲ್ಲೆದ್ದಿರಬೇಕು. ತಾಯಿಯ, ಹೆಂಡತಿಯ ಊರು, ಹಳೇ

ಬೆಂಗಳೂರು. ಇಲ್ಲೊಂದು ಹೊಸ ಬೆಂಗಳೂರು ನಿರ್ಮಿಸೋಣ ಅನ್ನಿಸಿಬಿಟ್ಟಿರಬೇಕು. ತನ್ನ ಊರು ಹೇಗಿರಬೇಕು ಎಂದು ಅಲ್ಲಿ ನಿಂತುಕೊಂಡೇ ಅವನು ಆಲೋಚಿಸಿದ್ದಿರಬೇಕು.

ಬಹುಬೇಗ ಅವನ ಕನಸು ನನಸಾಯಿತು. ಹೊಸ ಬೆಂಗಳೂರು ಹೇಗಿರಬೇಕೆಂದು ಒಂದು ನಕ್ಷೆ ಸಿದ್ಧಪಡಿಸಿಕೊಂಡ. ತನ್ನೂರಿನಲ್ಲಿ ಎಲ್ಲವೂ ಇರಬೇಕು, ಯಾವುದಕ್ಕೂ ಅಡಚಣೆ ಇರಬಾರದು, ಎಲ್ಲ ವೃತ್ತಿಯ ಜನರೂ ಇರಬೇಕು, ಎಲ್ಲ ರೀತಿಯ ದೊಡ್ಡ ವ್ಯಾಪಾರ-ವ್ಯವಹಾರಗಳೂ ನಡೆಯಬೇಕು. ದೂರದೂರದ ಊರುಗಳಿಂದ ಜನ ವ್ಯಾಪಾರಕ್ಕೆ ಇಲ್ಲಿ ಬರಬೇಕು. ಇಲ್ಲಿಂದ ಮೇಲ್ದರ್ಜೆಯ ವಸ್ತುಗಳು ಬೇರೆ ಊರುಗಳಿಗೆ ರಫ್ತಾಗಬೇಕು. ಈ ಊರಿನವರಿಗೆ, ಬೇರೆ ಊರಿನವರಿಗೆ ಯಾವ ತೊಂದರೆಯೂ ಇರಬಾರದು. ವೃತ್ತಿ-ವಸತಿ- ಸಂಪಾದನೆ ಸರಾಗವಾಗಿರಬೇಕು ಎಂಬೆಲ್ಲ ಆಲೋಚನೆ-ಕನಸುಗಳು ಅವನ ನಕ್ಷೆಯಲ್ಲಿ ಸೇರಿಕೊಂಡಿತು.

ನೇರ ರಸ್ತೆಗಳು, ಅಡ್ಡರಸ್ತೆಗಳನ್ನು ಹಾಕಿಕೊಂಡ ಸುಮಾರು ಹತ್ತು ಹದಿನೈದು ಪ್ರಮುಖ ರಸ್ತೆಗಳು, ಜೊತೆಗೆ ಹತ್ತು-ಹದಿನೈದು ಸಂದಿ ಬೀದಿಗಳು. ಅಲ್ಲಲ್ಲಿ ದೇವಾಲಯಗಳು, ಅನೇಕ ಕಡೆಗಳಲ್ಲಿ ಸಣ್ಣ ಪುಟ್ಟ ಕೊಳಗಳು ಮತ್ತು ತನಗಾಗಿ ಒಂದು ಅರಮನೆ, ಬೇಕಾದಷ್ಟು ಅಂಗಡಿಗಳು, ವ್ಯಾಪಾರ-ವಹಿವಾಟು ಕಟ್ಟೆಗಳು...

೧೫೩೭ರ ವರ್ಷದಲ್ಲಿ ಒಂದು ಶುಭದಿವಸ ಯಲಹಂಕ ಮಹಾನಾಡಿನ ಪ್ರಮುಖರು, ಹಿರಿಯರು, ಆಡಳಿತಗಾರರು, ವ್ಯಾಪಾರಿಗಳು, ಶ್ರೀಮಂತರು, ಶ್ರೀಸಾಮಾನ್ಯರು, ಸೈನಿಕರು -ಇವರೆಲ್ಲರೊಂದಿಗೆ ಬೆಂಗಳೂರಿಗೆ ಬರೆದು 'ಹೊಸ ಬೆಂಗಳೂರು' ಸ್ಥಾಪನೆಗೊಂದು ಗುದ್ದಲಿ ಪೂಜೆ ನೆರವೇರಿಸಿಯೇ ಬಿಟ್ಟ.

ಈಗ ಅವೆನ್ಯೂ ರಸ್ತೆ-ಚಿಕ್ಕಪೇಟೆ ಸಂಧಿಸುವ ಜಾಗದಲ್ಲಿ ಈ ಮಹಾಪೂಜೆ ನೆರವೇರಿತು. ಬೆಂಗಳೂರಿನ ತಂಗಾಳಿ, ಎಲ್ಲೆಲ್ಲೂ ಹಸಿರು, ಪಕ್ಷಿಗಳ ಕಲರವ ಎಲ್ಲರಿಗೂ ನೆಮ್ಮದಿಯನ್ನುಂಟುಮಾಡಿತು. ಪೂಜೆ ಮಾಡಿದ ಜಾಗದಿಂದ ಎಡಕ್ಕೆ, ಬಲಕ್ಕೆ, ಹಿಂದೆ, ಮುಂದೆ ನೇರ ರಸ್ತೆಗಳ ಯೋಚನೆ ಮಾಡಿ, ನಾಲ್ಕು ನೇಗಿಲು ಹೂಡಿದ ಜೋಡಿ ಎತ್ತುಗಳನ್ನು ಆಯಾ ದಿಕ್ಕಿಗೆ ನಡೆಸಿದ. ಒಂದು ಈಗಿನ ಕಾರ್ಪೊರೇಷನ್ ಆಫೀಸ್‌ವರೆಗೂ, ಇನ್ನೊಂದು ಈಗಿನ ಮೈಸೂರು ಬ್ಯಾಂಕ್‌ವರೆಗೂ, ಇನ್ನೊಂದು ಈಗಿನ ಸಿಟಿ ಮಾರ್ಕೆಟ್‌ವರೆಗೂ ಮತ್ತೊಂದು ಈಗಿನ ಗುಡ್‌ಷೆಡ್ ರಸ್ತೆಯವರೆಗೂ ನೆಲದ ಮೇಲೆ ಗುರುತು ಮಾಡಿಕೊಂಡು ಹೋದವು. ಇದೇ ಮೊದಲ ಕೆಂಪೇಗೌಡನ ಹೊಸ ಬೆಂಗಳೂರಿನ ಎಲ್ಲೆಗಳಾದವು. ಈ ನಾಲ್ಕು ಎಲ್ಲೆಗಳನ್ನು ಸೇರಿಸಿ ಒಂದು ಭದ್ರವಾದ ಮಣ್ಣಿನ ಕೋಟೆಯನ್ನು ನಿರ್ಮಿಸಿದ. ಅಲ್ಲೆಲ್ಲ ಒಂದೊಂದು ದಿಡ್ಡಿ ಬಾಗಿಲು ಸ್ಥಾಪಿಸಿದ. ಎಲ್ಲ ಎಲ್ಲೆಗಳಲ್ಲೂ ಹೊಸ ಊರು ರಕ್ಷಿಸುವ ದೈವತಾಣಗಳನ್ನು ಸ್ಥಾಪಿಸಿದ.

ಈ ಎಲ್ಲೆಯೊಳಗಿನ ಊರು ಕೆಂಪೇಗೌಡನ ಕನಸಿನ ಊರಾಯಿತು. ಅಗಲವಾದ-ಉದ್ದವಾದ ರಸ್ತೆಗಳನ್ನು ನಿರ್ಮಿಸಿದ. ಅದರ ಎರಡೂ ಬದಿಗಳಲ್ಲಿ ವಿಶಾಲವಾದ ವ್ಯಾಪಾರ ಮಳಿಗೆಗಳನ್ನು ನಿರ್ಮಿಸಿದ. ವಾಸದ ಮನೆಗಳನ್ನು ಕಟ್ಟಿಸಿದ. ಹತ್ತಿರದಲ್ಲೆ ಕುಡಿಯುವ ನೀರಿನ ಭಾವಿಗಳನ್ನು ತೋಡಿಸಿದ. ಸಾರ್ವಜನಿಕ ಕೊಳಗಳನ್ನು ನಿರ್ಮಿಸಿದ. ಮತ್ತೆ ಊರಿನ ಸುತ್ತಲೂ ಸಮೃದ್ಧವಾಗಿ ನೀರಿನ ಅನುಕೂಲ ಇರಬೇಕು, ಪರಿಸರ ಶುದ್ಧವಾಗಿರಬೇಕು ಎನ್ನುವುದಕ್ಕಾಗಿ ವಿಸ್ತಾರವಾದ ಕೆರೆಗಳನ್ನು ನಿರ್ಮಿಸಿದ.

ಈಗಿನ ಬೆಂಗಳೂರಿನ ಬಸ್‌ಸ್ಟ್ಯಾಂಡ್, ಮೆಜೆಸ್ಟಿಕ್, ಗಾಂಧಿನಗರ ಪ್ರದೇಶವೆಲ್ಲ ಸೇರಿ ಧರ್ಮಾಂಬುಧಿ ಕೆರೆಯಾಯಿತು. ಈಗಿನ ಬಸವನಗುಡಿ, ಗಾಂಧಿಬಜಾರ್, ಎನ್‌ಆರ್ ಕಾಲನಿವರೆಗೂ ಕಾರಂಜಿ ಕೆರೆಯಾಯಿತು. ಇಡೀ ಗವಿಪುರ, ಹನುಮಂತನಗರ, ಶ್ರೀನಗರ, ರಾಘವೇಂದ್ರ ಕಾಲನಿವರೆಗೂ ಕೆಂಪಾಂಬುಧಿ ಕೆರೆಯಾಯಿತು. ಜೊತೆಗೆ ಕೆಂಪೇಗೌಡ ಈಗಿನ ಕಂಠೀರವ ಸ್ಟೇಡಿಯಂ, ಸಂಪಂಗಿ ರಾಮನಗರ, ಜೊತೆಗೆ ಕಾರ್ಪೊರೇಷನ್ ಆಫೀಸ್, ಕಬ್ಬನ್ ಪಾರ್ಕ್‌ನ ಭಾಗಗಳು ಸೇರಿರುವ ವಿಶಾಲವಾಗಿದ್ದ ಸಂಪಂಗಿ ಕೆರೆಯನ್ನು ಜೀರ್ಣೋದ್ಧಾರಗೊಳಿಸಿದ. ಅಷ್ಟಲ್ಲದೆ ಹೊಸ ಬೆಂಗಳೂರಿನ ಸುತ್ತಮುತ್ತಲೂ ಇದ್ದ ಅನೇಕ ಕೆರೆಗಳನ್ನು ಅಭಿವೃದ್ಧಿಗೊಳಿಸಿದ; ಯಡಿಯೂರು ಕೆರೆ, ಚನ್ನಮ್ಮನ ಕೆರೆ, ಲಾಲ್‌ಬಾಗ್ ಕೆರೆ, ಅಗ್ರಹಾರ ಕೆರೆ (ಮಾಗಡಿ ರಸ್ತೆ), ಸಾನೆ ಗುರುವನಹಳ್ಳಿ ಕೆರೆ (ಅಗ್ರಹಾರ ದಾಸರಹಳ್ಳಿ) -ಇವುಗಳ ನಿರ್ಮಾಣ-ಅಭಿವೃದ್ಧಿ ಕೆಂಪೇಗೌಡನ ಮಗನ ಕಾಲದವರೆಗೂ ನಡೆಯಿತು.

ಹೊಸ ಬೆಂಗಳೂರನ್ನು ಜನವಾಸಕ್ಕೆ ಅನುಕೂಲವಾಗುವಂತೆ ಕೆರೆ-ಕೊಳ-ಭಾವಿಗಳು ಸಿದ್ಧವಾದ ಮೇಲೆ, ಯಲಹಂಕದಿಂದ ಮತ್ತು ಸುತ್ತಮುತ್ತಲ ಗ್ರಾಮಗಳಿಂದ ವೃತ್ತಿ ಪರಿಣತರನ್ನು, ವ್ಯಾಪಾರಿಗಳನ್ನು ಆಹ್ವಾನಿಸಿ ಅವರಿಗೆಲ್ಲ ವಸತಿ-ಅಂಗಡಿಗಳನ್ನು ಕೊಟ್ಟು ಅವರು ಸಂತೋಷದಿಂದಿರುವಂತೆ ಮಾಡಿದ. ಈಗಿನ ಸಿಟಿ ಮಾರ್ಕೆಟ್ ಪ್ರದೇಶದಲ್ಲಿ ದೊಡ್ಡದೊಂದು ಕಲ್ಯಾಣಿಯನ್ನು ಕಟ್ಟಿಸಿ ಅದರ ಪಕ್ಕದಲ್ಲೆ ಬ್ರಾಹ್ಮಣರಿಗಾಗಿ ಒಂದು ಅಗ್ರಹಾರ ನಿರ್ಮಿಸಿದ- ಇದಕ್ಕೆ ಸೀಗೇಬೇಲಿ ಅಗ್ರಹಾರ ಎಂದು ಹೆಸರಾಯಿತು. ಬಳೇಪೇಟೆ ಮೂಲೆಯಲ್ಲಿ ಕಾಶಿ ವಿಶ್ವೇಶ್ವರ ದೇವಾಲಯ ಪ್ರದೇಶದಲ್ಲೊಂದು ದೊಡ್ಡ ಕಲ್ಯಾಣಿ ನಿರ್ಮಿಸಿದ. ಬಳೇಪೇಟೆಗೂ-ಅವೆನ್ಯೂ ರಸ್ತೆಗೂ ನಡುವೆ ಒಂದು ಕಲ್ಯಾಣಿ ಕಟ್ಟಿಸಿದ.

ಹೊಸ ಬೆಂಗಳೂರು ಬರೀ ಪೇಟೆಗಳ ಊರು. ಒಂದೊಂದು ವೃತ್ತಿಯವರಿಗೆ ಒಂದೊಂದು ರಸ್ತೆಯನ್ನು ಮೀಸಲಾಗಿರಿಸಿ ಆಯಾ ವೃತ್ತಿಯವರಿಗೆ ಅದನ್ನು ಕೊಟ್ಟ. ಅರಿಶಿನ-ಕುಂಕುಮ-ಬಳೆ-ಹೂವು ವ್ಯಾಪಾರಿಗಳಿಗೆ ಊರಿನ ನಡುವಿನ ಪ್ರಧಾನವಾದ

ಪ್ಲೇಗ್ ಮಾರಿ ೧೮೯೮-೯೯

ಮಹಾಕ್ಷಾಮದ ಹಾಗೆಯೇ ಪ್ಲೇಗ್ ರೋಗ ಬೆಂಗಳೂರನ್ನು ಆವರಿಸಿ ಅಲ್ಲೋಲ ಕಲ್ಲೋಲವೆಬ್ಬಿಸಿಬಿಟ್ಟಿತು. ಬೆಂಗಳೂರು ಪೇಟೆಯ ಗುರುತನ್ನೆ ಬದಲಾಯಿಸಿಬಿಟ್ಟಿತು. ಪೇಟೆ ಪ್ರದೇಶದಲ್ಲಿಯೇ ೨೬೬೫ ಜನ ಸತ್ತುಹೋದರು. ಇದು ಇಡೀ ಜಿಲ್ಲೆ ಹರಡಿಕೊಂಡಿತ್ತು. ಕಂಟೋನ್ಮೆಂಟ್‌ನಲ್ಲಿ ೩೩೨೧ ಜನ ಸತ್ತರು. ಸುಮಾರು ಒಂದೂವರೆ ಎರಡು ವರ್ಷಗಳೇ ಈ ಪ್ಲೇಗ್ ಕಾಡಿತು. ಪೇಟೆ ಪ್ರದೇಶದಿಂದಲೇ ೩೦ ಸಾವಿರ ಜನ ಊರು ಬಿಟ್ಟು ಹೊರಟು ಹೋದರು. ಮುಂದೆ ಬಹಳಷ್ಟು ಜನ ಹಿಂತಿರುಗಿ ಬಂದರೂ, ಜನಸಂಖ್ಯೆ ಒಂದಿಷ್ಟು ಕುಗ್ಗಿಬಿಟ್ಟಿತು. ವ್ಯಾಪಾರ ಕುಸಿದು ಹೋಯಿತು. ಮುನಿಸಿಪಾಲಿಟಿಗೆ ನಲವತ್ತು ಸಾವಿರ ರೂಪಾಯಿನಷ್ಟು ಹಣ ನಷ್ಟವಾಯಿತು.

ಮಹಾಕ್ಷಾಮವನ್ನೂ ಮತ್ತು ಪ್ಲೇಗ್ ಮಾರಿಯನ್ನು ಇಂಗ್ಲಿಷ್ ಆಡಳಿತಗಾರರು ಸರಿಯಾಗಿಯೇ ಎದುರಿಸಿದರು. ಪ್ರತ್ಯೇಕ ಅಧಿಕಾರಿಗಳನ್ನು ನೇಮಿಸಿದರು. ವೈದ್ಯಕೀಯ ಸೇವೆ ಏರಿಸಿದರು. ಜನರನ್ನು ಊರಾಚೆಯತ್ತ ಗುಡಿಸಲುಗಳಿಗೆ ಸಾಗಿಸಿದರು. ಊರಿನ ಬಹುಪಾಲು ಮನೆಗಳಿಗೆ ಸೋಂಕು ನಿವಾರಕಗಳನ್ನು ಚಿಮುಕಿಸಿ ಶುದ್ಧಿಗೊಳಿಸಿದರು.

ಇವೆರಡು ಮಾರಿಗಳಿಂದ ಬೆಂಗಳೂರು ನಗರಕ್ಕೆ ಒಂದು ರೀತಿ ವರಪ್ರಸಾದವಾಯಿತು. ಇಡೀ ಊರು ಸ್ವಚ್ಛವಾಯಿತು. ಪ್ಲೇಗ್‌ನಿಂದ ಸತ್ತವರ ಮನೆಗಳನ್ನೆಲ್ಲ ನಾಶಪಡಿಸಿ ರಸ್ತೆಗಳನ್ನು ಅಗಲಿಸಿದರು. ಒಳಚರಂಡಿ ವ್ಯವಸ್ಥೆಯನ್ನು ಉತ್ತಮಗೊಳಿಸಿದರು. ಹೊಸದಾಗಿ ಮನೆಕಟ್ಟುವವರು ಒಳಚರಂಡಿ ಮತ್ತು ಗಾಳಿಸಂಚಾರ ವ್ಯವಸ್ಥೆಯನ್ನು ಕಡ್ಡಾಯವಾಗಿ ಮಾಡಬೇಕೆಂಬ ನಿಯಮಬಂದಿತು. ೮೯೩ ಮನೆಗಳನ್ನು ತೆಗೆದುಹಾಕಿ ರಸ್ತೆಗಳನ್ನು ಬೀದಿಗಳನ್ನು ನಿರ್ಮಿಸಲಾಯಿತು. ಮಲ್ಲೇಶ್ವರ ಮತ್ತು ಬಸವನಗುಡಿ ಬಡಾವಣೆಗಳ ನಿರ್ಮಾಣ ಪ್ರಾರಂಭಿಸಲಾಯಿತು. ಒಬ್ಬ ಆರೋಗ್ಯ ಅಧಿಕಾರಿಯನ್ನು ನೇಮಿಸಲಾಯಿತು. ೧೯೦೦ರಲ್ಲಿ ವಿಕ್ಟೋರಿಯಾ ಆಸ್ಪತ್ರೆ ಆಯಿತು.

ಮಹಾಕ್ಷಾಮ ೧೮೭೬-೭೮

ವೃತ್ತಿಪರರು ತಮ್ಮ ಸಲಕರಣೆಗಳನ್ನೆಲ್ಲ ಮಾರಿ ಧಾನ್ಯಕೊಂಡರು. ಹೀಗಾಗಿ ಅನೇಕ ಪರಿಣತ ನೆಯ್ಗೆಗಾರರು, ವೃತ್ತಿಪರರು ತಮ್ಮ ಪರಂಪರೆಯ ವೃತ್ತಿಯನ್ನು ಬಿಟ್ಟುಬಿಟ್ಟರು. ೩ ತಿಂಗಳಲ್ಲಿ ಸುಮಾರು ೧೩೦೦ಜನ ಸತ್ತುಹೋದರು.

ರಸ್ತೆ ಸಿಕ್ಕಿತು- ಅದು ಬಳೇಪೇಟೆ ಆಯಿತು. ಹತ್ತಿ ಬೆಳೆಗಾರರಿಗೆ, ಹತ್ತಿ-ರೇಷ್ಮೆ ಸೀರೆ ವ್ಯಾಪಾರಿಗಳಿಗೆ ಅರಳೇಪೇಟೆ, ದೊಡ್ಡ ದೊಡ್ಡ ವ್ಯಾಪಾರಿಗಳಿಗೆ ಚಿಕ್ಕಪೇಟೆ ಮತ್ತು ದೊಡ್ಡಪೇಟೆ (ಅವೆನ್ಯೂ ರಸ್ತೆ), ಚಿನ್ನ ಬೆಳ್ಳಿ ವ್ಯಾಪಾರಿಗಳಿಗೆ ನಗರ್ತರ ಪೇಟೆ, ಮುತ್ತುಗಳ ವ್ಯಾಪಾರಿಗಳಾದ ಶ್ರೇಷ್ಠಿ (ಶೆಟ್ಟರು) ಜನರಿಗಾಗಿ ಮುತ್ಯಾಲ ಪೇಟೆ (ಕೋಮಟಿ ಪೇಟೆ), ಅಕ್ಕಿ ಮಂಡಿಗಳಿಗೆ ಅಕ್ಕಿಪೇಟೆ -ಹೀಗೆ ಮೇಲಿನವರು ಕೆಳಗಿನವರು ಎಂದು ನೋಡದೆ ಎಲ್ಲ ಜಾತಿಯವರಿಗೂ ಪ್ರಾಧಾನ್ಯ ನೀಡಿ ಅನುಕೂಲ ಮಾಡಿಕೊಟ್ಟ. ಸ್ವಕುಲ ಸಾಲಿ (ಮರಾಠಿ ನೆಯ್ಗೆಯವರು), ಗಾಣಿಗರು (ಗಾಣಿಗರ ಪೇಟೆ), ತೋಟದ ಕೆಲಸದಲ್ಲಿ ಪರಿಣತರು-ಕರಗ ಮಹೋತ್ಸವ ಪ್ರಾರಂಭಿಸಿದ ತಿಗಳರು (ವಹ್ನಿಕುಲ ಕ್ಷತ್ರಿಯರು-ತಿಗಳರ ಪೇಟೆ), ಬಣಜಿಗರು (ಬಳೇಪೇಟೆ), ವಿಶ್ವಕರ್ಮರು, ಕನ್ನಡ ದೇವಾಂಗದವರು, ಉಪ್ಪಾರರು (ಉಪ್ಪು ತಯಾರಿಕರು), ಯಾದವರು. ಲಿಂಗಾಯತ ಸೇನಿಗರು -ಹೀಗೆ ಅವನು ಯಾರನ್ನೂ ಬಿಡಲಿಲ್ಲ.

ಅರಳೇಪೇಟೆ, ಸುಣಕಲ್ಲು ಪೇಟೆ, ಕುಂಬಾರ ಪೇಟೆ, ದೊಡ್ಡಪೇಟೆ, ಚಿಕ್ಕಪೇಟೆ, ಬಳೇಪೇಟೆ, ಅಕ್ಕಿಪೇಟೆ, ಕುರುಬರ ಪೇಟೆ, ಉಪ್ಪಾರಪೇಟೆ, ಮಾಮೂಲು ಪೇಟೆ, ತರಗುಪೇಟೆ, ಮಂಡೀಪೇಟೆ, ನಗರ್ತರ ಪೇಟೆ, ತಿಗಳರ ಪೇಟೆ, ಗಾಣಿಗರ ಪೇಟೆ, ಹಲಸೂರು ಪೇಟೆ, ಮುತ್ಯಾಲ ಪೇಟೆ, ಸೀಗೇಬೇಲಿ ಇವೆಲ್ಲ ಊರಿನ ಮುಖ್ಯ ತಾಣಗಳಾದವು. ಕಬ್ಬನ್ ಪೇಟೆ, ಸುಲ್ತಾನ್ ಪೇಟೆ, ತಾರಾಮಂಡಲ ಪೇಟೆಗಳೆಲ್ಲ ನೂರೈವತ್ತು ವರ್ಷಗಳ ಅನಂತರ ಹೆಸರು ಪಡೆದಿರಬೇಕು (ಮುಸ್ಲಿಮರ ಮತ್ತು ಇಂಗ್ಲಿಷರ ಆಳ್ವಿಕೆಯಲ್ಲಿ).

ಕೆಂಪೇಗೌಡ ತನ್ನ ಕನಸಿನ ಊರನ್ನು ಸುತ್ತಮುತ್ತಲ ಎಲ್ಲೆಲ್ಲೂ ಇರದಂಥ ಒಂದು ಯೋಜಿತ ಊರನ್ನಾಗಿಸಿದ. ಆ ಕಾಲದಲ್ಲಿ ಯಾವ ಊರಿನಲ್ಲಿಯೂ ಕಾಣದಂಥ ಅತ್ಯುತ್ತಮವಾಗಿ ಆಲೋಚಿಸಿದ ವಿಶಾಲ ರಸ್ತೆಗಳನ್ನು ನಿರ್ಮಿಸಿದ. ದೊಡ್ಡ ದೊಡ್ಡ ವ್ಯಾಪಾರ ಮಳಿಗೆಗಳು, ಛತ್ರಗಳು, ದೇವಾಲಯಗಳು ನಿರ್ಮಾಣಗೊಂಡವು. ಬೆಂಗಳೂರು ಪ್ರಜೆಗಳು ಸುಖ-ನೆಮ್ಮದಿಗಳಿಂದ ಜೀವನ ಸಾಗಿಸಿಕೊಂಡಿದ್ದರು. ವ್ಯಾಪಾರಿಗಳು ದೂರ ದೂರದ ಊರುಗಳ ವ್ಯಾಪಾರಿಗಳೊಂದಿಗೆ ವ್ಯವಹಾರ ಮಾಡುತ್ತಿದ್ದರು. ರೇಷ್ಮೆ, ರತ್ನಕಂಬಳಿ, ಉಣ್ಣೆ, ಕಂಬಳಿ, ಸೆಣಬಿನ ಚೀಲಗಳು, ಒಡವೆ-ವಸ್ತ್ರಗಳು ಇಲ್ಲಿಂದ ಬೇರೆ ಊರುಗಳಿಗೆ ರಫ್ತಾಗುತ್ತಿದ್ದವು. ಎಲ್ಲ ಊರುಗಳ ವಿಧವಿಧ ನಾಣ್ಯಗಳಿಗೆ ಇಲ್ಲಿ ಚಲಾವಣೆಗೆ ಅವಕಾಶವಿತ್ತು. ವ್ಯಾಪಾರಿಗಳು ಧನವಂತರಾದರು. ಶ್ರೇಷ್ಠಿಗಳು ಶ್ರೀಮಂತರಾದರು.

ಕೆಂಪೇಗೌಡನ ಪ್ರತಿಷ್ಠೆ, ಕೀರ್ತಿ, ಅಭ್ಯುದಯ ಸಹಿಸದ ಸುತ್ತಮುತ್ತಲ ಊರುಗಳ ಪಾಳೇಗಾರರು ಆಗಾಗ ವಿಜಯನಗರದ ಅರಸರಿಗೆ ಚಾಡಿ ಚುಚ್ಚುತ್ತಿದ್ದರು. ಪರಿಣಾಮ

ಮೊದಲ ಕೆಂಪೇಗೌಡನಿಗೆ ಆನೆಗೊಂದಿಯಲ್ಲಿ ಐದು ವರ್ಷಗಳು ಸೆರೆವಾಸ. ಆಗ ಚೆನ್ನಪಟ್ಟಣದ ಪಾಳೇಗಾರ ಜಗದೇವರಾಯನ ಕೈಗೆ ಬೆಂಗಳೂರು ಹೋಯಿತು. ಮತ್ತೆ ಕೆಂಪೇಗೌಡ ಹಿಂತಿರುಗಿ ಬೆಂಗಳೂರನ್ನು ವಶಪಡಿಸಿಕೊಂಡ. ಅನಂತರ ಸಾಯುವವರೆಗೆ (೧೫೬೯) ೩೩ ವರ್ಷಗಳು ಬೆಂಗಳೂರನ್ನು ಆಳಿದ. ಅನಂತರ ಅವನ ಮಗ ಇಮ್ಮಡಿ ಕೆಂಪೇಗೌಡ ಆಳಿದ. ಬೆಂಗಳೂರನ್ನು ತುಂಬಾ ಅಭಿವೃದ್ಧಿಗೊಳಿಸಿದ. ಕೆಂಪೇಗೌಡನ ವಂಶಸ್ಥರು ಮುಂದೆ ೧೬೩೮ರವರೆಗೂ ಬೆಂಗಳೂರನ್ನು ಆಳಿದರು. ಆದರೆ, ಬಿಜಾಪುರದ ಸುಲ್ತಾನ ದಂಡೆತ್ತಿ ಬಂದು ಕೆಂಪೇಗೌಡ ಕುಲದವರನ್ನು ಸೋಲಿಸಿ, ಬೆಂಗಳೂರನ್ನು ವಶಪಡಿಸಿಕೊಂಡು, ಗೌಡ ದೊರೆಗಳನ್ನು ಮಾಗಡಿಗೆ ಕಳುಹಿಸಿಬಿಟ್ಟ. ಅಲ್ಲಿಂದ ಬಿಜಾಪುರ ಸುಲ್ತಾನ ಆಕ್ರಮಿಸಿಕೊಂಡ ಬೆಂಗಳೂರು ಶಿವಾಜಿಯ ತಂದೆ ಷಹಜಿಯ ಜಹಗೀರಾಯಿತು. ಮುಂದಿನ ೫೦ ವರ್ಷಗಳು ಬೆಂಗಳೂರನ್ನು ಮರಾಠಿಗರು ಆಳಿದರು. ೧೬೪೦-೪೨ರಲ್ಲಿ ಎರಡು ವರ್ಷ ಶಿವಾಜಿ ತನ್ನ ತಾಯಿ ಜೀಜಾಬಾಯಿಯೊಂದಿಗೆ ಬೆಂಗಳೂರಿನಲ್ಲಿ ವಾಸವಾಗಿದ್ದ. ೧೬೮೭ರಲ್ಲಿ ಮೊಗಲರ ಔರಂಗಜೇಬನ ಸೈನ್ಯ ಬೆಂಗಳೂರನ್ನು ವಶಪಡಿಸಿಕೊಂಡಿತು. ಮೈಸೂರು ಅರಸರಾದ ಚಿಕ್ಕದೇವರಾಜ ಒಡೆಯರು ಮೊಗಲರಿಗೆ ಸಹಾಯ ಮಾಡಿದರು. ಈ ಸ್ನೇಹಕ್ಕಾಗಿ ಬೆಂಗಳೂರನ್ನು ಚಿಕ್ಕದೇವರಾಜ ಒಡೆಯರಿಗೆ ಮೂರು ಲಕ್ಷ ರೂಪಾಯಿಗಳ 'ಭೋಗ್ಯ'ಕ್ಕೆ ನೀಡಲಾಯಿತು. ಅರಸರು ಮೊಟ್ಟೆ ಆಕಾರದ ಹೊಸದೊಂದು ಮಣ್ಣಿನ ಕೋಟೆಯನ್ನು ಕೆಂಪೇಗೌಡನ ಕೋಟೆಗೆ ಸೇರಿಸಿದರು. ಮೈಸೂರು ಅರಸರಿಂದ ಮುಂದೆ ಬೆಂಗಳೂರು ಹೈದರಲ್ಲೀಖಾನನ ಜಹಗೀರಾಯಿತು (೧೭೫೮). ಹೈದರಾಲೀ, ಚಿಕ್ಕದೇವರಾಜ ಒಡೆಯರು ನಿರ್ಮಿಸಿದ್ದ ಮಣ್ಣಿನ ಕೋಟೆಯನ್ನು ಒಡೆಸಿ ಹಾಕಿ ಕಲ್ಲಿನ ಕೋಟೆಯನ್ನು ನಿರ್ಮಿಸಿದ. ಇದರ ಒಂದು ಭಾಗವೇ ಈಗ ಸಿಟಿ ಮಾರ್ಕೆಟ್-ವಿಕ್ಟೋರಿಯಾ-ವಾಣಿವಿಲಾಸ ಆಸ್ಪತ್ರೆ ಹತ್ತಿರ ಸ್ಮಾರಕವಾಗಿ ಉಳಿದುಕೊಂಡಿದೆ. ಅನಂತರ ೧೭೮೨ರಲ್ಲಿ ಟೀಪೂಸುಲ್ತಾನನ ಹಿಡಿತಕ್ಕೆ ಬಂದ ಬೆಂಗಳೂರು ಅವನು ೧೭೯೯ರಲ್ಲಿ ಇಂಗ್ಲಿಷರಿಂದ ಹತನಾಗುವವರೆಗೂ ೧೭ ವರ್ಷಗಳು ಅವನದಾಗಿತ್ತು.

ಟೀಪೂ ಸತ್ತಮೇಲೆ ಇಂಗ್ಲಿಷರ ಪಾಲಾಗಿ ಮತ್ತೆ ಮೈಸೂರರಸರ ಕೈಗೆ ಬಂದ ಬೆಂಗಳೂರು ಮೈಸೂರು ಆಡಳಿತಕ್ಕೆ ಒಳಪಟ್ಟಿತು. ಇಂಗ್ಲಿಷರು ಶ್ರೀರಂಗಪಟ್ಟಣವನ್ನು ಬಿಟ್ಟು ೧೮೦೯ರಲ್ಲಿ ಬೆಂಗಳೂರಿಗೆ ಬಂದು ಕಂಟೋನ್ಮೆಂಟ್ ಸ್ಥಾಪಿಸಿದರು. ಕಂಟೋನ್ಮೆಂಟ್ ಆಧುನಿಕವಾಗಿ ಬೆಳೆಯಿತು. ಬೆಂಗಳೂರು ಪೇಟೆ ಸಾಂಪ್ರದಾಯಿಕ ಗ್ರಾಮದ ನೋಟವನ್ನೆ ಬೀರುತ್ತ ನಿಧಾನವಾಗಿ ಬೆಳೆಯಿತು. ಮೈಸೂರರಸರು ಬೆಂಗಳೂರನ್ನು ಅನೇಕ ರೀತಿಗಳಲ್ಲಿ ಅಭಿವೃದ್ಧಿಗೊಳಿಸಿದರು. ಆದರೆ, ೧೮೩೧ರ

ಅನಂತರ ಇಡೀ ಮೈಸೂರು ರಾಜ್ಯವನ್ನು ಇಂಗ್ಲಿಷರು ತಮ್ಮ ಹಿಡಿತಕ್ಕೆ ತೆಗೆದುಕೊಂಡಾಗ, ಬೆಂಗಳೂರು ದಂಡು ಮತ್ತು ಪೇಟೆ ಎರಡೂ ಅವರ ಆಡಳಿತಕ್ಕೆ ಬಂದಿತು. ಮೈಸೂರು ಅರಮನೆಯಿಂದ ಎಲ್ಲ ಸರ್ಕಾರಿ ಕಛೇರಿಗಳೂ, ಕಡತಗಳು ಬೆಂಗಳೂರಿಗೆ ಬಂದು ಸೇರಿದವು. ಕೋಟೆ ವೆಂಕಟರಮಣ ದೇವಾಲಯದ ಹಿಂದಿದ್ದ ಟೀಪೂ ಅರಮನೆ ಸರ್ಕಾರದ ಕಛೇರಿ ಆಯಿತು. ಆದರೆ, ೧೮೬೪ರ ಅನಂತರ ಕಬ್ಬನ್ ಪಾರ್ಕ್ ಪ್ರದೇಶದಲ್ಲಿ, ನ್ಯೂ ಪಬ್ಲಿಕ್ ಆಫೀಸ್ (ಈಗಿನ ನೃಪತುಂಗ ರಸ್ತೆ ಪ್ರಾರಂಭ-ಕೆ.ಆರ್. ವೃತ್ತ) ಮತ್ತು ಅಠಾರಾ ಕಛೇರಿ (ಈಗಿನ ಹೈಕೋರ್ಟ್) ನಿರ್ಮಾಣವಾಗಿ ರಾಜ್ಯದ ಕಛೇರಿಗಳೆಲ್ಲವೂ (೧೯೫೬ರಲ್ಲಿ ವಿಧಾನಸೌಧ ನಿರ್ಮಾಣ ಆಗುವವರೆಗೆ) ಅಲ್ಲಿಗೆ ಬಂದವು. ೧೮೮೧ರಲ್ಲಿ ಮತ್ತೆ ಬೆಂಗಳೂರು ಪೇಟೆ ಮತ್ತು ಮೈಸೂರು ರಾಜ್ಯ ಮೈಸೂರು ಅರಸರ ಕೈಗೆ ಬಂದಿತು. ಆದರೆ, ಬೆಂಗಳೂರು ದಂಡು ಭಾಗವನ್ನು ಮಾತ್ರ ಇಂಗ್ಲಿಷರು ೧೯೪೭ರವರೆಗೆ ಹಿಡಿದಿಟ್ಟುಕೊಂಡಿದ್ದರು. ಮೈಸೂರು ಅರಸರದೇ ರಾಜ್ಯದಲ್ಲಿ ರಾಜ್ಯಭಾರವೆಂದರೂ, ಇಡೀ ರಾಜ್ಯ ಇಂಗ್ಲಿಷ್ ರೆಸಿಡೆಂಟರ ಮುಷ್ಠಿಯಲ್ಲಿತ್ತು. ಮಹಾರಾಜರು ತೆಗೆದುಕೊಳ್ಳುವ ಒಂದೊಂದು ನಿರ್ಧಾರಕ್ಕೂ ರೆಸಿಡೆಂಟರ ಅನುಮತಿ-ಸಹಿ ಬೇಕಾಗಿತ್ತು. ಈ ಬಿಗಿತದಲ್ಲಿಯೇ ಮೈಸೂರು ಅರಸರ ಆಡಳಿತ ನಡೆಯಿತು. ೧೯೪೭ರಲ್ಲಿ ದೇಶಕ್ಕೆ ಸ್ವಾತಂತ್ರ್ಯ ಬಂದಾಗ ಇಂಗ್ಲಿಷರು ಇಡೀ ದೇಶವನ್ನು ಜನಾಡಳಿತಕ್ಕೆ ಒಪ್ಪಿಸಿ 'ತೊಲಗಿದರು'. ಕೈಗೆ ಬಂದ ಅಧಿಕಾರವನ್ನು ಮಹಾರಾಜರು ಅನುಭವಿಸಲಾಗಲಿಲ್ಲ. ಏಕೆಂದರೆ ಅವರು ತಮ್ಮ ರಾಜ್ಯವನ್ನು ಪ್ರಜಾಪ್ರಭುತ್ವಕ್ಕೆ ಒಪ್ಪಿಸಬೇಕಾಯಿತು. ಮೈಸೂರಿನ ಆಗಿನ ರಾಜರಾಗಿದ್ದ ಜಯಚಾಮರಾಜ ಒಡೆಯರ್ ಅವರು ಸ್ವತಂತ್ರ ಮೈಸೂರು ರಾಜ್ಯದ ಮೊದಲ ರಾಜ ಪ್ರಮುಖರಾದರು. ರಾಜ್ಯವಾಳುತ್ತಿದ್ದ ದೊರೆ ರಾಜ್ಯದ ಒಬ್ಬ ಪ್ರಜೆಯಾದರು.

ಬೆಂಗಳೂರು ದಂಡು ಮತ್ತು ಪೇಟೆ (ನಗರ) ಭಾಗ ಒಂದಾಯಿತು. ಎರಡೂ ಸೇರಿ ಒಂದು ಮುನಿಸಿಪಾಲಿಟಿ ಆಯಿತು. ಈಗದು ಬೆಂಗಳೂರು ಮಹಾನಗರ ಪಾಲಿಕೆ.

ಮಿಣುಕು ದೀಪಗಳಲ್ಲಿ, ಉರಿಯುವ ಪಂಜುಗಳಲ್ಲಿ ಬೆಂಗಳೂರನ್ನು ಆಳಿದ್ದ ಮೊದಲ ಕೆಂಪೇಗೌಡನೇನಾದರೂ ಈಗ ಬೆಂಗಳೂರಿಗೆ ಬಂದರೆ, ಬೆಂಗಳೂರಿನ ಎಲ್ಲೆಗಳ ತುದಿಕಾಣದೆ ಮತ್ತು 'ಬೆಂಗಳೂರು ಈವರೆಗೆ ಬೆಳೆಯುತ್ತದೆ' ಎಂದು ತಾನು ನಿರ್ಮಿಸಿದ ನಾಲ್ಕು ಕಾವಲು ಗೋಪುರಗಳ ಜಾಡು ಕಾಣದೆ, ಆಧುನಿಕ ಬೆಂಗಳೂರಿನ ಪ್ರಕಾಶಮಾನವಾದ ಬೆಳಕಿನಿಂದ ಅವನ ಕಣ್ಣುಗಳು ಕೋರೈಸಿ ಬಿಡಬಹುದು.

■■

೩. ನಡೆದಾಡು, ಬೆಂಗಳೂರು!

ಬೆಂಗಳೂರಿನಲ್ಲಿ ಓಡಾಟ ಅಷ್ಟೇನೂ ಕಷ್ಟವಾದುದಲ್ಲ. ಎಲ್ಲ ಭಾಗಗಳಿಗೂ ಬಸ್‌ಗಳಿವೆ. ಎಲ್ಲ ಬಸ್‌ಗಳೂ ಮೆಜೆಸ್ಟಿಕ್ ಪ್ರದೇಶಕ್ಕೆ (ಬೆಂಗಳೂರು ಬಸ್‌ಸ್ಟಾಂಡ್) ಶಿವಾಜಿನಗರಕ್ಕೆ, ಸಿಟಿ ಮಾರ್ಕೆಟ್‌ಗೆ ಹೋಗುತ್ತವೆ. ಬೆಂಗಳೂರಿನ ಎಲ್ಲ ಬಡಾವಣೆಗಳಿಂದಲೂ ಈ ಮೂರು ಪ್ರಮುಖ ಬಸ್‌ಸ್ಟಾಂಡ್‌ಗಳಿಗೆ ಬಸ್‌ಗಳಿವೆ. ಮತ್ತೆ ರಾತ್ರಿ ಒಂಭತ್ತು-ಹತ್ತು ಘಂಟೆಗೂ ನಿಮ್ಮ ಬಡಾವಣೆಗೆ ಬಸ್ ಸಿಗುತ್ತದೆ. ಹತ್ತುವರೆ-ಹನ್ನೊಂದರ ಒಳಗೆ ನಿಮ್ಮ ಬಡಾವಣೆ-ಮನೆ ತಲುಪಿಬಿಡಬಹುದು.

ಮೊದಲು ನೀವು ವಾಸ ಮಾಡಲು ಬಂದಿರುವ ಬಡಾವಣೆಯ ಸುತ್ತಮುತ್ತಲ ಬೀದಿಗಳ, ಪ್ರಮುಖ ರಸ್ತೆಗಳ ಪರಿಚಯ ಮಾಡಿಕೊಳ್ಳಿ. ಮನೆಯಿಂದ ಹೊರಬಂದು ನಾಲ್ಕು ರಸ್ತೆ ಸುತ್ತಿರಿ. ಬಸ್ ಸ್ಟಾಪ್‌ಗಳು ಎಲ್ಲಿವೆ, ಅವುಗಳ ಹೆಸರೇನು, ಮುಖ್ಯ ಬಸ್ ಸ್ಟಾಂಡ್ ಎಲ್ಲಿದೆ ಎನ್ನುವುದನ್ನು ತಿಳಿದುಕೊಳ್ಳಿ. ನಿಮ್ಮ ಮನೆಯ ಹತ್ತಿರ ಇರುವ ಮುಖ್ಯ ತಾಣಗಳ ನೆನಪು ಇಟ್ಟುಕೊಳ್ಳಿ- ಸಂಕಷ್ಟಹರ ಗಣಪತಿ ದೇವಸ್ಥಾನ, ಪೋಲಿಸ್ ಸ್ಟೇಷನ್, ಶೇಷಾದ್ರಿಪುರಂ ಕಾಲೇಜ್, ವಿಜಯನಗರ ಕೋತಿ ಬಂಡೆ, ಶನಿದೇವರ ದೇವಸ್ಥಾನ, ನವರಂಗ್ ಟಾಕೀಸ್, ಜಯನಗರ ೪ನೇ ಬ್ಲಾಕ್ ಕಾಂಪ್ಲೆಕ್ಸ್, ಹಳ್ಳಿಮನೆ -ಹೀಗೆ ನಿಮ್ಮ ಸ್ಥಳದ ಜನಪ್ರಿಯ ತಾಣಗಳ ಗುರುತು ಇಟ್ಟುಕೊಂಡು ಓಡಾಡಿ. ನಿಮ್ಮ ಬಡಾವಣೆಗೆ ಎಲ್ಲೆಲ್ಲಿಂದ ಯಾವ ಯಾವ ಬಸ್ ನಂಬರ್‌ಗಳು ಬರುತ್ತವೆ ಎನ್ನುವುದನ್ನು ತಿಳಿದುಕೊಳ್ಳಿ (ಉದಾಹರಣೆ- ವಿಜಯನಗರಕ್ಕೆ ಶಿವಾಜಿನಗರದಿಂದ, ಮೆಜೆಸ್ಟಿಕ್‌ನಿಂದ, ಸಿಟಿಮಾರ್ಕೆಟ್‌ನಿಂದ ಬೇಕಾದಷ್ಟು ಬಸ್‌ಗಳು ಬರುತ್ತವೆ. ಇಲ್ಲಿಂದ ಆ ಪ್ರದೇಶಗಳಿಗೆ ಹೋಗುತ್ತವೆ. ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆಗೆ ಹೋಗಬೇಕಾದರೆ ಯಾವ ಬಸ್ ಹೋಗುತ್ತದೆ ಎಂದು ವಿಚಾರಿಸಿಕೊಂಡು ಹತ್ತಬೇಕು)

ಬೆಂಗಳೂರು ರಸ್ತೆಗಳ ಬಡಾವಣೆಗಳನ್ನು ಕಾಣಿಸುವ 'ಭೂಪಟ' ಕೊಂಡಿಟ್ಟುಕೊಂಡರೆ ತುಂಬ ಅನುಕೂಲವಾಗುತ್ತದೆ. ಕನಿಷ್ಠ ಯಾವ ಯಾವ ಬಡಾವಣೆಗಳು ಎಲ್ಲೆಲ್ಲಿವೆ, ಯಾವ ಯಾವ ರಸ್ತೆಗಳು ಎಲ್ಲೆಲ್ಲಿವೆ, ಲಾಲ್‌ಬಾಗ್, ಕಬ್ಬನ್ ಪಾರ್ಕ್,

ವಿಧಾನಸೌಧ, ಕಾರ್ಪೊರೇಷನ್ ಆಫೀಸ್ ಮೊದಲಾದವು ಎಲ್ಲಿವೆ ಎಂದಾದರೂ ಗೊತ್ತಾಗುತ್ತದೆ.

ಬೆಂಗಳೂರು ನಗರ ಸಾರಿಗೆ ಬೆಂಗಳೂರಿನ ಅತಿ ಪ್ರಮುಖ ಸಾರಿಗೆ ವ್ಯವಸ್ಥೆ. ಸಾವಿರಾರು ಬಸ್‌ಗಳು ಪ್ರತಿದಿನವೂ ಲಕ್ಷಾಂತರ ಪ್ರಯಾಣಿಕರನ್ನು ಕರೆದೊಯ್ಯುತ್ತವೆ. ಬೆಂಗಳೂರಿನ ಮತ್ತು ಹೊರವಲಯದ ಪ್ರತಿಯೊಂದು ಚಿಕ್ಕಪುಟ್ಟ ತಾಣಗಳನ್ನು ಇವು ತಲುಪುತ್ತವೆ. ಬೆಳಗ್ಗೆ ಆರು ಘಂಟೆಯಿಂದ ರಾತ್ರಿ ಹತ್ತು ಘಂಟೆಯವರೆಗೂ ಇವುಗಳ ಸಂಚಾರ ನಡೆಯುತ್ತದೆ. ಇಡೀ ರಾತ್ರಿ ಓಡಾಡುವ ಬಸ್‌ಗಳೂ ಇವೆ.

ಜೊತೆಗೆ, ಇಡೀ ದಿವಸ ಓಡಾಡಲು ಇಪ್ಪತ್ತೈದು ರೂಪಾಯಿಗಳ ವಿಶೇಷ ಟಿಕೆಟ್ ಇದೆ. ಇದನ್ನು ನೀವು ಮೊದಲು ಹತ್ತುವ ಬಸ್‌ನ ಕಂಡಕ್ಟರ್ ಅವರೇ ಕೊಡುತ್ತಾರೆ. ಇದನ್ನು ಕೊಂಡರೆ (ಪುಷ್ಪಕ್ ಮತ್ತು ಕೆಂಪುಬೋರ್ಡ್ ಬಸ್‌ಗಳನ್ನುಳಿದು) ಬೇರೆಲ್ಲ ಬಸ್‌ಗಳಲ್ಲೂ ಮತ್ತೆ ಟಿಕೆಟ್ ಕೊಳ್ಳದೆ ಓಡಾಡಬಹುದು. ಇದು ಬಹಳ ಅನುಕೂಲವಾಗಿದೆ.

ಸರ್ಕಾರಿ ಸಾರಿಗೆ ಬಸ್‌ಗಳಲ್ಲದೆ, ಬೆಂಗಳೂರಿನಲ್ಲಿ ದಿಢೀರನೆ (ನಿರ್ಧರಿಸಿದ ಕೂಡಲೇ) ಓಡಾಡಲು ಹೆಜ್ಜೆ ಇಟ್ಟಲ್ಲೆಲ್ಲ ಆಟೋರಿಕ್ಷಾಗಳು ಸಿಗುತ್ತವೆ. ನೀವು ಹೇಳಿದ ಜಾಗಕ್ಕೆ ಕರೆದೊಯ್ಯುತ್ತಾರೆ. ಬಹುಪಾಲು ಸುರಕ್ಷಿತ ಸಾರಿಗೆ. ಮೂರು ಜನ ಕುಳಿತು ಪ್ರಯಾಣ ಮಾಡಬಹುದು. ಮುಕ್ಕಾಲು ದೂರ ಬಸ್ಸಿನಲ್ಲಿ, ಕಾಲು ದೂರ ಆಟೋದಲ್ಲಿ ಎಂದು 'ಪ್ಲಾನ್' ಮಾಡಿಕೊಂಡರೆ, ಹೆಚ್ಚು ಖರ್ಚಿನ ಒತ್ತಡವಿಲ್ಲದೆ ಓಡಾಡಬಹುದು. ೨೪ ಘಂಟೆಗಳಲ್ಲಿ ಯಾವಾಗ ಬೇಕಾದರೂ ಆಟೋಗಳು ಸಿಗುತ್ತವೆ.

ಈಚಿನ ವರ್ಷಗಳಲ್ಲಿ ಬೆಂಗಳೂರಿನಲ್ಲಿ 'ರೇಡಿಯೋ ಟ್ಯಾಕ್ಸಿ' ಎನ್ನುವ ಆಟೋಗಳಷ್ಟೇ ಅನುಕೂಲವಾದ ಮೋಟರ್ ಕಾರುಗಳು ಬಾಡಿಗೆಗೆ ದೊರಕುತ್ತವೆ. ಪ್ರತಿ ಕಾರಿಗೂ ಮೊಬೈಲ್ 'ಫೋನ್' ಸಂಪರ್ಕವಿರುತ್ತದೆ. ಈ ನಂಬರಿಗೆ ಫೋನ್ ಮಾಡಿ ನೀವು ಎಲ್ಲಿದ್ದೀರೊ ಅಲ್ಲಿಗೆ ಟ್ಯಾಕ್ಸಿಯನ್ನು ಕರೆಸಿಕೊಳ್ಳಬಹುದು. ನೀವು ಕರೆಮಾಡಿದ ಕೆಲವೇ ನಿಮಿಷಗಳಲ್ಲಿ ಟ್ಯಾಕ್ಸಿ ಬಂದು ನಿಲ್ಲುತ್ತದೆ. ರೇಡಿಯೋ ಟ್ಯಾಕ್ಸಿಗಳ ಫೋನ್ ನಂಬರಗಳನ್ನೆಲ್ಲ ನಿಯಂತ್ರಿಸುವ ಕೇಂದ್ರ ತಾಣವೂ ಇದೆ. ಇಲ್ಲಿಗೆ ಫೋನ್ ಮಾಡಿದರೂ ಸಾಕು, ಅವರೇ ರೇಡಿಯೋ ಟ್ಯಾಕ್ಸಿಗೆ ಫೋನ್ ಮಾಡಿ ನಿಮ್ಮಲ್ಲಿಗೆ ಕಳುಹಿಸುತ್ತಾರೆ. ಈ ಟ್ಯಾಕ್ಸಿಗಳ ಬಾಡಿಗೆ ಹೆಚ್ಚಿನ ಮಟ್ಟದಲ್ಲಿಯೇ ಇರುತ್ತದೆ. ತುರ್ತಿಗೆ ಉಪಯೋಗಿಸಬಹುದು.

ಬೆಂಗಳೂರು ನಗರ ಸಾರಿಗೆಯಲ್ಲಿ ದೊಡ್ಡ ಬದಲಾವಣೆಯನ್ನು ಉಂಟು ಮಾಡಿರುವುದು, ಪುಷ್ಪಕ್ ಬಸ್‌ಗಳು. ಮುಂಜಾವಿಂದ ರಾತ್ರಿಯವರೆಗೂ ಇಡೀ ನಗರದಲ್ಲಿ ಸಂಚರಿಸುವ ಪುಷ್ಪಕ್ ಬಸ್‌ಗಳಲ್ಲಿ ಸುಖಾಸೀನ ಸೀಟುಗಳಿರುತ್ತವೆ. ಯಾವಾಗಲೂ ಜನಗಳಿಂದ ತುಂಬಿ ತುಳುಕಾಡುವುದಿಲ್ಲ. 'ಪೀಕ್' ಸಮಯದಲ್ಲಿ ಸಾಕಷ್ಟು ಕಿಕ್ಕಿರಿದಿರುತ್ತದೆ, ನಿಜ; ಆದರೆ ಬೇರೆ ಸಮಯಗಳಲ್ಲಿ ಆರಾಮವಾಗಿ ಹತ್ತಿ, ಕುಳಿತು ಹೋಗುವ ಸುಖ ಸಾಧ್ಯವಾಗುತ್ತದೆ. ಪುಷ್ಪಕ್‌ಗಳ ಟಿಕೆಟ್ ಬೆಲೆ ಬೇರೆ ಸಾಮಾನ್ಯ ಬಸ್‌ಗಳಿಗಿಂತಲೂ ಸ್ವಲ್ಪ ಜಾಸ್ತಿ. ಅದರಿಂದಾಗುವ ಅನುಕೂಲ ಗಮನಿಸಿದರೆ ಈ ಹೆಚ್ಚಳ ದೊಡ್ಡದೇನಲ್ಲ- ಕೈ ಕಚ್ಚುವ ಹಾಗೇನೂ ಇಲ್ಲ.

ಈಚಿನ ಕೆಲವು ತಿಂಗಳುಗಳಿಂದ 'ಹವಾನಿಯಂತ್ರಿತ' ಬಸ್‌ಗಳು ನಗರದ ಕೆಲವು ಪ್ರಮುಖ ರಸ್ತೆಗಳಲ್ಲಿ ಮಾತ್ರ (ಪ್ರಾಯೋಗಿಕವಾಗಿ) ಓಡಾಡುತ್ತಿವೆ. ಇದರಲ್ಲಿ ಟಿಕೆಟ್ ದರ 'ತುರ್ತು' ಪ್ರಯಾಣಿಕರ, ಆಟೋ ಪ್ರಯಾಣಿಕರ ಜೇಬಿಗೆ ನಿಲುಕುವಂಥದ್ದು.

ಬೆಂಗಳೂರು ನಗರದ ಪ್ರೇಕ್ಷಣೀಯ ತಾಣಗಳನ್ನು ಸುತ್ತಾಡಿ ನೋಡಲು ಕರ್ನಾಟಕ ರಾಜ್ಯ ಪ್ರವಾಸ ನಿಗಮದ ಮಹಡಿ ಬಸ್‌ಗಳಿವೆ. ಮೆಜೆಸ್ಟಿಕ್ ಬಸ್ ಸ್ಟಾಂಡ್‌ನಲ್ಲಿ ನಿಂತಿರುತ್ತವೆ. ಕೆಲವು ಖಾಸಗಿ ಟೂರಿಸ್ಟ್ ಬಸ್‌ಗಳೂ ಬೆಂಗಳೂರು ನಗರ ಸುತ್ತಾಟ ಏರ್ಪಡಿಸುತ್ತವೆ. ನಿಮಗೆ ಸಾಧ್ಯ ಎನಿಸಿದರೆ ಟೂರಿಸ್ಟ್ ಕಾರ್ ಮಾಡಿಕೊಂಡು ನಿಮ್ಮದೇ ಇಷ್ಟ-ಯೋಜನೆಯಂತೆ ಬೆಳಗ್ಗೆ ಆರು ಘಂಟೆಯಿಂದ ರಾತ್ರಿ ಹತ್ತು ಘಂಟೆಯವರೆಗೂ ಬೆಂಗಳೂರು ನಗರವನ್ನು ಸುತ್ತಾಡಿ ಬರಬಹುದು.

ಬೆಳ್ಳಂಬೆಳಗ್ಗೆ ಆರು ಘಂಟೆಗೆ ಮನೆಬಿಟ್ಟು ಕಾರಿನಲ್ಲಿ ಹೊರಟರೆ, ನೇರವಾಗಿ ಲಾಲ್‌ಬಾಗ್ ಓಡಾಟ-ಎಂಟಿಆರ್ ಟಿಫನ್-ಬೆಂಗಳೂರು ಕೋಟೆ-ಟೀಪೂ ಅರಮನೆ-ವೆಂಕಟರಮಣ ದೇವಾಲಯ-ದೊಡ್ಡ ಗಣೇಶ-ದೊಡ್ಡ ಬಸವಣ್ಣ- ಉಡುಪಿ ಪುತ್ತಿಗೆ ಮಠದ ಶ್ರೀಕೃಷ್ಣ ದೇವಾಲಯ- ಅಲ್ಲಿಂದ ಜಯನಗರ ೪ನೇ ಬ್ಲಾಕ್ ಕಾಂಪ್ಲೆಕ್ಸ್-ಊಟ (ಹೋಂಮೀಲ್, ಪವಿತ್ರ, ಕದಂಬಂ, ಸುಖ್ ಸಾಗರ್ ಎಂದು ಆರಿಸಿಕೊಳ್ಳಬಹುದು). ಆಮೇಲೆ ಬನ್ನೇರುಘಟ್ಟ ವನ್ಯಧಾಮ (ಮಧ್ಯಾಹ್ನ ೨ ರಿಂದ ೫ ದರ್ಶನ ಸಮಯ). ಅನಂತರ ನೇರ ವಿಧಾನಸೌಧ-ಕಬ್ಬನ್‌ಪಾರ್ಕ್- ಮಹಾತ್ಮಾ ಗಾಂಧಿ ರಸ್ತೆ-ಬ್ರಿಗೇಡ್ ರಸ್ತೆ-ಕಮರ್ಶಿಯಲ್ ರಸ್ತೆ-ಶಿವಾಜಿನಗರ- ಎಲ್‌ಆರ್‌ಡಿಇ ಸಂಗೀತ ಕಾರಂಜಿ-ರಾತ್ರಿ ಊಟ (ಚಾಲುಕ್ಯ ಅಥವಾ ಜನಾರ್ಧನ ಹೋಟಲ್) -ಮನೆಗೆ ವಾಪಸ್ಸು.

-ಕಾರಿನಲ್ಲಿ ಹೀಗೊಂದು ಓಡಾಟ ಮಾಡಬಹುದು.

ಬೆಂಗಳೂರಿನಿಂದ ಕರ್ನಾಟಕದ ಎಲ್ಲ ಪ್ರಮುಖ ಪ್ರವಾಸೀ ತಾಣಗಳಿಗೂ, ರಾತ್ರಿ ಬಸ್‌ಗಳು ಇವೆ. ಆಧುನಿಕ ಸುಖಾಸೀನ ಬಸ್‌ಗಳು. ಶ್ರೀರಂಗಪಟ್ಟಣ, ಮೈಸೂರು, ನಂಜನಗೂಡು, ಉಡುಪಿ-ಕೊಲ್ಲೂರು-ಮುರ್ಡೇಶ್ವರ, ಶಿರಸಿ ಮಾರಿಕಾಂಬ-ಗೋಕರ್ಣ ಎಂದು ಹೋಗಿಬರಬಹುದು. ಈ ಊರುಗಳಿಗೆ ಬಸ್‌ಗಳಲ್ಲಿ ಹೋಗಿ ತಲುಪಿ, ಅಲ್ಲಿ ಟೂರಿಸ್ಟ್ ಕಾರು ಮಾಡಿಕೊಂಡು ಪ್ರವಾಸೀ ದೈವತಾಣಗಳಿಗೆ ಭೇಟಿ ಕೊಡಬಹುದು.

ಬೆಂಗಳೂರು ನಗರ ದರ್ಶನಕ್ಕೆ ನಡೆದುಕೊಂಡು ಹೋಗುವುದಕ್ಕಿಂತಲೂ ಹಾಯಾದ ನೋಟವಿಲ್ಲ. ನಿಮ್ಮ ಬಡಾವಣೆಯಿಂದ ಬಸ್ ಹತ್ತಿ ಮೆಜೆಸ್ಟಿಕ್‌ಗೆ ಹೋಗಿ ಇಳಿದು ಅಲ್ಲೆಲ್ಲ ಸುತ್ತಾಡುವುದು. ಶಿವಾಜಿನಗರ ಬಸ್‌ಸ್ಟಾಂಡ್‌ಗೆ ಹೋಗಿ ಇಳಿದು ಅಲ್ಲೆಲ್ಲ ಓಡಾಡುವುದು. ಸಿಟಿ ಮಾರ್ಕೆಟ್ ಬಸ್ ಸ್ಟಾಂಡ್‌ಗೆ ಹೋಗಿ ಅಲ್ಲೆಲ್ಲ ಓಡಾಡುವುದು. -ಹೀಗೆಯೂ ಮಾಡಬಹುದು.

ಕರ್ನಾಟಕ ರಾಜ್ಯ ಪ್ರವಾಸ ನಿಗಮ, ಒಂದು ದಿನದ, ಎರಡು ದಿನಗಳ, ಮೂರು ದಿನಗಳ, ಆರು ದಿನಗಳ 'ಕರ್ನಾಟಕ ಪ್ರವಾಸೀ' ತಾಣಗಳ ದರ್ಶನ ಮಾಡಿಸುವ ವಿವಿಧ ಯೋಜನೆಗಳನ್ನು ಒಳಗೊಂಡಿದೆ. ಅದರ ಉಪಯೋಗವನ್ನೂ ಪಡೆದುಕೊಳ್ಳಬಹುದು.

■■

ಕೆಲವು ಮೈಲಿಗಲ್ಲುಗಳು

* ಬೆಂಗಳೂರು ಮಿಲಿಟರಿ ಆಸ್ಪತ್ರೆ - ಬೆಂಗಳೂರಿನ ಮೊಟ್ಟಮೊದಲ ಆಧುನಿಕ ವೈದ್ಯ ಸೇವೆ	- ೧೮೦೮
* ಕಂಟೊನ್ಮೆಂಟ್‌ನಲ್ಲಿ ಬೌರಿಂಗ್ ಆಸ್ಪತ್ರೆ ಸ್ಥಾಪನೆ	- ೧೮೬೬
* ಸೆಂಟ್ರಲ್ ಕಾಲೇಜ್ ಸ್ಥಾಪನೆ	- ೧೮೭೦
* ಬೆಂಗಳೂರು ಅರಮನೆ	- ೧೮೮೦
* ಸಂತ ಜೋಸೆಫರ ಕಾಲೆಜ್ ಸ್ಥಾಪನೆ	- ೧೮೮೨
* ಗ್ಲಾಸ್ ಹೌಸ್ ನಿರ್ಮಾಣ	- ೧೮೮೯
* ವಿಕ್ಟೋರಿಯಾ ಆಸ್ಪತ್ರೆ ಪ್ರಾರಂಭ	- ೧೯೦೦
* ರಾಮಕೃಷ್ಣಾಶ್ರಮ ಆರಂಭ	- ೧೯೦೪
* ಗಾಯನ ಸಮಾಜ	- ೧೯೦೪
* ಮಿಥಿಕ್ ಸೊಸೈಟಿ	- ೧೯೦೯
* ಕನ್ನಡ ಸಾಹಿತ್ಯ ಪರಿಷತ್ತು	- ೧೯೧೫
* ಸೋಪ್ ಫ್ಯಾಕ್ಟರಿ	- ೧೯೧೮

೪. ಪಿನ್‌ಕೋಡ್, ಬೆಂಗಳೂರು!

ಯಲಹಂಕ ನಾಡಪ್ರಭು ಮೊದಲನೆ ಕೆಂಪೇಗೌಡ ೧೫೩೭ರಲ್ಲಿ ಬೆಂಗಳೂರು ಎನ್ನುವ ಒಂದು ಪುಟ್ಟ ಗ್ರಾಮವನ್ನು ನಿರ್ಮಿಸಿ ತನ್ನ ರಾಜಧಾನಿಯನ್ನು ಯಲಹಂಕದಿಂದ ಈ ಹೊಸ ಊರಿಗೆ ವರ್ಗಾಯಿಸಿದ. ಅವನ ಕನಸಿನ ಬೆಂಗಳೂರು ಈಗಿನ ಪೇಟೆಗಳನ್ನು ಒಳಗೊಂಡ ಒಂದು ಪುಟ್ಟ ಗ್ರಾಮವಾಗಿತ್ತು. ಒಂದು ಕಡೆ ಈಗಿನ ಮೈಸೂರು ಬ್ಯಾಂಕ್ ಸರ್ಕಲ್, ಇನ್ನೊಂದು ಕಡೆ ಈಗ ಕಾರ್ಪೊರೇಷನ್ ಎದುರಿನ ಬಾದಾಮಿ ಹೌಸ್ ಕಟ್ಟಡ, ಮತ್ತೊಂದು ಕಡೆ ಈಗಿನ ಗುಡ್‌ಷೆಡ್ ರೋಡ್, ನಾಲ್ಕನೆಯದಾಗಿ ಸಿಟಿ ಮಾರ್ಕೆಟ್‌ವರೆಗಿನ ಸೀಗೇಬೇಲಿ ಪ್ರದೇಶ.

ಬಹುಶಃ, ಕೆಂಪೇಗೌಡನ ಬೆಂಗಳೂರು ೬ ಕಿಲೋ ಮೀಟರ್ ಅಗಲ ಮತ್ತು ೫ ಕಿಲೋ ಮೀಟರ್ ಉದ್ದ ಇದ್ದಿರಬೇಕು ಅಷ್ಟೆ! ಇದರ ಸುತ್ತಲೂ ಅವನೊಂದು ದಪ್ಪ ಮಣ್ಣಿನ ಕೋಟೆ ಕಟ್ಟಿಸಿ ನಾಲ್ಕು ದಿಕ್ಕುಗಳಿಗೆ ನಾಲ್ಕು ದಿಡ್ಡಿ ಬಾಗಿಲುಗಳನ್ನು ಸ್ಥಾಪಿಸಿದ. ೧೬೯೯ರಲ್ಲಿ ಬೆಂಗಳೂರು ಚಿಕ್ಕದೇವರಾಜ ಒಡೆಯರ ಸುಪರ್ದಿಗೆ ಬಂದಾಗ ಅವರು ಈ ೧೫೦ ವರ್ಷಗಳ ಮಣ್ಣಿನ ಕೋಟೆಯ ಜೊತೆಗೆ ಇನ್ನೊಂದು ಗಟ್ಟಿಯಾದ ಮಣ್ಣಿನ ಕೋಟೆಯನ್ನು ಕಟ್ಟಿಸಿದರು. ಅನಂತರ ೧೭೬೦ರ ಅನಂತರ ಹೈದರಾಲಿ ಚಿಕ್ಕದೇವರಾಜ ಒಡೆಯರ ಮಣ್ಣಿನ ಕೋಟೆಯನ್ನು ಭದ್ರವಾದ ಕಲ್ಲಿನ ಕೋಟೆಯಾಗಿ ನಿರ್ಮಿಸಿದ. ಈಗ ವಾಣಿವಿಲಾಸ ಆಸ್ಪತ್ರೆಯ ಹತ್ತಿರ ಅಳಿದುಳಿದಿರುವ ಕೋಟೆಯ ಭಾಗ ಹೈದರಾಲಿಯ ಕಲ್ಲಿನ ಕೋಟೆಯದು.

ಮುಂದಿನ ನೂರು ವರ್ಷಗಳು ಬೆಂಗಳೂರು ಇದೇ ಸ್ಥಿತಿಯಲ್ಲಿಯೇ ಇದ್ದಿರಬೇಕು. ಇಂಗ್ಲಿಷರು ಟಿಪ್ಪುಸುಲ್ತಾನನ್ನು ಯುದ್ಧದಲ್ಲಿ ಸೋಲಿಸಿ ಸಾಯಿಸಿದಾಗ, ಬೆಂಗಳೂರು ಎಂಬ ಕೋಟೆ ಆವರಣವನ್ನು ಧ್ವಂಸ ಮಾಡಿದರು. ಕೋಟೆಗಳಿಗೆ ಫಿರಂಗಿ ಗುಂಡು ಹೊಡೆದು ಚೂರು ಚೂರು ಮಾಡಿದರು. ಮನೆಗಳನ್ನು, ಆಲಯಗಳನ್ನು, ಕೊಚ್ಚಿ ಹಾಕಿದರು. ಬ್ರಿಟಿಷ್ ಸೈನಿಕರು ಪ್ರಜೆಗಳನ್ನು ಕೊಂದರು, ಎಲ್ಲವನ್ನೂ ಲೂಟಿ ಮಾಡಿ ದೋಚಿದರು. ಬೆಂಗಳೂರು ಎನ್ನುವ ಕೆಂಪೇಗೌಡನ ಕನಸಿನ ಊರು ಸ್ಮಶಾನದಂತಾಯಿತು. ಎಲ್ಲೆಲ್ಲೂ ಹೆಣಗಳು, ಗೋರಿಗಳು, ಉರಿಯುತ್ತಿರುವ ಬೆಂಕಿ,

ಬೆಂಗಳೂರಿನಲ್ಲಿದ್ದ ಬ್ರಿಟಿಷ್ ಕಮಿಷನರ್ ಲೆವಿನ್ ಬೌರಿಂಗ್ ಹೀಗೆ ಹೇಳಿದ್ದಾನೆ (೧೮೭೨)

'ದೇಶದ ಎಲ್ಲ ಕಂಟೋನ್ಮೆಂಟ್‌ಗಳ ಹಾಗೆ ಬೆಂಗಳೂರು ಕಂಟೋನ್ಮೆಂಟ್ ಸಹ ಎಲ್ಲ ಧರ್ಮದವರ, ಎಲ್ಲ ಭಾಷಿಗರ, ಎಲ್ಲ ದೇಶದವರ ಸಂಗಮವಾಗಿದೆ. ಬಜಾರುಗಳಲ್ಲಿ-ಬೀದಿಗಳಲ್ಲಿ ಚುರುಕಾಗಿ ವ್ಯಾಪಾರ ಮಾಡುತ್ತಿರುವ ತಮಿಳು ವ್ಯಾಪಾರಿ ಉದ್ಯೋಗಿ ಅಥವಾ ಆಳು; ತೆಲುಗು ಮಾತನಾಡುವ ಬ್ರಾಹ್ಮಣರು; ಕನ್ನಡ ಕೃಷಿಕಾರರು, ಕುರಿ-ದನ, ಗಾಡಿಗಳು, ಎತ್ತಿನಗಾಡಿ ನಡೆಸುತ್ತಿರುವವರು; ಸಿಪಾಯಿಗಳು, ತೋಟದ ಕೆಲಸಗಾರರು-ಮಾಲಿಗಳು; ಹೆಮ್ಮೆಯಿಂದ ತಲೆಯೆತ್ತಿ ನಡೆಯುತ್ತಿರುವ ಮುಸಲ್ಮಾನ; ಅರಬ್, ಅಫ್ಘಾನ್, ಪಾರ್ಸಿ, ಏಷ್ಯಾದ ಇತರರು ಮತ್ತು ಬಲಶಾಲಿ-ಸುಂದರ ಇಂಗ್ಲೀಷ್‌ನವರು....

'ಕಂಟೋನ್ಮೆಂಟ್‌ನಿಂದ ಬೆಂಗಳೂರು ಪೇಟೆಗೆ ಹೋಗುವುದು ಅಷ್ಟೇನೂ ಸುಲಭವಲ್ಲ, ಇಲ್ಲಿ ಬಹುಪಾಲು ಎಲ್ಲರೂ ಮೂಲತಃ ಕನ್ನಡ ಮಾತನಾಡುವವರು....ಹಿಂದೂಜೀವನ ಇಲ್ಲಿ ಅತಿ ಸರಳವಾಗಿ ಕಾಣಿಸುತ್ತದೆ, ಭಾರತದಲ್ಲಿ ಸಾವಿರಾರು ವರ್ಷಗಳಿಂದಲೂ ಬದಲಾಯಿಸದೇ ಬಂದಿರುವ ಪ್ರಾಚೀನ ಬದುಕು-ನಡವಳಿಕೆಯ ಮಾದರಿಗಳು ಇಲ್ಲಿ ಕಾಣಿಸುತ್ತದೆ- ಸೂರ್ಯಹುಟ್ಟುತ್ತಿದ್ದಂತೆಯೆ ಗೋಪುರ ದೇವಾಲಯಗಳಿಂದ ಕೇಳಿಸುವ ಗಂಟೆ ಸದ್ದು.... ಮತ್ತೆ ಇದೇ ಸದ್ದು ಸಂಜೆಯೂ ಕೇಳಿಸುತ್ತದೆ.... ಸೂರ್ಯನ ಕಿರಣಗಳು ಮೊದಲು ಈ ಊರಿನ ಮೇಲೆ ಮೂಡಿದಾಗ, ಉನ್ನತ ಜಾತಿ ಬ್ರಾಹ್ಮಣರು ಕೆರೆಯ ಕಡೆಗೆ ಹೋಗಿ ತಲೆ-ಭುಜಗಳ ಮೇಲೆ ನೀರು ಹಾಕಿ ಸ್ನಾನ ಮಾಡಿಕೊಂಡು ಹಿಂತಿರುಗುತ್ತಾರೆ.... ದಿನ ತೆರೆದುಕೊಂಡಂತೆ ಸಣ್ಣಪುಟ್ಟ ವ್ಯಾಪಾರಿಗಳು ತಮ್ಮ ಮಾರಾಟದ ವಸ್ತುಗಳನ್ನು ಹರಡಿಕೊಳ್ಳುತ್ತಾರೆ. ಆಹಾರ ಪದಾರ್ಥಗಳೊ, ಉಡುಪುಗಳೊ ಮೊದಲಾದುವುಗಳನ್ನು ಗಮನ ಸೆಳೆಯುವಂತೆ ಮಾರುತ್ತಾರೆ. ಎದುರುಬದುರು ಕುಳಿತು ಒಂದೇ ರೀತಿ ಪದಾರ್ಥ ಮಾರುವವರು ಸ್ಪರ್ಧಾತ್ಮಕ ಮೈತ್ರಿ ಇಲ್ಲದೆ ಕೂಗುವುದು ಅಹಿತವಾಗಿಯೇ ಕಾಣಿಸುತ್ತದೆ.... ವಿವಿಧ ಕಡೆಗಳ ವಿಧ ವಿಧ ದವಸಧಾನ್ಯಗಳು ಮತ್ತು ನೂರು ಎಲೆಗಳನ್ನು ಒಟ್ಟಿಗೆ ಕಟ್ಟಿರಿಸಿದ ವಿಳ್ಳೇದೆಲೆ, ಸೊಗಸಾಗಿ ಕಟ್ಟಿರುವ ಹೂಗಳ ಬಿಳಿಹಳದಿ ಹಾರಗಳು, ನಾಲ್ಕು ಚೂರು ಮಾಡಿರುವ ಗುಂಡು ಅಡಿಕೆ, ಹತ್ತಿಯ ಮತ್ತು ರೇಷ್ಮೆಯ ಉಡುಪುಗಳ ರಾಶಿ-ಒಂದರ ಮೇಲೊಂದಿರಿಸಿ ತೋರಿಸುತ್ತಾರೆ. ತಟ್ಟೆಯ ತುಂಬ ವಿಧವಿಧ ಸಿಹಿತಿಂಡಿಗಳು ಬಿಸಿಲು ಮೇಲೆರುತ್ತಿರುವಂತೆಯೇ ನೀರಿಳಿಯ ತೊಡಗುತ್ತವೆ. ಮತ್ತು ನೊಣಗಳು ಮುತ್ತುವುದು ಎದ್ದು ಕಾಣುತ್ತದೆ. ಅಂಗಡಿಗಳಲ್ಲಿ ಎಲ್ಲವನ್ನೂ ತೆರೆದೇ ಇರಿಸುತ್ತಾರೆ.

ಅತ್ಯುತ್ತಮ ನೆಲಕಂಬಳಿಗಳು, ಕಂಬಳಿಗಳು ಮತ್ತು ಹತ್ತಿ-ರೇಷ್ಮೆಮಿಶ್ರಿತ ಉಡುಪುಗಳು ಇಲ್ಲಿ ಸೊಗಸಾಗಿದೆ. ವ್ಯಾಪಾರಿಗಳ ದುರಾಶೆ ಎಷ್ಟಿದೆಯೆಂದರೆ ಗಿರಾಕಿಗಳನ್ನು ಆಕ್ರಮಿಸಿಕೊಳ್ಳುತ್ತಾರೆ, ಹಣ ಬಿಡಲು ಒದ್ದಾಡುತ್ತಾರೆ, ಆದರೆ, ಬಡವರಿಗೆ-ಭಿಕ್ಷುಕರಿಗೆ ಅಕ್ಕಿಹಿಡಿ ದಾನಮಾಡದಿರುವುದಿಲ್ಲ. ಇದರಲ್ಲಿ ಸ್ವಲ್ಪ ಶ್ರೀಮಂತರು ಅಲ್ಲಲ್ಲಿ ಛತ್ರಗಳನ್ನು ಕಟ್ಟಿಸಿ, ಯಾತ್ರಿಗಳಿಗೆ ಉಚಿತವಾಗಿ ನೀಡುತ್ತಾರೆ, ಅಲ್ಲದೆ ಬ್ರಾಹ್ಮಣರಿಗೆ ಉಚಿತವಾಗಿ ಭೋಜನವನ್ನಿಕ್ಕುತ್ತಾರೆ.... ಸ್ಥಳೀಯ ಲೇವಾದೇವಿ ವ್ಯಕ್ತಿಗಳು ತುಂಬ ನಿಯತ್ತಿನಿಂದ ಕೆಲಸಮಾಡುತ್ತಾರೆ.... ಇಲ್ಲಿನ ಮತ್ತು ಮೈಸೂರು ರಾಜ್ಯದ ರೈತರೆಲ್ಲರಲ್ಲೂ ಒಂದು ರೀತಿಯ ದೈಹಿಕ ಶಕ್ತಿ ಕಂಡು ಬರುತ್ತದೆ. ಫಸಲು ಚೆನ್ನಾಗಿ ಆಗಿ, ಸರ್ಕಾರದ ಅಧಿಕಾರಿಗಳು ಹತ್ತಿರ ಬರದಿದ್ದರೆ, ಅವನು ತುಂಬಾ ಸಂತೋಷದಿಂದಿರುತ್ತಾನೆ!'

ಉರುಳಿಬಿದ್ದ ಮನೆಗಳು, ಗಾಡಿಗಳು-ಜಾನುವಾರುಗಳು ನಾಶ, ಪೈರು ಪಚ್ಚೆ ತೋಟಗಳ ಧ್ವಂಸ. ಅವರು ಟಿಪ್ಪೂಸುಲ್ತಾನನ ಮೇಲಿದ್ದ ಕೋಪವನ್ನೆಲ್ಲ ಅವನ ಮೆಚ್ಚಿನ ಬೆಂಗಳೂರಿನ ಮೇಲೆ ತೋರಿಸಿದರು. ಬೆಂಗಳೂರು 'ಹಾಳುಹಂಪೆ'ಯಂತಾಯಿತು.

ಕೆಂಪೇಗೌಡನಿಂದ ಮುಸ್ಲಿಮರ ಆಡಳಿತಕ್ಕೆ, ಮರಾಠಿಗರ ಆಡಳಿತಕ್ಕೆ ಬಂದ ಬೆಂಗಳೂರು ೧೬೮೯ರಲ್ಲಿ ಮೈಸೂರು ಒಡೆಯರ ಕೈಸೇರಿತು. ಮೈಸೂರಿನ ಅರಸರಾದ ಚಿಕ್ಕದೇವರಾಜ ಒಡೆಯರು, ಶ್ರೀರಂಗಪಟ್ಟಣದಲ್ಲಿ ಮೈಸೂರು ರಾಜ್ಯದ ರಾಜಧಾನಿ ಇದ್ದರೂ, ಬೆಂಗಳೂರಿನ ಮೇಲೆ ತುಂಬಾ ವಿಶ್ವಾಸ-ಪ್ರೀತಿ ತೋರಿಸಿದರು. ಮಹಾರಾಜರ ಆಳ್ವಿಕೆಯಲ್ಲಿ ಇದೊಂದು ಹೆಮ್ಮೆಯ ತಾಣ ಎನ್ನುವಂತೆ ಬೆಂಗಳೂರನ್ನು ಅಭಿವೃದ್ಧಿಗೊಳಿಸಿದರು. ಹಳೆಯ ಬೆಂಗಳೂರಿಗೆ ಅಂಟಿದಂತೆಯೇ, ಮೊಟ್ಟೆ ಆಕಾರದ ಇನ್ನೊಂದು ಮಣ್ಣಿನ ಕೋಟೆ ಕಟ್ಟಿಸಿದರು. ಇದೊಂದು ರೀತಿ ಬೆಂಗಳೂರಿನ ರಕ್ಷಣಾ ವಿಭಾಗದಂತೆ ಇತ್ತು. ಇಲ್ಲಿ ಸೈನ್ಯಕ್ಕೆ ಸಂಬಂಧಿಸಿದ್ದೆಲ್ಲವೂ ಇತ್ತು. ಬೆಂಗಳೂರು ನಾಗರಿಕ ಜೀವನವನ್ನು ಮತ್ತು ಸೈನಿಕ ಜೀವನವನ್ನು ಅವರು ಹೀಗೆ ಪ್ರತ್ಯೇಕಿಸಿದರು. ಇವರ ಕೋಟೆ ಈಗಿನ ಸಿಟಿ ಮಾರ್ಕೆಟ್‌ನಿಂದ ಹಿಡಿದು ಫೋರ್ಟ್ ಹೈಸ್ಕೂಲ್ ಕೊನೆಯವರೆಗೂ ಇದ್ದಿತು. ಇದರ ಪ್ರಾರಂಭದಲ್ಲಿ ಹಳೆಯ ಕೋಟೆ ಆಂಜನೇಯ ಸ್ವಾಮಿ ದೇವಾಲಯ ಇದ್ದಿತು (ಈಗಲೂ ಇದೆ). ಮತ್ತೆ ಈಗಿನ ಮೆಡಿಕಲ್ ಕಾಲೇಜ್ ಎದುರಿನಲ್ಲಿ ಈಗಿನ ಕೋಟೆ ವೆಂಕಟರಮಣ ಸ್ವಾಮಿ ದೇವಾಲಯವನ್ನು ಚಿಕ್ಕದೇವರಾಜ ಒಡೆಯರು ಸ್ಥಾಪಿಸಿದರು (ಇದರ ಹಿಂದೆಯೇ ಅನಂತರ ಹೈದರಾಲಿ-ಟೀಪು ಅರಮನೆ ಕಟ್ಟಿಕೊಂಡರು). ಬೆಂಗಳೂರನ್ನು ಸುಖಸೌಖ್ಯಗಳ ಊರಾಗಿ, ವ್ಯಾಪಾರ ವಹಿವಾಟುಗಳ ಜನಪ್ರಿಯ ತಾಣವಾಗಿ ಬೆಳೆಸಿದರು. ತಾವು ಕಟ್ಟಿದ ಮಣ್ಣಿನ ಕೋಟೆಯಲ್ಲಿ ಸೈನಿಕ ಪಹರೆ ರಕ್ಷಣೆ ಇರಿಸಿದರು.

ಆದರೆ, ಮುಂದೆ ಬೆಂಗಳೂರು ಮೈಸೂರು ಒಡೆಯರ ಕೈತಪ್ಪಿ ಹೈದರಾಲೀಖಾನ್ ಮತ್ತು ಅವನ ಮಗ ಟೀಪೂಸುಲ್ತಾನ್ ಕೈಗೆ ಬಂದಿತು. ೧೭೫೯ರಲ್ಲಿ ಆಗಿನ ದೊರೆ ಚಿಕ್ಕ ಕೃಷ್ಣರಾಜ ಒಡೆಯರು, ಯುದ್ಧದಲ್ಲಿ ಅಪ್ರತಿಮ ಶೌರ್ಯ ತೋರಿದ್ದಕ್ಕಾಗಿ ಬೆಂಗಳೂರನ್ನು ಹೈದರಾಲೀಖಾನ್‌ನಿಗೆ ಜಹಗಿರಿಯಾಗಿ ಕೊಟ್ಟರು. ಈ ಬಹುಮಾನವೇ ಒಡೆಯರ ಆಳ್ವಿಕೆಗೆ ಮತ್ತು ಮೈಸೂರು ರಾಜ್ಯದ ವ್ಯಕ್ತಿತ್ವಕ್ಕೆ ಬಹುದೊಡ್ಡ ತಿರುವಾಗಿ ಹೋಯಿತು. ಹೈದರಾಲಿ ಮೈಸೂರು ಪ್ರಭುಗಳಿಗೆ ನಿಯತ್ತಿನವನಾಗಿರುವವನಂತಿದ್ದರೂ, ಅವನ ಮೈ-ಮನಸ್ಸಿನ ಶಕ್ತಿ ಅವನನ್ನು ಸುಮ್ಮನಿರಗೊಡಲಿಲ್ಲ. ಸುತ್ತಮುತ್ತಲು ಪಾಳೆಗಾರರು, ಚಿಕ್ಕಪುಟ್ಟ ರಾಜರುಗಳನ್ನು ಬಲಿಹಾಕಲು ಪ್ರಾರಂಭಿಸಿ, ಅವನು ತಮಿಳುನಾಡು, ಆಂಧ್ರ, ಮರಾಠಿ ಮತ್ತು ಇಂಗ್ಲಿಷ್‌ನವರನ್ನೆ ಎದುರಿಸಿ ನಿಂತು, ಮೈಸೂರರಸರಿಗಿಂತಲೂ ಶಕ್ತಿಶಾಲಿಯಾಗಿ ಹೋದ. ಇಡೀ ಮೈಸೂರು ಸೈನ್ಯ ಇವನ

ಕಂದಾಚಾರ ಇಲಾಖೆ

ಪಾಳೆಗಾರರ ಕಾಲದಲ್ಲಿ, ದೊರೆಗಳ ಕಾಲದಲ್ಲಿ, ಮಹಾರಾಜರ ಕಾಲದಲ್ಲಿ, ಊರಿನ-ಊರು ಜನರ ರಕ್ಷಣೆಯ ಜವಾಬ್ದಾರಿಯನ್ನು ಒಂದು ಕಾವಲು ಪಡೆಗೆ ಒಪ್ಪಿಸಲಾಗಿತ್ತು. ಅದಕ್ಕೆ 'ಕಂದಾಚಾರ ಇಲಾಖೆ' ಎಂದು ಹೆಸರಿಸಿದ್ದರು.

ಕಳ್ಳರನ್ನು ಹಿಡಿದು ಶಿಕ್ಷಿಸುವುದು, ಕಳ್ಳರು ಕಾಕರ ಚಟುವಟಿಕೆಗಳನ್ನು ಗಮನಿಸಿ ಅವರನ್ನು ಹುಡುಕುವುದು, ರಾತ್ರಿ ಊರಿನಬೀದಿಗಳಲ್ಲಿ ಗಸ್ತು ತಿರುಗುವುದು, ಪ್ರಜೆಗಳಲ್ಲಿ ಪರಸ್ಪರ ಜಗಳವುಂಟಾದರೆ ನಡುವೆ ಪ್ರವೇಶಿಸಿ ಸರಿ-ತಪ್ಪು ನೋಡುವುದು (ಇವರ ಬುದ್ಧಿಶಕ್ತಿಗಳಿಗೆ ಮೀರಿದ್ದರೆ, ಕಾನೂನಿನ ಚೌಕಟ್ಟಿಗೆ ಒಳಪಟ್ಟರೆ ಊರಿನ ಅಧಿಕಾರಿ-ನ್ಯಾಯಧೀಶರ ಎದುರಿಗೆ ಕೊಂಡೊಯ್ಯುವುದು) -ಹೀಗೆಲ್ಲ ಕಂದಾಚಾರ ಇಲಾಖೆ ಕೆಲಸ ಮಾಡುತ್ತಿತ್ತು. ಇಡೀ ರಾಜ್ಯದ ಕಂದಾಚಾರ ವ್ಯವಸ್ಥೆಗೆ ಯಾರು ಬೇಕಾದರೂ ಮುಖ್ಯಸ್ಥರಾಗಬಹುದಿತ್ತು. ಕಂದಾಚಾರ ಅನುಭವದ ಅಧಿಕಾರಿಯೇ ಆಗಬೇಕಾಗಿರಲಿಲ್ಲ. ರೆವಿನ್ಯೂ ಇಲಾಖೆಯ ಅಧಿಕಾರಿ ಕಂದಾಚಾರ ಮುಖ್ಯಸ್ಥ ಆಗಬಹುದಾಗಿತ್ತು.

ಇಂಗ್ಲಿಷರು ಬೆಂಗಳೂರಿಗೆ ಆಗಮಿಸಿ ಕಂಟೋನ್ಮೆಂಟ್ ಸ್ಥಾಪನೆಯಾದ ಮೇಲೂ ಈ ಕಂದಾಚಾರದ ಇಲಾಖೆಯೇ ಕಾವಲು ಇಲಾಖೆಯಾಗಿತ್ತು. ಕಂಟೋನ್ಮೆಂಟ್‌ಗೂ ಈ ಕಂದಾಚಾರ ಇಲಾಖೆಗೂ ಯಾವ ಸಂಬಂಧವೂ ಇರಲಿಲ್ಲ. ಅವರದೇ ಸೈನಿಕ ಕಾವಲು ಇತ್ತು.

ಲೆವಿನ್ ಬೌರಿಂಗ್ ಕಮಿಷನರ್ ಆದಾಗ ಬೆಂಗಳೂರಿನ ಕಾವಲು ಪಡೆಯನ್ನು ವ್ಯವಸ್ಥೆಗೊಳಿಸಿ ಅದಕ್ಕೆ 'ಪೋಲಿಸ್ ಇಲಾಖೆ' ಎಂದು ೧೮೬೬ರಲ್ಲಿ ಹೊಸ ನಾಮಕರಣ ಮಾಡಿದ.

ಅಂದಿನಿಂದ ಇಡೀ ರಾಜ್ಯದಲ್ಲಿ ಕಂದಾಚಾರ ಹೆಸರು ಹೋಗಿ ಪೋಲಿಸ್ ಹೆಸರು ಬಂದಿತು.

ಬೆಂಗಳೂರಿನಲ್ಲೂ ಪೋಲಿಸ್ ಅಧಿಕಾರ ಪ್ರಾರಂಭವಾಯಿತು.

ಅಧೀನದಲ್ಲಿತ್ತು. ಮೈಸೂರು ಅರಸರಿಗೆ ಇವನನ್ನು ಬಿಡುವ ಹಾಗೂ ಇಲ್ಲ, ಎದುರಿಸುವಂತೆಯೂ ಇಲ್ಲ ಎಂಬಂತೆ ಆಗಿಹೋಯಿತು. ಹೈದರಾಲಿ ಇಡೀ ದಕ್ಷಿಣ ಭಾರತವನ್ನು (ಮದ್ರಾಸ್ ಪ್ರಾಂತ್ಯ, ತಿರುವಾಂಕೂರು ಪ್ರಾಂತ್ಯ, ಹೈದರಾಬಾದ್ ನಿಜಾಮನ ಪ್ರಾಂತ್ಯ ಬಿಟ್ಟು), ಕಾವೇರಿಯಿಂದ ಕೃಷ್ಣಾನದಿಯವರೆಗೂ ಗೆದ್ದುಬಿಟ್ಟ.

ಬೆಂಗಳೂರು ಹೈದರಾಲಿ ಮತ್ತು ಟೀಪೂವಿನ ಮೆಚ್ಚಿನ ಊರಾಗಿತ್ತು. ಶ್ರೀರಂಗಪಟ್ಟಣ ಮೈಸೂರು ರಾಜಧಾನಿಯಾಗಿದ್ದರೂ, ಬೆಂಗಳೂರು ಅವರ ವಾಸದ ಪಟ್ಟಣವಾಗಿತ್ತು. ಬೆಂಗಳೂರು ಈ ತಂದೆ-ಮಗನ ಆಡಳಿತದಲ್ಲಿ ಬೆಳೆಯಿತು. ೧೭೯೯ರಲ್ಲಿ ಇಂಗ್ಲಿಷರೊಂದಿಗೆ ಯುದ್ಧ ಮಾಡಿ ಟೀಪೂ ಸತ್ತ ಮೇಲೆ, ಬೆಂಗಳೂರು ಮೈಸೂರು ರಾಜ್ಯಕ್ಕೆ ಸೇರಿದರೂ ಇಂಗ್ಲಿಷರು ತಮ್ಮ ಹಿಡಿತವನ್ನು ಉಳಿಸಿಕೊಂಡೇ ಇದ್ದರು. ಬೆಂಗಳೂರಿನ ಆಡಳಿತವೆಲ್ಲ ಇಂಗ್ಲಿಷ್ ಅಧಿಕಾರಿಗಳ ಕೈಯಲ್ಲೇ ಇತ್ತು. ಇವರನ್ನು ಆಗ ಕಮಿಷನರ್ ಎಂದು ನಾಮಕರಣ ಮಾಡಿದ್ದರು.

ಮೈಸೂರು ಅರಸರ ಮತ್ತು ಇಂಗ್ಲಿಷರ ಆಡಳಿತದಲ್ಲಿ ಬೆಂಗಳೂರು ಯುದ್ಧ ನಾಶದ ಧೂಳನ್ನೆಲ್ಲ ಕೆಡವಿಕೊಂಡು ಮತ್ತೆ ಮೇಲೆದ್ದಿತು. ಬೆಂಗಳೂರಿನ ವ್ಯಾಪಾರ ಮತ್ತೆ ಚಿಗುರಿಕೊಂಡಿತು. ಹೊಸ ಹೊಸ ಜನ ದೂರದ ಗ್ರಾಮಗಳಿಂದ, ಊರುಗಳಿಂದ ಬೆಂಗಳೂರಿಗೆ ಬಂದರು. ಬೆಂಗಳೂರಿನಲ್ಲಿ ಜನಸಂಖ್ಯೆ ಹೆಚ್ಚುತ್ತ, ಹಳೆ ಊರಿನ ಮೇಲೆ ಒತ್ತಡ ಹೆಚ್ಚಾದಾಗ ಬೆಂಗಳೂರಿನ ಸುತ್ತಲೂ ಕೆಲವು ವಿಸ್ತೀರ್ಣಗಳನ್ನು ನಿರ್ಮಿಸಿ ಬೆಂಗಳೂರು ಪೇಟೆಯಿಂದ ಕೆಲ ಸಾವಿರ ಪ್ರಜೆಗಳನ್ನು ವರ್ಗಾಯಿಸಬಹುದು ಎಂದು ಯೋಚಿಸಲಾಯಿತು.

ಹೀಗಾಗಿ, ಕೆಂಪೇಗೌಡ ಬೆಂಗಳೂರು ಸ್ಥಾಪಿಸಿ ೩೫೫ ವರ್ಷಗಳ ಅನಂತರ ಮೊಟ್ಟಮೊದಲ ಬಾರಿಗೆ ಊರು ವಿಸ್ತರಣೆಗೊಳ್ಳಲು ಪ್ರಾರಂಭವಾಯಿತು. ಈ ಪ್ರಕ್ರಿಯೆ ಅಂದಿನ ನೂರು ವರ್ಷಗಳ ಅನಂತರವೂ ಮುಂದುವರಿದಿದೆ. ಅತ್ಯಾಧುನಿಕ-ಅಂತಾರಾಷ್ಟ್ರೀಯ ನಗರವಾಗಿ ಅಭಿವೃದ್ಧಿಗೊಳ್ಳುತ್ತಿರುವ ಈಗಿನ ಬೆಂಗಳೂರು ಇನ್ನೂ ಉದ್ದಗಲವಾಗಿ ಬೆಳೆಯುತ್ತಿದೆ.

ಬೆಂಗಳೂರಿನ ಮೊಟ್ಟಮೊದಲ ವಿಸ್ತೀರ್ಣಗಳಾಗಿ ಮಲ್ಲೇಶ್ವರ ಮತ್ತು ಬಸವನಗುಡಿ ಯೋಜನೆಗಳಿಗೆ ೧೮೯೨ರಲ್ಲಿ ಮಂಜೂರಾತಿ ದೊರಕಿತು. ೧೮೯೯-೧೯೦೦ರಲ್ಲಿ ಮನೆಗಳ ನಿರ್ಮಾಣ, ಜನವಾಸ ಪ್ರಾರಂಭವಾಯಿತು. ಬಸವನಗುಡಿಯಲ್ಲಿ ೨೦೦೦ ಸೈಟ್‌ಗಳು, ಮಲ್ಲೇಶ್ವರದಲ್ಲಿ ೧೧೫೦ ಸೈಟ್‌ಗಳು ಶುರುಮಾಡಲ್ಪಟ್ಟವು. ಕೆಂಪೇಗೌಡನ ಕಾಲದಿಂದಲೂ ಅಭ್ಯಾಸದಲ್ಲಿದ್ದ ರೀತಿಯಲ್ಲಿಯೇ ಸೈಟುಗಳ ವಿಂಗಡಣೆಯೂ ಆದವು. ಒಂದೊಂದು ವೃತ್ತಿಯವರಿಗೆ, ಜಾತಿಯವರಿಗೆ, ಬ್ರಾಹ್ಮಣರಿಗೆ ಎಂದು ಜಾಗಗಳನ್ನು

ಮೀಸಲಾಗಿರಿಸಿದರು. ಬೆಂಗಳೂರು ಕೋಟೆ ಪ್ರದೇಶದಲ್ಲಿದ್ದ ಮಾರುಕಟ್ಟೆ, ತರಗುಪೇಟೆ ವ್ಯಾಪಾರಿಗಳ ವ್ಯವಹಾರ ಹೆಚ್ಚುತ್ತಿದ್ದಂತೆಯೇ ಹೊಸ ತರಗುಪೇಟೆ (ಈಗಿನ ಮಂಡೀಪೇಟೆ ಮತ್ತು ಕಣ್ಣಾಸ್ಪತ್ರೆ ಸುತ್ತಲಿನ ಬೀದಿಗಳು) ಅಸ್ತಿತ್ವಕ್ಕೆ ಬಂದಿತು. ಈ ವ್ಯಾಪಾರಿಗಳಿಗೆ ವಾಸದ ಸ್ಥಳಗಳು ಅವರವರ ಮಂಡಿಗಳ ಹತ್ತಿರವೇ ಇರಬೇಕು ಎನ್ನುವುದಕ್ಕಾಗಿ ಚಾಮರಾಜಪೇಟೆ (ಆಗಿನ ದೊರೆ ಚಾಮರಾಜ ಒಡೆಯರ್ ಗೌರವಾರ್ಥ) ವಿಸ್ತೀರ್ಣ ಮೊದಲಾಯಿತು. ಇಲ್ಲಿ ಮನೆಗಳು ಬೇಗ ಬೇಗ ಬಂದವು. ಶಂಕರಮಠ ಸ್ಥಾಪನೆಯಾಗಿ ಶಂಕರಪುರ ಬಂದಿತು. ಆ ಸಮಯದಲ್ಲೆ ಬೆಂಗಳೂರಿನಲ್ಲಿ ಟಾಟಾ ಕುಟುಂಬದವರು ಟಾಟಾ ಇನ್ಸ್‌ಸ್ಟಿಟ್ಯೂಟ್ (ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಸೈನ್ಸ್) ಸ್ಥಾಪಿಸಿದರು. ಮತ್ತೆ 'ಟಾಟಾ ಸಿಲ್ಕ್' ಪ್ರಾರಂಭಿಸಲು ಬಸವನಗುಡಿಯ ಕೊನೆಯಲ್ಲಿ, ಯಡಿಯೂರು ಕೆರೆ ತಪ್ಪಲಿನಲ್ಲಿ, ಟಾಟಾ ಸಿಲ್ಕ್ ಫಾರಂ ನಿರ್ಮಿಸಿದರು. ಈ ವ್ಯಾಪಾರ ಸರಿಯಾಗಿ ಮೇಲೇಳದೆ ಈ ಕಟ್ಟಡಗಳು ಜನ ವಾಸದ ತಾಣಗಳಾಗಿ 'ಟಾಟಾ ಸಿಲ್ಕ್ ಫಾರಂ' ಎಂದಾಯಿತು.

ಅದೇ ಸಮಯದಲ್ಲೆ ಬೆಂಗಳೂರು ಕಂಟೋನ್ಮೆಂಟ್ ಪ್ರದೇಶವೂ ಹೊಸ ಹೊಸ ವಿಸ್ತೀರ್ಣಗಳನ್ನು ಕಂಡಿತು: ರಿಚ್‌ಮಂಡ್ ಟೌನ್, ಲ್ಯಾಂಗ್ ಫೋರ್ಡ್ ಟೌನ್, ಮಾಕ್ಲಿವರ್ ಟೌನ್, ಕಾಕ್ಸ್ ಟೌನ್, ಆಸ್ಟಿನ್ ಟೌನ್ ಜನವಾಸ ತಾಣಗಳಾದವು. -ಇವೆಲ್ಲ ಬಹುಪಾಲು ಮೂಲ ಇಂಗ್ಲಿಷ್ ಸೈನಿಕರು- ಅಧಿಕಾರಿಗಳು ಇವರಿಗಾಗಿ ಮತ್ತು ಇವರ ಸಿಬ್ಬಂದಿ, ಕೆಲಸಗಾರರು, ಆಳುಕಾಳು, ಅಡುಗೆಯವರು, ನಾಪಿತರು, ವೈದ್ಯರು, ವೈದ್ಯ ಸಿಬ್ಬಂದಿ -ಹೀಗೆ ಇವರೆಲ್ಲರೂ ವಾಸಿಸಲು ಮನೆಗಳಾದವು. ಬೆಂಗಳೂರು ದಂಡು ಒಂದು ಕಡೆ ಬೆಳೆಯಿತು.

ಅಷ್ಟೇ! ಬೆಂಗಳೂರು ಬೆಳೆಯಲು ಯಾವ ಕಾರಣಗಳೂ ಬೇಕಾಗಲಿಲ್ಲ!

ದಢದಢನೆ ಅಷ್ಟದಿಕ್ಕುಗಳಲ್ಲೂ ಬೆಳೆಯುತ್ತ ಹೋಯಿತು. ಕೆಂಪೇಗೌಡ ಬೆಂಗಳೂರಿನ ಎಲ್ಲೆ ಎಂದು ನಿರ್ಮಿಸಿದ್ದ ನಾಲ್ಕು ಕಾವಲು ಮಂಟಪಗಳು ಈ ನಗರ ಬೆಳೆಯುವ ವೇಗದಲ್ಲಿ ಅಲ್ಲಲ್ಲೆ ಮರೆಯಾಗಿ ಹೋದವು. ತಮ್ಮ ಮುಖ್ಯತ್ವವನ್ನು ಕಳೆದುಕೊಂಡು ಬಿಟ್ಟವು. ಆದರೆ, ಕೆಲ ಇತಿಹಾಸ ಪ್ರಿಯರ ಪ್ರಯತ್ನದಿಂದಾಗಿ ಅಳಿದುಳಿದ ಈ ನಾಲ್ಕು ಎಲ್ಲೆ ಮಂಟಪಗಳು ನಾಶವಾಗದೆ ಉಳಿದುಕೊಂಡು, ಇಂದಿನವರ ಗಮನಕ್ಕೂ ಬರುವಂತಾಯಿತು.

೧೫೩೭ರಲ್ಲಿ ಮೊದಲ ಕೆಂಪೇಗೌಡ ಬೆಂಗಳೂರು ನಿರ್ಮಿಸಿದಾಗ ಇದ್ದದ್ದೆಲ್ಲ ವ್ಯಾಪಾರದ ಚಟುವಟಿಕೆಗಳು, ಇದಕ್ಕೆ ಸಂಬಂಧಿಸಿದ ವೃತ್ತಿ ಜನರು ಮತ್ತು ಇವರಿಗಾಗಿ ಅಂಗಡಿಗಳು ಮತ್ತು ಮನೆಗಳು.

ಅಯ್ಯೋ, ಹೀಗೂ ಇತ್ತೇ?

ಬರೀ ೧೭೦ ವರ್ಷಗಳಿಗೆ ಹಿಂದೆ ಬೆಂಗಳೂರಿನಲ್ಲಿ 'ಹೆಣ್ ಹರಾಜ್' ನಡೆಯುತ್ತಿತ್ತು ಎಂದರೆ ನಂಬಲು ಸಾಧ್ಯವಾಗುತ್ತದೆಯೇ? ಬೆಂಗಳೂರಿನಲ್ಲಿ ಹೀಗೊಂದು ಕ್ರೂರ ಸಂಸ್ಕೃತಿ ಇತ್ತೇ?

ಇತ್ತು ಎನ್ನುತ್ತದೆ ಇತಿಹಾಸ!

'ಸಮಯಾಚಾರ' ಎನ್ನುವುದೊಂದು ಸರ್ಕಾರದ ನಿಯಮವಿತ್ತು. ಇದು ಬಹುಕಾಲದಿಂದಲೂ ಇದ್ದಿರಬೇಕು. ವ್ಯಭಿಚಾರದಲ್ಲಿ ಯಾರಾದರೂ ಮಹಿಳೆ ತೊಡಗಿದ್ದರೆ ತೊಡಗಿರುವುದು ಸಾಬೀತಾದರೆ ಅವಳನ್ನು ಸಮಾಜ ಬಹಿಷ್ಕರಿಸಿಬಿಡುತ್ತಿತ್ತು. ಹೀಗೆ ಬಹಿಷ್ಕಾರವಾದ ಮಹಿಳೆಯನ್ನು ಸಾರ್ವಜನಿಕ ಸ್ಥಳದಲ್ಲಿ ನಿಲ್ಲಿಸಿ 'ಎಲ್ಲರೂ ನೋಡಿ, ಈದುಷ್ಟ ಮಹಿಳೆ, ಯಾವ ಸಂಕೋಚ ನಾಚಿಕೆಗಳೂ ಇಲ್ಲದೆ ವ್ಯಭಿಚಾರ ಮಾಡಿದ್ದಾಳೆ. ಗಂಡನಿಗೆ ಅತ್ತೆಮಾವಂದಿರಿಗೆ, ತಂದೆ ತಾಯಿಗಳಿಗೆ ದ್ರೋಹವೆಸಗಿದ್ದಾಳೆ. ಇವಳನ್ನು ಈಗ ಯಾರು ಬೇಕಾದರೂ ಕೊಳ್ಳಬಹುದು, ಕೊಂಡು ನಿಮಗಿಷ್ಟದಂತೆ ಉಪಯೋಗಿಸಿಕೊಳ್ಳಬಹುದು. ಯಾರಿಗೆ ಬೇಕು ಈ ಹಾಳು ಹೆಣ್ಣು, ಪ್ರಾರಂಭದ ಬೆಲೆ....!' ಎಂದು ಕೂಗುತ್ತಿದ್ದರು.

ದುಷ್ಟರೂ ಕೊಳ್ಳುತ್ತಿದ್ದುದುಂಟು, ಶಿಷ್ಟರೂ ಕರುಣೆಯಿಂದ ಕೊಳ್ಳುತ್ತಿದ್ದುದುಂಟು! ವೇಶ್ಯೆಯರು ಸಮಾಜದ ಒಂದು ಭಾಗವೇ ಆಗಿದ್ದ ಕಾಲದಲ್ಲಿ ಹೀಗೂ ನಡೆಯುತ್ತಿದ್ದದ್ದು ಅಚ್ಚರಿಯ ವಿಷಯ ಅಲ್ಲವೇ?

ಇತಿಹಾಸ ಸಂಶೋಧಕರು 'ಸಮಯಾಚಾರ' ಎಂದಿದ್ದ ಈ ಕ್ರೂರ ಶಿಕ್ಷೆಯ ಬಗ್ಗೆ ಇನ್ನಿಷ್ಟು ಅಧ್ಯಯನ ಮಾಡಿ ಹೊಸ ಬೆಳಕು ಚೆಲ್ಲಬಹುದೇನೋ!

ವೇಶ್ಯೆಯನ್ನು ಒಪ್ಪಿಕೊಂಡ ಪುರುಷ ಸಮಾಜ ಆಕಸ್ಮಿಕ ಕಾಲು ಜಾರಿದ ಮನೆ ಹೆಂಗಸರನ್ನೇಕೆ ಇಂಥ ನಿಷ್ಕರುಣೆಯ ಕೂಪಕ್ಕೆ ದೂಡುತ್ತಿದ್ದರು?

ಬೆಂಗಳೂರಿನ ಕಮಿಷನರ್ ಆಗಿದ್ದ ಮಾರ್ಕ್ ಕಬ್ಬನ್ ೧೮೩೪ರಲ್ಲಿ ಈ ಕ್ರೂರ ಪದ್ಧತಿಯನ್ನು ಬಹಿಷ್ಕರಿಸಿದ.

ಅರಳಿಪೇಟೆ, ಸುಣಕಲ್ಲು ಪೇಟೆ, ಕುಂಬಾರ ಪೇಟೆ, ದೊಡ್ಡಪೇಟೆ, ಚಿಕ್ಕಪೇಟೆ, ಬಳೇಪೇಟೆ, ಕುರುಬರ ಪೇಟೆ, ಉಪ್ಪಾರ ಪೇಟೆ, ತಿಗಳರ ಪೇಟೆ, ಗಾಣಿಗರ ಪೇಟೆ, ಬ್ರಾಹ್ಮಣರ ಅಗ್ರಹಾರವಾಗಿ ಸೀಗೇಬೇಲಿ ಎಂದು ನಿರ್ಮಾಣವಾದ ಬೆಂಗಳೂರು ಪೇಟೆ ಗ್ರಾಮ, ಮುಂದಿನ ೪೬೩ ವರ್ಷಗಳಲ್ಲಿ (೨೦೦೪ರಲ್ಲಿ), ಮೊದಲ ಕೆಂಪೇಗೌಡ ಕನಸು ಮನಸುಗಳಲ್ಲೂ ನೆನೆಯದಿದ್ದ ರೀತಿಯಲ್ಲಿ, ಮಹಾನಗರವಾಗಿ ಬೆಳೆದುಬಿಟ್ಟಿದೆ. ೧೦೦ ವರ್ಷಗಳ ಹಿಂದೆ ಬಸವನಗುಡಿ-ಮಲ್ಲೇಶ್ವರಗಳಿಂದ ಪ್ರಾರಂಭವಾದ ವಿಸ್ತರಣೆ ಮುಂದೆ, ಚಾಮರಾಜಪೇಟೆ, ಶಂಕರಪುರ, ಗವಿಪುರ, ಶ್ರೀರಾಮಪುರ, ಶೇಷಾದ್ರಿಪುರ, ವಿಶ್ವೇಶ್ವರಪುರ, ಗಾಂಧಿನಗರ, ಕುಮಾರ ಪಾರ್ಕ್, ಜಯನಗರ, ಇಂದಿರಾನಗರ ಎಂದು ೧೯೬೦ರವರೆಗೆ ಬೆಳೆಯಿತು. ಬೆಳವಣಿಗೆ ಅಷ್ಟಕ್ಕೆ ನಿಲ್ಲಲಿಲ್ಲ; ರಾಜಾಜಿನಗರ, ವಿಜಯನಗರ, ಬಸವೇಶ್ವರನಗರ, ಜಯಪ್ರಕಾಶನಗರ, ಪದ್ಮನಾಭ ನಗರ, ಕುಮಾರಸ್ವಾಮಿ ನಗರ; ಬನಶಂಕರಿ ಮತ್ತು ಅದರ ಹಂತಗಳು, ಜಯನಗರ ಮುಂದುವರಿದ ಹಂತಗಳು, ವೈಯಾಲಿಕಾವಲ್, ಹನುಮಂತನಗರ, ಶ್ರೀನಗರ, ಕೆಂಪೇಗೌಡ ನಗರ, ಕೋರಮಂಗಲ, ಸಂಜಯನಗರ, ಬಿಟಿಎಂ ಬಡಾವಣೆ, ಆರ್‌ಟಿ ನಗರ, ಮೈಕೊ ಬಡಾವಣೆ, ಮತ್ತೀಕೆರೆ, ಎಂಎಸ್‌ಆರ್ ನಗರ, ಜಯಚಾಮರಾಜೇಂದ್ರ ನಗರ, ಚಂದ್ರಲೇಔಟ್, ಜೀವನ ಬಿಮಾನಗರ, ಮಹಾಲಕ್ಷ್ಮೀ ಬಡಾವಣೆ, ಶಿವಾಜಿನಗರ, ದೊಮ್ಮಲೂರು, ವೈಟ್‌ಫೀಲ್ಡ್, ನರಸಿಂಹರಾಜಾ ಕಾಲನಿ, ಸುಲ್ತಾನ್ ಪಾಳ್ಯ, ನಂದಿನಿ ಬಡಾವಣೆ, ಕಮಲಾನಗರ, ಗಂಗಾನಗರ, ಜಗಜೀವನರಾಮ ನಗರ, ಬ್ಯಾಟರಾಯನಪುರ, ರಾಘವೇಂದ್ರ ಕಾಲನಿ, ಧೂಪನಹಳ್ಳಿ, ಭೀಮಜ್ಯೋತಿ ನಗರ, ಆನಂದನಗರ, ಸರಸ್ವತೀನಗರ, ಮೂಡಲಪಾಳ್ಯ, ಜಿಕೆಡಬ್ಲ್ಯು ಬಡಾವಣೆ, ಕೆಎಚ್‌ಬಿ ಕಾಲನಿ, ಕಾಮಾಕ್ಷಿಪಾಳ್ಯ, ಪಾಪರೆಡ್ಡಿ ಪಾಳ್ಯ, ನಾಗರಭಾವಿ, ಆರ್‌ಪಿಸಿ ಲೇಔಟ್, ವಿಲ್ಸನ್ ಗಾರ್ಡನ್, ವಿದ್ಯಾರಣ್ಯಪುರ, ನೀಲಸಂದ್ರ, ಸದಾಶಿವನಗರ, ಪ್ಯಾಲೆಸ್ ಗುಟ್ಟಹಳ್ಳಿ, ಗವೀಪುರಂ ಗುಟ್ಟಹಳ್ಳಿ, ವಿವೇಕನಗರ, ಜಯಮಹಲ್, ಮಠದಹಳ್ಳಿ, ಕಾವಲ್ ಭೈರಸಂದ್ರ, ಉತ್ತರಹಳ್ಳಿ, ವಿವೇಕಾನಂದ ನಗರ -ಈ ಪಟ್ಟಿಗೆ ಕೊನೆಯಿಲ್ಲ. ಅನೇಕ ವಿಸ್ತೀರ್ಣಗಳನ್ನು ಇಲ್ಲಿ ಸೇರಿಸಿಲ್ಲ.

ಯಲಹಂಕ ನಾಡಪ್ರಭು ಕೆಂಪೇಗೌಡ ಆಸೆಯಿಂದ ೪೬೭ ವರ್ಷಗಳಿಗೆ ಹಿಂದೆ ಬೆಂಗಳೂರು ಎಂದೊಂದು ಗ್ರಾಮ ನಿರ್ಮಿಸಿದಾಗ, ಜನಸಂಖ್ಯೆ ಬಹುಶಃ, ಎರಡು-ಮೂರು ಸಾವಿರ ಇದ್ದಿರಬಹುದು. ೪೬೭ ವರ್ಷಗಳ ಅನಂತರ ಈಗ ಅದು ೬೦ ಲಕ್ಷ ಜನಸಂಖ್ಯೆಯನ್ನು ದಾಟಿದೆ. ಕೆಂಪೇಗೌಡ ಈ ಪುಟ್ಟ ಊರು ಸ್ಥಾಪಿಸಿದಾಗ, ಇದರ ಸುತ್ತಲೂ ಅನೇಕಾನೇಕ ಗ್ರಾಮಗಳಿದ್ದವು. ಪಾಳೇಗಾರರು ಆಳುತ್ತಿದ್ದ, ಗಂಗರು, ಚೋಳರು ಅವರಂಥ ರಾಜಮಹಾರಾಜರು ಆಳಿದ ಐತಿಹಾಸಿಕ ಪ್ರಸಿದ್ಧ ಗ್ರಾಮಗಳು ಇವೆಲ್ಲ. ಬೆಂಗಳೂರಿಗಿಂತಲೂ ಚೆನ್ನಾಗಿ ಬೆಳೆದ ಗ್ರಾಮಗಳೂ ಇದ್ದವು. ಯಲಹಂಕ, ಕೆಂಗೇರಿ, ನೆಲಮಂಗಲ, ಅನೇಕಲ್ಲು, ವರ್ತೂರು ಮೊದಲಾದವು ವಿಜಯನಗರದ

ಅರಸರವರೆಗೂ ತಲುಪಿದ್ದ ಹಳೆ ಗ್ರಾಮಗಳು. ಆದರೆ, ಬೆಂಗಳೂರು ಎನ್ನುವುದೊಂದು ಕೂಸು ಎಲ್ಲರಿಗಿಂತಲೂ ಕೊನೆಯಲ್ಲಿ ಹುಟ್ಟಿ, ವಾಮನನಾಗಿ ಬೆಳೆದು, ಕೊನೆಗೆ ತ್ರಿವಿಕ್ರಮನಾಗಿ, ತನ್ನ ಸುತ್ತಮುತ್ತಲ ಎಲ್ಲ ಗ್ರಾಮಗಳನ್ನೂ ತನ್ನೊಳಗೆ ಸೆಳೆದುಕೊಂಡುಬಿಟ್ಟಿತು. ಅವೆಲ್ಲಕ್ಕೂ ಪ್ರಧಾನವಾಗಿ ನಿಂತು, ಅವೆಲ್ಲವನ್ನೂ ತನ್ನ ಅಧೀನವಾಗಿಸಿಕೊಂಡಿತು.

ಬರೀ ಕೆಂಪೇಗೌಡನೊ, ಅವನ ವಂಶಸ್ಥರೋ ಈವರೆವಿಗೆ ಬೆಂಗಳೂರನ್ನು ಆಳಿದ್ದರೆ, ಅದು ಇನ್ನಾವುದೊ ಊರಿಗೆ ಸಾಮಂತ ಗ್ರಾಮವಾಗಿ ಹೋಗಿರುತ್ತಿತ್ತು.

ಆದರೆ, ಬೆಂಗಳೂರಿನ ಅದೃಷ್ಟ ಯಾರೂ ಎದುರು ನೋಡದಂಥದ್ದಾಗಿತ್ತು. ಬರೀ ದುರಂತಗಳ ಸರಮಾಲೆಯಲ್ಲಿಯೆ ನಡೆದುಬಂದ ಈ ಊರು, ಅನೇಕ ಯುದ್ಧಗಳನ್ನು ಕಂಡು ಹಾಳು ಹಂಪೆಯ ಹಾಗೆಯೇ ನಾಶವಾಗಿದ್ದರೂ, ಮತ್ತೆ ಮತ್ತೆ ಎದ್ದು ನಿಂತಿತು. ಶಕ್ತಿಯುತವಾಗಿ ಉಳಿಯಿತು, ಬೆಳೆಯಿತು.

ಬಹುಶಃ, ಬಿಜಾಪುರದಂಥ ದೊಡ್ಡ ರಾಜ್ಯದ ಆಳ್ವಿಕೆಗೆ, ಅತಿ ಮಹತ್ವಾಕಾಂಕ್ಷಿ ವ್ಯಕ್ತಿಯಾದ ಮರಾಠಾ ಸರದಾರ ಷಹಜಿಯ ಅಂಕೆಗೆ, ಅನಂತರ ದೆಹಲಿಯ ಮೊಗಲ ನವಾಬರ ಕೈಗೆ, ಮತ್ತೆ ಮೈಸೂರು ಒಡೆಯರ ಸುಪರ್ದಿಗೆ, ಇಂಗ್ಲಿಷ್ ಶಿಸ್ತಿನ ಆಡಳಿತ ಚೌಕಟ್ಟಿಗೆ ಒಳಪಟ್ಟಿದ್ದರಿಂದ ಬೆಂಗಳೂರು ಯಾವಾಗಲೂ ಒಂದು ಸಾಮಾನ್ಯ ಊರಾಗಿ ಉಳಿಯಲಿಲ್ಲ. ವಿಚಿತ್ರವೆಂದರೆ ಈ ಊರನ್ನು ಕೆಂಪೇಗೌಡ ಪ್ರೀತಿಸಿದ ಹಾಗೆಯೆ, ಮುಸ್ಲಿಮರು, ಮರಾಠಿಗರು, ಒಡೆಯರು, ಇಂಗ್ಲಿಷ್‌ನವರು ಪ್ರೀತಿಸಿದರು. ಬೆಂಗಳೂರನ್ನು ತಮ್ಮದು ಎನ್ನಿಸಿಕೊಳ್ಳುವುದು ಒಂದು ಹೆಮ್ಮೆಯ ವಿಷಯವೆಂಬಂತಾಯಿತು. ಬೆಂಗಳೂರು ನಿರ್ನಾಮವಾಗಲಿಲ್ಲ, ನಾಮಾವಶೇಷ ವಾಗಲಿಲ್ಲ, ಭಗ್ನನಗರವಾಗಲಿಲ್ಲ -ಬದಲಾಗಿ ಮಹತ್ವದ ನಗರವಾಗಿ ಬೆಳೆಯಿತು. ಮೈಸೂರು ಒಡೆಯರು, ಇಂಗ್ಲಿಷ್ ಆಡಳಿತಗಾರರು ಮತ್ತು ರಂಗಾಚಾರ್ಲು, ಶೇಷಾದ್ರಿ ಐಯ್ಯರ್, ಸರ್ ಎಂ. ವಿಶ್ವೇಶ್ವರಯ್ಯ, ಮಿರ್ಜಾ ಇಸ್ಮಾಯಿಲ್ ಅಂಥ ದೂರದರ್ಶಿ ದಿವಾನರ ಆಡಳಿತದಲ್ಲಿ ಭಾರತದ 'ಮಾದರಿ ನಗರ'ವೆನಿಸಿಕೊಂಡಿತು. ದೇಶದ ಮೊಟ್ಟಮೊದಲ ವಿದ್ಯುತ್ ಸರಬರಾಜು ಯೋಜನೆ-ವಿದ್ಯುತ್ ಕಂಡ ಮೊಟ್ಟಮೊದಲ ನಗರ, ವಿಮಾನ-ದೂರವಾಣಿ-ಎಲೆಕ್ಟ್ರಾನಿಕ್ಸ್-ಯಂತ್ರ ತಯಾರಿಕೆ- ಕೈಗಡಿಯಾರ ತಯಾರಿಕೆ ಮೊದಲಾದ ಬೃಹತ್ ಕಾರ್ಖಾನೆಗಳು ಸ್ಥಾಪನೆಗೊಂಡ ನಗರ. ಅಷ್ಟೇ ಏಕೆ, ಭಾರತವನ್ನು ಇಡೀ ಪ್ರಪಂಚದ ಎಲ್ಲೆಲ್ಲೂ ಪ್ರಸಿದ್ಧಿಗೊಳಿಸಿದ ಕಂಪ್ಯೂಟರ್ ಲೋಕದ ಸ್ಥಾಪನೆಯಾಗಿದ್ದು ಬೆಂಗಳೂರಿನಲ್ಲಿ.

ಬೆಂಗಳೂರು ಬೆಳೆದಿದೆ, ಬೆಳೆಯುತ್ತಿದೆ... ಬೆಳೆಯುತ್ತಲೇ ಇದೆ!

■■

ಕಬ್ಬನ್ ಪಾರ್ಕ್-ಬ್ಯಾಂಡ್ ಸ್ಟಾಂಡ್

ಲಾಲ್‌ಬಾಗ್-ಸುಂದರ ತಿರುವುಗಳ ನಡುವೆ ಓಡಾಟ

ಆಧುನಿಕ ಬೆಂಗಳೂರು ನೋಟ

ಬೆಂಗಳೂರು ನಗರ ಕೆಂಪೇಗೌಡ ಬಸ್‌ಸ್ಟಾಂಡ್-ಮೆಜೆಸ್ಟಿಕ್

೫. ಹಸಿರು, ಬೆಂಗಳೂರು!

ಹೂತೋಟಗಳ ಪರಿಣತಿ. ಮನೆ ಕಾಂಪೌಂಡ್‌ಗಳಲ್ಲಿ ಸುಂದರ ಹೂತೋಟಗಳು. ರಸ್ತೆಯ ಎರಡೂ ಬದಿ ನೆರಳು ಕೊಡುವ ವೃಕ್ಷಗಳು, ಅಲ್ಲಲ್ಲಿ ಕಾರಂಜಿಗಳು. ದೊಡ್ಡ ಸುತ್ತಳತೆಯ ವೃತ್ತಗಳು -ಅದರ ತುಂಬಾ ಹೂತೋಟ.

ಬೆಂಗಳೂರಿಗೆ ಬಂದಿಳಿಯುತ್ತಿದ್ದಂತೆಯೇ ತಂಪಾಗಿ ಹವೆ ಬೀಸಿ ಮೈಮನಸ್ಸಿಗೆ ಹಾಯೆನಿಸುತ್ತದೆ. ಬಿಸಿಲಿನಲ್ಲಿ ಓಡಾಡಿ ಸುಸ್ತಾದರೂ, ಮನೆಯೊಳಗೆ ಬಂದು ಕುಳಿತರೆ ಹಾಯೆನಿಸುತ್ತದೆ. ಅಥವಾ ಬಿಸಿಲಿನಿಂದ ಸರಿದು, ರಸ್ತೆ ಬದಿಯ ಮರಗಳ ನೆರಳಿನಲ್ಲಿ ಓಡಾಡಿದರೂ ಸಾಕು-ತಂಪು ತುಂಬಿಕೊಳ್ಳುತ್ತದೆ. ಮನಸ್ಸು ಸಂತಸಗೊಳ್ಳುತ್ತದೆ.

ಬೆಂಗಳೂರಿನ ವ್ಯಕ್ತಿತ್ವ ಹೀಗಿರುವುದಕ್ಕೆ, ರಸ್ತೆ ಬದಿಗಳಲ್ಲಿ, ವಾಸದ ಮನೆಗಳಲ್ಲಿ, ದೊಡ್ಡ ದೊಡ್ಡ ಕಛೇರಿಗಳ ಆವರಣಗಳಲ್ಲಿ ಬೆಳೆದಿರುವ ಮರಗಳು ಮತ್ತು ಅಲ್ಲಲ್ಲಿ ಇಂದಿಗೂ ಕಾಣಿಸುವ ಕೆರೆಗಳೇ ಕಾರಣ. ಜೊತೆಗೆ, ಬೆಂಗಳೂರು ನಗರದ ತುಂಬಾ ಸಣ್ಣಪುಟ್ಟ ಮತ್ತು ವಿಶಾಲವಾದ ಉದ್ಯಾನಗಳಿರುವುದು ಇನ್ನೊಂದು ಕಾರಣ. ಪ್ರತಿಯೊಂದು ಬಡಾವಣೆಯಲ್ಲಿಯೂ ಒಂದೊಂದು ದೊಡ್ಡದಾದ, ಮತ್ತೆ ಕೆಲವಾರು ಸಣ್ಣಪುಟ್ಟ ಉದ್ಯಾನಗಳು ಇದ್ದೇ ಇವೆ. ಕೆಂಪೇಗೌಡನ ಕಾಲದಲ್ಲಿ ಇವೆಲ್ಲವೂ ಕೃಷಿ-ತೋಟ ಭೂಮಿಗಳು, ಕೆರೆಕಟ್ಟೆಗಳಾಗಿದ್ದವು. ಹೀಗಾಗಿ ಇಲ್ಲಿ ಯಾವ ಪ್ರದೇಶದಲ್ಲಿ ಬೀಜ ಹಾಕಿದರೂ, ಸಸಿ ನೆಟ್ಟರೂ ಹಸಿರು ಚಿಗುರುತ್ತದೆ. ಬಹುಬೇಗ ಗಿಡವಾಗಿ ವೃಕ್ಷವಾಗುತ್ತವೆ. ಮೈಸೂರು ರಾಜ್ಯದಲ್ಲಿ ಮಹಾರಾಜರ ಕಾಲದಿಂದಲೂ ಸುಂದರ ತೋಟಗಳ ನಂಟು ಎಲ್ಲ ಪ್ರಜೆಗಳಿಗೂ ಇತ್ತು. ಹಿಂದಿನ ಆಡಳಿತಗಾರರು ಸಾಧ್ಯವಾದ ಕಡೆಗಳಲ್ಲೆಲ್ಲ ಮರಗಿಡಗಳನ್ನು ನೆಟ್ಟು ಬೆಳೆಸುತ್ತಿದ್ದರು. ಮಲ್ಲೇಶ್ವರ ಬಡಾವಣೆ ಪ್ರಾರಂಭವಾದಾಗ, ಸಂಪಿಗೆ ರಸ್ತೆಯ ಈ ತುದಿಯಿಂದ ಆ ತುದಿವರೆಗೆ (ರಾಜಾಮಿಲ್‌ನಿಂದ ಸ್ಯಾಂಕಿಟ್ಯಾಂಕ್‌ವರೆಗೆ) ನೀಳರಸ್ತೆಯ ಎರಡೂ ಬದಿಯೂ ಸಂಪಿಗೆ ಮರಗಳನ್ನು ಬೆಳೆಸಿದ್ದರು. ಹೀಗೆಯೇ, ಮಲ್ಲೇಶ್ವರದಲ್ಲಿ ಬೇವಿನ ಮರದ ರಸ್ತೆಯೊಂದಿದೆ. ಹಿಂದಿನ ಕಾಲದಲ್ಲಿ- ಅಂದರೆ ಬರೀ ಮೂವತ್ತು ನಲವತ್ತು ವರ್ಷಗಳಿಗೆ ಹಿಂದೆ- ಬೆಂಗಳೂರಿನ ಪ್ರತಿಮನೆಯ ಕಾಂಪೌಂಡಿನಲ್ಲೂ, ಹಿತ್ತಲಲ್ಲೂ, ಸೀಬೆ, ದಾಳಿಂಬೆ, ಚಕ್ಕೋತ, ಮಾವು, ಹಲಸು, ಕಿರು ನೆಲ್ಲಿಕಾಯಿ, ಬಾಳೆ, ತೆಂಗು ಮರಗಳನ್ನು ಕಡ್ಡಾಯವಾಗಿ ಬೆಳೆಸುತ್ತಿದ್ದರು.

ಹೀಗಾಗಿ ಬೆಂಗಳೂರಿನ ಯಾವ ಮನೆಗೆ ಹೋದರೂ ಕೋತಿಗಳ ಸಾಲು, ಗದ್ದಲ, ಹಾರಾಟ-ಚೀರಾಟ. ಬೆಳಗ್ಗೆ-ಸಂಜೆ ವಿಧವಿಧವಾದ ಪಕ್ಷಿಗಳ ಕಲರವ. ಇವುಗಳ ಜೊತೆಗೆ, ಮಲ್ಲಿಗೆ, ಸಂಪಿಗೆ, ಜಾಜಿ ಮೊದಲಾದ ಹೂಗಿಡಗಳೂ ಇರುತ್ತಿದ್ದವು. ಬೆಂಗಳೂರಿನ ರಸ್ತೆಗಳಲ್ಲಿ ಮುಸ್ಸಂಜೆ ಓಡಾಡುವಾಗ ಎಲ್ಲಿಂದಲೊ ರಾತ್ರಿ ರಾಣಿ ಹೂವಿನ ಸುವಾಸನೆ ದಟ್ಟವಾಗಿ ಗಾಳಿಯಲ್ಲಿ ತೇಲಿಬರುತ್ತಿತ್ತು.

ಬೆಂಗಳೂರಿನ ಸುತ್ತಲೂ ಬೃಹತ್ ತೋಟಗಳು. ಮಾವು, ಸೀಬೆ, ಸೇಬು, ಬಾಳೆ, ದಾಳಿಂಬೆ, ದ್ರಾಕ್ಷಿ ತೋಟಗಳು-ಎಕರೆಗಟ್ಟಲೆ ಭೂಮಿಯನ್ನು ಆವರಿಸಿ ಕೊಂಡಿದ್ದವು. ಇಡೀ ಭಾರತಕ್ಕೆ ಪರಮಾಯಿಶಿ ಹಣ್ಣುಗಳ ಸರಬರಾಜು, ಇಡೀ ದಕ್ಷಿಣ ಭಾರತಕ್ಕೆ ಹೂಗಳ ಸರಬರಾಜು, ವೈವಿಧ್ಯಮಯ ತರಕಾರಿ ಸರಬರಾಜು ಬೆಂಗಳೂರಿನ ಹೆಗ್ಗಳಿಕೆಯಾಗಿತ್ತು. ಆದರೆ, ಬೆಂಗಳೂರು ಬೆಳೆದಂತೆ, ಬರೀ ಈಚಿನ ಐವತ್ತು ವರ್ಷಗಳಲ್ಲಿ ಈ ಹೂಹಣ್ಣು ತೋಟಗಳೆಲ್ಲ ಜನವಸತಿ ಬಡಾವಣೆಗಳಾಗಿ ಹೋಗಿವೆ. ಲಕ್ಷಾಂತರ ಮರಗಳಿದ್ದ ಜಾಗಗಳಲ್ಲಿ ಲಕ್ಷಾಂತರ ಮನೆಗಳಿದ್ದಿವೆ. ಆದರೂ, ಬೆಂಗಳೂರಿನವರ ಮಟ್ಟಿಗಂತೂ ತಾಜಾ ಹೂವು, ಹಣ್ಣು, ತರಕಾರಿ- ಗಳಿಗಂತೂ ಕೊರತೆಯೇ ಇಲ್ಲ. ಹಾಲು-ಮೊಸರು-ಬೆಣ್ಣೆ ತುಪ್ಪಗಳ ಕೊರತೆ ಕಂಡಿದ್ದಿಲ್ಲ. ಎಲ್ಲವೂ ಸಮೃದ್ಧಿಯಾಗಿ ದೊರಕುತ್ತವೆ- ಯಾವ ವೇಳೆಯಲ್ಲಿ ಬೇಕಾದರೂ!

ಈ ವೃಕ್ಷ ವ್ಯಕ್ತಿತ್ವದ ನಂಟು ಇಂದಿಗೂ ಉಳಿದುಕೊಂಡಿರುವುದರಿಂದ ಬೆಂಗಳೂರು ಇನ್ನೂ ತಂಪಾಗಿ ಉಳಿದಿದೆ. ಹಸಿರಿನ, ಹೂಗಳ ದಟ್ಟ ಉದ್ಯಾನಗಳಿವೆ.

ಬೆಂಗಳೂರು ಕೆಂಪೇಗೌಡನ ಕಾಲದಿಂದಲೂ ಕೆರೆಗಳಿಗೆ ಪ್ರಸಿದ್ಧಿ. ಅವನ ಕಾಲದಲ್ಲಿಯೇ ಕೆಂಪಾಂಬುಧಿ, ಧರ್ಮಾಂಬುಧಿ, ಕಾರಂಜಿ, ಸಂಪಂಗಿ ಎಂದು ಬೆಂಗಳೂರಿನ ಸುತ್ತಲೂ ದೊಡ್ಡ ದೊಡ್ಡ ಕೆರೆಗಳು ಇದ್ದವು. ಜೊತೆಗೆ, ಊರಿನೊಳಗೆ ಸುತ್ತಲೂ ಅನೇಕ ಕಲ್ಯಾಣಿಗಳಿದ್ದವು. ದುರಂತವೆಂದರೆ ಈಗ ಕೆಂಪೇಗೌಡ ತನ್ನ ಬೆಂಗಳೂರಿಗಾಗಿ ನಿರ್ಮಿಸಿದ ಯಾವ ಕೆರೆಯೂ ಉಳಿದಿಲ್ಲ. ಧರ್ಮಾಂಬುಧಿ ಕೆರೆ, ಬೆಂಗಳೂರು ಬಸ್‌ಸ್ಟಾಂಡ್ ಆಗಿದೆ (ಇದು ರೈಲ್ವೇ ಸ್ಟೇಷನ್‌ನಿಂದ, ಗಾಂಧಿನಗರವನ್ನೆಲ್ಲ ಆವರಿಸಿಕೊಂಡಿತ್ತು). ಕೆಂಪಾಂಬುಧಿ ಕೆರೆ, ಹನುಮಂತ ನಗರವಾಗಿ, ಜಿಂಕೆ ಪಾರ್ಕ್ ಆಗಿ, ಚಿಕ್ಕ ಭಾಗವಾಗಿ ಉಳಿದಿದೆ. ಇದಿನ್ನೂ ಚೊಕ್ಕಟವಾಗಬೇಕಾಗಿದೆ. ಇಡೀ ಬಸವನಗುಡಿ ಆವರಿಸಿಕೊಂಡಿದ್ದ ಕಾರಂಜಿ ಕೆರೆ ಇಂದು ಸುಸಂಸ್ಕೃತ ನಾಗರಿಕರ, ರುಚಿಕರ ತಿಂಡಿ ತೀರ್ಥಗಳ ತಾಣವಾಗಿದೆ. ಸಂಪಂಗಿ ಕೆರೆ ಸಂಪಂಗಿ ರಾಮನಗರ, ಕಾರ್ಪೊರೇಷನ್ ಆಫೀಸ್ ಇತ್ಯಾದಿ ಆಗಿದೆ.

ಆದರೆ, ನಾಗರಿಕ ಪ್ರಜ್ಞೆ ಕೆಲವಾದರೂ ಕೆರೆಗಳನ್ನು ಉಳಿಸುವಂತೆ, ಅಭಿವೃದ್ಧಿಗೊಳಿಸುವಂತೆ ಮಾಡಿರುವುದರಿಂದ ಯಡೆಯೂರು ಕೆರೆ, ಸ್ಯಾಂಕಿ ಕೆರೆ,

ಅಲ್ಸೂರು ಕೆರೆ, ಹೆಸರುಘಟ್ಟ ಕೆರೆ ಮೊದಲಾದವನ್ನು ಉಳಿಸುವಂತೆ ಮಾಡಿದೆ. ಹಾಗೆಯೇ, ಇದೇ ನಾಗರಿಕ ಪರಿಸರ ಪ್ರಜ್ಞೆ ಕಡ್ಡಾಯವಾಗಿ ಉಸಿರಾಟದ ತಾಣಗಳಾಗಿ ಬೇಕಾದಷ್ಟು ಉದ್ಯಾನಗಳನ್ನೂ ಅಭಿವೃದ್ಧಿಪಡಿಸಿದೆ. ಈ ಕಾಲದಲ್ಲಿ ಯಾರಾದರೂ, ವೃಕ್ಷವೊಂದನ್ನು ಕಡಿದರೆ, ಕೆರೆ ತಾಣವನ್ನು ದುರುಪಯೋಗ ಪಡಿಸಿಕೊಂಡರೆ, ಉದ್ಯಾನ ತಾಣವನ್ನು ಅತಿಕ್ರಮಿಸಿಕೊಂಡರೆ ಥಟ್ಟನೆ ಅಲ್ಲಿಯ ನಾಗರಿಕರೆ ರೊಚ್ಚಿಗೇಳುತ್ತಾರೆ. ಆಡಳಿತಕ್ಕೆ ದೂರು ನೀಡುತ್ತಾರೆ. ಕೆರೆ, ಉದ್ಯಾನ, ವನ್ಯ ಪರಿಸರವನ್ನು ಆಧುನಿಕರೆಲ್ಲರೂ ಬಯಸುತ್ತಿದ್ದಾರೆ.

ದೂರದ ಊರುಗಳಿಂದ ತೋಟದ ಕೆಲಸಗಾರರನ್ನು ಕರೆತಂದು ತೋಟ, ಗಿಡಮರ ಸಂಸ್ಕೃತಿಯನ್ನು ಬೆಂಗಳೂರಿನಲ್ಲಿ ಕೆಂಪೇಗೌಡ ಪ್ರಾರಂಭಿಸಿದ್ದು, ಅನಂತರ ಅದೊಂದು ನಿರಂತರ ಅಭ್ಯಾಸವಾಗಿ ಮುಸ್ಲಿಮರು, ಇಂಗ್ಲಿಷರು, ಒಡೆಯರು ಎಲ್ಲರೂ ಹಸಿರನ್ನು ಬೆಳೆಸಿದರು. ಬೆಂಗಳೂರಿನ ಮಹಾತ್ಮಾಗಾಂಧಿ ರಸ್ತೆಯ ಕಾರ್ಪೊರೇಷನ್ ಕಟ್ಟಡವಾದ 'ಯೂಟಿಲಿಟಿ ಕಟ್ಟಡ'ದ ಮೇಲೆ ನಿಂತು ನೋಡಿದಾಗಲೋ ಅಥವಾ ಯಾವುದಾದರೊಂದು ಎತ್ತರದ ಕಟ್ಟಡ ಮೇಲಿನಿಂದ ನೋಡಿದಾಗಲೂ ನಮಗೆ ಕಟ್ಟಡಗಳಿಗೆ ಸಮಸಮನಾಗಿ ದಟ್ಟ ಹಸಿರು ಕಾಣಿಸುತ್ತದೆ. ಮಹಾವೃಕ್ಷಗಳು ಕಾಣಿಸುತ್ತವೆ.

ಬೆಂಗಳೂರಿನ ಹವೆ ಏಕೆ ತಂಪು ಎಂದು ತಿಳಿದುಕೊಳ್ಳಲು ಇಷ್ಟೊಂದು ವಿವರಗಳು ಸಾಲದೆ? ಜೊತೆಗೆ, ಬೆಂಗಳೂರು ಸಮುದ್ರ ಮಟ್ಟದಿಂದ ೩೦೨೧ ಅಡಿ (೯೨೦ ಮೀಟರ್) ಎತ್ತರದಲ್ಲಿದೆ. ಕೆಂಪೇಗೌಡನ ಕಾಲದಲ್ಲಿ ಬರೀ ಏಳೆಂಟು ಚದರ ಕಿಲೋ ಮೀಟರ್‌ಗಳಷ್ಟು ಹರಡಿಕೊಂಡಿದ್ದ ಬೆಂಗಳೂರು ಈಗ ೫೦೦ ಚದರ ಕಿಲೋಮೀಟರ್ ಭೂಮಿಯನ್ನು ವ್ಯಾಪಿಸಿಕೊಂಡಿದೆ.

* * *

ಬೆಂಗಳೂರಿನಲ್ಲಿ ಎತ್ತ ಓಡಾಡಿದರೂ ಖಂಡಿತವಾಗಿಯೂ ನಿಮಗೆ ಕೆಲವಾದರೂ ಸಣ್ಣಪುಟ್ಟ ಸುಮಾರು ದೊಡ್ಡದಾದ ಉದ್ಯಾನವನಗಳು ಕಾಣಿಸುತ್ತದೆ. ನೀವು ಬಂದು ಇಳಿದುಕೊಂಡಿರುವ ಅಥವಾ ವಾಸಿಸುತ್ತಿರುವ ಬಡಾವಣೆಯಲ್ಲಿಯೇ ನೀವು ಮುಂಜಾನೆ-ಮುಸ್ಸಂಜೆ 'ವಾಕಿಂಗ್' ಮಾಡುವಂಥ ಸುಂದರ ಉದ್ಯಾನಗಳಿವೆ. ಆದರೆ, ಬದುಕಿನ ಅಪೂರ್ವ ಅನುಭವಗಳೆಂಬಂತೆ, ಜೀವನದಲ್ಲಿ ಮರೆಯಲಾಗದಂಥ ಕ್ಷಣಗಳನ್ನು ಅನುಭವಿಸುವಂತೆ ಅನ್ನಿಸಬೇಕಾದರೆ, ನೀವು ಬೆಂಗಳೂರಿನ ಎರಡು ಮಹಾನ್ ಉದ್ಯಾನವನಗಳನ್ನು ನೋಡಲೇಬೇಕು. ಒಂದು- ಕಬ್ಬನ್ ಪಾರ್ಕ್. ಇನ್ನೊಂದು ಲಾಲ್‌ಬಾಗ್.

ಕಬ್ಬನ್‌ಪಾರ್ಕ್ ಮತ್ತು ಲಾಲ್‌ಬಾಗ್ ಬೆಂಗಳೂರಿನ ಅತ್ಯಂತ ಸುಂದರ ಮತ್ತು ಅತ್ಯಂತ ವಿಸ್ತಾರವಾದ ಉದ್ಯಾನ ಪ್ರದೇಶಗಳು. ಬೆಂಗಳೂರಿಗೆ ಬಂದವರೆಲ್ಲರೂ

ಇವೆರಡು ವೃಕ್ಷ ಸಂಭ್ರಮದಲ್ಲೆ ಓಡಾಡಿಯೇ ಹೋಗುತ್ತಾರೆ. ಬೆಂಗಳೂರಿಗರಂತೂ ಸಮಯ ಸಿಕ್ಕಾಗಲೆಲ್ಲ ಭೇಟಿ ಕೊಡುತ್ತಲೇ ಇರುತ್ತಾರೆ. ಬೆಳಗಿನ 'ಜಾಗಿಂಗ್' (ವಾಕಿಂಗ್) ಮಾಡುವವರಂತೂ ಪ್ರತಿದಿನ ಬೆಳಗ್ಗೆ ಇಲ್ಲಿ ಓಡಾಡಲು ಬರುತ್ತಾರೆ.

ಎರಡು ಉದ್ಯಾನಗಳೂ ಒಂದಕ್ಕಿಂತಲೂ ಒಂದು ದೊಡ್ಡದ್ದಾಗಿರುವಂತೆ ಕಾಣಿಸುತ್ತವೆ. ಇವೆರಡೂ ಬಹುಪಾಲು ಒಂದೇ ಅಳತೆಯಲ್ಲಿದ್ದರೂ ಕಬ್ಬನ್ ಪಾರ್ಕ್ ಸ್ವಲ್ಪ ದೊಡ್ಡದು.

ಕಬ್ಬನ್ ಪಾರ್ಕ್ ವಿಧಾನಸೌಧದ ಎದುರಿಗಿರುವ ಹೈಕೋರ್ಟ್ ಕಟ್ಟಡದ ಹಿಂದಿರುವ ವನ್ಯಪ್ರದೇಶ. ಇದು ವಿಧಾನವೀದಿಯಿಂದ ಹಿಡಿದು, ಮ್ಯೂಸಿಯಂ ರಸ್ತೆಯವರೆವಿಗೂ, ಒಂದು ಕಡೆ ಕ್ರಿಕೆಟ್ ಸ್ಟೇಡಿಯಂವರೆಗೂ, ಇನ್ನೊಂದು ಕಡೆ ಕಾರ್ಪೊರೇಷನ್ ಆಫೀಸ್‌ವರೆಗೂ ಹರಡಿಕೊಂಡಿದೆ. ಒಂದಾನೊಂದು ಕಾಲದಲ್ಲಿ ಈ ತಾಣ ಪೂರ್ತಿ ಬರೀ ಮಹಾವೃಕ್ಷಗಳ ಪ್ರದೇಶವೇ ಆಗಿದ್ದಿರಬೇಕು. ಮುಂದಿನ ವರ್ಷಗಳಲ್ಲಿ ಅಠಾರಾ ಕಛೇರಿ (ಹೈಕೋರ್ಟ್), ಕರ್ನಾಟಕ ಸರ್ಕಾರ ವಿಮಾ ಇಲಾಖೆ ಕಟ್ಟಡ, ಪಬ್ಲಿಕ್ ಲೈಬ್ರರಿ, ಸೆಕ್ರೆಟೇರಿಯಟ್ ಕ್ಲಬ್, ಕಬ್ಬನ್ ಪಾರ್ಕ್ ರೆಸ್ಟೋರೆಂಟ್ ಎಂದು ಕರೆಸಿಕೊಳ್ಳುತ್ತಿದ್ದ ಈಗಿನ ಮಕ್ಕಳ ಪುಸ್ತಕ ಭಂಡಾರ, ಅದರ ಮುಂದೆ ಎಲೆಕ್ಟ್ರಿಕ್ ಆಫೀಸ್, ಪಕ್ಕದಲ್ಲಿಯೇ ಸೆಂಚುರಿ ಕ್ಲಬ್, ನ್ಯೂ ಪಬ್ಲಿಕ್ ಆಫೀಸ್ ಸಾಲಿನ ಕಟ್ಟಡಗಳು- ಪೋಲಿಸ್ ಮಹಾನಿರ್ದೇಶಕ ಕಛೇರಿ, ಜಿಲ್ಲಾ ಕೇಂದ್ರದವರೆಗೂ, ಆ ಕಡೆ ಮ್ಯೂಜಿಯಂ ಕಟ್ಟಡಗಳು, ಬಾಲಭವನ, ಪುಟಾಣಿ ರೈಲು, ಪೋಲಿಸ್ ಸ್ಟೇಷನ್ -ಹೀಗೆ ಅನೇಕ ಕಟ್ಟಡಗಳು ಈ ಮಹಾನ್ ಉದ್ಯಾನದಲ್ಲಿ ಜಾಗ ಮಾಡಿಕೊಂಡುಬಿಟ್ಟವು. ಹೀಗೆ ತನ್ನ ಕಾಲು ಭಾಗವನ್ನು ಕಳೆದುಕೊಂಡರೂ ವಿಸ್ತಾರವಾಗಿಯೇ ಕಬ್ಬನ್ ಪಾರ್ಕ್ ಕಾಣುತ್ತದೆ.

೧೮೦೦ಕ್ಕೂ ಹಿಂದಿನಿಂದಲೇ ಒಂದು ರೀತಿ ವನ್ಯಪ್ರದೇಶದಂತೆ ಇದ್ದ ಜಾಗವನ್ನು ಬೆಂಗಳೂರಿನ ದಂಡು ಪ್ರದೇಶ ಅಭಿವೃದ್ಧಿಯಾಗಿಸಿತು. ಇಂಗ್ಲಿಷ್ ಅಧಿಕಾರಿಗಳ ಆಡಳಿತ ನಡೆದಾಗ, ಮೈಸೂರಿನಿಂದ ಬೆಂಗಳೂರಿಗೆ (೧೮೩೧ರಲ್ಲಿ) ರಾಜ್ಯದ ಎಲ್ಲ ಆಡಳಿತವೂ (ಟೀಪೂಸುಲ್ತಾನ್ ಅರಮನೆಗೆ) ವರ್ಗಾವಣೆ ಗೊಂಡಾಗ, ಬೆಂಗಳೂರು ದಂಡು ಪ್ರಾಮುಖ್ಯತೆಗೆ ಬಂದಿತು.

೧೮೦೭ರಿಂದ ಮದ್ರಾಸ್‌ನಿಂದ ಬ್ರಿಟಿಷ್ ಕಛೇರಿಗಳು ಬಂದು ದಂಡಿನಲ್ಲಿ ನೆಲೆಸತೊಡಗಿದ್ದವು. ೧೮೦೯ರಲ್ಲಿ ಇಡೀ ಬ್ರಿಟಿಷ್ ಸೈನ್ಯ ಶ್ರೀರಂಗಪಟ್ಟಣದಿಂದ ಬೆಂಗಳೂರಿಗೆ ವರ್ಗಾವಣೆಗೊಂಡು ಕಂಟೋನ್ಮೆಂಟ್ ಎಂದಾಯಿತು.

ಬ್ರಿಟಿಷ್ ಸೈನ್ಯ ಅಲಸೂರಿನ ಸುತ್ತಮುತ್ತ ಬ್ಯಾರಕ್‌ಗಳನ್ನು ನಿರ್ಮಿಸಿಕೊಂಡು ವಾಸಮಾಡತೊಡಗಿದ ಕೂಡಲೇ ಬಹುಬೇಗ ಅಲ್ಲೊಂದು ಊರು ಸೃಷ್ಟಿಯಾಗ

ತೊಡಗಿತು. ಅಂಗಡಿಗಳು, ಕ್ಲಬ್‌ಗಳು, ಮನರಂಜನಾ ತಾಣಗಳೆಲ್ಲ ಬೇಗ ಬೇಗ ಹುಟ್ಟಿಕೊಂಡವು.

೧೮೬೪ರ ವೇಳೆಗೆ ಅಠಾರಾ ಕಛೇರಿಯನ್ನು ನಿರ್ಮಿಸಲಾರಂಭಿಸಿದಾಗ ಅದರ ಎದುರಿನ ವನ್ಯಪ್ರದೇಶವನ್ನು ನವೀಕರಣಗೊಳಿಸಲಾಯಿತು. ಅದನ್ನೊಂದು ಅತ್ಯಂತ ಸುಂದರ ಉದ್ಯಾನವನ್ನಾಗಿ ಮಾರ್ಪಡಿಸಲಾಯಿತು. ಓಡಾಡಲು ಕಾಲುದಾರಿ, ಅಲ್ಲಲ್ಲಿ ಕುಳಿತುಕೊಳ್ಳಲು ಒರಗು ಬೆಂಚುಗಳು ಬಂದವು. ಕಛೇರಿ ಕೆಲಸಗಳಿಗೆ ಊರುಗಳಿಂದ ಬಂದ ಜನ ಇಲ್ಲಿ ಸ್ವಲ್ಪ ಹೊತ್ತು ವಿಶ್ರಮಿಸಿಕೊಳ್ಳಲು ತಂಪು ಜಾಗವೊಂದು, ಶುದ್ಧ ಹವೆಯ ಜಾಗವೊಂದು ಸಿಕ್ಕಿತು. ಸರ್ ಮಾರ್ಕ್ಸ್ ಕಬ್ಬನ್ ಎಂಬಾತ ಮೈಸೂರು ರಾಜ್ಯದ ಮುಖ್ಯ ಕಮಿಷನರ್ ಆಗಿ ಬೆಂಗಳೂರಿನಲ್ಲಿದ್ದ- ೧೮೩೪ ರಿಂದ ೧೮೬೧ ರವರೆಗೂ ಬೆಂಗಳೂರಿನಲ್ಲಿದ್ದು ಅನಂತರ ತೀರಿಕೊಂಡ. ಆಮೇಲೆ ಬಂದ ಲೆವಿನ್ ಬೆಂಥಮ್ ಬೌರಿಂಗ್ (೧೮೬೨) ಅಠಾರಾ ಕಛೇರಿಯನ್ನು ಮತ್ತು ಹೊಸ ಪಬ್ಲಿಕ್ ಆಫೀಸನ್ನೂ ಕಟ್ಟಿಸಿದ (೧೮೬೪ ರಿಂದ ೧೮೬೮ರ ಅವಧಿಯಲ್ಲಿ).

ಇಡೀ ರಾಜ್ಯದ ಕಛೇರಿಗಳು- ಆಡಳಿತ ವ್ಯವಹಾರ ಅಠಾರಾ ಕಛೇರಿಗೆ ಬಂದಾಗ, ಕಬ್ಬನ್ ಪಾರ್ಕ್ ಪ್ರಜೆಗಳ ಜನಪ್ರಿಯ ತಾಣವಾಯಿತು. ಅನಂತರ ಇಲ್ಲಿ ನಡುವೆ ಒಂದು ಬ್ಯಾಂಡ್ ಸ್ಟಾಂಡ್ ನಿರ್ಮಿಸಲಾಯಿತು. ಪ್ರತಿ ಶನಿವಾರ, ಭಾನುವಾರ ಸಂಜೆ ಇಲ್ಲಿ ಸರ್ಕಾರಿ ಬ್ಯಾಂಡ್‌ಗೋಷ್ಠಿ ಇರುತ್ತಿತ್ತು. ಹೀಗೆ ಕಬ್ಬನ್ ಪಾರ್ಕ್ ಸಾವಿರಾರು ಜನರ ಓಡಾಟದ ವೃಕ್ಷಲೋಕವಾಯಿತು. ಕಬ್ಬನ್‌ನ ಸೇವೆ ಗಮನಿಸಿ ಈ ಉದ್ಯಾನಕ್ಕೆ ಕಬ್ಬನ್ ಪಾರ್ಕ್ ಎಂದು ಹೆಸರಿಟ್ಟು ಆತನದೊಂದು ವಿಗ್ರಹವನ್ನು ಅಲ್ಲಿ ಸ್ಥಾಪಿಸಲಾಯಿತು (ಮಾರ್ಚ್ ೧೮೬೬).

ಈಗ ಕಬ್ಬನ್ ಪಾರ್ಕ್ ಪ್ರತಿ ದಿವಸ ಸಾವಿರ ಸಾವಿರ ಅಭಿಮಾನಿಗಳನ್ನು ಆಕರ್ಷಿಸುತ್ತದೆ. ಪ್ರತಿದಿನ ಬೆಳಗ್ಗೆ-ಸಂಜೆ ಕುಟುಂಬ ಕುಟುಂಬಗಳೇ ಇಲ್ಲಿ 'ವಾಕ್' ಮಾಡಲು ಬರುತ್ತವೆ. ಪ್ರತಿ ಭಾನುವಾರ ಮುಂಜಾವು 'ಉದ್ಯಾನ ಸಂಗೀತ' ಎಂದು ಯಾವುದಾದರೊಂದು ಶಾಸ್ತ್ರೀಯ ಸಂಗೀತ ಕಾರ್ಯಕ್ರಮವಿರುತ್ತದೆ.

ಅಠಾರಾ ಕಛೇರಿ, ವಿಮಾಕಛೇರಿಗಳು ಸ್ಥಾಪನೆಗೊಂಡ ಮೇಲೆ ಅಲ್ಲಿನ ಉದ್ಯೋಗಿಗಳಿಗಾಗಿ ಮೂರು ಹೋಟಲ್‌ಗಳು ಪ್ರಾರಂಭವಾದವು. ವಿಮಾ ಕಛೇರಿಗೆ ಹತ್ತಿರ (ಈಗ ಪ್ರೆಸ್ ಕ್ಲಬ್ ಇರುವ ಕಟ್ಟಡ) ಲಕ್ಷ್ಮಣಾಚಾರ್ ಎಂಬುವರ ನಿರ್ವಹಣೆಯಲ್ಲಿ ಅತ್ಯುತ್ತಮ ಹೋಟಲ್ ಎನಿಸಿಕೊಂಡಿತ್ತು. ಇಲ್ಲಿನ ಎಲ್ಲ ತಿಂಡಿ-ಕಾಫಿ ಉತ್ತಮ ಮಟ್ಟದಲ್ಲಿತ್ತು- ಮಸಾಲೆ ದೋಸೆ ಜನಪ್ರಿಯವಾಗಿತ್ತು. ಇಲ್ಲಿ 'ಲೀಸ್' ಮುಗಿದ ಮೇಲೆ, ಲಕ್ಷ್ಮಣಾಚಾರ್ ರಾಜಭವನ ರಸ್ತೆಯ ಆಕಾಶವಾಣಿ ಎಡಭಾಗದಲ್ಲಿ 'ಪರಾಗ್ ಹೋಟಲ್' ಪ್ರಾರಂಭಿಸಿ ಅಷ್ಟೇ ಉತ್ತಮವಾಗಿ ನಡೆಸಿದರು.

ಅಠಾರಾ ಕಛೇರಿಗೆ ಅಂಟಿದಂತೆ ಸೈಕಲ್ ಸ್ಟಾಂಡ್ ಷೆಡ್‌ಗಳ ಮೂಲೆಯಲ್ಲಿ ಒಬ್ಬಾತ ಒಂದು ಇಡ್ಲಿವಡೆ-ಕಾಫಿ ಕ್ಯಾಂಟೀನ್ ಇಟ್ಟುಕೊಂಡಿದ್ದರು. ಇವರ ಹೆಸರು ಬಹುಶಃ, ರಾಮು ಎಂದಿರಬೇಕು. ಇಲ್ಲಿ ಹೆಸರುಬೇಳೆ ಪಾಯಸ ಅತ್ಯಂತ ರುಚಿ. ಗಾಜಿನ ಲೋಟದ ತುಂಬಾ ಬಿಸಿಬಿಸಿಯಾಗಿ ಒಂದಾಣೆಗೊಂದು ಸಿಗುತ್ತಿತ್ತು.

ಇನ್ನೊಂದು ಸ್ವಲ್ಪ ವಿಸ್ತಾರವೂ-ದೊಡ್ಡದೂ-ಆಧುನಿಕವೂ ಆಗಿದ್ದ 'ಕಬ್ಬನ್ ಪಾರ್ಕ್' ರೆಸ್ಟೋರೆಂಟ್. ಇಲ್ಲೂ ಕಾಫಿ-ದೋಸೆ ಜನಪ್ರಿಯ. ಮೊಟ್ಟಮೊದಲ ಬಾರಿಗೆ (ಬಹುಶಃ, ಬೆಂಗಳೂರಿನ ಹೋಟಲ್‌ಗಳಲ್ಲಿಯೆ) ಕಾಂಪೌಂಡ್‌ನಲ್ಲಿ ಕುರ್ಚಿ-ಮೇಜು ಹಾಕಿ ಫಲಹಾರ ಸರಬರಾಜು ಮಾಡುತ್ತಿದ್ದದ್ದು ಮತ್ತು ಮಕ್ಕಳಿಗೆ ಆಟವಾಡಲು-ಓಡಾಡಲು ಸುತ್ತಲೂ ಜಾಗವಿದ್ದದ್ದು, ಈ ಹೋಟಲ್‌ನ ವಿಶೇಷವಾಗಿತ್ತು. ('ಮಲ್ಲೇಶ್ವರಂ ಟಿಫನ್ ರೂಂ'ನಲ್ಲಿಯೂ ಹೀಗೆ ಹೊರಸರಬರಾಜು ಇದ್ದಂತೆ ನೆನಪು)

ಈಗ ಈ ಮೂರು ಹೋಟಲ್‌ಗಳೂ ಇಲ್ಲ. 'ಕಬ್ಬನ್ ಪಾರ್ಕ್ ರೆಸ್ಟೋರೆಂಟ್' ಮಕ್ಕಳ ಪುಸ್ತಕ ಭಂಡಾರವಾಗಿದೆ. ಲಕ್ಷ್ಮಣಾಚಾರ್ ಹೋಟಲ್ 'ಪ್ರೆಸ್ ಕ್ಲಬ್' ಆಗಿದೆ. ರಾಮುವಿನ ಪುಟ್ಟ ಕ್ಯಾಂಟೀನ್ ಇನ್ನೊಂದು ಕ್ಯಾಂಟೀನ್‌ಗೆ ದಾರಿ ಮಾಡಿಕೊಟ್ಟಿದೆ.

ಈಗಲೂ ಬೆಳಗ್ಗೆ-ಮಧ್ಯಾಹ್ನ-ಸಂಜೆ ಕಬ್ಬನ್ ಪಾರ್ಕ್‌ನ ಸೋಪಾನಗಳ ಮೇಲೆ ಮಹಾವೃಕ್ಷಗಳ ಕೆಳಗೆ ಹಾಯಾಗಿ ಕುಳಿತುಕೊಂಡರೆ ಪ್ರಪಂಚವೇ ಮರೆತು ಹೋಗುತ್ತದೆ. ಹಸಿರು ಪರಿಸರದೊಂದಿಗೆ ಮನಸ್ಸು ಹಸಿರಾಗುತ್ತದೆ.

* * *

ಹೈದರಾಲೀ ೧೭೬೦ರಲ್ಲಿ ಪರಮಾಯಿಶಿ ಹಣ್ಣಿನ ಗಿಡಗಳ ಒಂದು ತೋಟವನ್ನು ಬೆಂಗಳೂರು ಕೋಟೆಗೆ ಹತ್ತಿರವೇ ಸೃಷ್ಟಿಸಿದ. ಅಲ್ಲಿಲ್ಲದ ಹಣ್ಣಿನ ಗಿಡವೇ ಇರಲಿಲ್ಲ. ದೂರದ ರಾಜ್ಯಗಳಿಂದ, ಪರದೇಶಗಳಿಂದ ಹಣ್ಣಿನ ಬೀಜಗಳನ್ನು, ಸಸಿಗಳನ್ನು ತರಿಸಿ ನೆಡಿಸಿದ. ಅನಂತರ ಅಪರೂಪದ ಮೊಗಲ್ ಉದ್ಯಾನಗಳ ಮಾದರಿಯಲ್ಲಿ ಹೂವಿನ ಗಿಡಗಳನ್ನು ಬೆಳೆಸಿದ. ಅದರ ಹಸಿರು- ಕೆಂಪು-ಬಿಳಿ ಬಣ್ಣಗಳ ಸೌಂದರ್ಯವನ್ನು ನೋಡಿ ಅದನ್ನು 'ಲಾಲ್‌ಬಾಗ್' ಎಂದು ಕರೆದ. ಅವನ ಕಾಲದಲ್ಲಿ 'ಲಾಲ್‌ಬಾಗ್' ಈಗಿನ ಅರ್ಧಭಾಗವೂ ಇರಲಿಲ್ಲ. (ದೊಡ್ಡ ವಿಸ್ತಾರ ಪ್ರದೇಶದಲ್ಲಿ ಇದ್ದ ಕಬ್ಬನ್ ಪಾರ್ಕ್ ಕುಗ್ಗಿದರೆ, ಚಿಕ್ಕ ಪ್ರದೇಶದ 'ಲಾಲ್‌ಬಾಗ್' ದೊಡ್ಡದಾಗಿ ಹಿಗ್ಗಿತು).

ಹೈದರಾಲೀಯ ತರುವಾಯ ಟಿಪ್ಪುಸುಲ್ತಾನ 'ಲಾಲ್‌ಬಾಗ್'ನ್ನು ಇನ್ನೂ ಅಲಂಕಾರಿಕ ಮಾಡಿದ. ಪ್ರಪಂಚದ ಅನೇಕ ಕಡೆಗಳ ಹಣ್ಣಿನ ಗಿಡಗಳು, ಅಪರೂಪದ ಹೂವಿನ ಗಿಡಗಳು 'ಲಾಲ್‌ಬಾಗ್' ಸೇರಿದವು. ಎಕರೆಗಟ್ಟಲೆ ನೆಲ ಸೇರಿಕೊಂಡಿತು.

೧೮೯೦ರಲ್ಲಿ ಲಾಲ್‌ಬಾಗ್‌ನೊಳಗೊಂದು ಸುಂದರ 'ಗಾಜಿನ ಮನೆ' ನಿರ್ಮಾಣವಾಯಿತು. ಪ್ರಪಂಚ ಪ್ರಸಿದ್ಧ ವಿನ್ಯಾಸದಿಂದ ಇದರ ರಚನೆಯಾಗಿ ಇದು

ಪ್ರಪಂಚ ಪ್ರಸಿದ್ಧವೇ ಆಗಿದೆ. ಬೆಂಗಳೂರಿಗೆ ಇಂದಿಗೂ ಇದೊಂದು ಅಭಿಮಾನದ ಕಟ್ಟಡ ಶಿಲ್ಪ. ವರ್ಷಕ್ಕೆ ಎರಡು ಸಲ, ೧೫ ಆಗಸ್ಟ್ ಮತ್ತು ೨೬ ಜನವರಿ ಇಲ್ಲಿ ಫಲಪುಷ್ಪಗಳ ಪ್ರದರ್ಶನ ನಡೆಯುತ್ತದೆ. ದೇಶವಿದೇಶಗಳಿಂದ ಇದನ್ನು ನೋಡಲು ಜನ ಬರುತ್ತಾರೆ.

ಈಚೆಗೆ 'ಲಾಲ್‌ಬಾಗ್'ಗೆ ಐದು ರೂಪಾಯಿ ಪ್ರವೇಶ ಧನ ಇರಿಸಲಾಗಿದೆ.

'ಗಾಜಿನ ಮನೆ'ಯನ್ನು ಸಂಪೂರ್ಣವಾಗಿ ನವೀಕರಣಗೊಳಿಸಲಾಗಿದೆ.

'ಬ್ಯಾಂಡ್ ಸ್ಟಾಂಡ್' ಸುಂದರಗೊಳಿಸಲಾಗಿದೆ. ಇದರಲ್ಲಿ ಪ್ರತಿ ಭಾನುವಾರ ಮಂಜಾನೆ 'ಉದ್ಯಾನ ಸಂಗೀತ' ನಡೆಯುತ್ತದೆ.

ಪ್ರೀತಿ ಪಾತ್ರರೊಂದಿಗೆ, ಮನೆಮಂದಿಯೊಂದಿಗೆ 'ಲಾಲ್‌ಬಾಗ್'ನ ದಟ್ಟ ಹಸಿರಿನ ಸುವೆ ಸುಂದರ ಕಾಲುದಾರಿಗಳಲ್ಲಿ ನಡೆಯುವಾಗ ಸ್ವರ್ಗಲೋಕದಲ್ಲಿ ಸೆದಾಡಿದಂತಾಗುತ್ತದೆ. ಪ್ರೇಮಿಗಳಿಗೆ, ನವದಂಪತಿಗಳಿಗೆ ಲಾಲ್‌ಬಾಗ್ ಒಂದು ೂಸ್ವರ್ಗ -ಇಲ್ಲಿ ಹಸಿರು ಹುಲ್ಲುರಾಶಿಯ ಮೇಲೊ, ಮಹಾವೃಕ್ಷಗಳ ಕೆಳಗೆ ನೆರಳಿನಲ್ಲೊ, ೂದೆಗಳ ಸಂದಿಯಲ್ಲೊ, ಹಾಲು ಸೋಪಾನಗಳ ಮೇಲೊ, ಒಬ್ಬರಿಗೊಬ್ಬರು ಅಂಟಿ ುಳಿತಾಗ 'ಸ್ವರ್ಗಕ್ಕೇ ಕಿಚ್ಚು' ಹಚ್ಚಿದಂತಾಗುತ್ತದೆ!

ಲಾಲ್‌ಬಾಗ್‌ನಿಂದ ಒಂದು ರೀತಿ ಬೆಂಗಳೂರಿಗರ ಹಣ್ಣು-ಹೂವು ಗಿಡಗಳ ಿಭಿಮಾನ ಬೆಳೆಯಿತು. ಲಾಲ್‌ಬಾಗ್‌ನವರು ಬೀಜ-ಸಸಿಗಳನ್ನು ಸಂಗ್ರಹಿಸಿ ಮಾರಾಟ ಮಾಡುವುದನ್ನು ಪ್ರಾರಂಭಿಸಿದರು. ಈ ಕಾರಣದಿಂದಲೇ ಲಾಲ್‌ಬಾಗ್‌ನ ಸುತ್ತಮುತ್ತಲೂ ಹೀಗೆ ಬೀಜ-ಸಸಿ ಮಾರುವ ಬೇಕಾದಷ್ಟು 'ನರ್ಸರಿ'ಗಳು ಹುಟ್ಟಿಕೊಂಡವು. ಬೆಂಗಳೂರು ಮನೆಮನೆಗಳ ಕಾಂಪೌಂಡ್‌ಗಳಲ್ಲಿ ಹೂಗಿಡಗಳು, ಅಲಂಕಾರಿಕ ಗಿಡಗಳು ರಾರಾಜಿಸತೊಡಗಿದವು. ದೊಡ್ಡ ಕಾಪೌಂಡ್ ಇರುವವರು ಹಣ್ಣಿನ ಮರಗಳನ್ನು ಬೆಳೆಸಿದರು.

ಬೆಂಗಳೂರು 'ಉದ್ಯಾನನಗರ' ಎಂದು ಹೆಸರು ಪಡೆಯಲು 'ಲಾಲ್‌ಬಾಗ್'ನ ಪ್ರಭಾವ-ಕೊಡುಗೆ ತುಂಬಾ ದೊಡ್ಡದು.

ಲಾಲ್‌ಬಾಗ್ ಮುಂದೆಯೇ ಹಣ್ಣು ತರಕಾರಿಗಳನ್ನು ಮಾರುವ ಮಳಿಗೆಗಳಿವೆ. ಕಡಮೆ ಬೆಲೆಯಲ್ಲಿ ತಾಜಾ ಹಣ್ಣು-ತರಕಾರಿ ಸಿಗುತ್ತದೆ. ಲಾಲ್‌ಬಾಗ್ ಒಳಗೆ 'ತಾಜಾ ದ್ರಾಕ್ಷಿ ರಸ' ಸಿಗುತ್ತದೆ. ಕುಡಿಯಲು ಮರೆಯ ಬಾರದು!

* * *

ಬೆಂಗಳೂರಿನ ಅನೇಕ ಕಡೆ ಸುಂದರ ಪುಟ್ಟ ಪುಟ್ಟ ಉದ್ಯಾನಗಳಿವೆ: ಲ್ಯಾಂಗ್‌ಫೋರ್ಡ್ ಉದ್ಯಾನ, ಕೋಲ್ಸ್ ಉದ್ಯಾನ, ರಿಚ್‌ಮಂಡ್ ಉದ್ಯಾನ,ಮತ್ತು ಟಿ.ಆರ್. ಶಾಮಣ್ಣ ಪಾರ್ಕ್ (ದೊಡ್ಡ ಗಣೇಶ ದೇವಾಲಯ ಹಿಂದೆ ಅತ್ಯಂತ ಸುಂದರವಾಗಿದೆ. ನೋಡಲೇಬೇಕಾದ ಉದ್ಯಾನ.) ಎಂಎನ್‌ಕೆ ಉದ್ಯಾನ (ಬಸವನಗುಡಿಯ ಈ ಉದ್ಯಾನ ಇದೀಗ ಸೊಗಸಾಗಿ ನವೀಕರಿಸಲಾಗಿದೆ). ನವರಾಗ್ ಉದ್ಯಾನ (ರಾಜಾಜಿನಗರ) ಮೊದಲಾಗಿ ನೂರಾರು ಪಾರ್ಕ್‌ಗಳು ಬೆಂಗಳೂರಿನ ಎಲ್ಲೆಲ್ಲೂ ಕಾಣಸಿಗುತ್ತವೆ. 'ಉದ್ಯಾನ ನಗರ' ಎಂದು ಕರೆಯುವುದು ಅತಿಶಯೋಕ್ತಿಯೇನಲ್ಲ ಅಲ್ಲವೇ?

■■

ಸಾಹಿತ್ಯ-ಸಂಸ್ಕೃತಿ-ಉತ್ಸವಗಳ ಬೀಡು

ಬೆಂಗಳೂರಿನಲ್ಲಿ ಯಾವಾಗಲೂ ಸಾಹಿತ್ಯ, ಸಂಸ್ಕೃತಿ, ಸಂಗೀತ, ನೃತ್ಯ ಕಾರ್ಯಕ್ರಮಗಳು ನಡೆಯುತ್ತಲೇ ಇರುತ್ತವೆ. ಪ್ರತಿದಿನ ಪತ್ರಿಕೆಗಳಲ್ಲಿ 'ನಗರದಲ್ಲಿ ಇಂದು' ವಿಭಾಗ ನೋಡಿದರೆ ಇವುಗಳ ಪರಿಚಯವಾಗುತ್ತದೆ.

ಪ್ರತಿ ಭಾನುವಾರ ಬೆಳಿಗ್ಗೆ ೬ ಘಂಟೆಗೆ ಕಬ್ಬನ್ ಪಾರ್ಕ್‌ನಲ್ಲೂ, ಲಾಲ್‌ಬಾಗ್‌ನಲ್ಲೂ 'ಉದ್ಯಾನದಲ್ಲಿ ಉದಯರಾಗ' ಏರ್ಪಡಿಸಿರುತ್ತದೆ. ಸುಪ್ರಸಿದ್ಧ, ಜನಪ್ರಿಯ ಸಂಗೀತಗಾರರ ಸಂಗೀತವಿರುತ್ತದೆ. ಈಗ ಶನಿವಾರ ಸಂಜೆಯೂ ಸಂಗೀತ ಕೇಳಲಿದೆ.

ಗಣೇಶ ಚತುರ್ಥಿ ಸಮಯದಲ್ಲಿ (ಸೆಪ್ಟಂಬರ್) ಮತ್ತು ರಾಮನವಮಿ ಸಂದರ್ಭದಲ್ಲಿ (ಮಾರ್ಚ್-ಏಪ್ರಿಲ್) ಬೆಂಗಳೂರಿನಲ್ಲಿ ವೈವಿಧ್ಯಮಯವಾದ ಸಂಗೀತೋತ್ಸವ, ಮೂವತ್ತರಿಂದ ನಲ್ವತ್ತು ದಿನಗಳು ನಡೆಯುತ್ತವೆ. ಸಂಗೀತಲೋಕದ ಅತ್ಯುತ್ತಮರೆಲ್ಲ ಇಲ್ಲಿ ಕಾಣಿಸಿಕೊಳ್ಳುತ್ತಾರೆ. ಹೀಗೆಯೇ ಇಡೀ ನವಂಬರ್ ತಿಂಗಳು ಕನ್ನಡ ರಾಜ್ಯೋತ್ಸವ ಆಚರಣೆ ಅಂಗವಾಗಿ ಸಂಗೀತ-ಸಾಂಸ್ಕೃತಿಕ ಕಾರ್ಯಕ್ರಮಗಳು ಇರುತ್ತವೆ. ಶೇಷಾದ್ರಿಪುರ ಕಾಲೇಜ್-ಫೋರ್ಟ್‌ಹೈಸ್ಕೂಲ್ ಮೈದಾನಗಳಲ್ಲಿ ದೊಡ್ಡದಾಗಿ ನಡೆಯುವ ರಾಮೋತ್ಸವ ಸಂಗೀತೋತ್ಸವಕ್ಕೆ ಐವತ್ತು ವರ್ಷಗಳು ದಾಟಿವೆ. ಗಣೇಶೋತ್ಸವ ಮತ್ತು ರಾಜ್ಯೋತ್ಸವ ಕಾರ್ಯಕ್ರಮಗಳು ನೂರಾರು ತಾಣಗಳಲ್ಲಿ ವೈವಿಧ್ಯಮಯವಾಗಿ ನಡೆಯುತ್ತವೆ. ರಂಗಭೂಮಿ-ಸಿನಿಮಾ ಕಲಾವಿದರನ್ನು ಹತ್ತಿರದಿಂದ ನೋಡಬಹುದು.

ಮಾರ್ಚ್-ಏಪ್ರಿಲ್ ತಿಂಗಳು ಸಮಯದಲ್ಲಿ ನಡೆಯುವ 'ಬೆಂಗಳೂರು ಕರಗ ಉತ್ಸವ', ಅಲಸೂರು 'ಸೋಮೇಶ್ವರ ತೇರು ಉತ್ಸವ', ಮತ್ತು ನವಂಬರ್-ಡಿಸಂಬರ್ ಕಾಲದಲ್ಲಿ ವಿಶ್ವೇಶ್ವರಪುರದಲ್ಲಿ ನಡೆಯುವ 'ಶ್ರೀಸುಬ್ರಹ್ಮಣ್ಯ ತೇರು', ಮತ್ತು ಪ್ರತಿ ವರ್ಷ ೮ ಸೆಪ್ಟಂಬರ್ ಶಿವಾಜಿನಗರ ಪ್ರದೇಶದಲ್ಲಿ ನಡೆಯುವ ಸಂತ ಮೇರಿ ಉತ್ಸವ ಮತ್ತು ಡಿಸಂಬರ್ ೨೫ರ ಕ್ರಿಸ್‌ಮಸ್ ಸಮಯದಲ್ಲಿ ಶಿವಾಜಿನಗರದ ವೈಭವ-ಇವೆಲ್ಲವೂ ಬೆಂಗಳೂರಿನ ಸಾಂಸ್ಕೃತಿಕ ಹೆಗ್ಗುರುತುಗಳು.

ಪ್ರತಿವರ್ಷ ೨೬, ಜನವರಿ ಮತ್ತು ೧೫ ಆಗಸ್ಟ್ ದಿನಗಳಂದು ಪ್ರಾರಂಭವಾಗುವ ಲಾಲ್‌ಬಾಗ್ ಫಲಪುಷ್ಪ ಪ್ರದರ್ಶನ ಬೆಂಗಳೂರಿನದೊಂದು ಹೆಮ್ಮೆಯ ಸೊಬಗು. ಬೆಂಗಳೂರಿಗರಿಗೆ ಹೂತೋಟಗಳು-ಹಸಿರು-ಹಣ್ಣು ಎಷ್ಟು ಪ್ರಿಯ ಎನ್ನುವುದನ್ನಿಲ್ಲಿ ಕಾಣಬಹುದು.

ರಾಜಾಜಿನಗರ - ಮಲ್ಲೇಶ್ವರ ಮಾರ್ಗ

ಶೇಷಾದ್ರಿಪುರ- ಕೆಂಪೇಗೌಡ ರಸ್ತೆ ಸುತ್ತಮುತ್ತ

ವಿಜಯನಗರ
ಚಂದ್ರ ಬಡಾವಣೆ
ಶಿವಾಜಿನಗರ
ಮಲ್ಲೇಶ್ವರ
ಸುಬ್ರಹ್ಮಣ್ಯನಗರ
ಗಾಂಧಿಬಜಾರ್
ಬನಶಂಕರಿ
ಜಯನಗರ
ಬನಶಂಕರಿ ೨ನೇ ಹಂತ
ಬನಶಂಕರಿ ೩ನೇ ಹಂತ
ಪದ್ಮನಾಭನಗರ
ಹನುಮಂತನಗರ
ಗವಿಪುರ
ಕೆಂಪೇಗೌಡ ನಗರ
ಶಂಕರಪುರ
ಚಾಮರಾಜಪೇಟೆ
ಬಸವನಗುಡಿ
ಗಾಂಧಿಬಜಾರ್ ಮುಖ್ಯರಸ್ತೆ

ಮಹಾತ್ಮಾಗಾಂಧಿ ರಸ್ತೆ ಸುತ್ತಮುತ್ತ

೬. ಸಂಚಾರ, ಬೆಂಗಳೂರು!

ಈಗ ಬೆಂಗಳೂರು ಒಂದು ರೀತಿ ಆಧುನಿಕ ನಗರ, ಭಾರತದ ಪ್ರಮುಖ ಮಹಾನಗರ, ಪ್ರಪಂಚದ ಅತ್ಯಂತ ಜನಪ್ರಿಯ ನಗರಗಳಲ್ಲಿ ಒಂದು.

ಈ ನಗರದಲ್ಲಿ ನೀವು ನೋಡುವುದೇನಿದೆ?

ನಾಲ್ಕೂವರೆ ಶತಮಾನಗಳು ಬರೀ ಐತಿಹಾಸಿಕ ಆಗುಹೋಗುಗಳಿಂದಲೇ ನಡೆದು ಬಂದಿದ್ದರೂ, ಬೆಂಗಳೂರಿನಲ್ಲಿ ಐತಿಹಾಸಿಕವಾಗಿ ನೋಡುವುದು ಹೆಚ್ಚು ಇಲ್ಲ. ನೀವು ನೋಡುವುದೆಲ್ಲ ಈಗಿನ ಬೆಂಗಳೂರು -ಈಚಿನ ಒಂದು ನೂರು ವರ್ಷದಲ್ಲಿ ಬೆಳೆದುಬಂದ ಬೆಂಗಳೂರು. ಹೀಗಾಗಿ ನೀವು ಒಂದೆರಡು ದಿವಸ ಬೆಂಗಳೂರಿನಲ್ಲಿ ಅಡ್ಡಾಡಿದರೆ ನಿಮಗೆ ಬೆಂಗಳೂರು ನಗರದ ಅನುಭವ- ವಾಗುತ್ತದೆ.

ನೀವು ಯಾವ ಬಡಾವಣೆಯಲ್ಲಿದ್ದರೂ ಮೆಜೆಸ್ಟಿಕ್ ಬಸ್ ಸ್ಟಾಂಡ್‌ಗೆ ಬಸ್ ಸಿಗುತ್ತದೆ. ಆಟೋದಲ್ಲಿ ಹತ್ತಿ ಹೋದರಂತೂ ಸರಿಯೆ. ಅಥವಾ, ನಿಮ್ಮವರದೇ ಕಾರು ಇದ್ದರೆ ಸಮಸ್ಯೆಯೇ ಇಲ್ಲ.

ಸಂಜೆಯ ಬೆಂಗಳೂರನ್ನು ನೀವು ಕಾಣಬೇಕಾದರೆ, ಅನುಭವಿಸಬೇಕಾದರೆ, ಮೆಜೆಸ್ಟಿಕ್ ಬಸ್ ಸ್ಟಾಂಡ್‌ನಿಂದ ಹೆಜ್ಜೆಹಾಕಿ ಕಪಾಲಿ ಟಾಕೀಸ್ ಕಡೆಗೆ ಬನ್ನಿರಿ. ಅದು ಸುಬೇದಾರ ಛತ್ರಂ ರಸ್ತೆ. ಹಿಂದಕ್ಕೆ ಹೋದರೆ, ಆನಂದರಾವ್ ಸರ್ಕಲ್, ಶೇಷಾದ್ರಿಪುರಕ್ಕೆ ಹೋಗುತ್ತದೆ. ಬಲಗಡೆ ಮುಂದಕ್ಕೆ ಹೋದರೆ ನಿಮಗೆ ಕೆಂಪೇಗೌಡ ರಸ್ತೆ ಬರುತ್ತದೆ. ನಾಲ್ಕು ಹೆಜ್ಜೆ ಹಾಕುತ್ತಿದ್ದಂತೆಯೇ ನಿಮಗೆ ಬೆಂಗಳೂರು ನಗರ ದೇವತೆ ಅಣ್ಣಮ್ಮನ ಗುಡಿ ಸಿಗುತ್ತದೆ. ಇದು ತುಂಬಾ ಪುರಾತನವಾದ ದೇವಾಲಯ. ಕೆಂಪೇಗೌಡ ಅಥವಾ ಅವನಿಗೂ ಹಿಂದಿನ ಕಾಲದ್ದಿರಬಹುದು. ಊರಿನಲ್ಲಿ ಸಾಂಕ್ರಾಮಿಕ ರೋಗಗಳು ಹರಡದಂತೆ ಪ್ರಜೆಗಳ ಕ್ಷೇಮ- ಆರೋಗ್ಯಗಳನ್ನು ನೋಡಿಕೊಳ್ಳುತ್ತಿರುವ ದೇವತೆ. ಇಲ್ಲಿ ಪ್ರತಿ ಮಂಗಳವಾರ ಶುಕ್ರವಾರ ವಿಶೇಷ ಪೂಜೆಗಳು ನಡೆಯುತ್ತದೆ. ಅಣ್ಣಮ್ಮನ ಗುಡಿಯೊಳಗೆ ಹೋಗಿಬಂದು ನಮಸ್ಕಾರ ಹಾಕಿ ಆರೋಗ್ಯ-ಆಶೀರ್ವಾದ ಪಡೆದುಕೊಂಡು ಬನ್ನಿರಿ.

ಕೆಲವೇ ಹೆಜ್ಜೆಗಳನ್ನಿಟ್ಟಾಗ ಬಲಗಡೆ ಅಪರ್ಣ ಟಾಕೀಸ್ ಮತ್ತು ತ್ರಿವೇಣಿ ಟಾಕೀಸ್‌ಗಳು, ಎಡಗಡೆ (ಈಗ ಮುಚ್ಚಿರುವ) ಹಿಮಾಲಯಾ ಟಾಕೀಸ್‌ಗಳು ಸಿಗುತ್ತವೆ. ಇವನ್ನು ದಾಟಿ ಮುಂದೆ ಹೆಜ್ಜೆಯಿಡುತ್ತಿದ್ದಂತೆಯೇ ನಿಮಗೆ ಅಸಾಧ್ಯ ಜನಸಂದಣಿಯ-ವ್ಯಾಪಾರ ಚಟುವಟಿಕೆಗಳ ಕೆಂಪೇಗೌಡ ರಸ್ತೆ ಸಿಗುತ್ತದೆ. ಈ ತುದಿಯಿಂದ ಆ ತುದಿಯವರೆಗೆ (ಮೈಸೂರು ಬ್ಯಾಂಕ್ ಸರ್ಕಲ್) ಇಲ್ಲಿ ಏನಿದೆ, ಏನಿಲ್ಲ ಎಂದು ತಿಳಿದುಕೊಳ್ಳುವುದು ಬೆಂಗಳೂರಿಗರಿಗೇ ಸಾಧ್ಯವಾಗಿಲ್ಲ.

ಈ ಜನಲೋಕದಲ್ಲಿ ಹಾಯಾಗಿ ಓಡಾಡಿ, ಎಡಗಡೆ ಫುಟ್‌ಪಾತ್ ಮೇಲೆ ನಿಧಾನವಾಗಿ ನಡೆಯಿರಿ. ನಾಲ್ಕು ಹೆಜ್ಜೆ ಹಾಕುತ್ತಿದ್ದಂತೆಯೇ ನಿಮಗೆ ಫುಟ್‌ಪಾತ್ ವ್ಯಾಪಾರಿಗಳ ವೈವಿಧ್ಯಮಯ ಲೋಕ ಕಾಣಿಸುತ್ತದೆ. ಏನೇನು ಮಾರುತ್ತಿದ್ದಾರೆ ಎಂದು ನೋಡುತ್ತ ನಡೆಯಿರಿ. ಮುಂದೆ ಗುಪ್ತಾ ಬಿಲ್ಡಿಂಗ್ ಸಿಗುತ್ತದೆ. ಈ ಕಟ್ಟಡದ ಎಡರಸ್ತೆಯೇ ನಿಮ್ಮನ್ನು ಗಾಂಧಿನಗರಕ್ಕೆ ಕೊಂಡೊಯ್ಯುತ್ತದೆ. ಬೇಕಾದರೆ ಎಡಕ್ಕೆ ತಿರುಗಿ ಆ ರಸ್ತೆಯಲ್ಲಿ ನಡೆಯಿರಿ. ಬಳುವಳಿ ವಸ್ತುಗಳ-ಉಡುಪುಗಳ ಬೃಹತ್ ಮಳಿಗೆಗಳು ದಾಟಿ ನಡೆದಾಗ, ಎಡಗಡೆಯೇ ನಿಮಗೆ ಭಾರತದ ಅತಿ ದೊಡ್ಡ ಪುಸ್ತಕ ಮಳಿಗೆಯೆಂದು ಖ್ಯಾತವಾದ 'ಸಪ್ನಾ ಬುಕ್ ಸ್ಟಾಲ್' ಸಿಗುತ್ತದೆ. ಒಳನಡೆದು ಆ ಪುಸ್ತಕ ಲೋಕದಲ್ಲಿ ಸಂಚರಿಸಿರಿ. ಕನ್ನಡ ಪುಸ್ತಕಗಳಿಗೆಂದೇ ಒಂದು ಮಾಳಿಗೆ ಇದೆ. ಮಕ್ಕಳಿಗೆಂದೇ ಬೇಕಾದಷ್ಟು ಪುಸ್ತಕಗಳ ರಾಶಿ ಇದೆ. ಷಾ ಸೋದರರ ಸಾಹಸ ಇದು. ಒಂದಿಷ್ಟು ಪುಸ್ತಕಗಳನ್ನು ಕೊಂಡಿರಲ್ಲವೇ? ಸರಿ ಹೊರ ಬನ್ನಿ. ಮುಖ್ಯರಸ್ತೆಯಲ್ಲಿ ಕೆಲವೇ ಹೆಜ್ಜೆ ಹಾಕಿದಾಗ ನಿಮಗೆ ವಿದೇಶೀ ವಸ್ತುಗಳ ಮಾರ್ಕೆಟ್ ಸಿಗುತ್ತದೆ. ಹಾಂಕಾಂಗ್ ಬಜಾರ್ ಎನ್ನುವ ಕಡೆ ಒಳಹೊಕ್ಕು ನೋಡಿಕೊಂಡು ಬನ್ನಿ. ಇಲ್ಲಿ ಎಲೆಕ್ಟ್ರಾನಿಕ್ ವಸ್ತುವಿಸ್ತಾರವನ್ನು ನೋಡಿ ನೀವು ಬೆಚ್ಚಬಹುದು, ಬೆರಗಾಗಬಹುದು. ಏನಾದರೂ ಕೊಳ್ಳುವ ಹಾಗಿದ್ದರೆ ಮಾತ್ರ ವಿಚಾರಿಸಿ, ಇಲ್ಲದಿದ್ದರೆ ವಿಚಾರಿಸಬೇಡಿ. ಹಾಗೇ ನೋಡುತ್ತ ಮುಂದೆ ನಡೆದು ಹೊರಬನ್ನಿರಿ. ಈ ಮಾರುಕಟ್ಟೆಯ ಎದುರಿನಲ್ಲೆ ರಸ್ತೆಯಾಚೆಯೂ ಇಂಥದೇ ಒಂದು ವಿದೇಶಿ ಬಜಾರ್ ಇದೆ. ಬೇಕಾದರೆ ನೋಡಿಕೊಂಡು ಬನ್ನಿರಿ. ಈ ಸಾಲಿನ ಬಲಗಡೆ ತುದಿಯಲ್ಲಿ ಸುಪ್ರಸಿದ್ಧ 'ಸುಖಸಾಗರ್' ಹೋಟಲ್ ಇದೆ. ಈಗಿದನ್ನು ವಿಸ್ತರಿಸಿ ವೈವಿಧ್ಯಮಯ ಮಾಡಿಬಿಟ್ಟಿದ್ದಾರೆ. ಉತ್ತರ ಕರ್ನಾಟಕ ತಿಂಡಿತಿನಿಸು ಮತ್ತು ಗುಜರಾಥಿ ಊಟಕ್ಕೆ ಇದು ಜನಪ್ರಿಯ. ಮತ್ತೆ ಮೆಜೆಸ್ಟಿಕ್ ಕಡೆಗೆ ಹೆಜ್ಜೆಹಾಕಿ. ವಿದೇಶೀ ಮಾರುಕಟ್ಟೆ ದಾಟಿ ಎಡರಸ್ತೆಯಲ್ಲಿ ಬೆಂಗಳೂರಿನ ಜನಪ್ರಿಯ, ಸುಂದರ, ಸುಸಜ್ಜಿತ, ಆತ್ಮೀಯ ವಾತಾವರಣದ 'ಕಾಮತ್ ಯಾತ್ರಿ ನಿವಾಸ' ಇದೆ. ಇಲ್ಲಿ ಜೋಳದ ರೊಟ್ಟಿ ಊಟ ಅತಿ ಜನಪ್ರಿಯ. ಇಲ್ಲಿ ಸೀಟಿಗಾಗಿ ಕಾಯಬೇಕು. ಮತ್ತೆ ಮುಖ್ಯರಸ್ತೆಗೆ ಬಂದು 'ತ್ರಿಭುವನ್'

ಟಾಕೀಸ್ ದಾಟಿಬಂದರೆ, ಕೆಂಪೇಗೌಡ ರಸ್ತೆಗೆ ಬರುತ್ತೀರಿ. ಎಡಕ್ಕೆ ತಿರುಗಿ ಫುಟ್‌ಪಾತ್‌ನಲ್ಲಿ ನಡೆಯಿರಿ. ಜನತಾಬಜಾರ್-ಸರ್ಕಾರದ ಸರ್ವವಸ್ತು ಭಂಡಾರ. ಓಡಾಡಿ ಬನ್ನಿ, ಒಳ್ಳೆಯ ಅನುಭವ. ನಿಮಗಿಲ್ಲಿ ಏನಾದರೂ ಕೊಳ್ಳಬೇಕೆನಿಸಬಹುದು.

ಮತ್ತೆ ಕೆಂಪೇಗೌಡ ರಸ್ತೆಗೆ ಬಂದು ನಡೆದಾಗ, ಮುಂದೆ 'ಸಾಗರ್' ಟಾಕೀಸ್, ಹರಿರಾಮ್ ಹೋಟಲ್, ಸ್ಟೇಟ್ಸ್ ಟಾಕೀಸ್, ಕಿಡ್ಡೀಸ್ ಕಾರ್ನರ್ ಸಿಗುತ್ತದೆ. ಇಲ್ಲಿ ಮಕ್ಕಳ ಸಿದ್ಧ ಉಡುಪುಗಳು ದೊರಕುತ್ತವೆ. ಈ ಫುಟ್‌ಪಾತ್ ಬದಿಯ ತುದಿಯಲ್ಲಿ ಸರ್ಕಾರಿ ಕಾನೂನು ಕಾಲೇಜ್ ಇದೆ. ಇಲ್ಲಿಗೆ ಕೆಂಪೇಗೌಡ ರಸ್ತೆಯ ಬಂದು ಬದಿ ಮುಗಿಯಿತು. ಇಲ್ಲಿ ರಸ್ತೆ ದಾಟಿ (ಪೋಲಿಸರಿದ್ದಾರೆ, ಹಸಿರು-ಕೆಂಪು ದೀಪಗಳಿವೆ, ಅತಿ ವೇಗವಾಗಿ ವಾಹನಗಳು ಚಲಿಸುತ್ತವೆ, ನೋಡಿ ಹೆಜ್ಜೆ ಹಾಕಿರಿ) ಎದುರಿನ ಫುಟ್‌ಪಾತ್‌ಗೆ ಬನ್ನಿರಿ. ಅದೇ ಬೆಂಗಳೂರಿನ ಹೆಮ್ಮೆಯ ನಮ್ಮದೇ ಬ್ಯಾಂಕ್, 'ಮೈಸೂರು ಬ್ಯಾಂಕ್' ಹೊಸ ಕಟ್ಟಡ ಕಾಣಿಸುತ್ತದೆ. ಇದರ ಹಿಂದೆಯೇ ಸರ್ ಎಂ. ವಿಶ್ವೇಶ್ವರಯ್ಯನವರು ಪ್ರಾರಂಭಿಸಿದ (೧೯೧೩) ಹಳೆಯ ಮೈಸೂರು ಬ್ಯಾಂಕ್ ಕಟ್ಟಡವಿದೆ. ಇದೇ ಮೈಸೂರು ಬ್ಯಾಂಕ್ ಸರ್ಕಲ್. ಅಲ್ಲೇ ರಸ್ತೆ ನಡುವೆ ದೇವಾಲಯ ಸಮೂಹವಿದೆ. ಇದು ಕೆಂಪೇಗೌಡ ನಿರ್ಮಿಸಿದ್ದು. ಬೆಂಗಳೂರು ನಗರ ಕಟ್ಟ ತೊಡಗಿದಾಗ ಇದೊಂದು ಎಲ್ಲೆ-ಉತ್ತರ ಭಾಗ, ಯಲಹಂಕ ಬಾಗಿಲು ಎಂದು ನಾಮಕರಣವಾಗಿತ್ತು. ಇದರ ಹಿಂದಿನ ರಸ್ತೆಯೇ ಅವೆನ್ಯೂ ರಸ್ತೆ-ನೇರವಾಗಿ ಸಿಟಿ ಮಾರ್ಕೆಟ್‌ಗೆ ಹೋಗುತ್ತದೆ. ಅಲ್ಲಿ ಬೆಂಗಳೂರು ಕೆಂಪೇಗೌಡನ ಇನ್ನೊಂದು ಕೋಟೆ ಬಾಗಿಲು, ಆನೆಕಲ್ ಬಾಗಿಲು, ದಕ್ಷಿಣ ಭಾಗ ಸಿಗುತ್ತದೆ.

ಈ ಅವೆನ್ಯೂ ರಸ್ತೆಯೂ ಅತ್ಯಂತ ಜನಪ್ರಿಯ ರಸ್ತೆ. ಇದು ಕೆಂಪೇಗೌಡನ ಕಾಲದಲ್ಲಿ ದೊಡ್ಡ ಪೇಟೆ ಎಂದು ಬಹಳ ಪ್ರಮುಖವಾದ ವ್ಯಾಪಾರ ಮಳಿಗೆಗಳು ತುಂಬಿದ್ದ ರಸ್ತೆ- ಮುಖ್ಯವಾಗಿ ಶ್ರೇಷ್ಠಿ (ಶೆಟ್ಟಿಗಳು) ಸಮುದಾಯದ ರಸ್ತೆ. ಸುಮಾರು ಎರಡು ಕಿಲೋ ಮೀಟರ್ ಉದ್ದ ಇರಬಹುದು. ಎಡಬಲ ಬದಿಗಳಲ್ಲಿ ಸಾವಿರಾರು ಅಂಗಡಿಗಳಿವೆ. ಮುಖ್ಯವಾಗಿ ಬೆಳ್ಳಿ-ಬಂಗಾರದ ಚಿನ್ನಾಭರಣದ ಅಂಗಡಿಗಳು ಇಲ್ಲಿ ವಂಶಪಾರಂಪರ್ಯವಾಗಿ ನಡೆದುಬಂದಿದೆ. ಬೆಂಗಳೂರಿನ ಸುಪ್ರಸಿದ್ಧ ವರ್ತಕರು ಪ್ರಾರಂಭಿಸಿದ ಬಂಗಾರದಂಗಡಿಗಳಿವೆ. ಈಗಂತೂ ಅವು ಈಗಿನ ತಲೆಮಾರಿನವರ ಆಡಳಿತದಲ್ಲಿ 'ಶೋರೂಂ'ಗಳಾಗಿ ಕಣ್ಣು ಕುಕ್ಕುವಂತೆ ರಾರಾಜಿಸುತ್ತವೆ. ಈ ಅವೆನ್ಯೂ ರಸ್ತೆಯ ಎಡಬಲ ಬದಿಗಳ ಬೀದಿ ತಿರುವುಗಳೇ, ಕೆಂಪೇಗೌಡ ಸ್ಥಾಪಿಸಿದ 'ಬೆಂಗಳೂರು ಪೇಟೆ'. ಎಲ್ಲ ಪೇಟೆಗಳಿಗೂ ಪ್ರವೇಶಿಸಲು ಇಲ್ಲಿ ರಸ್ತೆಗಳಿವೆ.

ಈಗ ಮೈಸೂರು ಬ್ಯಾಂಕ್ ಫುಟ್‌ಪಾತ್‌ನಿಂದ ಕೆಂಪೇಗೌಡ ರಸ್ತೆಯೊಳಗೆ ಇಳಿಯೋಣ.

ಆಧುನಿಕ ಬ್ಯಾಂಕ್ ಕಟ್ಟಡದ ಮುಂದೆ ಆಧುನಿಕ ವ್ಯಾಪಾರೀ ಮಳಿಗೆಗಳು ಸಿಗುತ್ತವೆ. ಎಡಬೀದಿಯಲ್ಲಿ 'ಮೇನಕಾ' ಸಿನಿಮಾ ಮಂದಿರವಿದೆ. ಮೂಲೆಯಲ್ಲಿ 'ಬೆಂಗಳೂರು ಗೇಟ್ ಹೋಟಲ್' (ಹಿಂದೆ ಇದು 'ನಿಯೋ ಮೈಸೂರು ಕೆಫೆ' ಆಗಿತ್ತು) ಇದೆ. ಹಾಗೆಯೇ ನಡೆದರೆ, ಆ ಜನಪ್ರವಾಹದ ನಡುವೆ ಹಾದುಹಾದು ನಡೆಯಬೇಕು (ನಿಮ್ಮ ಜೇಬುಗಳು-ಪರ್ಸ್‌ಗಳು ಜೋಕೆ!) ಬ್ಯಾಂಕ್ ಕಟ್ಟಡಗಳು ದಾಟಿದ ಮೇಲೆ ಎದುರು ಮೂಲೆಯಲ್ಲಿ 'ಕೆಂಪೇಗೌಡ ಟಾಕೀಸ್' ಕಾಣಿಸುತ್ತದೆ. ಇದರ ಹಿಂದೆ 'ಅಭಿನಯ ಟಾಕೀಸ್' ಇದೆ. ಈ ಎಡರಸ್ತೆ ಆರ್ಕಾಟ್ ಶ್ರೀನಿವಾಸಾಚಾರ್ ಬೀದಿ. ಇದು ಎಲೆಕ್ಟ್ರಿಕ್-ಎಲೆಕ್ಟ್ರಾನಿಕ್-ವಸ್ತ್ರದ ಶೋರೂಂಗಳು- ಮಹಾಮಳಿಗೆಗಳಿರುವ ರಸ್ತೆ-ಕೆಂಪೇಗೌಡ ರಸ್ತೆಯಲ್ಲಿಯೇ ಮುಂದುವರಿದರೆ, ಕಲ್ಪನಾ ಟಾಕೀಸ್, ಬ್ರಾಡ್‌ವೇ ಹೋಟಲ್ ದಾಟಿದ ಮೇಲೆ ನಿಮಗೆ ಅದ್ಭುತ ವ್ಯಾಪಾರ ಪ್ರಪಂಚದ 'ಅಲಂಕಾರ್ ಪ್ಲಾಜಾ' ಸಿಗುತ್ತದೆ. ಹಿಂದೆ 'ಅಲಂಕಾರ್' ಎಂದೊಂದು ಅತಿ ಸುಂದರ-ಅಭಿರುಚಿಯ ಸಿನಿಮಾ ಮಂದಿರ ಇದ್ದ ಜಾಗ ಇದು. ಈಗ ಅದು ಹೋಗಿ ಕಾಂಪ್ಲೆಕ್ಸ್ ಆಗಿದೆ. ನೂರಾರು ಅಂಗಡಿಗಳಿವೆ -ಇಲ್ಲಿ ಏನು ಸಿಗುತ್ತದೆ- ಸಿಗುವುದಿಲ್ಲ, ಎಂದು ಖಂಡಿತ ಹೇಳಲಾಗುವುದಿಲ್ಲ. ಓಡಾಡಿ ನೋಡಿ, ಅನುಭವ ಪಡೆದುಕೊಳ್ಳಿ.

'ಅಲಂಕಾರ್' ವೈಭವದ ಮುಂದೆ ಸಂತೋಷ್-ಸಪ್ನಾ-ನರ್ತಕಿ ಸಿನಿಮಾ ಮಂದಿರಗಳು ಇರುವ ಸಂಕೀರ್ಣ ಸಿಗುತ್ತದೆ. ಇಲ್ಲಿ ಏನಿಲ್ಲವೆಂದರೂ ಐದಾರು ವಿವಿಧ ಸಿನಿಮಾಗಳು ನಡೆಯುತ್ತಿರುತ್ತವೆ- ಮುಖ್ಯವಾಗಿ ಕನ್ನಡ, ಹಿಂದಿ ಸಿನಿಮಾಗಳು ಮಾತ್ರ. ಸುಂದರ-ಆಧುನಿಕ ಮಂದಿರಗಳು. ಖಂಡಿತ ಇಲ್ಲಿಗೆ ನೀವೊಂದು ಸಲ ಭೇಟಿ ಕೊಡಲೇಬೇಕು. ಇಲ್ಲಿಂದ ಮುಂದೆ ನಡೆದರೆ ಅಂಗಡಿಗಳು, 'ಆರ್ಯಭವನ್ ಸ್ವೀಟ್ಸ್' ಮಳಿಗೆ ಸಿಗುತ್ತದೆ. ಇಲ್ಲಿ ಎಲ್ಲವೂ ಅತ್ಯುತ್ತಮ ಮಟ್ಟದ್ದು- ಕಣ್ಣಿಗೆ ಕಾಣಿಸಿದ ಸಿಹಿ-ಖಾರ ಆಸ್ವಾದಿಸಿರಿ.

ಇಲ್ಲಿಗೆ ಕೆಂಪೇಗೌಡ ರಸ್ತೆ ಮುಗಿಯುತ್ತದೆ. ಜನರಾಶಿ, ವಸ್ತುವೈವಿಧ್ಯ ರಾಶಿ, ಕಟ್ಟಡಗಳು, ವ್ಯಾಪಾರಗಳು, ಸಿನಿಮಾ ಮಂದಿರಗಳು, ಹೋಟಲ್‌ಗಳು, ತಿನಿಸು ವೈವಿಧ್ಯ-ನಿಮಗೊಂದು ಹೊಸ ಅನುಭವವನ್ನು ಕೊಡಿರಬಹುದಲ್ಲವೇ?

ಇನ್ನೂ ಸಮಯವಿದೆ, ಓಡಾಡಲು ನಿಮಗೆ ಶಕ್ತಿ ಇದೆ ಅನ್ನಿಸಿದರೆ ಆರ್ಯಭವನ್ ಮಳಿಗೆಯಿಂದ ಮುಂದೆ ನಡೆದು ಎಡಕ್ಕೆ ತಿರುಗಿ ನಡೆಯಿರಿ. ಎಡಗಡೆ ಪ್ರಾರಂಭದ ಕಟ್ಟಡದಲ್ಲೇ 'ಕೊರವಂಜಿ' ಪಿತಾಮಹ 'ರಾಶಿ' (ಡಾ. ಆರ್. ಶಿವರಾಂ) ಅವರು

ಪ್ರಾರಂಭಿಸಿದ 'ಡಾಕ್ಟರ್ ಶಾಪ್' -ಸಿಟಿ ಕ್ಲಿನಿಕ್ ಇದೆ. ಇಲ್ಲಿಂದ ಮುಂದೆ 'ಮೆಜೆಸ್ಟಿಕ್ ಟಾಕೀಸ್'. ಅಲ್ಲಿಂದ ನಡೆದರೆ, ಬಳೇಪೇಟೆ ಪ್ರವೇಶಿಸುತ್ತೀರಿ. ಇಲ್ಲಿಂದ ಮುಂದೆ ಎಲ್ಲವೂ ಕೆಂಪೇಗೌಡನ ಬೆಂಗಳೂರು, ಇದು ಅಲ್ಲಲ್ಲಿ ಆಧುನಿಕಗೊಂಡಿದ್ದರೂ, ಕೆಲ ಕಡೆಗಳಲ್ಲಿ ನೂರಿನ್ನೂರು ವರ್ಷಗಳ ಕಟ್ಟಡಗಳು ಇನ್ನೂ ಉಳಿದಿವೆ. ಕೆಂಪೇಗೌಡನ ಕಾಲದ ದೇವಾಲಯಗಳಿವೆ. ಇಲ್ಲಿ ನೇರವಾಗಿ ನಡೆದರೆ ಎಡ-ಬಲ ಬದಿಗಳಲ್ಲಿ ಅಂಗಡಿ ಸ್ಟಾಲುಗಳು, ವಸ್ತು ವೈವಿಧ್ಯ ಅಚ್ಚರಿಯುಂಟು ಮಾಡುತ್ತದೆ. ಒಂದಿಷ್ಟು ನಡೆದುಬಂದರೆ, ಎಡಬದಿಯಲ್ಲಿ 'ಮಲಬಾರ್ ಲಾಡ್ಜ್', ಬಲಬದಿಯಲ್ಲಿ 'ಉಡುಪಿ ಶ್ರೀಕೃಷ್ಣ ಭವನ್' ಇವೆ. ಎರಡೂ ವಿಶೇಷ ಹೋಟಲ್‌ಗಳು -ನೀವು ಎಲ್ಲಿ ಬೇಕಾದರೂ ಒಳಹೊಕ್ಕು ಕಾಫಿ-ತಿಂಡಿ ಸೇವಿಸಬಹುದು.

'ಉಡುಪಿ ಶ್ರೀಕೃಷ್ಣ ಭವನ್'ನಿಂದ ಕೆಲ ಹೆಜ್ಜೆಗಳು ಹಾಕಿದರೆ ಬಳೇಪೇಟೆ ಸರ್ಕಲ್. ಬಲಗಡೆ ಮೂಲೆ ಕಟ್ಟಡದ ಮಹಡಿಯಲ್ಲಿ, ಬೆಂಗಳೂರಿನ ಅತಿ ಹಿಂದಿನ- ಜನಪ್ರಿಯ ಕನ್ನಡ ಪುಸ್ತಕ ಪ್ರಕಾಶನ-ಮಾರಾಟ ತಾಣ 'ಗೀತಾ ಏಜೆನ್ಸೀಸ್' ಇದೆ. ಕೆಲ ಮೆಟ್ಟಿಲುಗಳನ್ನು ಹತ್ತಿಹೋಗಿ ಕನ್ನಡ ಪುಸ್ತಕ ಲೋಕವನ್ನು ನೋಡಿರಿ. ನಿಮ್ಮ ಅಭಿಮಾನದ ಲೇಖಕರ ಪುಸ್ತಕಗಳನ್ನು ಕೊಳ್ಳಿರಿ. ಮಾಲಿಕರಾದ ಶ್ರೀರಾಮಚಂದ್ರಯ್ಯ ಶ್ರೇಷ್ಠಿಗಳನ್ನು ಮಾತನಾಡಿಸಿ. ತುಂಬಾ ಪ್ರೀತಿವಿಶ್ವಾಸಗಳಿಂದ ಮಾತನಾಡಿಸುತ್ತಾರೆ.

ರಾತ್ರಿಯಾಗುತ್ತಿದೆಯಲ್ಲವೇ?

ಆಟೋರಿಕ್ಷಾದಲ್ಲಿ ಹೋಗುವ ಹಾಗಿದ್ದರೆ, ಬಳೇಪೇಟೆ ಸರ್ಕಲ್‌ನಲ್ಲಿಯೆ ಆಟೋಗಳು ಸಿಗುತ್ತವೆ. ಅಲ್ಲಿಂದ, ಚಾಮರಾಜಪೇಟೆ-ಬಸವನಗುಡಿ-ಜಯನಗರ ಅಥವಾ ಶೇಷಾದ್ರಿಪುರ, ಮಲ್ಲೇಶ್ವರ, ವಿಜಯನಗರ, ರಾಜಾಜಿನಗರ, ಬಸವೇಶ್ವರ ನಗರ ಬಡಾವಣೆಗಳಿಗೆ ಹೋಗಬಹುದು. ೩೦ ರಿಂದ ೪೦ ರೂಪಾಯಿಗಳು ಮೀಟರ್ ಚಾರ್ಜ್ ಆಗಬಹುದು.

ಬಸ್‌ನಲ್ಲಿಯೇ ಹೋಗುವುದು ಎಂದು ತೀರ್ಮಾನಿಸಿದರೆ, ಬಳೇಪೇಟೆಯಲ್ಲಿ 'ರೈಟ್ ಎಬೌಟ್ ಟರ್ನ್' ಮಾಡಿ ಬಂದ ದಾರಿಯಲ್ಲಿಯೇ ನಡೆದುಬಂದರೆ, ತುದಿಯಲ್ಲಿ 'ಕೆಂಗೇರಿ ಗೇಟ್ ಪೋಲಿಸ್ ಸ್ಟೇಷನ್' ಸಿಗುತ್ತದೆ. ಈ ತಾಣ ಕೆಂಪೇಗೌಡನ ಬೆಂಗಳೂರಿನ ಕೋಟೆಯ 'ಕೆಂಗೇರಿ ಬಾಗಿಲು' ಭಾಗ. ಇಲ್ಲಿಂದ ಮುಂದೆ ನಡೆದರೆ 'ಬೆಂಗಳೂರು ಬಸ್ ನಿಲ್ದಾಣ' ಸಿಗುತ್ತದೆ. ಅಲ್ಲಿ ನಿಮ್ಮ ಬಡಾವಣೆಗೆ ಬೇಕಾದಷ್ಟು ಬಸ್‌ಗಳು ಸಿಗುತ್ತವೆ. ಅಲ್ಲಿನ ಜನಸಂದಣಿ ನೋಡಿ ಬೆದರಬೇಡಿ. ಕ್ಯೂನಲ್ಲಿ ನಿಂತು ಆರಾಮವಾಗಿ ಬಸ್ ಹತ್ತಿ ಮನೆಗೆ ಹೋಗಿರಿ. ಪುಷ್ಪಕ್ ವಿಶೇಷ ಬಸ್‌ಗಳಿಗೆ 'ಕ್ಯೂ' ಇರುವುದಿಲ್ಲ. ಹಾಗೇ ಹತ್ತಬಹುದು.

* * *

ಹೀಗೆಯೇ ಇನ್ನೊಂದು ದಿವಸ ಮೆಜೆಸ್ಟಿಕ್ ಬಸ್ ಸ್ಟಾಂಡ್‌ನಲ್ಲಿ ಇಳಿದು ಬಳೇಪೇಟೆ ರಸ್ತೆಗೆ ನಡೆಯಿರಿ. ಬೆಳಗಿನ ಹತ್ತು ಘಂಟೆ ವೇಳೆಗೆ ಬಂದರೆ ಒಂದಿಷ್ಟು ಓಡಾಡಲು ಸಮಯ ಸಿಗುತ್ತದೆ.

ಬಳೇಪೇಟೆಯ ಸುತ್ತಮುತ್ತಲ ಪೇಟೆ ಬೀದಿಗಳೇ ೧೫೩೭ರಲ್ಲಿ ಕೆಂಪೇಗೌಡ ನಿರ್ಮಿಸಿದ ಬೆಂಗಳೂರು -ಈಗ ಇದು ಒಂದು ರೀತಿ ನಗರದ ಹೃದಯ ಭಾಗ. ಬಳೇಪೇಟೆಯಿಂದ ನಡೆದು 'ಗೀತಾ ಏಜೆನ್ಸಿ' ಇರುವ ಸರ್ಕಲ್‌ಗೆ ಬಂದರೆ ಬಲಗಡೆ ತಿರುಗಿದರೆ ಅರಳೇಪೇಟೆಗೆ ಹೋಗುತ್ತದೆ, ಎಡಗಡೆಗೆ ತಿರುಗಿದರೆ ಚಿಕ್ಕಪೇಟೆಗೆ ಹೋಗುತ್ತದೆ. ಸರ್ಕಲ್‌ನ ಬಲಭಾಗದ ಮೂಲೆಯಲ್ಲಿಯೇ ಕಾಶೀ ವಿಶ್ವೇಶ್ವರ ದೇವಾಲಯ ಇದೆ. ೧೫೦ ವರ್ಷಗಳಿಗೂ ಹಿಂದಿನ ದೇವಸ್ಥಾನ. ಅನೇಕ ದೈವವಿಗ್ರಹಗಳಿವೆ. ಪಂಚಲಿಂಗಗಳಿವೆ. ಸರ್ಕಲ್ ಬಲರಸ್ತೆಯಲ್ಲಿ ತಿರುಗಿ ನೇರವಾಗಿ ನಡೆದರೆ, ಬೆಂಗಳೂರಿನ ಹಳೆಯ ಕಾಲದ್ದು ಎನಿಸಿದ 'ದರ್ಗಾ-ಎ-ಷರೀಫ್' ದಾಟಿದ ಮೇಲೆ ಸಿಗುವ ರಸ್ತೆಯೇ ಕಾಟನ್ ಪೇಟೆ. ಇದು ಬಲರಸ್ತೆಯಲ್ಲಿ 'ಬೆಂಗಳೂರು ಸಿಟಿ ರೈಲ್ವೇ ಸ್ಟೇಷನ್'ಗೆ ಹೋಗುತ್ತದೆ; ಎಡರಸ್ತೆಯಲ್ಲಿ ಹೋದರೆ, ಚಾಮರಾಜಪೇಟೆ, ಬಸವನಗುಡಿ ಕಡೆಗೆ ಹೋಗುತ್ತದೆ. ಈ ದರ್ಗಾದ ಎದುರು ಸಾಲಿನ ಒಂದೊಂದು ಬೀದಿಗಳೂ ಒಂದೊಂದು ಪೇಟೆಗಳು: ಅಕ್ಕಿಪೇಟೆ, ತರಗುಪೇಟೆ, ಸುಲ್ತಾನ್ ಪೇಟೆ, ಮಾಮೂಲ್ ಪೇಟೆಗಳು ಸಿಗುತ್ತವೆ. ಇಲ್ಲೆಲ್ಲಾ ಓಡಾಡಿ ಅಲ್ಲಿಯ ವ್ಯಾಪಾರ ವಹಿವಾಟಿನ ಬದುಕನ್ನು ಕಂಡು, ಮತ್ತೆ ಬಳೇಪೇಟೆ ಸರ್ಕಲ್‌ಗೆ ಹಿಂತಿರುಗಿರಿ. ಹಿಂತಿರುಗಿದಾಗ ದರ್ಗಾದ ಪಕ್ಕದ ಬೀದಿಗೆ ಹೋಗಿ ತುಳಸೀ ತೋಟದಲ್ಲಿರುವ ಸುಂದರ ಬೆಣ್ಣೆ ಕೃಷ್ಣನನ್ನು ನೋಡಿಕೊಂಡು ಬನ್ನಿರಿ.

ಬಳೇಪೇಟೆ ಸರ್ಕಲ್‌ನಿಂದ ಮುಂದಕ್ಕೆ ಹಾಗೇ ಹೋದರೆ ಚಿಕ್ಕಪೇಟೆ ಸಿಗುತ್ತದೆ. ಇಲ್ಲಿ ಅಕ್ಕಪಕ್ಕ ವ್ಯಾಪಾರ ಮಳಿಗೆಗಳು, 'ವಿಜಯಲಕ್ಷ್ಮೀ' ಟಾಕೀಸ್ ಸಿಗುತ್ತವೆ. ಹಾಗೇ ಮುಂದೆ ಹೋದರೆ, ದೊಡ್ಡಪೇಟೆ ಸಿಗುತ್ತದೆ- ಇಲ್ಲಿ 'ಹೋಲ್‌ಸೇಲ್' ವ್ಯಾಪಾರದ ಅಂಗಡಿಗಳಿವೆ. ಅಲ್ಲೇ ಜೈನ್ ದೇವಾಲಯ, ಗುಜರಾಥಿ ದೇವಾಲಯ ಸಿಗುತ್ತದೆ. ಹಾಗೆಯೇ, ಅವೆನ್ಯೂ ರಸ್ತೆಯನ್ನೂ ದಾಟಿ ಮುಂದೆ ಹೋದರೆ ಇನ್ನಿಷ್ಟು ಪೇಟೆಗಳು ಸಿಗುತ್ತವೆ. ಸುಣಕಲ್ಲುಪೇಟೆ, ಕಬ್ಬನ್ ಪೇಟೆ, ನಗರ್ತರ ಪೇಟೆ, ತಾರಾಮಂಡಲ ಪೇಟೆ, ತಿಗಳರ ಪೇಟೆ, ಬಳ್ಳಾಪುರದ ಪೇಟೆ, ಕುಂಬಾರ ಪೇಟೆಗಳು ಸಿಗುತ್ತವೆ. ಇವೆಲ್ಲದರ ಅಂತ್ಯ-ಬೆಂಗಳೂರು ನಗರ ಕಾರ್ಪೊರೇಷನ್ ಕಛೇರಿಗೆ ತಲುಪುತ್ತದೆ. ನಗರ್ತರ ಪೇಟೆಯಲ್ಲಿ ಚಿನ್ನ, ಬೆಳ್ಳಿ, ರೇಷ್ಮೆ ಮೊದಲಾಗಿ ದೊಡ್ಡ ವ್ಯಾಪಾರದ ತಾಣಗಳಿವೆ.

ಈಗಿನ ಚಿಕ್ಕಪೇಟೆ ಬೀದಿ

ಆಧುನಿಕ ವಿನ್ಯಾಸದ ಕಟ್ಟಡ ಸಂಕೀರ್ಣ

ವಿದ್ಯಾರ್ಥಿ ಭವನ ಮುಚ್ಚಲಿದೆಯೇ!

ಹೋಟೆಲ್ ಮುಂದೆಯೂ ಸಹ್ಯ!

ಈ ಓಡಾಟದಲ್ಲಿ ನೀವು ನಗರೇಶ್ವರ ದೇವಸ್ಥಾನ, ಧರ್ಮರಾಯನ ಗುಡಿ, ಮಕ್ಕಳ ಬಸವಣ್ಣ ಗುಡಿ, ತುಪ್ಪದಾಂಜನೇಯನ ದೇವಸ್ಥಾನ ಮೊದಲಾದವನ್ನೆಲ್ಲ ನೋಡಬಹುದು.

ಮುಖ್ಯವಾಗಿ, ನಗರ್ತರ ಪೇಟೆ ಕೊನೆಗೊಳ್ಳುತ್ತಿದ್ದಂತೆಯೇ, ಬೆಂಗಳೂರಿನ ಅತಿ ಜನಪ್ರಿಯ ತಿಂಡಿತಿನಿಸು ತಾಣ **'ಗುಂಡಪ್ಪನ ಹೋಟಲ್'** ಸಿಗುತ್ತದೆ. ಇದು ಶುದ್ಧ ತುಪ್ಪದಿಂದ ಮಾಡಿದ ಸಿಹಿಗಳಿಗೆ ಖಾರಾ ತಿಂಡಿಗಳಿಗೆ ಬಹಳ ಪ್ರಸಿದ್ಧಿ. ಎಂಟಿಆರ್‌ನಷ್ಟು ಜನಪ್ರಿಯ. ಇಲ್ಲಿ ತಿಂಡಿ ತಿಂದು ಕಟ್ಟಿಸಿಕೊಂಡು ಮನೆಗೆ ಕೊಂಡೊಯ್ಯುತ್ತಾರೆ. ಊರೂರಿಗೆ ಪಾರ್ಸೆಲ್ ಕೊಂಡೊಯ್ಯುತ್ತಾರೆ. ಪ್ರಪಂಚದ ಬೆಂಗಳೂರಿನ ಜನ ಎಲ್ಲೇ ಇರಲಿ, ವಿದ್ಯಾರ್ಥಿ ಭವನ, ಎಂಟಿಆರ್, ಉಡುಪಿ ಶ್ರೀಕೃಷ್ಣ ಭವನ ಮತ್ತು ಗುಂಡಪ್ಪನ ಹೋಟಲ್‌ಗಳನ್ನು ಜ್ಞಾಪಿಸಿಕೊಳ್ಳುತ್ತಲೇ ಇರುತ್ತಾರೆ. ನಿಟ್ಟುಸಿರಿಳಿಸುತ್ತಲೇ ಇರುತ್ತಾರೆ. 'ಗುಂಡಪ್ಪನ ಹೋಟಲ್'ಗೆ ನುಗ್ಗಿ, ತಿಂಡಿ-ಕಾಫಿ-ಹಾಲು ಆಸ್ವಾದಿಸಿ ವಿಶ್ರಮಿಸಿಕೊಳ್ಳಿ.

ಬಾಯಿ ಚಪ್ಪರಿಸಿಕೊಳ್ಳುತ್ತ ಹೊರಬಂದು ನಿಮ್ಮ ಬಡಾವಣೆಗೆ ಆಟೋ ಹತ್ತಿರಿ.

* * *

ಬೆಂಗಳೂರು ನಗರ ಮತ್ತು ದಂಡು ಎಂದು ಎರಡು ಭಾಗಗಳಾಗಿ ಇಂಗ್ಲಿಷರ ಕಾಲದಲ್ಲೇ ವಿಭಿನ್ನ ವ್ಯಕ್ತಿತ್ವದ ಪ್ರದೇಶಗಳಾಗಿದ್ದವು. ಇವೆರಡೂ ಅನಂತರ ಒಟ್ಟಾಗಿ ಸೇರಿ, 'ಬೆಂಗಳೂರು ಮಹಾನಗರ ಪಾಲಿಕೆ' ಎಂದಾದರೂ, ಈ ಬೇರೆ ಬೇರೆ ವ್ಯಕ್ತಿತ್ವದ ಮೂಲಗುಣ ಮಾತ್ರ ಅಳಿಸಿಹೋಗಿಲ್ಲ. ನೀವು ನಗರ ಪ್ರದೇಶವನ್ನು (ಮೆಜೆಸ್ಟಿಕ್, ಪೇಟೆಗಳು, ಮಲ್ಲೇಶ್ವರ, ಬಸವನಗುಡಿ; ಜಯನಗರ ಇತ್ಯಾದಿ) ಸುತ್ತಿ ನೋಡಿದ ಮೇಲೆ ಬೆಂಗಳೂರು ದಂಡು ಪ್ರದೇಶಕ್ಕೆ ಹೋದಾಗ ನಿಮಗೆ ಒಂದಿಷ್ಟು ಬೇರೆಯದೇ ಆದ ಜನ ಪರಿಸರ ಕಣ್ಣಿಗೆ ಬೀಳುತ್ತದೆ.

ಕಂಟೋನ್ಮೆಂಟ್ ಪ್ರದೇಶ ಹುಟ್ಟಿ ಬೆಳೆದದ್ದು ೨೦೦ ವರ್ಷಗಳ ಹಿಂದೆ -ಇಂಗ್ಲಿಷ್ ಸೈನ್ಯ ಶ್ರೀರಂಗಪಟ್ಟಣದಿಂದ ಬೆಂಗಳೂರಿಗೆ ತನ್ನ 'ಸೈನಿಕ ತಾಣ'ವನ್ನು ಬದಲಿಸಿದಾಗ, ಇಲ್ಲಿನ ಹಳ್ಳಿಗಳು, ವನ್ಯಪ್ರದೇಶಗಳು ಜನವಸತಿಗಳಾದವು. ಇಂಗ್ಲಿಷರ ವಾಸಕ್ಕೆ, ಮನರಂಜನೆಗೆಂದು ಸೃಷ್ಟಿಯಾದ ಈ ದಂಡು ಪ್ರದೇಶ ಬಹುಬೇಗ ಆಧುನಿಕವಾಗಿ, ಶಿಸ್ತಿನ ಚಿನ್ಹೆಯಾಗಿ, ಮನರಂಜನಾ ತಾಣವಾಗಿ ಬೆಳೆಯಿತು.

ಸೈನಿಕರು ಬಂದು ನೆಲೆಸಿದ್ದು ಈಗಿನ ಅಲಸೂರು ಸುತ್ತಮುತ್ತಲ ಪ್ರದೇಶಗಳಲ್ಲಿ- ಎಲ್ಲೆಲ್ಲೂ ಸೈನ್ಯದ 'ಬ್ಯಾರಕ್'ಗಳು ನಿರ್ಮಾಣವಾದವು. ಜೊತೆಗೆ ಸಂಜೆ-ರಾತ್ರಿ ಚಟುವಟಿಕೆಗಳು ಮೊದಲಾದವು.

ಇಂಗ್ಲಿಷ್ ಜೀವನದ ಪಳೆಯುಳಿಕೆ ಎಂಬಂತೆ ಈಗಲೂ ವಿಜೃಂಭಿಸುತ್ತಿರುವ ಮೂರು ತಾಣಗಳಿಗೆ ಖಂಡಿತ ಭೇಟಿ ಕೊಡಬೇಕು: ಮಹಾತ್ಮಾ ಗಾಂಧಿ ರಸ್ತೆ, ಬ್ರಿಗೇಡ್ ರಸ್ತೆ ಮತ್ತು ಕಮರ್ಶಿಯಲ್ ರಸ್ತೆ. ಇವು ಮೂರೂ ಹತ್ತಿರ ಹತ್ತಿರವೇ ಇದೆ.

ಶಿವಾಜಿನಗರ ಬಸ್ ಸ್ಟಾಂಡ್ ತಲುಪಿದರೆ ಅಲ್ಲಿಂದ 'ಸಂತ ಮೇರಿ ಬಸಿಲಿಕಾ' ಕಡೆಗೆ ಹೆಜ್ಜೆಹಾಕಿದರೆ, ರಸೆಲ್‌ಮಾರ್ಕೆಟ್ ಸಿಗುತ್ತದೆ, (ಬೆಂಗಳೂರು ನಗರ ಪ್ರದೇಶದಲ್ಲಿ 'ಸಿಟಿ ಮಾರ್ಕೆಟ್' ಆದರೆ, ದಂಡು ಪ್ರದೇಶದಲ್ಲಿ 'ರಸೆಲ್ ಮಾರ್ಕೆಟ್'- ಹಣ್ಣು ತರಕಾರಿ ಹೂವು ಮಾರುವ ಬೃಹತ್ ಪ್ರದೇಶಗಳು)

'ಸಂತ ಮೇರಿ ಬಸಿಲಿಕಾ' ಅತ್ಯಂತ ಹಳೆಯ, ಬೆಂಗಳೂರಿನ ಮೊದಲ ಕ್ರಿಸ್ತರ ದೇವಾಲಯ. ಇದಕ್ಕೆ ೧೯೭೪ರ ವೇಳೆ 'ಬಸಿಲಿಕಾ' (ದೇವಾಲಯ) ಎನ್ನುವ ಅಂಗೀಕಾರವನ್ನು ಪೋಪರು ನೀಡಿದರು. ಕ್ರಿಸ್‌ಮಸ್ ಸಮಯದಲ್ಲಿ, ವಾರ್ಷಿಕೋತ್ಸವದ ಸೆಪ್ಟಂಬರ್ ಸಮಯದಲ್ಲಿ ಇಲ್ಲಿನ ಸಂಭ್ರಮವನ್ನು ನೋಡಿಯೇ ತಿಳಿದುಕೊಳ್ಳಬೇಕು. ಕ್ರಿಸ್‌ಮಸ್, ಸಮಯದಲ್ಲಿ ಇಡೀ ಶಿವಾಜಿನಗರ ಪ್ರದೇಶದ ಸುತ್ತಮುತ್ತಲೆಲ್ಲ ವಿದ್ಯುತ್‌ದೀಪಗಳಿಂದ ಝಗ ಝಗಿಸುತ್ತವೆ.

ಬೆಂಗಳೂರು ನಗರ 'ಸಿಟಿಮಾರ್ಕೆಟ್'ನಲ್ಲಿ ಓಡಾಡಿದ ಹಾಗೆಯೇ ಶಿವಾಜಿನಗರದ 'ರಸೆಲ್ ಮಾರ್ಕೆಟ್'ನಲ್ಲಿ ಓಡಾಡುವುದೊಂದು ಆಹ್ಲಾದಕರವಾದ ಅನುಭವ, ಅಲ್ಲಿನ ಹೂವು-ತರಕಾರಿ ಸಂಭ್ರಮ, ವೈಭವ ಮನಸೆಳೆಯುವಂಥದು.

ಮಾರ್ಕೆಟ್ ಸುತ್ತಲ ರಸ್ತೆಗಳು ವ್ಯಾಪಾರ ತಾಣಗಳು, ಯಾವಾಗಲೂ ಜನಸಂದಣಿಯ ಚಟುವಟಿಕೆಗಳ ಪ್ರದೇಶ. ದೊಡ್ಡ ದೊಡ್ಡ ಮಸೀದಿಗಳಿವೆ, ದೇವಾಲಯಗಳಿವೆ, ಪುರಾತನ ಮೀನಾಕ್ಷಿ ದೇವಾಲಯವಿದೆ. (ಈ ರಸ್ತೆಗೆ ಮೀನಾಕ್ಷಿ ದೇವಾಲಯ ರಸ್ತೆ ಎಂದೇ ಹೆಸರು). ಮಾರ್ಕೆಟ್ ಆಸುಪಾಸಿನ ಅಂಗಡಿ ಚಟುವಟಿಕೆಗಳಿಗೆಲ್ಲ ಶಿಖರ ಪ್ರಾಯದ ಹಾಗೆ ಅಲ್ಲಿಯೇ 'ಕಮರ್ಶಿಯಲ್ ಸ್ಟ್ರೀಟ್' ಇದೆ. ಬೆಂಗಳೂರಿನ ಅತಿ ಆಧುನಿಕ ನೋಟಗಳ ರಸ್ತೆಗಳಲ್ಲೊಂದು, ಉಡುಪು, ಬೆಳ್ಳಿಬಂಗಾರ, ವಜ್ರವೈಡೂರ್ಯ, ಆಧುನಿಕ ವಸ್ತುಗಳು, ಸಿಹಿ-ಖಾರ ತಾಣಗಳು, ಹೋಟಲ್‌ಗಳು (ಇಲ್ಲಿ 'ವುಡೀಸ್' ಹೋಟೆಲ್ ಇದೆ-ವುಡ್‌ಲ್ಯಾಂಡ್ ಹೋಟೆಲ್‌ನ ಮರಿ) ಸಂಜೆ ಪ್ರವೇಶಿಸಿ ರಾತ್ರಿವರೆಗೆ ಈ ರಸ್ತೆಯಲ್ಲಿ ಓಡಾಡುವುದೊಂದು ಸೊಗಸು, ಬೆಂಗಳೂರಿನ ಹೊಸತಲೆಮಾರಿನವರಿಗೆ, ಉಳ್ಳವರಿಗೆ ಈ ರಸ್ತೆಯ ಶ್ರೀಮಂತ ಅಂಗಡಿಗಳಲ್ಲಿ ವ್ಯಾಪಾರಮಾಡುವುದೇ ಒಂದು ದೊಡ್ಡಸ್ತಿಕೆ-ಖುಷಿ.

'ರಸೆಲ್ ಮಾರ್ಕೆಟ್' ಎದುರಿನ ಕಡಿಮೆ ಅಗಲದ ಆ ಕಾಲದ್ದೆನಿಸುವಂಥ-ದೊಂದು ನೀಳರಸ್ತೆಯೇ 'ಬೆಂಗಳೂರಿನ ಗುಜರಿ'- ಇಲ್ಲಿ ಸಿಗದಿರುವ ಕಾಣಿಸದಿರುವ

ಹಳೆಯ ವಸ್ತುಗಳೇ ಇಲ್ಲ. ಅಟೋಮೊಬೈಲ್‌ನಿಂದ ಹಿಡಿದು-ಎಲೆಕ್ಟ್ರಾನಿಕ್ಸ್‌ವರೆಗೆ, ಕಂಪ್ಯೂಟರ್‌ಗಳಿಂದ ಹಿಡಿದು-ಕಿಟಕಿಬಾಗಿಲು ತೊಟ್ಟಿಲವರೆಗೆ, ಹತ್ತು ರೂಪಾಯಿ ವಸ್ತುವಿನಿಂದ ಹತ್ತು ಸಾವಿರ ರೂಪಾಯಿ ವಸ್ತುಗಳಿಲ್ಲಿ ಸಿಗುತ್ತವೆ. ಇಲ್ಲಿ ಸಿಗದಿರುವ 'ಹಳೆ' ವಸ್ತುಗಳೇ ಇಲ್ಲ. ಇಲ್ಲದಿದ್ದರೆ, 'ನಾಳೆ ಬನ್ನಿ ಸಾರ್, ತರಿಸಿ ಇಟ್ಟಿರ್ತೀನಿ' ಎನ್ನುತ್ತಾರೆ.

ಈ ಗುಜರಿ ರಸ್ತೆಯ ಇನ್ನೊಂದು ತುದಿ ಮುಟ್ಟಿದರೆ ಅದು ಟಾಸ್ಕರ್ ಟೌನ್ ಎಂದು ಕರೆಸಿಕೊಂಡಿರುವ ಇಂಗ್ಲೀಷರ ಕಾಲದ 'ಬ್ಲಾಕ್‌ಪಲ್ಲಿ' (ಕರಿಜನರ ಹಳ್ಳಿ). ಇದರ ಪ್ರವೇಶದಲ್ಲಿ ಬೆಂಗಳೂರಿನ ಅತ್ಯಂತ ಹಳೆಯ ಮೊಟ್ಟಮೊದಲ ಸಿನಿಮಾ ಥೆಯೆಟರ್ 'ಎಲ್ಜಿನ್' ಸಿಗುತ್ತದೆ. ಇದು ನೂರುವರ್ಷ- ದಾಟಿದೆ. ಮೊದಲು ನೃತ್ಯ ನಾಟಕಗಳ, ಬಾಲ್‌ರೂಂ ಡ್ಯಾನ್ಸ್‌ನ ಮಂದಿರವಾಗಿದ್ದದ್ದು ಅನಂತರ ಮೂಕೀ ಸಿನಿಮಾ, ಟಾಕೀ ಸಿನಿಮಾಗಳ ಮಂದಿರವಾಯಿತು. ಈ ಥೆಯೆಟೆರ್‌ನೊಂದಿಗೆಯೇ ಭಾರತೀಯ ಚಲನಚಿತ್ರ ಇತಿಹಾಸ ಪ್ರಾರಂಭವಾಗುತ್ತದೆ: ಸೈಗಾಲ್, ಬೋರಲ್, ಕೆಸಿಡೇ, ದೇವಿಕಾರಾಣಿ, ಅಶೋಕಕುಮಾರ್‌ಗಳು ಇಲ್ಲಿ 'ಅರಂಗೇಟ್ರಂ' ಮಾಡಿದ್ದಾರೆ. ಇಂದಿಗೂ ಈ ಥೆಯೆಟರ್ ಅಂದಿನ ನೆನಪುಗಳನ್ನು ತನ್ನಲ್ಲಿ ಹುದುಗಿಕೊಂಡು ನೆರಳು-ಬೆಳಕುಗಳನ್ನು ಚೆಲ್ಲುತ್ತಿದೆ.

ಕಮರ್ಶಿಯಲ್ ಸ್ಟ್ರೀಟ್‌ನಿಂದ ಮತ್ತೆ ಶಿವಾಜಿನಗರ ಬಸ್ ಸ್ಟಾಂಡ್‌ಗೆ ಹಿಂತಿರುಗಿ ಎಡಭಾಗದಲ್ಲಿ, ಬೌರಿಂಗ್ ಆಸ್ಪತ್ರೆ ಕಾಂಪೌಂಡ್‌ನ ಬದಿಯಲ್ಲಿಯೇ ನೇರವಾಗಿ ನಡೆದರೆ, ಸಂಗೀತಾ ಟಾಕೀಸ್ ದಾಟಿಕೊಂಡು ಮುಂದುವರೆದರೆ, ಮಹಾತ್ಮಾಗಾಂಧಿರಸ್ತೆಗೆ ಸೇರುತ್ತೇವೆ. ಈ ರಸ್ತೆಯ ಪ್ರಾರಂಭವೇ 'ಅನಿಲ್ ಕುಂಬ್ಳೆ ಸರ್ಕಲ್' (ಪಾಕಿಸ್ತಾನದ ವಿರುದ್ಧ ಕುಂಬ್ಳೆ ಹತ್ತುವಿಕೆಟ್ಟನ್ನು ಪಡೆದಾಗ, ಅದರ ನೆನಪನ್ನು ಹಸಿರಾಗಿಸಲು ಇಟ್ಟ ಹೆಸರಿನ ಗೌರವ ಈ ತಾಣ). ಇದರ ಎಡಗಡೆ ಮಹಾತ್ಮಾಗಾಂಧಿ ರಸ್ತೆ ಪ್ರಾರಂಭ. ಬಲಗಡೆ ಸ್ವಲ್ಪ ತಿರುಗಿದರೆ, 'ಕರ್ನಾಟಕ ಸ್ಟೇಟ್ ಕ್ರಿಕೆಟ್ ಅಸೋಸಿಯೇಷನ್', ಬೆಂಗಳೂರಿನ ಕ್ರಿಕೆಟ್ ಸ್ಟೇಡಿಯಂ ಸಿಗುತ್ತದೆ. ಅಲ್ಲಿ ರಸ್ತೆಗಂಟಿದಂತೆ' ಮಹಾತ್ಮಾಗಾಂಧಿ ಸ್ಪ್ಯಾಚ್ಯೂ ಮತ್ತು ಪಾರ್ಕ್'.

ಮಹಾತ್ಮಾಗಾಂಧಿ ರಸ್ತೆಯಲ್ಲಿ ಮುಸ್ಸಂಜೆ ಪ್ರವೇಶಿಸಿ ನಡೆಯಬೇಕು. ರಸ್ತೆಯ ಬಲಭಾಗದಲ್ಲಿ ಜನನಡೆಯುವ ದಿಣ್ಣೆಗಳಿವೆ. ಮುಂಜಾನೆ-ಮುಸ್ಸಂಜೆ ಈ ದಿಣ್ಣೆ ಕಿರುಕಾಲುದಾರಿಯಲ್ಲಿ ನಡೆಯುವುದೊಂದು ಸುಖ. ಬರೀ ಜನ ಓಡಾಟದ ಹಾದಿ. ವಾಹನಗಳ ಭಯವಿಲ್ಲ. ದಟ್ಟವಾದ ಜನಸಂದಣಿ ಇಲ್ಲ, ಅಲ್ಲಿ ಒರಗು ಸೋಫಾನಗಳಿವೆ. ಅದರ ಮೇಲೆ ಹಾಯಾಗಿ ಕುಳಿತು ಮಹಾತ್ಮಾಗಾಂಧಿ ರಸ್ತೆಯ ಬಣ್ಣಗಳ ಬೆಡಗನ್ನು ಬೆರಗಿನಿಂದ ನೋಡುತ್ತಿರಬಹುದು.

ಮಹಾತ್ಮಾಗಾಂಧಿ ರಸ್ತೆ ಇಂಗ್ಲೀಷರ ಕಾಲದಲ್ಲಿ 'ಸೌತ್ ಪೆರೇಡ್ ರಸ್ತೆ' ಆಗಿತ್ತು. ದಿಣ್ಣೆ ಎಡಭಾಗದ ವಿಸ್ತಾರವಾದ ಮೈದಾನವೆಲ್ಲ ಆಗ 'ಪೆರೇಡ್ ಗ್ರೌಂಡ್' ಆಗಿತ್ತು (ಈಗಲೂ ಇದು ಮಿಲಿಟರಿ ಅಧೀನದಲ್ಲಿದೆ). ಈ ರಸ್ತೆಯ ಎಡಭಾಗದಲ್ಲಿ ದಿಣ್ಣೆಯ ಕಾಲದಾರಿಯೇ ಫುಟ್‌ಪಾತ್, ಬಲಗಡೆ ಅಂಗಡಿಗಳ ಸಾಲು -ಈ ತುದಿಯಿಂದ ಕೊಟ್ಟಕೊನೆಯ ಟ್ರಿನಿಟಿ ಚರ್ಚ್‌ವರೆಗೆ. ಒಂದು ರೀತಿ ಈ ರಸ್ತೆ ಬ್ರಿಟಿಷ್‌ರ ಇಂಗ್ಲೆಂಡ್ ಬೀದಿಯೊಂದರ ಮಾದರಿಯಾಗಿಯೆ ಇದ್ದದ್ದು ದಿಢೀರನೆ ಇಪ್ಪತ್ತೊಂದನೆಯ ಶತಮಾನಕ್ಕೆ ಹೆಜ್ಜೆಹಾಕಿಬಿಟ್ಟಿದೆ. ಅದ್ಭುತವಾದ ಗಗನಚುಂಬಿ ಕಟ್ಟಡ ಶಿಲ್ಪಗಳಿವೆ. ಬಾರ್ಟನ್ ಅಂಡ್ ಕೋರ್ಟ್, ಸ್ಪೆನ್ಸರ್ ಸೂಪರ್ ಮಾರ್ಕೆಟ್ ಕಟ್ಟಡಗಳು, ಶೃಂಗಾರ ಶಾಪಿಂಗ್ ಕಾಂಪ್ಲೆಕ್ಸ್ ಮತ್ತು ಇನ್ನು ಸ್ವಲ್ಪ ದೂರದ ಪ್ರಿಸ್ಟೀಜ್ ಕಮರ್ಶಿಯಲ್ ಕಾಂಪ್ಲೆಕ್ಸ್, ಮಣಿಪಾಲ್ ಸೆಂಟರ್, ತಾನಿಷ್ಕ್ ಕಟ್ಟಡ ...ಮೊದಲಾದ ಕಟ್ಟಡಗಳು ಆಧುನಿಕ ಕಟ್ಟಡ ಕಲೆಯ ಮಾದರಿಗಳು. ಈ ಅಂಗಡಿ ಸಾಲಿನಲ್ಲೇ ಪುಸ್ತಕದ (ಗಂಗಾರಾಮ್, ಹಿಗಿನ್ ಬಾಥಮ್ ಇತ್ಯಾದಿ) ಅಂಗಡಿಗಳು, ಫೋಟೋಗ್ರಫಿ ಸಂಬಂಧಿತ ಮಳಿಗೆ, ಪಿಂಗಾಣಿ ಇತ್ಯಾದಿ ಅಲಂಕಾರಿಕ ಗೃಹೋಪಯೋಗಿ ವಸ್ತುಗಳು, ದೇಶವಿದೇಶೀ ಪ್ರಾಚೀನ ಕಲಾವಸ್ತುಗಳ ಮಳಿಗೆ. ಸಂಗೀತ ಪ್ರಪಂಚದ ದನಿಸುರುಳಿ ಸಿಡಿ ಮಳಿಗೆ, ಅಲ್ಲೇ ಒಂದು ಇಂಗ್ಲಿಷ್ ಸಿನಿಮಾ ಮಂದಿರ 'ಪ್ಲಾಜಾ' (ಇಂಗ್ಲಿಷ್‌ರ ಕಾಲದಲ್ಲಿ 'ಗ್ಲೋಬ್' ಹೆಸರಿತ್ತು). ಅಲ್ಲೇ ಕನ್ನಡ ಪತ್ರಿಕಾ ಓದುಗರ ಮೆಚ್ಚಿನ 'ಡೆಕ್ಕನ್ ಹೆರಾಲ್ಡ್-ಪ್ರಜಾವಾಣಿ-ಸುಧಾ-ಮಯೂರ' ಪತ್ರಿಕೆಗಳ ಕಛೇರಿ. ಇದರ ಬಲಭಾಗದಲ್ಲಿ 'ಕಾಫಿಹೌಸ್' -ರುಚಿಕರ ಕಾಫಿ ಮತ್ತು ಕುಟುಕು ತಿಂಡಿಗಳ ತಾಣ: ಬುದ್ಧಿಜೀವಿಗಳ ಪ್ರಿಯವಾದ ತಾಣ. ಪತ್ರ ಕರ್ತರ 'ಬ್ರೇಕ್' ತಾಣ. ಈ 'ಕಾಫಿಹೌಸ್' ಕಟ್ಟಡಕ್ಕೂ ಕುತ್ತುಬರುವ ಸುದ್ದಿ ಈಚೆಗೆ ಬಂದಿದೆ.

ಪತ್ರಿಕಾಕಛೇರಿ ದಾಟಿ ಕೆಲಕ್ಷಣಗಳು ನಡೆದರೆ ಸಿಗುವ ಬಲರಸ್ತೆಯ ಜನಪ್ರಿಯ 'ಬ್ರಿಗೇಡ್ ರಸ್ತೆ' -ಪುಟ್ಟರಸ್ತೆಯಲ್ಲಿ ನೂರಾರು ವ್ಯಾಪಾರ ಮಳಿಗೆಗಳಿವೆ. ಹೋಟೆಲ್‌ಗಳಿವೆ. ಕೊಂಡುಕೊಳ್ಳುವುದಕ್ಕೆ ಮಿತಿಯೇ ಇಲ್ಲದಷ್ಟು ವಸ್ತುಗಳಿವೆ. ತಮಿಳುನಾಡು ಕರಕೌಶಲದ 'ಪೂಂಪುಹಾರ್' ಬೃಹತ್ ಮಳಿಗೆ ಇದೆ. ಬಲಭಾಗದಲ್ಲಿ 'ರೆಕ್ಸ್' ಇಂಗ್ಲಿಷ್ ಸಿನಿಮಾ ಮಂದಿರವಿದೆ. ಇದರ ಬದಿಯಲ್ಲೆ ಸುಪ್ರಸಿದ್ಧ 'ನೀಲಗಿರಿ ಡೈರಿ ಫಾರಂ' ಬೃಹತ್ ಕಟ್ಟಡವಿದೆ. ಇಲ್ಲಿ ಶುದ್ಧಮಾಡಿದ ದಿನಸಿ ವಸ್ತುಗಳು, ಬೇಕರಿ ವಸ್ತುಗಳು ಸಿಗುತ್ತವೆ. ಹಿಂಬದಿಯಲ್ಲಿ 'ರೆಸ್ಟೊರೆಂಟ್ ಇದೆ. 'ನೀಲಗಿರಿ'ಗೆ ಎಂಟಿಆರ್‌ನ ಹಾಗೆ ತನ್ನದೇ ಒಂದು ಇತಿಹಾಸ ವೈಶಿಷ್ಟ್ಯವಿದೆ.

ಬ್ರಿಗೇಡ್ ರಸ್ತೆಯಿಂದ ಒಂದು ಹದಿನೈದು ನಿಮಿಷ ನೇರವಾಗಿ ನಡೆದರೆ ಅಲ್ಲಿ 'ಶಾಪರ್ಸ್ ಸ್ಟಾಪ್' ಗೃಹೋಪಯೋಗಿ ವಸ್ತುಗಳ ಅತ್ಯಾಧುನಿಕ ಬೃಹತ್ ಮಳಿಗೆ ಸಿಗುತ್ತದೆ.

ಮಹಡಿ ಸಂಕೀರ್ಣಗಳ ಇದು ಬೆಂಗಳೂರಿಗರಿಗೆ ಹೊಸ ರೀತಿಯ ವ್ಯಾಪಾರ ಮಾಡುವುದಕ್ಕೆ ಮೊಟ್ಟಮೊದಲ ಅನುಭವ. ಈಗ ೨೦೦೪ರಲ್ಲಿ ಇಂಥವು ಬೆಂಗಳೂರಿನಲ್ಲಿ ಬೇಕಾದಷ್ಟಾಗಿ ಹೋಗಿವೆ.

ಆಯಾಸವಾದಾಗ, 'ವುಡೀಸ್', 'ಆನಂದ್', 'ಬ್ಲೂಬೆಲ್', 'ಕೆ.ಸಿ.ದಾಸ್', 'ಶ್ರೀರಾಜ್ ಲಸ್ಸಿಬಾರ್', 'ಬ್ರಿಗೇಡ್ ಗಾರ್ಡನ್', 'ಕ್ಯಾನೋಪಿ ರೆಸ್ಟಾರಂಟ್', 'ಸಪ್ನಾಹೋಟಲ್', 'ಕೋಶೀಸ್', 'ನೀಲಗಿರಿ', 'ಪಿಜ್ಜಾಕಾರ್ನರ್,' 'ಉಲ್ಲಾಸ್ ರಿಫ್ರೆಷ್‌ಮೆಂಟ್ಸ್', ಕಾಫಿ ಹೌಸ್ -ಎನ್ನುವ ಪ್ರಸಿದ್ಧ ಜನಪ್ರಿಯ ತಾಣಗಳಿರುವುದಲ್ಲದೆ, ನಿಮ್ಮ ನಿಮ್ಮ ಅಭಿರುಚಿಗೆ-ಸಂಸ್ಕೃತಿಗೆ ತಕ್ಕಂಥ ತಿನ್ನುಕುಡಿ ತಾಣಗಳಿವೆ.

ಕತ್ತಲೆಯಾದ ಮೇಲೆ ಒಮ್ಮೆ ಬ್ರಿಗೇಡ್‌ರಸ್ತೆ, ಮಹಾತ್ಮಾಗಾಂಧಿ ರಸ್ತೆಗಳಲ್ಲಿ ನಡೆದಾಡಿರಿ. ತ್ರಾಣವಿದ್ದರೆ ಶಿವಾಜಿನಗರ ಬಸ್‌ಸ್ಟಾಂಡ್‌ವರೆಗೂ ನಡೆದುಕೊಂಡು ಬನ್ನಿರಿ. ಅಥವಾ ನೀವು ಎಲ್ಲಿದ್ದೀರೊ ಅಲ್ಲಿನಿಂದಲೇ ಆಟೋ ಹತ್ತಿ ಶಿವಾಜಿನಗರ ಬಸ್ ಸ್ಟಾಪ್‌ಗೆ ಬನ್ನಿರಿ, ಹತ್ತು-ಹನ್ನೆರಡು ರೂಪಾಯಿ ಛಾರ್ಜ್ ಆಗಬಹುದು.

ಶಿವಾಜಿನಗರದಲ್ಲಿ ನಿಮ್ಮ ಬಡಾವಣೆಗೆ ಬೇಕಾದಷ್ಟು ಬಸ್ಸುಗಳು ಸಿಗುತ್ತವೆ.

■■

ದಯವಿಟ್ಟು ಗಮನಿಸಿ!

ಬೆಂಗಳೂರಿನಲ್ಲಿ ಲೆಕ್ಕವಿಲ್ಲದಷ್ಟು ಹೋಟಲ್‌ಗಳು, ಲಾಡ್ಜ್‌ಗಳು, ಅತಿಥಿ ಗೃಹಗಳೂ ಇವೆ. ಮೊದಮೊದಲು ಬರುವಾಗ ಎಲ್ಲಿಯದೊ ಒಂದು ಲಾಡ್ಜನ್ನು ಹುಡುಕಿಕೊಂಡು ಹೋಗುವುದರ ಬದಲು, ಉತ್ತಮ ಜನಪ್ರಿಯ-ಹೆಸರಾಂತ ಹೋಟಲ್‌ಗಳಲ್ಲೊಂದನ್ನು ಆಯ್ಕೆಮಾಡಿ ತಂಗುವುದು ಒಳ್ಳೆಯದು-ಕ್ಷೇಮ.

ಹೋಟಲ್‌ಗಳಲ್ಲೇ ಆಗಲಿ, ಸಾರ್ವಜನಿಕ ಪ್ರದೇಶಗಳಲ್ಲೇ ಆಗಲಿ ನಿಮ್ಮ ಹಣಕಾಸು, ಪದಾರ್ಥಗಳ ಬಗ್ಗೆ (ಕ್ಯಾಮೆರಾ, ಮೊಬೈಲ್, ಕ್ರೆಡಿಟ್ ಕಾರ್ಡ್ ಇತ್ಯಾದಿ) ಹುಷಾರಾಗಿರಿ. ಅಪರಿಚಿತರನ್ನು ನಂಬಿಬಿಡಬೇಡಿ.

■

೭. ತಿಂಡಿತೀರ್ಥ, ಬೆಂಗಳೂರು!

ಬೆಂಗಳೂರು ಮಸಾಲೆ ದೋಸೆಗೆ ಪ್ರಸಿದ್ಧಿ. ಖಾಲಿದೋಸೆ ಹೋಟೆಲ್‌ಗಳಿಗೆ ಜನಪ್ರಿಯ. ಬೆಂಗಳೂರಿಗರು ತಿನ್ನಲು ಏನೇನು ಇಷ್ಟಪಡುತ್ತಾರೆ ಎಂದೇನಾದರೂ ಗುರುತಿಸಲು ಹೋದರೆ ಅದು ದೊಡ್ಡ ಪಟ್ಟಿಯೇ ಆಗಿಹೋಗುತ್ತದೆ: ಗರಮಾಗರಂ ಕಡಲೆಕಾಯಿಯಿಂದ ಹಿಡಿದು, ಸೀಬೆಕಾಯಿ, ಗಿಣಿಮೂತಿ ಮಾವಿನಕಾಯಿ, ಸೌತೇಕಾಯಿ ಎನ್ನುವುದೆಲ್ಲರ ಜೊತೆಗೆ, ಹುರಿಗಾಳು, ನಿಪ್ಪಟ್ಟು-ಚಕ್ಕುಲಿ, ಖಾರದ ಕಡ್ಲೇಕಾಯಿ ಬೀಜ, ಕಾಂಗ್ರೆಸ್ ಕಡ್ಲೇಕಾಯಿಬೀಜ, ಮುಸುಕಿನ ಜೋಳ, ಖಾರಾಪುರಿ, ಎನ್ನುವುದರೊಂದಿಗೆ, ಇಡ್ಲಿವಡೆ ಸಾಂಬಾರ್, ಖಾಲಿದೋಸೆ, ಸೆಟ್‌ದೋಸೆ, ಪ್ಲೇನ್‌ದೋಸೆ, ಈರುಳ್ಳಿ ದೋಸೆ, ರವಾದೋಸೆ, ಮಸಾಲೆದೋಸೆ, ಚೌಚೌಭಾತ್, ರವಾಇಡ್ಲಿ, ರವಾವಡೆ, ಬೊಂಬಾಯಿ ಬೋಂಡ, ಎನ್ನುವ ನಾಲಗೆಯಲ್ಲಿ ನೀರೆಬ್ಬಿಸುವ ತಿಂಡಿಗಳಲ್ಲದೆ, ಸಿಹಿಸ್ಪೆಷಲ್‌ಗಳಾದ, ಮೈಸೂರು ಪಾಕ್, ಬಾದಾಮಿ ಹಲ್ವ, ದಂರೋಟ್, ಜಾಂಗೀರ್-ಜಿಲೇಬಿ, ಕೊಬ್ಬರಿ ಬರ್ಫಿ, ಕಡ್ಲೇಕಾಯಿ ಬರ್ಫಿ, ಜಾಮೂನ್-ಹೀಗೆ ಅನೇಕಾನೇಕ 'ಇಂದಿನ ಸ್ಪೆಷಲ್'ಗಳು ಬೆಂಗಳೂರಿಗರ ನಾಲಗೆಗಳಿಗೆ ಅಭ್ಯಾಸವಾಗಿ ಹೋಗಿದೆ, ಇದು ಇವರ ಪ್ರತಿದಿನದ ಹವ್ಯಾಸವೂ ಆಗಿಹೋಗಿದೆ.

ಇವೆಲ್ಲಕ್ಕೂ ಒಂದು ನೂರು ವರ್ಷಗಳ ಕೀರ್ತಿಯೇ ಇರುವಂತಿದೆ. ಇಂಥವನ್ನೆಲ್ಲ ವಿಶೇಷವಾಗಿ ತಯಾರಿಸುವ ಬೆಂಗಳೂರಿನ ಅನೇಕ ತಿನಿಸು ತಾಣಗಳಿಗೆ ಐವತ್ತು ವರ್ಷಗಳೇ ದಾಟಿಹೋಗಿವೆ. ಒಂದೊಂದು ಹೋಟೆಲ್‌ಗೂ ಒಂದೊಂದು ರೀತಿಯ ತಿನಿಸುಗಳನ್ನು ತಯಾರಿಸುವ ಕೀರ್ತಿ ಇದೆ.

ಬೆಂಗಳೂರಿನಲ್ಲಿ ನೀವು ಇರುವಾಗ, ಓಡಾಡುವಾಗ ಈ ತಿಂಡಿತಿನಿಸು ಊಟದ 'ಸ್ಪೆಷಲ್' ಜಾಗಗಳಿಗೆ ಖಂಡಿತ ಭೇಟಿಕೊಡಬೇಕು, ನೀವು ಖಂಡಿತ ಖುಷಿಪಡುತ್ತೀರಿ.

ಬಸವನಗುಡಿ ಗಾಂಧಿಬಜಾರ್ ಸುತ್ತಮುತ್ತ ನಿಮಗೆ ಮತ್ತೇರಿಸುವಷ್ಟು ತಿಂಡಿತಿನಿಸು ತಾಣಗಳಿವೆ. ಈ ಜಾಗಗಳು ಎಲ್ಲಿವೆ ಎಂದು ನೀವು ತಲೆಕೆಡಿಸಿಕೊಳ್ಳ- ಬೇಕಾದ್ದಿಲ್ಲ. ಗಾಂಧಿಬಜಾರ್ ಸರ್ಕಲ್ ಹತ್ತಿರ ಓಡಾಡುವ ಯಾರನ್ನು ಕೇಳಿದರೂ ಈ ಜಾಗಗಳನ್ನು ತೋರಿಸುತ್ತಾರೆ. ಓಡಾಡಿದರೆ ಕಣ್ಣಿಗೆ ಬೀಳುತ್ತವೆ.

'ವಿದ್ಯಾರ್ಥಿಭವನ'ದ ಮಸಾಲೆದೋಸೆ ಪ್ರಪಂಚಪ್ರಸಿದ್ಧ. ಪುಟ್ಟಪುಟಾಣಿ ಜಾಗದಲ್ಲಿ ಸ್ಥಳಸಿಗುವುದೇ ಕಷ್ಟ. ಸ್ವಲ್ಪ ತಾಳ್ಮೆಯಿಂದ ಕಾದರೆ ನಿಮಗೆ ಕುರ್ಚಿ ಸಿಗುತ್ತದೆ. ಕೆಲವೇ ಕ್ಷಣಗಳಲ್ಲಿ ಹತ್ತಾರು ಮಸಾಲೆದೋಸೆ ಪ್ಲೇಟುಗಳನ್ನು ಹಿಡಿದ ಮಾಣಿ ಪ್ರತ್ಯಕ್ಷನಾಗಿ ನಿಮ್ಮ ಮುಂದೆ ಘಮಘಮಿಸುವ ಪ್ಲೇಟನ್ನು ತಳ್ಳಿ ಹೋದಾಗ, ಕೆಲವೇಕ್ಷಣಗಳಲ್ಲಿ ನೀವದನ್ನು ಮುಗಿಸಿ, ಇನ್ನೊಂದಕ್ಕೆ ಆರ್ಡರ್ ಮಾಡುತ್ತೀರಿ, ಅದು ಬರುವವರೆಗೂ ಬಿಸಿಬಿಸಿ ರವಾವಡೆ ತರಿಸಿ ತಿನ್ನಬಹುದು. ಅಪರೂಪದ ರುಚಿಯ ರವಾವಡೆ ಇದು.

ಗಾಂಧಿಬಜಾರ್‌ನಲ್ಲಿಯೆ ಇರುವ 'ಭಟ್ಟರ ಹೋಟಲ್' ಎಂದು ಫೇಮಸ್ ಆಗಿರುವ ಒಂದು ಪುಟ್ಟ ಎಂಟಿಆರ್ (ಮಹಾಲಕ್ಷ್ಮೀ ಟಿಫನ್ ರೂಂ)ನಲ್ಲಿಯೂ ಬೆಣ್ಣೆಮಸಾಲೆ ಸೊಗಸಾಗಿದೆ. ಕೆಂಪು ಬಣ್ಣದ ಗರಿಗರಿ ಮಸಾಲೆ ತಿಂದು ನೋಡಿಯೇ ಅನುಭವಿಸಬೇಕು. ಇಲ್ಲಿಯ ಖಾಲಿ ದೋಸೆ, ಸೆಟ್ ದೋಸೆ, ರವಾದೋಸೆ, ಇಡ್ಲಿವಡೆ ಸಾಂಬಾರ್ ಅತ್ಯಂತ ರುಚಿಕರ. ಇಲ್ಲೆ ಎದುರು ಮೂಲೆಯಲ್ಲಿ 'ತಿಂಡಿಮನೆ' ಇದೆ.

ಬಸವನಗುಡಿಯಲ್ಲಿಯೆ, ದೊಡ್ಡ ಗಣೇಶನ ದೇವಾಲಯಕ್ಕೆ ಹೋಗುವ ಮೊದಲು ಸಿಗುವ 'ದ್ವಾರಕಾಹೋಟೆಲ್' ಖಾಲಿದೋಸೆಗಾಗಿಯೇ ಸುಪ್ರಸಿದ್ಧ. ಇಲ್ಲಿ ಖಾಲಿದೋಸೆ ತಿನ್ನಲು ಬೆಂಗಳೂರಿನ ಎಲ್ಲ ಕಡೆಯಿಂದಲೂ ತಿಂಡಿಪ್ರಿಯರು ಬರುತ್ತಾರೆ. ಎರಡು ಪ್ಲೇಟ್ ಖಾಲಿದೋಸೆ, ಬೆಣ್ಣೆಯೊಂದಿಗೆ ಖಾಲಿ ಮಾಡುವವರಿದ್ದಾರೆ. ಇಲ್ಲಿಯೂ ರವಾವಡೆ ರುಚಿಕರ. ಇಲ್ಲೆ ಎದುರು ಮೂಲೆಯಲ್ಲಿ 'ತಿಂಡಿಮನೆ' ಇದೆ.

ದೊಡ್ಡಗಣೇಶನ ಗುಡಿಯಿಂದ ಮುಂದೆ ಹೋದರೆ ಸಿಗುವ ಬಿಎಂಎಸ್ ಇಂಜಿನಿಯರಿಂಗ್ ಕಾಲೇಜ್ ಎದುರಿಗಿರುವ ಎಸ್‌ಎಲ್‌ವಿ ಹೋಟೆಲ್ ಮೃದುವಾದ ಬಿಸಿಬಿಸಿ ಇಡ್ಲಿಗೆ ಪ್ರಸಿದ್ಧಿ. ಬೆಂಗಳೂರಿನ ಅನೇಕ ಪ್ರದೇಶಗಳಲ್ಲಿ (ಲೇಔಟ್‌ಗಳಲ್ಲಿ) ಎಸ್‌ಎಲ್‌ವಿ ಹೋಟೆಲ್‌ಗಳಿವೆ. ನ್ಯಾಷನಲ್ ಕಾಲೇಜ್ ರಸ್ತೆಯ ಪ್ರಾರಂಭದಲ್ಲಿಯೆ ಬಂದಿದೆ. ಈಗ ಹೊಸದಾಗಿ ಬನಶಂಕರಿಯಲ್ಲಿ ಒಂದು ಆಧುನಿಕ ನೋಟದ ಎಸ್‌ಎಲ್‌ವಿ ಆಗಿದೆ. ಇಲ್ಲಿ ರವಾಇಡ್ಲಿ ತಿನ್ನಲು ಜನರ ನೂಕು ನುಗ್ಗಲಿರುತ್ತದೆ.

ವಿದ್ಯಾರ್ಥಿಭವನದ ಬಲಭಾಗದಲ್ಲಿಯೇ 'ರೋಟಿಘರ್' ಇದೆ. ಇಲ್ಲಿ ನಿಮ್ಮ ನಾಲಿಗೆಗೆ ಏನೇನು ಬೇಕೋ ಅವೆಲ್ಲವೂ ಇದೆ. ಇಡ್ಲಿವಡೆದೋಸೆಯಿಂದ ಹಿಡಿದು ಉತ್ತರ ಭಾರತದ ತಿಂಡಿ ವೈವಿಧ್ಯವಿದೆ. ಇಲ್ಲಿ ಸಂಜೆ ಹೊತ್ತು ಫುಟ್‌ಪಾತ್ ತುಂಬಿ ತುಳುಕಾಡುತ್ತದೆ.

ಚಾಮರಾಜಪೇಟೆಯಿಂದ ಬಸವನಗುಡಿಗೆ ಹೋಗುವ ಮೊದಲು, ಬೆಂಗಳೂರು ಹೈಸ್ಕೂಲು ಪಕ್ಕದ ರಸ್ತೆಯಲ್ಲಿ ಒಂದಿಷ್ಟು ಹೆಜ್ಜೆ ಹಾಕಿದರೆ, ಶೆಡ್ ಒಂದರಲ್ಲಿ 'ಬ್ರಾಹ್ಮಿನ್ಸ್

ಕಾಫಿ ಕ್ಲಬ್' ಇದೆ. ಇಲ್ಲಿ ಯಾವಾಗಲೂ 'ರಶ್' ಇರುತ್ತದೆ. ಒಳಗೆ ನುಸುಳಿ ಆರ್ಡರ್ ಕೊಟ್ಟು ಪ್ಲೇಟ್ ಹಿಡಿದು ಹೊರಗೆ ತಂದು ತಿನ್ನಬೇಕು. ಇಲ್ಲಿಯ ಇಡ್ಲಿವಡೆ 'ಪ್ರಪಂಚದಲ್ಲೇ ದಿ ಬೇಸ್ಟ್' ಎನ್ನುವವರಿದ್ದಾರೆ. ಚೌಚೌಭಾತ್ ಚೆನ್ನಾಗಿರುತ್ತದೆ. ಕಾಫಿ 'ಘಂ' ಎಂದಿರುತ್ತದೆ.

ಇದೇ ಚಾಮರಾಜ ಪೇಟೆಯ ಐದನೆ ಬೀದಿಯಲ್ಲಿ (ಉಮಾಟಾಕೀಸ್ ಪಕ್ಕದ ರಸ್ತೆ) ಪ್ರಾರಂಭದ ಅಂಗಡಿ ಸಾಲುಗಳಲ್ಲಿ ಮೊದಲೇ ಬರುವ (ಗುರುರಾಜಾ ಕಾಂಡಿಮೆಂಟ್) ಅಂಗಡಿಯ ಕುರುಕಲು ತಿಂಡಿ ಇಡೀ ನಗರದಲ್ಲಿ ಜನಪ್ರಿಯ. ಅಲ್ಲೇ ಬಿಸಿಬಿಸಿ ಮಾಡಿಕೊಡುತ್ತಾರೆ. ಉಂಡೂ ಹೋಗಬಹುದು, ಕೊಂಡೂ ಹೋಗಬಹುದು.

ಬೆಂಗಳೂರಿಗರಿಗೆ ಅತ್ಯಂತ ಪ್ರಿಯವಾದದ್ದು: ಖಾರದ ಕಡಲೆಕಾಯಿಬೀಜ, ಕಾಂಗ್ರೆಸ್ ಕಡಲೆಕಾಯಿಬೀಜ, ಹುರಿಗಾಳು, ನಿಪ್ಪಟ್ಟು. ಇದು ಬೆಂಗಳೂರಿನ ಯಾವುದೇ ಚಿಲ್ಲರೆ ಅಂಗಡಿಗೆ ಕಾಲಿಟ್ಟರೂ ಸಿಗುತ್ತದೆ. ಆದರೆ, ಸ್ಪೆಷಲ್ ಶುಚಿ-ರುಚಿಗೆ ಗಾಂಧಿ ಬಜಾರ್‌ನ ಎಚ್.ಬಿ. ಸಮಾಜ ರಸ್ತೆಯ ಪ್ರಾರಂಭದಲ್ಲಿಯೆ ಇರುವ 'ಸುಬ್ಬಮ್ಮನ ಅಂಗಡಿ' (ಶ್ರೀನಿವಾಸ ಕಾಂಡಿಮೆಂಟ್ಸ್) ಬೆಂಗಳೂರಿಗರ ಅಚ್ಚುಮೆಚ್ಚಿನ ತಾಣ. ಖಾರದ ಬೀಜಗಳು, ನಿಪ್ಪಟ್ಟು, ಚಕ್ಕುಲಿ, ಮುಚ್ಚೊರೆ, ಕೊಡುಬಳೆ, ತೆಂಗೊಳಲು, ಹಪ್ಪಳ, ಸಂಡಿಗೆ, ಸಾರು ಹುಳಿ-ಪಲ್ಯ-ಚಟ್ನಿಪುಡಿಗಳು, ಬರ್ಫಿಗಳು -ಇದು ನಾಲಗೆಯ ಕನಸಿನ ಲೋಕ. ೬x೧೦ ಅಡಿ ಜಾಗದಲ್ಲಿ ಒಂದು ರುಚಿಲೋಕವೇ ವಿಜೃಂಭಿಸಿದೆ. ಒಬ್ಬೊಬ್ಬರೂ ಎಂಭತ್ತು-ನೂರೈವತ್ತು- ಇನ್ನೂರು ರೂಪಾಯಿಗಳ ಪದಾರ್ಥ ಒಂದು ಸಲಕ್ಕೆ ಕೊಳ್ಳುತ್ತಾರೆ. ಬೆಂಗಳೂರಿನಲ್ಲಿ 'ಮನೆರುಚಿ'ಯ ಇಂಥ ಇನ್ನೊಂದು ಜಾಗ ಇಲ್ಲ.

ಗಾಂಧಿಬಜಾರ್ ಡಿವಿಜಿ ರಸ್ತೆಯ 'ಬ್ರಾಹ್ಮಿನ್ಸ್ ಬೇಕರಿ'ಯೊಳಗೆ ಹೋದಾಗ ನಿಮ್ಮನ್ನು ಬೆರಗುಗೊಳಿಸುವಂಥ ತಿಂಡಿ ತಿನಿಸುಗಳಿವೆ. ಬೇಕರಿ ಪದಾರ್ಥಗಳ ವೈವಿಧ್ಯ, ಖಾರದ ಬೀಜ ಬೇಳೆಗಳು, ಚಕ್ಕುಲಿ ಇತ್ಯಾದಿ ಕರಿದ ತಿಂಡಿಗಳು. ಸಂಜೆ ಹೋದರೆ ಅದೇ ಸಿದ್ಧವಾದ ಖಾರಾಪುರಿ ಮತ್ತು ಕಾಂಗ್ರೆಸ್ ಕಡಲೆಕಾಯಿ ಬೀಜಗಳನ್ನು ಕಟ್ಟಿಸಿಕೊಂಡು ಗಾಂಧಿಬಜಾರ್‌ನ ಗಿಜಿಗಿಜಿಯಲ್ಲಿ ಮತ್ತು ಶಾಂತವಾಗಿಯೂ ಇರುವ ಒಳಬೀದಿಗಳಲ್ಲೂ ನಿಧಾನವಾಗಿ ಹೆಜ್ಜೆ ಹಾಕುತ್ತ, ಹರಟೆ ಹೊಡೆಯುತ್ತ ತಿನ್ನಲು ಮಜವಾಗುತ್ತದೆ.

ಇಲ್ಲಿಂದ ಮುಂದೆ ನೆಟ್ಟಕಲ್ಲಪ್ಪ ಸರ್ಕಲ್‌ನಲ್ಲಿರುವ 'ಉಪಹಾರ ದರ್ಶಿನಿ' ಹೋಟಲ್ ಕಲೆಯ ನೂತನ ಪ್ರಯೋಗ ಶಾಲೆ. ಪುಟ್ಟ ಜಾಗದಲ್ಲಿ ದೊಡ್ಡ ವ್ಯಾಪಾರ. ಬೆಳಗ್ಗೆ-ಸಂಜೆ ಇಲ್ಲಿ ಜಾಗವೇ ಇರುವುದಿಲ್ಲ. ಇಡ್ಲಿ ವಡೆ ದೋಸೆ ಪೂರಿ ಎಂದು ಎಲ್ಲ ಬಗೆಯ ಖಾರ, ಸಿಹಿಗಳೂ ಇಲ್ಲಿ ಅತ್ಯುತ್ತಮ ಮಟ್ಟದಲ್ಲಿರುತ್ತವೆ. ಒಳಗೆ ನಿಂತು

ತಿನ್ನಲು ಜಾಗವಿಲ್ಲದೆ, ಕಾರುಗಳಲ್ಲಿ ಬಂದವರು ಕೂಡ, ಫುಟ್‌ಪಾತ್ ಮೇಲೆ ಕುಳಿತು ತಿನ್ನುತ್ತಾರೆ.

ಬಸವನಗುಡಿ-ಗಾಂಧಿಬಜಾರ್‌ನಲ್ಲಿ ಇಲ್ಲದಿರುವುದೇ ಇಲ್ಲ. ಎಣಿಕೆಗೇ ಸಿಗದಷ್ಟು ಹೋಟಲ್‌ಗಳು, ಬೇಕರಿಗಳು, ಕಾಂಡಿಮೆಂಟ್‌ಗಳು, ಐಸ್‌ಕ್ರೀಮ್- ಜ್ಯೂಸ್ ಪಾರ್ಲರ್‌ಗಳು ಇಲ್ಲಿವೆ. ಒಂದೊಂದೂ ಅತ್ಯುತ್ತಮ ಮಟ್ಟದಲ್ಲಿ ಕೆಲಸ ಮಾಡುತ್ತಿರುವ ತಾಣಗಳು. ಗಾಂಧಿಬಜಾರ್ ತಿಂಡಿಪೋತರ ಸ್ವರ್ಗ!

ಮಸಾಲೆ ದೋಸೆ ಎಂದಕೂಡಲೇ ಬೆಂಗಳೂರಿಗರು ಕೂಡಲೇ ವಿದ್ಯಾರ್ಥಿ ಭವನ ಎಂದು ಹೇಳುವ ಹಾಗೆಯೇ ಇನ್ನೊಂದು ತಾಣವಿದೆ. ಕೆಂಪೇಗೌಡ ನಿರ್ಮಿಸಿದ 'ಹೊಸ ಬೆಂಗಳೂರು' ಪ್ರದೇಶ ಬಳೇಪೇಟೆಯಲ್ಲಿರುವ 'ಉಡುಪಿ ಶ್ರೀಕೃಷ್ಣ ಭವನ್'. ಮಸಾಲೆದೋಸೆಗೆ ನಂಬರ್ ಒನ್ ತಾಣ. ಇಲ್ಲಿ ಬರೀ ಮಸಾಲು ದೋಸೆ ಮಾತ್ರವಲ್ಲ- ಎಲ್ಲವೂ ಮೇಲ್ಮಟ್ಟದ್ದು, ಅಚ್ಚುಕಟ್ಟಾದದ್ದು. ಪೂರಿಸಾಗು, ಇಡ್ಲಿ ಸಾಂಬಾರ್, ಚೌಚೌಬಾತ್, ಬಿಸಿಬೇಳೆ ಬಾತ್, ಬಿಸಿಬಿಸಿ ಉದ್ದಿನ ವಡೆ. ಇಲ್ಲಿ ಎರಡು ಬಗೆಯ ಮಸಾಲೆ ದೋಸೆ ಸಿಗುತ್ತವೆ- ಈರುಳ್ಳಿ ಆಲೂಗಡ್ಡೆ ಪಲ್ಯದ ಮಸಾಲೆ ಮತ್ತು ಸಾಗುಮಸಾಲೆ, ಒಂದೊಂದರದ್ದು ಒಂದೊಂದು ರುಚಿ. ಈ 'ಉಡುಪಿ ಕೃಷ್ಣ ಭವನ' ಬೆಂಗಳೂರಿನ ಅತಿ ಹಳೆಯ ಹೋಟಲ್‌ಗಳಲ್ಲಿ ಮೊದಮೊದಲಿನದು. ಇವರದೇ ಮಾಲೀಕತ್ವದ 'ಜನಾರ್ಧನ ಹೋಟಲ್' -ಇನ್ನೊಂದು ಶಿಸ್ತಿನ ಆಡಳಿತದ ಊಟತಿಂಡಿ-ವಾಸ್ತವ್ಯದ ಹೋಟಲ್. ಬೆಂಗಳೂರು ರೇಸ್‌ಕೋರ್ಸ್ ದಾರಿಯಲ್ಲಿ (ದೇಸಾಯಿ ನರ್ಸಿಂಗ್ ಹೋಂ ಹಿಂದೆ) ಇದೆ. ಇಲ್ಲಿಯೂ ಪಲ್ಯಮಸಾಲೆ ಸಾಗುಮಸಾಲೆ ಜನಪ್ರಿಯ. ಇಲ್ಲಿಯ ಸರಳವಾದ ಭೋಜನಕ್ಕೆ ಪಂಚತಾರಾ ಹೋಟಲ್‌ನಲ್ಲಿ ತಂಗಿರುವವರೂ ಬರುತ್ತಾರೆ. ಬಳೇಪೇಟೆ 'ಉಡುಪಿ ಶ್ರೀಕೃಷ್ಣ ಭವನ'ದಲ್ಲಿ ಈಚೆಗೆ ಪ್ಲೇಟ್ ಮೀಲ್ಸ್ ಪ್ರಾರಂಭಿಸಲಾಗಿದೆ. ಕಡಮೆ ದರಕ್ಕೆ ರುಚಿಕರ ಭೋಜನ ಇದು.

ಉಡುಪಿ ಕೃಷ್ಣಭವನ ಕಟ್ಟಡದಲ್ಲಿಯೆ ಮುಂದುಗಡೆ 'ಸ್ವೀಟ್ ಖಾರಾ ಸ್ಟಾಲ್' ಇದೆ. ಅತ್ಯಂತ ರುಚಿಕರ ಚೌಚೌ, ಖಾರಾಸೇವೆ, ಮೈಸೂರು ಪಾಕ್, ಹಾಲುಖೋವಾ ಮೊದಲಾಗಿ ಖಾರಾ-ಸಿಹಿ ತಿಂಡಿಗಳು ಇಲ್ಲಿ ಸಿಗುತ್ತವೆ. ಜನ ಇಲ್ಲಿಂದ ಇವನ್ನು ಪೊಟ್ಟಣ ಕಟ್ಟಿಸಿಕೊಂಡು ಮನೆಗೆ ತೆಗೆದುಕೊಂಡು ಹೋಗುತ್ತಾರೆ.

ಇಂಥದೆ ಸ್ವೀಟ್-ಖಾರಾ ಅಂಗಡಿಗಳು ಅನೇಕವಿವೆ. ಮೂವಿಲ್ಯಾಂಡ್- ಕಪಾಲಿ ಟಾಕೀಸ್‌ಗಳ ಎದುರು ಇರುವ 'ರಾಮಕೃಷ್ಣ ಲಂಚ್ ಹೋಂ' -ಇದೂ ಬೆಂಗಳೂರಿನ ಅತ್ಯಂತ ಹಳೆಯ ಹೋಟಲ್. ಉತ್ತಮಮಟ್ಟದ ತಿಂಡಿ ಹೋಟಲ್. ಇದರಲ್ಲಿ ಒಂದು ಅಂಗಡಿ ಇದೆ- ಇಲ್ಲಿಯ ಸ್ವೀಟು ಖಾರಾ ತಿಂಡಿಗಳು ಜನಪ್ರಿಯವಾದದ್ದು.

'ಆರ್ಯ ಭವನ್ ಸ್ವೀಟ್ಸ್' -ಬೆಂಗಳೂರು ಮೆಜೆಸ್ಟಿಕ್, ಬಳೇಪೇಟೆ, ಗಾಂಧಿಬಜಾರ್, ಜಯನಗರಗಳಲ್ಲಿವೆ. ಉತ್ತರ ಭಾರತದ ಸೊಗಸಾದ ಅನೇಕಾನೇಕ ಸಿಹಿ ತಿನಿಸುಗಳ ಅಂಗಡಿಗಳು ಇವು. ಅತ್ಯಂತ ಜನಪ್ರಿಯವಾದವು. ಇಂಥದ್ದೇ ಒಂದು ಮಹಾತ್ಮಾಗಾಂಧಿ ರಸ್ತೆ, ಕುಂಬ್ಲೆ ಸರ್ಕಲ್ ಹತ್ತಿರದ ಓರಿಯಂಟಲ್ ಬಿಲ್ಡಿಂಗ್ ಹಿಂದೆ ಇರುವ ಕೆಸಿದಾಸ್ (ಚರ್ಚ್ ಸ್ವೀಟ್) -ಇಲ್ಲಿ ಬಂಗಾಲೀ ಸಿಹಿಗಳು ದೊರಕುವ 'ಅಧಿಕೃತ' ತಾಣ. ಇಲ್ಲಿ ರಸಗುಲ್ಲಾ, ಕುಡಿಕೆ ಸಿಹಿ ಮೊಸರು ಅತ್ಯಂತ ಜನಪ್ರಿಯ. ಇದರ ಶಾಖೆಯೊಂದು ರಾಜಾಜಿನಗರ ಭಾಷ್ಯಂ ಸರ್ಕಲ್ ಹತ್ತಿರ ಇದೆ.

ಉಡುಪಿ ಶ್ರೀಕೃಷ್ಣ ಭವನದ ಹತ್ತಿರವೇ ಇರುವ 'ಮಲಬಾರ್ ಲಾಡ್ಜ್' ಶುಚಿರುಚಿ ತಿಂಡಿಗೆ ಅತ್ಯಂತ ಜನಪ್ರಿಯ. ಇದು ಹಿಂದೆ ಮಲ್ಲೇಶ್ವರದಲ್ಲಿಯೂ ಇತ್ತು. ಅದು ಈಗ ದಕ್ಷಿಣ ಕನ್ನಡದವರ ಮಾಲೀಕತ್ವದಲ್ಲಿ 'ನ್ಯೂ ಕೃಷ್ಣಭವನ್' ಆಗಿದೆ (ಮಿಲ್‌ಕಾರ್ನರ್, ಸಂಪಿಗೆ ರಸ್ತೆ). ಇಲ್ಲಿ ಸೊಗಸಾದ ಊಟ-ತಿಂಡಿಗಳು ಸಿಗುತ್ತವೆ. ಮಲ್ಲೇಶ್ವರದ ಎಂಟನೆ ಕ್ರಾಸ್‌ನಲ್ಲಿ ಇರುವ 'ಜನತಾ' -ಬೆಂಗಳೂರಿನ ಇನ್ನೊಂದು ತಿಂಡಿತಿನಿಸಿನ 'ಸ್ಪೆಷಲ್' ಹೋಟಲ್. ಇಲ್ಲಿ ಬಹು ಜನಪ್ರಿಯವಾದ್ದು- ಉದ್ದಿನವಡೆ ಸಾಂಬಾರ್. ಬಿಸಿಬಿಸಿ ವಡೆ, ಬಿಸಿಬಿಸಿ ಎರಡು ಬಟ್ಟಲು ಸಾಂಬಾರ್. ಅನಂತರ ಮಸಾಲೆದೋಸೆ, ಪೂರಿಸಾಗು ಎಲ್ಲರಿಗೂ ಇಷ್ಟವಾದದ್ದು. ಅತ್ಯುತ್ತಮವಾಗಿ ನಿರ್ವಹಣೆಗೊಳ್ಳುತ್ತಿರುವ ಹೋಟಲ್ ಇದು. ಸೊಗಸಾದ ಕಾಫಿ. ನೆಟ್ಟಕಲ್ಲಪ್ಪ ಸರ್ಕಲ್‌ನಲ್ಲಿ ಮೊದಲು ಅಸ್ತಿತ್ವಕ್ಕೆ ಬಂದ 'ಉಪಹಾರ ದರ್ಶಿನಿ' -ಬೆಂಗಳೂರಿನ ತುಂಬಾ, ಏಕೆ ಕರ್ನಾಟಕದ ತುಂಬಾ ದರ್ಶಿನಿ ಹೋಟಲ್‌ಗಳನ್ನು ಪ್ರಾರಂಭವಾಗುವಂತೆ ಮಾಡಿಬಿಟ್ಟಿತು. ಆದರೆ ಉಪಹಾರದ ಹಾಗೆ ಯಾವುದೂ ಆಗಲಿಲ್ಲ.

ಮಲ್ಲೇಶ್ವರದ ಮೂರನೆ ಕ್ರಾಸ್‌ನಲ್ಲಿ ಕೆಲವೇ ವರ್ಷಗಳ ಹಿಂದೆ ಪ್ರಾರಂಭವಾದ 'ಹಳ್ಳಿಮನೆ' ಬೆಂಗಳೂರಿನಲ್ಲಿ ಒಂದು ಹೊಸ ಸರಪಳಿಯನ್ನೆ ಪ್ರಾರಂಭಿಸಿಬಿಟ್ಟಿತು. ಅತಿ ಆತ್ಮೀಯವಾಗಿ, ಮನೆಯ ಅಡುಗೆ ರೀತಿಯಲ್ಲಿ ಇಲ್ಲಿ ಊಟ-ತಿಂಡಿ ಸರಬರಾಜು ಪ್ರಾರಂಭವಾಗಿದೆ. ಇಲ್ಲಿ ಅಕ್ಕಿರೊಟ್ಟಿ, ರಾಗಿ ರೊಟ್ಟಿಗಳು ಅತ್ಯಂತ ಜನಪ್ರಿಯ.

ಬಸವನಗುಡಿ ಹತ್ತಿರದ ವಿಶ್ವೇಶ್ವರಪುರದಲ್ಲಿ, ಮಿನರ್ವಾ ಸರ್ಕಲ್ ಹತ್ತಿರದ 'ನ್ಯೂ ಮಾಡರ್ನ್ ಹೋಟಲ್' (ಎನ್‌ಎಂಎಚ್) ಸೊಗಸಾದ ತಿಂಡಿ-ಊಟ ಹೋಟಲ್. ಇಲ್ಲಿ ಕೈಗೆಟಕುವ ಬೆಲೆಗಳಲ್ಲಿ ತಿಂಡಿತಿನಿಸು ಊಟ ಸಿಗುತ್ತವೆ. ಅತ್ಯಂತ ಆತ್ಮೀಯ ವಾತಾವರಣದಲ್ಲಿ ಶುಚಿ-ರುಚಿ ಎದ್ದು ಕಾಣಿಸುತ್ತದೆ.

ಬೆಂಗಳೂರಿಗೆ ಹುಬ್ಬಳ್ಳಿಯ ಕಾಮತ್ ಹೋಟಲ್ ೪೦ ವರ್ಷಗಳಿಗೂ ಹಿಂದೆ ಬಂದದ್ದು ಸ್ವಾಗತಾರ್ಹ ವಿಷಯವಾಯಿತು. ಈಗ ಬೆಂಗಳೂರಿನ ವಿವಿಧೆಡೆ ಕಾಮತ್

ಹೋಟಲ್‌ಗಳಿವೆ. ಇವೆಲ್ಲಕ್ಕೂ ಶಿಖರಪ್ರಾಯವಾಗಿ ಮೆಜೆಸ್ಟಿಕ್, ಗಾಂಧಿನಗರದಲ್ಲಿರುವ 'ಕಾಮತ್ ಯಾತ್ರಿ ನಿವಾಸ್'. ಇಲ್ಲಿಯೂ ಮೇಲ್ಮಟ್ಟದ ಆಡಳಿತ ನಿರ್ವಹಣೆ ಇದೆ. ರುಚಿ-ಶುಚಿಗೆ ಪ್ರಾಧಾನ್ಯವಿದೆ. ಆಧುನಿಕ ಪರಿಸರವಿದೆ. ಕಾಮತ್ ಸರಪಳಿಯ ಹಾಗೆಯೇ 'ಪೈ ಸರಪಳಿ'ಯೂ ಅನೇಕ ಕಡೆಗಳಲ್ಲಿ ಉತ್ತಮವಾಗಿ ಹೋಟಲ್ ನಿರ್ವಹಣೆ ಮಾಡುತ್ತಿದೆ. ಮಿನರ್ವಾ ಸರ್ಕಲ್‌ನ 'ಪೈ ಹೋಟಲ್' -ಉತ್ತಮ ತಿಂಡಿತಿನಿಸು ಊಟದ ಹೋಟಲ್. ಕಾರ್ಪೊರೇಷನ್ ಆಫೀಸ್ ಹತ್ತಿರ ಬಾದಾಮಿ ಕಟ್ಟಡದ ಪಕ್ಕದಲ್ಲೊಂದು ಪೈ ವಿಹಾರ್, ಕೆಂಗಲ್ ಹನುಮಂತಯ್ಯ ಡಬ್ಬಲ್ ರಸ್ತೆ 'ಪೈ ಹೋಟಲ್', ಜಯನಗರ ೪ನೇ ಬ್ಲಾಕ್ ಜನಮೆಚ್ಚುಗೆ ಗಳಿಸಿವೆ. ಕಾಮತ್-ಪೈ ಹೋಟಲ್‌ಗಳಲ್ಲಿ 'ಲಾಡ್ಜಿಂಗ್' ಕೂಡ ಇದೆ.

ಬೆಂಗಳೂರಿನ ಒಂದು ದೊಡ್ಡ-ವಿಸ್ತಾರವಾದ ಹೋಟಲ್ 'ಉಡ್‌ಲ್ಯಾಂಡ್ಸ್', ಬೆಂಗಳೂರು ಕಂಠೀರವ ಸ್ಟೇಡಿಯಂನಿಂದ ಮುಂದೆ, ಮಲ್ಯ ಆಸ್ಪತ್ರೆ ಹತ್ತಿರ ಇದೆ. ಬಹುಶಃ ಐವತ್ತು-ಅರವತ್ತು ವರ್ಷ ದಾಟಿರುವ ಹೋಟಲ್. ಪ್ರಾರಂಭದಲ್ಲಿ ಅತಿ ಸಾಂಪ್ರದಾಯಿಕ ಉಡುಪಿ ಹೋಟಲ್‌ನಂತೆ ಇದ್ದು ಸಸ್ಯಾಹಾರಿಗಳನ್ನು ಊಟ-ತಿಂಡಿಗೆ ಆಕರ್ಷಿಸುತ್ತಿದ್ದ ಇದು, ಈಗ ಎಲ್ಲ ಸ್ತರದ ಜನರನ್ನೂ ಆಕರ್ಷಿಸುವ ದೊಡ್ಡ ಸ್ಟಾರ್ ಹೋಟಲ್ ಆಗಿದೆ. ಬಹುಶಃ, ಒಂದು ಕಾಂಪೌಂಡ್‌ನಲ್ಲಿ ರೆಸ್ಟಾರೆಂಟ್, ಲಾಡ್ಜಿಂಗ್, ಅತಿಥಿ ಗೃಹಗಳು, ಸಭಾಭವನಗಳು ಎಂದಿರುವ ಹೋಟಲ್ ಇದೊಂದೇ ಇರಬೇಕು. ಇಲ್ಲಿ ಮದುವೆಗಳು, ಸಾಹಿತ್ಯ- ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗುತ್ತಲೇ ಇರುತ್ತವೆ. ಇವರದೇ ಪುಟ್ಟ ರೆಸ್ಟಾರೆಂಟ್ 'ಉಡೀಸ್' ಕಮರ್ಶಿಯಲ್ ರಸ್ತೆಯಲ್ಲಿದೆ.

ಇನ್ನು ಬೆಂಗಳೂರಿನ ಮುಖ್ಯ ಬೀದಿಬೀದಿಗಳಲ್ಲೂ 'ಅಯ್ಯಂಗಾರ್ ಬೇಕರಿ'ಗಳಿವೆ. ಬೇರೆ ಬೇರೆ ದೊಡ್ಡ ಬೇಕರಿಗಳೂ ಇವೆ. ನಿಂತ ನಿಲುವಿನಲ್ಲಿಯೇ ರುಚಿಕರ ತಿಂಡಿಗಳನ್ನು ಪಡೆದು ತಿನ್ನಬಹುದು. ಸಿಹಿಬ್ರೆಡ್, ಬನ್, ಖಾರಾಬ್ರೆಡ್- ಬನ್, ಬೆಣ್ಣೆ-ಉಪ್ಪು ಖಾರಾ ಬಿಸ್ಕತ್ತುಗಳು, ಪಲ್ಯದ ಬನ್‌ಗಳು, ಪಫ್‌ಗಳು- ಬಿಸಿಬಿಸಿಯಾಗಿ ದೊರಕುತ್ತವೆ. ಊಟ ತಿಂಡಿ ದೊರಕದಿರುವ ಕಡೆ ಅಯ್ಯಂಗಾರ್ ಬೇಕರಿಯೊಂದು ಇದ್ದೇ ಇರುತ್ತದೆ. ಬೆಳಗ್ಗಿನಿಂದ ಮಧ್ಯರಾತ್ರಿಯವರೆಗೂ ತೆರೆದಿರುವ ಬೇಕರಿಗಳೂ ಇವೆ. ಇವುಗಳ ಅತ್ಯುತ್ತಮ ಮಾದರಿ, ಕಪಾಲಿ ಟಾಕೀಸ್ ಎದುರಿನ 'ಸೂರ್ಯ ಬೇಕರಿ'ಯಲ್ಲಿ ನೋಡಬಹುದು. ಈ ಬೇಕರಿಗೆ ಐವತ್ತು ವರ್ಷಗಳು ದಾಟಿರಬಹುದು. ಎರಡನೆ-ಮೂರನೆಯ ತಲೆಮಾರಿನ ನಿರ್ವಹಣೆಯಲ್ಲಿದೆ. ಅತ್ಯಂತ ಶುಚಿ-ರುಚಿ ಇಲ್ಲಿನ ವಿಶೇಷ.

ಹೀಗೆಯೇ ಉತ್ತಮ ಆಡಳಿತ, ರುಚಿ-ಶುಚಿಗೆ ಹೆಸರಾದ ಇನ್ನೊಂದು ಹೋಟಲ್ ಸರಪಳಿ ಕುರಿತು ಹೇಳಲೇಬೇಕು: 'ಸುಖ-ಸಾಗರ' ಎನ್ನುವ ಸರಪಳಿ. ಉತ್ತರ ಭಾರತ

ತಿಂಡಿತಿನಿಸಿ ಊಟಗಳಿಗೆ ಪ್ರಸಿದ್ಧಿ. ಬೆಂಗಳೂರು ಗಾಂಧಿನಗರ ಸಿಂಡಿಕೇಟ್ ಬ್ಯಾಂಕ್ ಎದುರು ಮುಖ್ಯವಾದ ದೊಡ್ಡದು, ಬಳೇಪೇಟೆ ಮೆಜೆಸ್ಟಿಕ್ ಟಾಕೀಸ್ ಎದುರಿಗಿರುವುದು ಮತ್ತು ಜಯನಗರ ೪ನೇ ಬ್ಲಾಕ್‌ನಲ್ಲಿರುವುದೊಂದು -ಹೀಗೆ ಮೂರು 'ಸುಖಸಾಗರ'ಗಳು ಅಪ್ಪಟ ಸಸ್ಯಾಹಾರಿ ಆಹಾರಕ್ಕೆ ಪ್ರಸಿದ್ಧಿ. ಇಲ್ಲಿನ ಗುಜರಾಥೀ ಸಸ್ಯಾಹಾರಿ ಊಟ ಅತ್ಯಂತ ರುಚಿಕರ ಮತ್ತು ವೈವಿಧ್ಯಮಯ.

'ಬ್ಲೂಬೆಲ್ ಸ್ವೀಟ್ಸ್' ಸಂತ ಮಾರ್ಕ್ ರಸ್ತೆ, ಜಯನಗರ ಕಾಂಪ್ಲೆಕ್ಸ್, ಯೂನಿಟಿ ಕಟ್ಟಡ, ಯೂಟಿಲಿಟಿ ಕಟ್ಟಡ -ಹೀಗೆ ನಾಲ್ಕು ಕಡೆ ಸಿಹಿಲೋಕ ತೆರೆದಿದೆ. ಹೀಗೆಯೇ, ಚೆನ್ನೈನ 'ಶ್ರೀಕೃಷ್ಣಾ ಸ್ವೀಟ್ಸ್ - ಮೈಸೂರು ಪಾ' ಬಸವನಗುಡಿ ಮತ್ತು ಮಲ್ಲೇಶ್ವರಗಳಲ್ಲಿವೆ. ಶುದ್ಧ ಪದಾರ್ಥಗಳಿಂದ ತಯಾರಾದ ಸಿಹಿಗಳಿಗೆ ಗ್ಯಾರಂಟಿ ತಾಣಗಳು.

ಮಾಂಸಾಹಾರಿಗಳನ್ನೂ, ಸಸ್ಯಾಹಾರಿಗಳನ್ನೂ ಆಕರ್ಷಿಸುತ್ತಿರುವ ಆಂಧ್ರ ಶೈಲಿಯ ಅನೇಕ ಹೋಟಲ್‌ಗಳಿವೆ. ನಂದಿನಿ ಸರಪಳಿ ಅನೇಕ ಕಡೆ ಇದೆ (ಮಿನರ್ವಾ ಸರ್ಕಲ್, ಸ್ಯಾಂಕಿರಸ್ತೆ, ಗಾಂಧಿನಗರ, ರಾಜಾಜಿನಗರ, ಇಂದಿರಾ ನಗರಗಳಲ್ಲಿವೆ). ಪ್ರಕಾಶ್‌ನಗರದ 'ಆದಿತ್ಯಾ', ರೆಸಿಡೆನ್ಸಿ ರಸ್ತೆಯ 'ಅಮರಾವತಿ', ಚರ್ಚ್ ರಸ್ತೆಯ 'ಭೀಮಾಸ್', ರೆಸಿಡೆನ್ಸಿ ರಸ್ತೆಯ 'ನಾಗಾರ್ಜುನಾ ಸವಾಯ್', ಶೇಷಾದ್ರಿ ರಸ್ತೆಯ 'ನವಯುಗ', ಜೆಸಿ ರಸ್ತೆಯ 'ಮಯೂರಿ', ಜಯನಗರ ೩ನೇ ಬ್ಲಾಕ್‌ನ 'ನಾಗಾರ್ಜುನ ಚಿಮಣಿ', ಎಚ್. ಸಿದ್ಧಯ್ಯ ರಸ್ತೆಯ 'ನವರುಚಿ' -ಇವೆಲ್ಲ ಜನಪ್ರಿಯ ಆಂಧ್ರಶೈಲಿಯ ಹೋಟಲ್‌ಗಳು.

ಬೆಂಗಳೂರಿನ ಪ್ರತಿಯೊಂದು ಬಡಾವಣೆಯಲ್ಲೂ ಪುಟ್ಟ ಪುಟ್ಟ ನೂರಾರು ಹೋಟಲ್‌ಗಳಿವೆ. ಕೆಲವಂತೂ ಶುಚಿ-ರುಚಿಯಲ್ಲಿ ಉತ್ತಮ ಮಟ್ಟವನ್ನು ಉಳಿಸಿಕೊಂಡು ಬಂದಿವೆ. ಇಡ್ಲಿ ವಡೆ ದೋಸೆ-ಕಾಫಿ ಎಲ್ಲ ಕಡೆಯೂ ದೊರಕುತ್ತವೆ.

ತಿಂಡಿತಿನಿಸು ಊಟಗಳಿಗೆ ಸುಪ್ರಸಿದ್ಧವಾಗಿರುವ ವಿದ್ಯಾರ್ಥಿ ಭವನ, ಉಡುಪಿ ಶ್ರೀಕೃಷ್ಣ ಭವನ್, ಜನಾರ್ಧನ ಹೋಟಲ್, ನ್ಯೂ ಮಾಡ್ರನ್ ಹೋಟಲ್, ದ್ವಾರಕಾ ಹೋಟಲ್, ಜನತಾ ರೆಸ್ಟಾರೆಂಟ್ ಮೊದಲಾದ ಬೇರೆ ಬೇರೆ ಕಡೆಗಳಲ್ಲಿ 'ಸ್ಪೆಷಲ್' ತಿಂಡಿ-ಊಟಗಳಿಗಾಗಿ ಹೋಗಬೇಕಾಗುತ್ತದೆ.

ಇತ್ತೀಚೆಗೆ ಪ್ರಾರಂಭವಾದ 'ಅಡಿಗಾಸ್' ಹೋಟಲ್ ಸರಪಳಿ ದಿಢೀರ್ ಜನಪ್ರಿಯತೆ-ಜನಾಕರ್ಷಣೆ ಗಳಿಸಿದೆ. ಜಯನಗರ ೪ನೇ ಬ್ಲಾಕ್, ೫ನೇ ಬ್ಲಾಕ್, ೯ನೇ ಬ್ಲಾಕ್ ಮತ್ತು ಬನ್ನೇರುಘಟ್ಟ ರಸ್ತೆಗಳಲ್ಲಿರುವ ನಾಲ್ಕು ಹೋಟಲ್‌ಗಳಲ್ಲೂ ಉಡುಪಿ ರುಚಿಯ ತಿಂಡಿತಿನಿಸುಗಳಿವೆ.

■■

೮. ಎಂಟಿಆರ್, ಬೆಂಗಳೂರು!

ಬೆಂಗಳೂರಿನ ಹೋಟಲ್ ಉದ್ಯಮದಲ್ಲಿ ಅತಿ ವಿಶಿಷ್ಟವಾದ, ಅತಿ ಗೌರವಾನ್ವಿತವಾದ ಹೆಸರು: ಎಂಟಿಆರ್. ಎಂಟಿಆರ್ ಮುದ್ರೆ ಯಾವುದರ ಮೇಲೆ ಇರುತ್ತದೆಯೊ ಅದನ್ನು ಧೈರ್ಯವಾಗಿ ಕೊಳ್ಳಬಹುದು ಎನ್ನುವ ನಂಬಿಕೆ ಸ್ಥಾಪಿಸಿರುವ ಅರ್ಧ ಶತಮಾನ ದಾಟಿರುವ ಹೋಟಲ್ ಇದು.

ಬೆಂಗಳೂರು ಲಾಲ್‌ಬಾಗ್ ಹತ್ತಿರ, ಮಾವಳ್ಳಿಗೆ ಸೇರಿದ ಪ್ರದೇಶದಲ್ಲಿ ಈಗ ನಮ್ಮ 'ಎಂಟಿಆರ್' ಹೋಟಲ್ ಇದೆ. ಬಹುಶಃ, ಬೆಂಗಳೂರಿನ ಎಲ್ಲ ಪ್ರದೇಶದ ಜನರೂ ತಪ್ಪದೇ ಭೇಟಿ ಕೊಡುವ ಏಕಮಾತ್ರ ಹೋಟಲ್ 'ಎಂಟಿಆರ್' ಇರಬಹುದು.

ಉಡುಪಿ ಮೂಲದ ಕೃಷಿಯನ್ನೆ ಆಧಾರವಾಗಿಟ್ಟುಕೊಂಡಿದ್ದ ಮಯ್ಯ ಕುಟುಂಬದವರು ಬೆಂಗಳೂರಿಗೆ ಬಂದು ಕಾಫಿ ಹೋಟಲ್ ಪ್ರಾರಂಭಿಸಿದರು. ಉಡುಪಿ ಜನರ ಒಂದು ಶಿಸ್ತು, ಶುಚಿ-ರುಚಿಯನ್ನು ಮೊದಲಿನಿಂದಲೇ ಜಾರಿಗೆ ತಂದಾಗ ಈ ಪುಟ್ಟ ಹೋಟಲ್ ಕಾಫಿ, ತಿಂಡಿ, ಊಟಕ್ಕೆ ಜನಪ್ರಿಯವಾಗಿತ್ತು. ಹೋಟಲ್ ನಿರ್ವಹಣೆ ಇನ್ನೊಂದು ತಲೆಮಾರಿಗೆ ಬಂದಾಗ, 'ಮಾವಳ್ಳಿ ಟಿಫಿನ್ ರೂಂ' ಎಂದಾಯಿತು. ಅತ್ಯಂತ ರುಚಿಕಟ್ಟಾದ ತಿಂಡಿಗಳು, ಶುಭ್ರ ವಸ್ತ್ರಧಾರಿಗಳಾದ ಮಾಣಿಗಳು, ಅನುಭವೀ ಪಾಕಶಾಸ್ತ್ರ ಪ್ರವೀಣರು, ಹೊಸ ರೀತಿಯ ರುಚಿ -ಇವು ಬೆಂಗಳೂರಿನವರನ್ನು ಆಕರ್ಷಿಸಿದವು. ಮೊದಮೊದಲು ಬಸವನಗುಡಿ, ಚಾಮರಾಜಪೇಟೆ, ವಿಶ್ವೇಶ್ವರಪುರ, ಮಾವಳ್ಳಿಗಳ ನಿವಾಸಿಗಳನ್ನು ಆಕರ್ಷಿಸಿತು. ಮತ್ತೆ, ಬೆಂಗಳೂರಿನ ಜನಪ್ರಿಯ-ಐತಿಹಾಸಿಕ ಉದ್ಯಾನವನ 'ಲಾಲ್‌ಬಾಗ್'ಗೆ ಭೇಟಿ ನೀಡುತ್ತಿದ್ದವರೆಲ್ಲ 'ಎಂಟಿಆರ್'ಗೆ ಭೇಟಿಕೊಟ್ಟು ತಿಂಡಿ-ಕಾಫಿ ತೆಗೆದು ಕೊಳ್ಳುವುದು ಒಂದು ಫ್ಯಾಷನ್ (Fashion) ಆಗಿದ್ದದ್ದು ಮುಂದೆ ಅದೇ ಒಂದು ಪ್ಯಾಷನ್ (Passion) ಆಗಿಹೋಯಿತು. ಇಡೀ ಬೆಂಗಳೂರಿನ ತಿಂಡಿ ಪ್ರಿಯರನ್ನು ಎಂಟಿಆರ್ ಆಕರ್ಷಿಸಿತು. ಬರಬರುತ್ತ ಅದು ಅಧಿಕಾರಿಗಳ, ಉಳ್ಳವರ, ಶ್ರೀಮಂತರ, ವ್ಯಾಪಾರಸ್ಥರ ಪಾರ್ಟಿ ತಾಣವಾಯಿತು. ಬಡವರು-ಬಲ್ಲಿದರು ಎಲ್ಲರೂ ಬರತೊಡಗಿದರು. ಭಾರತದ ಎಲ್ಲ ರಾಜ್ಯ, ಊರುಗಳ ಪ್ರವಾಸಿಗಳು ಬೆಂಗಳೂರಿಗೆ ಬಂದರೆ, 'ಎಂಟಿಆರ್'ಗೆ ಒಂದು ಸಲವಾದರೂ ಭೇಟಿ ಕೊಡುವುದು ಒಂದು ಗೌರವದ ವಿಷಯವಾಯಿತು.

ಬೆಂಗಳೂರಿನವರಲ್ಲದೆ, ಕರ್ನಾಟಕ ರಾಜ್ಯದ ಜನ ಎಂಟಿಆರ್‌ಗೆ ತಿನ್ನಲು ಬರುತ್ತಾರೆ. ಬೇರೆ ಬೇರೆ ರಾಜ್ಯಗಳ ಜನ, ದೇಶದ ವಿಧವಿಧ ಪ್ರವಾಸಿಗರು ಬೆಂಗಳೂರಿಗೆ ಬಂದಾಗ 'ಎಂಟಿಆರ್' ಮರೆಯುವುದಿಲ್ಲ. ಬೆಂಗಳೂರಿನ ಅನೇಕ ಪ್ರವಾಸೀ ತಾಣಗಳ ಹಾಗೆ ಆಗಿಹೋಗಿದೆ-ಎಂಟಿಆರ್.

ಎಂಟಿಆರ್ ಹೀಗೆ ಎಲ್ಲರನ್ನೂ ಆಕರ್ಷಿಸಿದ್ದಾದರೂ ಏಕೆ, ಹೇಗೆ?

ಇದಕ್ಕೆ 'ಎಂಟಿಆರ್' ಮೂಲ ಸ್ಥಾಪಕರು ಕಾರಣರು ಎಂದೇ ಹೇಳಬೇಕು. ಏಕೆಂದರೆ, ಹೋಟಲ್ ಪ್ರಾರಂಭಿಸಿದ ಮೊದಲ ದಿನದಿಂದಲೇ ಚಿಕ್ಕ ಹೋಟಲ್‌ಗಳು ಕಾಣದ ಶಿಸ್ತು-ರುಚಿ-ಶುಚಿಗಳನ್ನು ಮೊದಲ ಮಯ್ಯರು ಜಾರಿಗೆ ತಂದರು. ಇದು ಮುಂದಿನ ಮಯ್ಯರ ಮೇಲೆ ಪ್ರಭಾವ ಬೀರಿತು. 'ಉತ್ತಮ ಹೋಟಲ್ ಎಂದರೆ ಹೀಗೆಯೇ ಇರಬೇಕು!' ಎಂದು ಮಯ್ಯ ತಲೆಮಾರಿಗೆ ಅನ್ನಿಸಿರಲಿಕ್ಕೂ ಸಾಕು. ಹೋಟಲ್‌ನ್ನು ಬೆಳೆಸಬೇಕು, ವ್ಯಾಪಾರ ಅಭಿವೃದ್ಧಿ ಗೊಳ್ಳಬೇಕು ಎಂದು ಹೊಸ ತಲೆಮಾರು ಬಯಸಿದಾಗ, ಅವರಿಗೆ, ಶಿಸ್ತು-ರುಚಿ- ಶುಚಿ ಎನ್ನುವುದೇ ಮೂಲಮಂತ್ರವಾಯಿತು. ಜೊತೆಗೆ, ಈಗಿನವರು ವಿದೇಶಗಳಿಗೆ ಹೋಗಿ ಹೋಟಲ್ ಉದ್ಯಮವನ್ನು ನೋಡಿಕೊಂಡು ಬಂದಾಗ, ಆಧುನಿಕ 'ಎಂಟಿಆರ್'ಗೊಂದು ನೀತಿನಿಯಮಾವಳಿಯನ್ನು ಹಾಕಿದಂತಾಯಿತು. 'ಎಂಟಿಆರ್' ಈಗಿನ ಎಂಟಿಆರ್ ಆಯಿತು. ಅಲ್ಲೊಂದು ಶಿಸ್ತಿದೆ, ನಿಯಮವಿದೆ, ಶುಚಿ ಇದೆ ಎಂದು ಗ್ರಾಹಕರಿಗೆ ತಿಳಿಯುತ್ತಿದ್ದಂತೆಯೆ, ನಂಬಿಕೆಯಿಂದ ಜನ ಬರತೊಡಗಿದರು. ಗುಣಗ್ರಾಹಿ ಗ್ರಾಹಕರ ಮನತಣಿಸಲು ಎಂಟಿಆರ್ ತಿನಿಸುಗಳು ಮೇಲ್ಮಟ್ಟದ್ದಾಗಿರಲೇಬೇಕಾಯಿತು. ಈಗಿನ ಮಯ್ಯರು ಇದನ್ನು ಪಾಲಿಸಿದರು.

'ಎಂಟಿಆರ್'ನವರು ಏನು ಮಾಡಿದರು ಯಶಸ್ಸು ಕಟ್ಟಿಟ್ಟ ಬುತ್ತಿ ಎನ್ನುವ ಹೆಸರು-ನಂಬಿಕೆ ಗಳಿಸಲು ಈ ಶಿಸ್ತಿನ ಬೆಳವಣಿಗೆ ಕೆಲಸ ಮಾಡಿತು.

ಎಂಟಿಆರ್ ಬೆಳಗ್ಗೆ ಬಾಗಿಲು ತೆರೆಯುತ್ತದೆ ಎಂದರೆ ಜನ ಕಾದು ನಿಲ್ಲುತ್ತಾರೆ, ಮಧ್ಯಾಹ್ನ ಊಟಕ್ಕೆ, ಸಂಜೆ ತಿಂಡಿ-ಕಾಫಿಗೆ ತಾಳ್ಮೆಯಿಂದ ಕಾಯುತ್ತಾರೆ. ತಿಂಡಿಪ್ರಿಯರು ಬಂದಕೂಡಲೇ ಹೆಸರು ಬರೆಸಬೇಕು, ಊಟಕ್ಕೆ ಬಂದಾಗ ಹಣ ಕಟ್ಟಿ ಟೋಕನ್ ಪಡೆಯಬೇಕು. 'ಮೊದಲು ಬಂದವರಿಗೇ ಆದ್ಯತೆ' ಎಂಬಂತೆ ಈ ನಂಬರ್ ಪ್ರಕಾರ ಗ್ರಾಹಕರನ್ನು ಒಳಕರೆದು ಸರಿಯಾದ ಸ್ಥಳ ಮಾಡಿ ಕೂಡಿಸುತ್ತಾರೆ. ಒಳಸೇರಿ ಕುರ್ಚಿಯ ಮೇಲೆ ಕುಳಿತಕೂಡಲೇ ನಾಲಗೆಗೆ ರಸೋತ್ಸವ.

ಎಂಟಿಆರ್‌ನ ಎಲ್ಲ ಪದಾರ್ಥಗಳೂ ರುಚಿಕರ, ಅತ್ಯುತ್ತಮ, ಇಡ್ಲಿ ವಡೆಯೊ, ಪೂರಿಸಾಗುವೊ, ಮಸಾಲೆ ದೋಸೆಯೊ, ಚೌಚೌಬಾತೋ, ರವಾ ಇಡ್ಲಿಯೊ, ಸಿಹಿ ಸ್ಪೆಷಲ್‌ಗಳೊ ಎಲ್ಲವೂ ಅತ್ಯುತ್ತಮ ಆಯ್ದ ಪದಾರ್ಥಗಳಿಂದ ತಯಾರಿಸಿದವು. ಗ್ರಾಹಕರು

ಅಡುಗೆ ಮನೆಯನ್ನೂ ಒಳಹೊಕ್ಕು ನೋಡಬಹುದು. ಪಾತ್ರೆ ಪಡಗ ತೊಳೆಯುವ ಜಾಗವನ್ನೂ ನೋಡಬಹುದು. ಎಲ್ಲವೂ ಆಧುನಿಕ ರೀತಿಗಳಲ್ಲಿ ನಡೆಯುತ್ತವೆ.

ಈಚಿನ ಕೆಲ ವರ್ಷಗಳಿಂದ ಊಟವನ್ನು ಪ್ರಾರಂಭಿಸಿದ್ದಾರೆ.

ಎಂಟಿಆರ್ ಊಟವೆಂದರೆ, 'ವಿವಾಹ ಭೋಜನವಿದು...!'

ಭೂರಿ ಊಟ-ಅನಿಯಮಿತ-ಎಷ್ಟು ಬೇಕಾದರೂ ತಿನ್ನಬಹುದು!

ಸೂಪ್, ಜ್ಯೂಸ್, ಚಪಾತಿ ಅಥವಾ ಪೂರಿ ಅಥವಾ ದೋಸೆ, ಒಂದು ಸಿಹಿ, ಬಿಸಿಬೇಳೆಬಾತ್, ಎರಡು ಮೂರು ಪಲ್ಯಗಳು, ರಾಯಿತ-ಉಪ್ಪಿನಕಾಯಿ- ಹಪ್ಪಳ, ಅನ್ನ-ಸಾರು, ಚಿತ್ರಾನ್ನ-ಪಾಯಸ, ಮೊಸರನ್ನ, ಸಲಾಡ್ ಐಸ್‌ಕ್ರೀಂ, ಬಾಳೆಹಣ್ಣು-ಬೀಡ.

-ಹೀಗೆ ಹದಿನೆಂಟು ಇಪ್ಪತ್ತು ಬಗೆ ಪದಾರ್ಥಗಳು. ಗ್ರಾಹಕರಿಗೆ ಇವನ್ನು ಮುಗಿಸುವ ತಾಕತ್ತಿರಬೇಕು, ಎಂಟಿಆರ್‌ಗೆ ಬಡಿಸಲು ಯಾವ ಸಂಕೋಚವೂ ಇರುವುದಿಲ್ಲ.

ಎಂಟಿಆರ್ ಹೋಟಲ್ ಜನಪ್ರಿಯವಾಯಿತೆಂದು ಅವರು ಇನ್ನೊಂದು ಶಾಖೆ ಮಾಡಲಿಲ್ಲ. 'ಇರುವುದೊಂದೇ ಎಂಟಿಆರ್' ಎಂಬಂತೆ ಎಲ್ಲರೂ ಲಾಲ್‌ಬಾಗ್ ಹತ್ತಿರವೇ ಬರಬೇಕು. ಸಮಯ ವ್ಯಯಿಸಲು ಸಿದ್ಧರಾಗಿರಬೇಕು, ಕಾಯಲು ತಾಳ್ಮೆಯಿಂದಿರಬೇಕು -ಕಾದಿರಿಸಿದ್ದ ನಂಬರ್ ಬಂದಕೂಡಲೇ ಸ್ವರ್ಗದ ಬಾಗಿಲು ತೆರೆದಂತೆ, ಕಾದ ಬೇಸರವೆಲ್ಲವೂ ಒಂದೇ ಕ್ಷಣದಲ್ಲಿ ಕರಗಿ ಹೋಗುತ್ತದೆ. ರಸಪಾಕಲೋಕ ತೆರೆದುಕೊಳ್ಳುತ್ತದೆ. ರುಚಿ ಬೇರುಗಳೆಲ್ಲವೂ ಥಟ್ಟನೆ ಎದ್ದು ಕುಳಿತುಕೊಳ್ಳುತ್ತವೆ. 'ವಿವಾಹ ಭೋಜನವಿದು...' ಎದುರಾಗುತ್ತದೆ!

ಎಂಟಿಆರ್ ಹೋಟಲ್ ಬೆಳೆದಂತೆ, ಎಂಟಿಆರ್ ಸಿದ್ಧ ಆಹಾರಗಳ ಉದ್ಯಮವೂ ಬೆಳೆಯಿತು. ದಿಢೀರ್ ರವಾಇಡ್ಲಿ ಮಿಕ್ಸ್, ರವಾದೋಸೆ ಮಿಕ್ಸ್, ಉದ್ದಿನವಡೆ ಮಿಕ್ಸ್, ಬಿಸಿಬೇಳೆ ಬಾತ್, ವಿವಿಧ ಸಾಂಬಾರ ಪುಡಿಗಳು -ಹೀಗೆ ಕೋಟ್ಯಂತರ ರೂಪಾಯಿಗಳ ಉದ್ಯಮವೊಂದು ಜನ್ಮತಾಳಿ ವಿಶ್ವರೂಪ ತಾಳಿತು.

ಐವತ್ತು ವರ್ಷಗಳಿಗೂ ಹಿಂದೆ ಜೀವನಾಧಾರವಾಗಿ ಹಿರಿಯ ಮಯ್ಯರು ಪ್ರಾರಂಭಿಸಿದ ಹೋಟಲ್ ಈಗ ನೂರಾರು, ಸಾವಿರಾರು ಜನರಿಗೆ ಜೀವನಾಧಾರವಾಗಿ ಬೆಳೆದಿರುವುದೊಂದು ಹೆಮ್ಮೆಯ ವಿಷಯ -ಕರ್ನಾಟಕದ ಪಾಲಿಗೆ.

ಬೆಂಗಳೂರಿಗರಿಗೆ ಇದು **'ನಮ್ಮ ಎಂಟಿಆರ್!'**

■■

ಎಂಟಿಆರ್ ಫೋನ್ ನಂಬರ್-೨೨೨೨೦೦೨೨

* ಅಲ್ಲಿಗೆ ಭೇಟಿಕೊಡುವ ಮೊದಲು ವಿಚಾರಿಸಬಹುದು, ನಿಮ್ಮ ಆಗಮನದ ಬಗ್ಗೆ ತಿಳಿಸಬಹುದು. ಇಲ್ಲಿ ಯಾವುದಕ್ಕೂ 'ರಿಸರ್ವೇಷನ್' ಇಲ್ಲ. ಎಂಟಿಆರ್ ಹೋಟಲ್‌ಗೇ ಬೇಗ ಹೋಗಿ ಸಾಲು ಸೇರಬಹುದು.

* ನಗರ ಸಾರಿಗೆಯಲ್ಲಿ ನಿಮ್ಮ ಬಡಾವಣೆಯಿಂದ ಇಲ್ಲಿಗೇ ನೇರವಾಗಿ ತಲುಪುವುದು ಕಷ್ಟವಾಗಬಹುದು. ಆಟೋದಲ್ಲಿ ನೇರವಾಗಿ ಅಲ್ಲಿಗೆ ಹೋಗಿ ತಲುಪಬಹುದು. 'ಎಂಟಿಆರ್' ಎಂದರೆ ಯಾವ ಆಟೋದವರು ಬೇಕಾದರೂ ತಲುಪಿಸುತ್ತಾರೆ. ಆಟೋ ಹತ್ತುವ ಮೊದಲು ಮೀಟರ್ ಹಾಕಿಸಿ, ಇಳಿಯುವಾಗ ಮೀಟರ್ ತೋರಿಸುವ ಹಣ ಕೊಟ್ಟರಾಗುತ್ತದೆ.

* ಲಾಲ್‌ಬಾಗ್ ಭೇಟಿ- ಎಂಟಿಆರ್ ಭೇಟಿ ಒಂದೇ ದಿನ ಇಟ್ಟುಕೊಂಡರೆ ಅನುಕೂಲವಾಗುತ್ತದೆ. ಬೆಳಗ್ಗೆ ಬಂದು ಟಿಫನ್ ಮಾಡಿ ಲಾಲ್‌ಬಾಗ್‌ಗೆ ಹೋಗಬಹುದು. ಅಥವಾ ಮಧ್ಯಾಹ್ನ ಬಂದು ಊಟ ಮುಗಿಸಿ ಲಾಲ್‌ಬಾಗ್‌ಗೆ ಹೋಗಿ ಸ್ವಲ್ಪ ವಿಶ್ರಮಿಸಿಕೊಂಡು ಅನಂತರ ಲಾಲ್‌ಬಾಗ್ ಸುತ್ತಾಡಬಹುದು. ಐದುಘಂಟೆ-ಆರುಘಂಟೆಗೆ ಹೊರಬಂದು ಮನೆಯ ದಾರಿ ಹಿಡಿಯಬಹುದು.

* ನೀವು ಬೆಂಗಳೂರಿನ ಯಾವುದೇ ಬಡಾವಣೆಯಲ್ಲಿದ್ದರೂ ಬೆಂಗಳೂರು ನಗರ ಸಾರಿಗೆ ಬಸ್ ನಿಲ್ದಾಣಕ್ಕೆ- ಮೆಜೆಸ್ಟಿಕ್ - ಬಂದುಬಿಟ್ಟರೆ, ಅಲ್ಲಿಂದ ಲಾಲ್‌ಬಾಗ್‌ಗೆ ಬಸ್‌ಗಳು ಸಿಗುತ್ತವೆ. ಲಾಲ್‌ಬಾಗ್ ಮುಂದೆ - ಪ್ರಧಾನ ಹೆಬ್ಬಾಗಿಲು (Front Gate) ಬಸ್ ಸ್ಟಾಂಡ್‌ನಲ್ಲಿ ಇಳಿದು ನಾಲ್ಕು ಹೆಜ್ಜೆ ಹಿಂದೆ ಹಾಕಿ ಎಂಟಿಆರ್ ತಲುಪಬಹುದು.

  ಮತ್ತೆ ವಾಪಸ್ಸಾಗುವಾಗಲೂ ಮೆಜೆಸ್ಟಿಕ್ ಬಸ್ ನಿಲ್ದಾಣಕ್ಕೆ ಬಂದು ಅಲ್ಲಿಂದ ನಿಮ್ಮ ನಿಮ್ಮ ಬಡಾವಣೆಗಳಿಗೆ ಹೋಗುವುದು ಒಳ್ಳೆಯದು.

ಲಾಲ್‌ಬಾಗ್‌ಗೆ ಹತ್ತಿರವೇ ಇರುವ ಉತ್ತಮ ಸಸ್ಯಾಹಾರಿ ತಿಂಡಿ ಕಾಫಿ ಊಟದ ಹೋಟಲ್‌ಗಳು

* ಎಂಟಿಆರ್- ಲಾಲ್‌ಬಾಗ್ ಎದುರು
* ಎನ್‌ಎಂಎಚ್- ಮಿನರ್ವಾ ಸರ್ಕಲ್ ಹತ್ತಿರ (ನ್ಯೂ ಮಾಡ್ರನ್ ಹೋಟಲ್)
* ಪೈ ಹೋಟಲ್- ಮಿನರ್ವಾ ಥಿಯೇಟರ್ ಕಟ್ಟಡದಲ್ಲಿದೆ.

(ಇವೆರಡೂ ಹೋಟಲ್‌ಗಳೂ ಎಂಟಿಆರ್‌ನಿಂದ ಹೊರಬಂದು ಬಲ ರಸ್ತೆಯಲ್ಲಿ ಹೋದರೆ ಮೂಲೆಯಲ್ಲಿ ಕಾಣಿಸಿಗುತ್ತವೆ)

ಲಾಲ್‌ಬಾಗ್‌ನಲ್ಲಿ ಮಹಾರಾಜರ ಪ್ರತಿಮೆ

ಹೈದರ್ ಮತ್ತು ಟಿಪ್ಪು

ಸರ್ಕಾರಿ ಮ್ಯೂಜಿಯಂ

ಚಾಮರಾಜ ಒಡೆಯರ ಪ್ರತಿಮೆ-ಕಬ್ಬನ್‌ಪಾರ್ಕ್

೯. ಹೋಟಲ್, ಬೆಂಗಳೂರು!

ಬೆಂಗಳೂರು ಅತ್ಯಾಧುನಿಕವಾಗಿ, ಅಂತಾರಾಷ್ಟ್ರೀಯ ಮಟ್ಟದ ವ್ಯಕ್ತಿತ್ವ ಬೆಳೆಸಿಕೊಂಡಿದ್ದರೂ, ಕೆಂಪೇಗೌಡನ ಕಾಲದಿಂದ ಇನ್‌ಫೋಸಿಸ್ ಕಾಲದವರೆಗಿನ ಎಲ್ಲ ಭಾವನೆಗಳಿಗೂ, ಅಭಿರುಚಿಗಳಿಗೂ, ಜೇಬುಗಳಿಗೂ ಹೊಂದಿಕೊಳ್ಳುವಂಥ ಹೋಟಲ್‌ಗಳು ಇಡೀ ನಗರದಲ್ಲಿ ಹರಡಿಕೊಂಡಿವೆ.

ಬೆಂಗಳೂರು ನಗರ ರೈಲ್ವೇ ನಿಲ್ದಾಣ, ಕೆಂಪೇಗೌಡ ಬಸ್ ಸ್ಟಾಂಡ್‌ನಲ್ಲಿ ನಿಮ್ಮೂರಿನಿಂದ ಬಂದಿಳಿದ ಕೂಡಲೇ, ಒಂದಿಷ್ಟು ನಡೆದರೆ ಸುತ್ತಮುತ್ತ ಬೇಕಾದಷ್ಟು ಹೋಟಲ್‌ಗಳು ಸಿಗುತ್ತವೆ- ದಿನಕ್ಕೆ ಒಂದು ನೂರು ರೂಪಾಯಿಯಿಂದ, ಐನೂರು ರೂಪಾಯಿವರೆಗಿನ ರೂಮ್‌ಗಳಿರುವ ಹೋಟಲ್‌ಗಳಿವೆ. ಇಂಥ ಹೋಟಲ್‌ಗಳಲ್ಲಿ ಊಟ-ವಸತಿ ಅನುಕೂಲಗಳೆರಡೂ ಇರುತ್ತವೆ. ಉತ್ತಮ ತಿಂಡಿ-ಕಾಫಿ ಸಿಗುತ್ತದೆ. ಮತ್ತೆ, ಇಲ್ಲಿಂದ ಬಹುಪಾಲು ತಾಣಗಳಿಗೆ ಹೆಚ್ಚು ದೂರವಿರುವುದಿಲ್ಲ. ಬೆಂಗಳೂರು ಬಸ್ ಸ್ಟಾಂಡ್‌ನಿಂದ ಬೆಂಗಳೂರಿನ ಯಾವ ಬಡಾವಣೆಗೆ ಬೇಕಾದರೂ ಬಸ್ಸುಗಳು ಸಿಗುತ್ತವೆ. ಇಲ್ಲೇ ಇರುವ ಬೇರೆ ಊರುಗಳಿಗೆ ಹೋಗುವ ಬಸ್ ಸ್ಟಾಂಡ್ ಇದೆ. ಯಾವ ಊರಿಗೆ ಬೇಕಾದರೂ ಹೋಗಬಹುದು. ರೈಲ್ವೇ ನಿಲ್ದಾಣ ಹತ್ತಿರವಿದೆ. ಮತ್ತೆ, ಇಲ್ಲೆಲ್ಲಾ ಯಾವ ಸಮಯದಲ್ಲಿ ಬೇಕಾದರೂ ಆಟೋಗಳು ದೊರಕುತ್ತವೆ. ಫೋನ್ ಮಾಡಿದರೆ ರೇಡಿಯೋ ಟ್ಯಾಕ್ಸಿಗಳು ಹೋಟಲ್ ಬಾಗಿಲಿಗೆ ಬರುತ್ತವೆ.

ರೈಲ್ವೇ ಸ್ಟೇಷನ್ ಮತ್ತು ಬಸ್ ಸ್ಟಾಂಡ್‌ಗಳಿಗೆ ಹತ್ತಿರವೇ ಇರುವ ಹೋಟಲ್‌ಗಳಿಗೆ ನಡೆದುಕೊಂಡೇ ಹೋಗಬಹುದು. ಆಟೋದಲ್ಲಿ ಹೋದರೆ, ಮಿನಿಮಂ ಛಾರ್ಜ್, ಹತ್ತು ರೂಪಾಯಿ.

ಬಳೇಪೇಟೆಯ ಗೋಕುಲ್ ಡೀಲಕ್ಸ್ ಲಾಡ್ಜ್, ಉಡುಪಿ ಶ್ರೀಕೃಷ್ಣ ಭವನದವರದು. ಒಳ್ಳೆಯ ಶುಚಿ-ರುಚಿ-ಅಭಿರುಚಿ ಇರುತ್ತದೆ. ಉಡುಪಿ ಶ್ರೀಕೃಷ್ಣ ಭವನ ಮಸಾಲೆ ದೋಸೆ ಜೊತೆಗೆ ಅನೇಕಾನೇಕ ತಿಂಡಿತಿನಿಸುಗಳನ್ನು ಸವಿಯಬಹುದು. ಇವರದೇ ಆಡಳಿತದ, ಜನಾರ್ಧನ ಹೋಟಲ್, ಮಾಧವನಗರ (ಕುಮಾರಕೃಪಾ

ರಸ್ತೆ) ಪ್ರದೇಶದಲ್ಲಿದೆ. ಊಟ, ತಿಂಡಿ, ಕಾಫಿ, ವಸತಿಗೆ 'ಬೆಸ್ಟ್' ತಾಣ. ನೀವು ಒಮ್ಮೆ ಬಂದು ತಂಗಿದರೆ ಮತ್ತೆ ಮತ್ತೆ ಬರುತ್ತೀರಿ.

ಆನಂದರಾವ್ ಸರ್ಕಲ್‌ನಲ್ಲಿರುವ ಗಣೇಶ ಲಾಡ್ಜ್, ಹೋಟಲ್ ದ್ವಾರಕಾ, ಹೋಟಲ್ ಕಪಿಲಾ, ಹೋಟಲ್ ರಾಜಮಹಲ್, ಹೋಟಲ್ ಟೂರಿಸ್ಟ್, ಕೆಂಚಾಂಬಾ ಲಾಡ್ಜ್ (ಕಪಾಲಿ ಟಾಕೀಸ್ ಹತ್ತಿರ), ರಾಮಕೃಷ್ಣ ಲಾಡ್ಜ್ (ಕಪಾಲಿ

ಬೆಂಗಳೂರು

ಅಜಂತಾ ಹೋಟಲ್, ಎಂ.ಜಿ. ರೋಡ್	- ೨೫೫೮೪೩೧
ಏರ್‌ಲೈನ್ಸ್ ಹೋಟಲ್, ಮದ್ರಾಸ್ ಬ್ಯಾಂಕ್ ರೋಡ್	- ೨೨೨೭೩೭೮೩
ಅಪ್ಸರ, ೫ನೆ ಮೈನ್, ೬ನೆ ಕ್ರಾಸ್, ಗಾಂಧಿನಗರ	- ೨೨೨೫೭೩೭೪
ಬೃಂದಾವನ್ ಹೋಟಲ್, ಎಂ.ಜಿ. ರೋಡ್	- ೨೫೫೮೪೦೦೦
ಚಂದ್ರಭವನ್ - ಸಿಟಿಮಾರ್ಕೆಟ್	- ೨೨೨೨೨೧೯೫
ಚಂದ್ರವಿಹಾರ - ಸಿಟಿಮಾರ್ಕೆಟ್	- ೨೨೨೨೪೧೪೭
ದೆಹಲಿ ಯಾತ್ರಿ ನಿವಾಸ (ವಾಣಿವಿಲಾಸ ಆಸ್ಪತ್ರೆ ಎದುರು)	- ೨೬೭೦೬೪೯೧
ಗಣೇಶ್ ಲಾಡ್ಜ್, ಸುಬೇದಾರ ಛತ್ರಂ ರಸ್ತೆ, ಶೇಷಾದ್ರಿಪುರ	- ೨೩೪೪೪೫೫೪೧
ಗೋಕುಲ್ ಡಿಲಕ್ಸ್ ಲಾಡ್ಜ್, ಬಳೇಪೇಟೆ	- ೨೨೨೪೨೭೪೪
ಹೋಟಲ್ ಆದರ್ಶ ಪ್ಯಾಲೆಸ್ (ರೈಲ್ವೇ ಸ್ಟೇಷನ್ ಹತ್ತಿರ)	- ೨೨೪೭೫೫೧೦೬
ಹೋಟಲ್ ಅಮರ್, ಆಯುರ್ವೇದ ಆಸ್ಪತ್ರೆ ಪಕ್ಕ, ಬಸ್ ಸ್ಟಾಂಡ್ ಹಿಂದೆ	- ೨೨೪೭೨೨೧೨೦
ಹೋಟಲ್ ಬೆಂಗಳೂರು ಗೇಟ್, ಕೆಂಪೇಗೌಡ ರಸ್ತೆ	- ೨೨೨೦೪೪೪೪
ಹೋಟಲ್ ಬ್ರಾಡ್‌ವೇ, ಕೆಂಪೇಗೌಡ ರಸ್ತೆ	- ೨೨೪೭೨೩೨೧
ಹೋಟಲ್ ದ್ವಾರಕಾ, ಆನಂದರಾವ್ ಸರ್ಕಲ್	- ೨೨೨೬೫೦೧೧
ಹೋಟಲ್ ಹೈಲ್ಯಾಂಡ್ಸ್, ಹೈಗ್ರೌಂಡ್, ಮಾಧವನಗರ	- ೨೨೨೬೯೨೩೨
ಹೋಟಲ್ ಕಪಿಲಾ, ಸುಬೇದಾರ್ ಛತ್ರಂ ರಸ್ತೆ	- ೨೨೨೬೯೪೩೪
ಹೋಟಲ್ ಕಾವೇರಿ, ಶೇಷಾದ್ರಿ ರಸ್ತೆ	- ೨೨೪೭೫೨೯೬
ಹೋಟಲ್ ಮಹಾವೀರ, ಟ್ಯಾಂಕ್‌ಬಂಡ್ ರೋಡ್	- ೨೨೪೭೩೬೭೦
ಹೋಟಲ್ ಮೋತಿಮಹಲ್, ಗಾಂಧಿನಗರ	- ೨೨೨೬೭೯೪೦
ಹೋಟಲ್ ಪೈವಿಹಾರ್, ಕಾರ್ಪೊರೇಷನ್ ಆಫೀಸ್ ಹತ್ತಿರ	- ೨೨೨೧೫೧೬೧೧
ಹೋಟಲ್ ರೇಸ್‌ವ್ಯೂ, ರೇಸ್ ಕೋರ್ಸ್ ರಸ್ತೆ	- ೨೨೨೦೩೪೦೧
ಹೋಟಲ್ ರಾಜ್‌ಮಹಲ್, ಆನಂದರಾವ್ ಸರ್ಕಲ್	- ೨೨೪೭೨೩೦೪
ಹೋಟಲ್ ಟೂರಿಸ್ಟ್, ಆನಂದರಾವ್ ಸರ್ಕಲ್	- ೨೨೨೬೨೩೪೧

ಪಕ್ಕ), ಹೋಟಲ್ ಹೈಲ್ಯಾಂಡ್ಸ್ (ಟೂರಿಸ್ಟ್ ಹೋಟಲ್‌ಗಿಂತಲೂ ಸ್ವಲ್ಪಮುಂದೆ-ಎಲೆಕ್ಟ್ರಿಕ್ ಆಫೀಸ್ ಹಿಂದೆ), ಹೋಟಲ್ ರೇಸ್‌ವ್ಯೂ (ರೇಸ್‌ಕೋರ್ಸ್ ರಸ್ತೆ), ಹೋಟಲ್ ಅಮರ್ (ಬಸ್‌ಸ್ಟಾಂಡ್ ಎದುರು), ಅಪ್ಸರ ಹೋಟಲ್ (೫ನೇ ಮೈನ್, ೬ನೇ ಕ್ರಾಸ್, ಗಾಂಧಿನಗರ) ಹೋಟಲ್ ಮೋತಿಮಹಲ್ (ಗಾಂಧಿನಗರ), ಹೋಟಲ್ ಆದರ್ಶ ಪ್ಯಾಲೆಸ್ (ರೈಲ್ವೇ ಸ್ಟೇಷನ್ ಹತ್ತಿರ), ಹೋಟಲ್ ಕಾವೇರಿ (ಶೇಷಾದ್ರಿ

ಹೋಟಲ್‌ಗಳು

ಜನಾರ್ಧನ ಹೋಟಲ್, ಮಾಧವನಗರ, ಕುಮಾರಕೃಪ ರಸ್ತೆ	-	೨೨೨೫೪೪೪೪
ಜನಾರ್ಧನ ಲಾಡ್ಜ್, ಗಾಂಧಿನಗರ, ಮೂವೀಲ್ಯಾಂಡ್ ಹಿಂದೆ	-	೨೨೨೭೨೨೧೭
ಕಾಮತ್ ಯಾತ್ರಿ ನಿವಾಸ್, ಗಾಂಧಿನಗರ	-	೨೨೨೬೦೦೪೪
		೨೨೨೬೩೭೨೭
ಕೆಂಚಾಂಬಾ ಲಾಡ್ಜ್, ಕಪಾಲಿ ಪಕ್ಕದ ರಸ್ತೆ	-	೨೨೨೫೪೧೩೧
ನ್ಯೂ ಕೃಷ್ಣಭವನ್, ಮಿಲ್ ಕಾರ್ನರ್, ಮಲ್ಲೇಶ್ವರ	-	೨೩೪೪೩೬೪೦
ಹರಿರಾಮ್ ಹೋಟಲ್, ಕೆಂಪೇಗೌಡ ರಸ್ತೆ	-	೨೨೨೬೭೬೦
ಶ್ರೀಕುಮಾರ ಲಾಡ್ಜ್, ಆಸ್ಪತ್ರೆ ರಸ್ತೆ, ಬಳೇಪೇಟೆ	-	೨೨೪೭೦೩೬೫
ಶ್ರೀ ರಾಮಕೃಷ್ಣ ಲಾಡ್ಜ್, ಸುಬೇದಾರ್ ಛತ್ರಂ ರಸ್ತೆ	-	೨೨೨೬೩೦೪೧
ಶ್ರೀ ಸರಸ್ವತೀ ಲಾಡ್ಜ್, ಗಾಂಧಿನಗರ	-	೨೨೨೫೬೬೦೩
ತಾಜ್‌ಮಹಲ್ ಹೋಟಲ್, ಗಾಂಧಿನಗರ	-	೨೨೨೫೦೨೩೨
ಏಟ್ರಿಯಾ, ಪ್ಯಾಲೆಸ್ ರಸ್ತೆ	-	೨೨೨೦೫೨೦೫
ಬಲ್ಲಾಳ್ ರೆಸಿಡೆನ್ಸಿ, ಮಹಾರಾಣಿ ಇನ್‌ಸ್ಟಿಟ್ಯೂಟ್ ರಸ್ತೆ	-	೨೫೫೯೭೨೭೭
ದಿ ಕ್ಯಾಪಿಟಲ್, ರಾಜಭವನ್ ರಸ್ತೆ	-	೨೨೨೪೧೪೦೦
ಸೆಂಟ್ರಲ್ ಪಾರ್ಕ್, ಮಣಿಪಾಲ್ ಸೆಂಟರ್	-	೨೫೫೪೪೪೨೪೨
ಹೋಟಲ್ ಗ್ರಾಂಡ್ ಅಶೋಕ, ಕುಮಾರಪಾರ್ಕ್	-	೨೨೨೬೯೪೬೨
ಹೋಟಲ್ ಲೀಲಾ ಪ್ಯಾಲೆಸ್, ಏರ್‌ಪೋರ್ಟ್ ರಸ್ತೆ	-	೨೫೨೧೧೨೩೪
ಹೋಟಲ್ ರಮಣಶ್ರೀ, ರಾಜರಾಮ್ ಮೋಹನರಾಯ್ ರಸ್ತೆ	-	೨೨೨೩೫೨೫೦
ಲೇ ಮೆರೆಡಿಯನ್ ಬೆಂಗಳೂರು, ಸ್ಯಾಂಕಿ ರಸ್ತೆ	-	೨೨೨೬೨೨೩೩
		೨೨೨೪೨೪೨೪
ದಿ ಓಬೆರಾಯ್ ಹೋಟಲ್, ಎಂ.ಜಿ. ರಸ್ತೆ	-	೨೫೫೪೫೪೫೪
ತಾಜ್ ರೆಸಿಡೆನ್ಸಿ ಹೋಟಲ್, ಎಂ.ಜಿ. ರಸ್ತೆ, (ಅಲಸೂರು ಪ್ರವೇಶ)	-	೨೫೫೪೪೪೪೪
ದಿ ತಾಜ್ ವೆಸ್ಟ್ (ರೇಸ್‌ಕೋರ್ಸ್ ಎದುರು)	-	೨೨೨೫೫೦೫೫
ವಿಂಡರ್ಸ್ ಶೆರಟಾನ್ ಮತ್ತು ಟವರ್ಸ್, ಸ್ಯಾಂಕಿ ರಸ್ತೆ (ಬೆಂಗಳೂರು ಗಾಲ್ಫ್ ಕೋರ್ಸ್ ಹತ್ತಿರ)	-	೨೨೨೬೯೪೪೪

ರಸ್ತೆ), ಹೋಟಲ್ ಮಹಾವೀರ (ಬಸ್ ಸ್ಟಾಂಡ್ ಇನ್ನೊಂದು ಬದಿಯ ಟ್ಯಾಂಕ್ ಬಂಡ್ ರಸ್ತೆ) -ಇವೆಲ್ಲ ಬಸ್-ರೈಲ್ವೇ ನಿಲ್ದಾಣಗಳಿಗೆ ತುಂಬ ಹತ್ತಿರ ಇರುವ 'ವೆಜಿಟೇರಿಯನ್' ಹೋಟಲ್‌ಗಳು. ಇಲ್ಲಿ ವಸತಿ ಸೌಲಭ್ಯ ಚೆನ್ನಾಗಿದೆ. ಊಟ-ತಿಂಡಿ ಅನುಕೂಲಗಳಿವೆ. ದಕ್ಷಿಣ ಭಾರತೀಯ, ಉತ್ತರ ಭಾರತೀಯ ಊಟ-ತಿನಿಸುಗಳು ಸಿಗುತ್ತವೆ. ಹೋಟಲ್‌ನಿಂದ ಕೆಲಹೆಜ್ಜೆಗಳು ಹಾಕಿದರೆ ಸಾಕು-ಕೆಂಪೇಗೌಡ ರಸ್ತೆ ಮತ್ತು ವಿವಿಧ ಪೇಟೆಗಳು ಸಿಗುತ್ತವೆ- ಮನರಂಜನೆಗೆ ಸುಮಾರು ಹನ್ನೆರಡು ಸಿನಿಮಾ ಥೆಯೇಟರ್‌ಗಳಿವೆ, ಗುಬ್ಬಿ ನಾಟಕ ಮಂದಿರ ಇದೆ; ಬೇಕಾದ ಹಾಗೆ ದೇವಾಲಯಗಳಿವೆ, ಸುಲಭ ಬೆಲೆಗೆ ಕೊಳ್ಳಲು ಸಿದ್ಧ ಉಡುಪುಗಳ ಪ್ರಪಂಚವೇ ಇದೆ. ತುಳಸೀ ತೋಟ ಉದ್ಯಾನವನ ಇದೆ.

ಇವೆಲ್ಲವೂ ಮಧ್ಯಮ ದರದ ಹೋಟಲ್‌ಗಳು, ನೂರೈವತ್ತು ರೂಪಾಯಿಯಿಂದ ಐನೂರು ರೂಪಾಯಿವರೆಗೆ ಒಂದು ದಿನದ ಬಾಡಿಗೆ ಇರುವ ತಂಗುದಾಣಗಳು. ಹೋಟಲ್ ಟೂರಿಸ್ಟ್ ಅಂತೂ ಅತ್ಯಂತ ಕಡಿಮೆ ದರ ನಿಗದಿ ಮಾಡಿದೆ. ಇಲ್ಲೆಲ್ಲ ಉತ್ತಮ ಸಸ್ಯಾಹಾರಿ ಊಟ-ತಿಂಡಿ ಸಿಗುತ್ತದೆ. ಒಳ್ಳೆಯ ಕಾಫಿ ಸಿಗುತ್ತದೆ. ಉತ್ತಮ ಆಡಳಿತದಲ್ಲಿರುವ ಹೋಟಲ್‌ಗಳು ಇವು. ರಾತ್ರಿ ಸಿನಿಮಾ ಶೋಗೆ ಹೋದರೂ ನಡೆದುಕೊಂಡು ಬಂದು ಹೋಟಲ್ ತಲುಪಬಹುದು.

ಕೆಂಪೇಗೌಡ ರಸ್ತೆಯಲ್ಲಿಯೂ ಅನೇಕ ಉತ್ತಮ ವಸತಿ ಹೋಟಲ್‌ಗಳಿವೆ. ಹೋಟಲ್ ಬೆಂಗಳೂರು ಗೇಟ್, ಹೋಟಲ್ ಬ್ರಾಡ್‌ವೇ, ಹರಿರಾಂ ಹೋಟಲ್ ಇವೆ. ಇವೆಲ್ಲವೂ ಮಧ್ಯಮ ವರ್ಗದವರ ಕೈಗೆಟಕುವ ಹೋಟಲ್‌ಗಳು.

ಗಾಂಧಿನಗರದ 'ಕಾಮತ್ ಯಾತ್ರಿ ನಿವಾಸ್' ಅತ್ಯಂತ ಜನಪ್ರಿಯ ತಂಗುದಾಣ. ಅತ್ಯುತ್ತಮವಾಗಿ ನಿರ್ವಹಿಸಲ್ಪಡುತ್ತಿರುವ, ಉತ್ತಮ ಊಟ-ತಿಂಡಿ ವೈವಿಧ್ಯಗಳ ಹೋಟಲ್. ದಕ್ಷಿಣ ಭಾರತೀಯ, ಉತ್ತರ ಭಾರತೀಯ, ಮೈಸೂರು ರೀತಿ ಊಟಗಳು, ಉತ್ತರ ಕರ್ನಾಟಕದ ಜೋಳದ ಊಟ ಎಂದು ಊಟ ಬಗೆಗಳಿವೆ. ಸಿಹಿ-ಖಾರಾ ತಿಂಡಿಗಳು, ಐಸ್‌ಕ್ರೀಂ ಪ್ರಪಂಚ ಎಲ್ಲವೂ ಇಲ್ಲಿದೆ. ಈ ಹೋಟಲ್‌ನ ಸುತ್ತಮುತ್ತ ವಾಣಿಜ್ಯ ವೈಭವವೇ ಇದೆ.

ಕಾಮತ್ ಯಾತ್ರಿ ನಿವಾಸದ ಹಿಂದಿನ ಬೀದಿಯಲ್ಲಿ, ಗಾಂಧಿನಗರದ ಅತಿ ಹಿಂದಿನ ಊಟದ ಹೋಟಲ್ ಸರಸ್ವತೀ ಲಾಡ್ಜ್, ಈಗ ಹೊಸ ಕಟ್ಟಡ ಹೊಂದಿದೆ. (ಗುಂಡ್ಮಿ ರಾಮಕೃಷ್ಣ ಐತಾಳ ಅವರು ಸ್ಥಾಪಿಸಿದ ಹೋಟಲ್, ಎಷ್ಟೋ ದಶಕಗಳಿಂದ ಬಡವರ ಊಟದ ಹೋಟಲ್ ಎಂದು ಜನಪ್ರಿಯವಾಗಿತ್ತು. ಐತಾಳರ ಕಾಲದಲ್ಲಿ ಶಿವರಾಮ ಕಾರಂತ, ಜಿ.ಪಿ. ರಾಜರತ್ನಂ ಎಂದು ಹಿರಿಯ ಲೇಖಕರು ಬರುತ್ತಿದ್ದರು).

ಕಪಾಲಿ ಟಾಕೀಸ್ ಪಕ್ಕದ ಬೀದಿಯಲ್ಲಿಯೇ 'ಕಿಂಚಾಂಬಾ ಲಾಡ್ಜ್' ಇದೆ. ಹಿಂದಿನ ಕಾಲದ ಮನೆ ರೀತಿಯ ವಸತಿಗೃಹ ಇದು. ಉತ್ತಮ ಮಾಲೀಕತ್ವದಲ್ಲಿ ಶಾಂತವಾಗಿರುವ ತಾಣ.

ಮೆಜೆಸ್ಟಿಕ್ ಪರಿಸರದಿಂದ ಒಂದಿಷ್ಟು ದೂರದಲ್ಲಿ ಅನೇಕ ಉತ್ತಮ, ಜನಪ್ರಿಯ 'ಸಸ್ಯಾಹಾರಿ' ವಸತಿಗೃಹಗಳಿವೆ. ಮಹಾತ್ಮಾಗಾಂಧಿ ರಸ್ತೆಯ 'ಅಜಂತಾ ಹೋಟಲ್', 'ಬೃಂದಾವನ್ ಹೋಟಲ್', ಅಲ್ಲೇ ಹತ್ತಿರದಲ್ಲಿಯೇ 'ಏರ್‌ಲೈನ್ಸ್ ಹೋಟಲ್' ಇವೆ. ಅಲ್ಲೇ ಇರುವ ಗಗನಚುಂಬಿ ಯೂಟಿಲಿಟಿ ಕಟ್ಟಡದ ಹಿಂದಿನ ರೆಸಿಡೆನ್ಸಿ ರಸ್ತೆಯಲ್ಲಿ, ಹೋಟಲ್ ಸಪ್ನಾ ಮತ್ತು ಬಲ್ಲಾಳ್ ಹೋಟಲ್‌ಗಳಿವೆ. ಇಲ್ಲೆಲ್ಲಾ ಊಟ-ತಿಂಡಿ ಚೆನ್ನಾಗಿದೆ. ರೂಂ ಬಾಡಿಗೆ ಸ್ವಲ್ಪ ಹೆಚ್ಚಾಗಬಹುದು.

ಬೆಂಗಳೂರು ಮಹಾನಗರ ಪಾಲಿಕೆ ಎದುರಿನ ಬಾದಾಮಿ ಕಟ್ಟಡದ ಪಕ್ಕದಲ್ಲಿರುವ 'ಹೋಟಲ್ ಪೈ ವಿಹಾರ್' ಹಳೆಯ ಉತ್ತಮ ಊಟ-ತಿಂಡಿ ಹೋಟಲ್. ವಸತಿ ಅನುಕೂಲವಿದೆ. ಈ ಹೋಟಲ್‌ನ ಬಲಗಡೆ ಒಂದಿಷ್ಟು ನಡೆದರೆ ಸುಪ್ರಸಿದ್ಧ 'ಗುಂಡಪ್ಪನ ಹೋಟಲ್' ಸಿಗುತ್ತದೆ. ಶುದ್ಧ ತುಪ್ಪದ ಸಿಹಿ-ಖಾರಾ ತಿಂಡಿಗಳಿಗೆ ಅತ್ಯಂತ ಹಳೆಯ ಏಕಮಾತ್ರ ನಂಬುಗೆಯ ಹೋಟಲ್. ಗುಂಡಪ್ಪನವರ ಕಾಲ ಮುಗಿದು ಹೊಸ ತಲೆಮಾರು ಆಡಳಿತ ವಹಿಸಿಕೊಂಡಿದ್ದರೂ ಇಲ್ಲಿನ ಗುಣಮಟ್ಟ ಕೆಳಗಿಳಿದಿಲ್ಲ. ಆತ್ಮೀಯತೆ ಕುಂದಿಲ್ಲ. ವಿಶ್ವಾಸ-ನಂಬಿಕೆಗೆ ಹೆಸರಾದ ನಮ್ಮ ತಂದೆ-ತಾತನ ಕಾಲದ ಹೋಟಲ್ ಇದು. ಈ ರಸ್ತೆ ನಗರ್ತರ ಪೇಟೆ ಎನಿಸಿಕೊಳ್ಳುತ್ತದೆ- ಮುಂದೆ ದೊಡ್ಡಪೇಟೆ, ಚಿಕ್ಕಪೇಟೆಗೆ ತಲುಪುತ್ತದೆ. ಗಾಂಧಿನಗರದ 'ತಾಜ್‌ಮಹಲ್ ಹೋಟಲ್' ಮತ್ತು ಗಾಂಧಿ ಬಜಾರ್‌ನ 'ಹೋಟಲ್ ಆತಿಥ್ಯ' ಐವತ್ತು ಅರವತ್ತು ವರ್ಷಗಳ ಹೋಟಲ್ ಉದ್ಯಮ ಅನುಭವದ ಮಾದರಿಗಳು. 'ಆತಿಥ್ಯ' ಉತ್ತರ ಭಾರತ ತಿನಿಸಿಗೆ ಜನಪ್ರಿಯ.

ಪೈ ಸಂಸ್ಥೆಯದ್ದೇ ಊಟ-ತಿಂಡಿ-ವಸತಿಗಳ ಇನ್ನೆರಡು ಹೋಟಲ್‌ಗಳು ಉತ್ತಮ ಎನ್ನುವಂಥವು. ಡಬ್ಬಲ್ ರೋಡ್ (ವಿಲ್ಸನ್ ಗಾರ್ಡನ್) ನಲ್ಲಿರುವುದೊಂದು ಮತ್ತು ಮಿನರ್ವಾ ಸರ್ಕಲ್‌ನ ಮಿನರ್ವಾ ಕಟ್ಟಡದಲ್ಲಿರುವುದೊಂದು.

ಮಲ್ಲೇಶ್ವರದ ಮಿಲ್‌ಕಾರ್ನರ್ ಹತ್ತಿರವಿರುವ 'ನ್ಯೂ ಕೃಷ್ಣ ಭವನ್' ಸಹ ರೈಲು-ಬಸ್ ನಿಲ್ದಾಣಗಳಿಗೆ ಹತ್ತಿರವೇ ಆಗುತ್ತದೆ (ಸುಮಾರು ಎರಡು ಕಿಲೋ ಮೀಟರ್ ಆಗಬಹುದು). ಊಟ-ತಿಂಡಿ-ವಸತಿಗಳಿಗೆ ಉತ್ತಮ ಹೋಟಲ್. ಮೂರುನಾಲ್ಕು ದಶಕಗಳಿಂದಲೂ ಜನಪ್ರಿಯ ತಿನಿಸು ತಾಣ.

-ಇವೆಲ್ಲ ಹೋಟಲ್‌ಗಳೂ ಭಾರತೀಯ ಶೈಲಿಯ ಹೋಟಲ್‌ಗಳೆನ್ನ ಬಹುದು. ಮಧ್ಯಮ ವರ್ಗದವರ, ಉತ್ತಮ ಸಸ್ಯಾಹಾರಿ ಆಹಾರದ, ಕಡಮೆ ದರದ ವಸತಿ ಗೃಹಗಳು.

ಬೆಂಗಳೂರಿನಲ್ಲಿ ಇಂಥ ನೂರಾರು ತಾಣಗಳಿವೆ. ಉತ್ತಮ ತಾಣಗಳನ್ನು ಆರಿಸಿಕೊಂಡು ಹೋಗಬಹುದು.

ಹೀಗೆಯೇ, 'ಉಳ್ಳವರು' ಬಯಸಿದರೆ ಅಂತಾರಾಷ್ಟ್ರೀಯ ಊಟೋಪಚಾರ ಶೈಲಿಯ ನಕ್ಷತ್ರ ಹೋಟಲ್‌ಗಳಿವೆ. ಸಾವಿರಾರು ರೂಪಾಯಿ ದಿನ ಬಾಡಿಗೆ ಇದ್ದರೂ ಇಲ್ಲೂ ಎಲ್ಲ ಸಲವೂ ರೂಂ ಸಿಗುವುದಿಲ್ಲ. ದೇಶ-ವಿದೇಶೀ ಉದ್ಯಮಿಗಳು, ಕಾರ್ಪೊರೇಟ್ ಜನ, ಸಿನಿಮಾ-ರಾಜಕೀಯದ ಜನ ಇಲ್ಲಿಗೆ ಹೋಗುತ್ತಾರೆ. ಏನೇ ಆಗಲಿ ಇವೆಲ್ಲ ಮೇಲ್ದರ್ಜೆಯ, ಅತ್ಯುತ್ತಮ, ಆಧುನಿಕ ಹೋಟಲ್‌ಗಳು.

ಕಿರೀಟ ಪ್ರಾಯದ ಹಾಗಿರುವ ಪಂಚತಾರಾ ಹೋಟಲ್‌ಗಳೆಂದರೆ, ಮಹಾತ್ಮಾಗಾಂಧಿ ರಸ್ತೆಯ ಸೆಂಟ್ರಲ್ ಪಾರ್ಕ್ (ಮಣಿಪಾಲ್ ಸೆಂಟರ್), ಹೋಟಲ್ ತಾಜ್ ರೆಸಿಡೆನ್ಸಿ ಹೋಟಲ್, ದಿ ಓಬೆರಾಯ್ ಹೋಟಲ್. ಏರ್‌ಪೋರ್ಟ್ ರಸ್ತೆಯ 'ಹೋಟಲ್ ಲೀಲಾ ಪ್ಯಾಲೆಸ್' ಅರಮನೆಯ ರಾಜವೈಭವಕ್ಕೊಂದು ಉದಾಹರಣೆ. ಕುಮಾರಾಪಾರ್ಕ್ ಬಡಾವಣೆಯ 'ಹೋಟಲ್ ಗ್ರಾಂಡ್ ಅಶೋಕ್' (ಮುಖ್ಯಮಂತ್ರಿಗಳ ಮನೆ ಕಛೇರಿ ಪಕ್ಕದಲ್ಲಿದೆ) ಭವ್ಯವಾದ ಪಂಚತಾರಾ ತಾಣ. ರೇಸ್‌ಕೋರ್ಸ್ ಎದುರಿನ 'ದಿ ಟಾಜ್ ವೆಸ್ಟ್ ಎಂಡ್' ಐತಿಹಾಸಿಕ ಪಂಚತಾರಾ ಕಟ್ಟಡ ಸಂಕೀರ್ಣ. ಸ್ಯಾಂಕಿ ರಸ್ತೆಯ 'ಲೇ ಮೆರೆಡಿಯನ್ ಬೆಂಗಳೂರು' ಮತ್ತು 'ವಿಂಡ್ಸರ್ ಶೆರಟಾನ್ ಅಂಡ್ ಟವರ್ಸ್' -ಪಂಚತಾರಾ ವೈಭವದ ತಾಣಗಳು. ಇಲ್ಲಿನ ಕಟ್ಟಡದ ಸೊಗಸೇ ಆಕರ್ಷಕ. ಇಲ್ಲಿಯೆ 'ಹೋಟಲ್ ಬೆಂಗಳೂರು ಇಂಟರ್‌ನ್ಯಾಷನಲ್' ಇದೆ.

ಪ್ಯಾಲೆಸ್ ರಸ್ತೆಯ 'ಏಟ್ರಿಯಾ' (ಮಹಾರಾಣಿ ಕಾಲೇಜ್ ಎದುರು) ಮತ್ತು ರಾಜಭವನ್ ರಸ್ತೆಯ 'ದಿ ಕ್ಯಾಪಿಟಲ್' (ಆಕಾಶವಾಣಿ ಪಕ್ಕ), ಇನ್‌ಫೆಂಟ್ರೀ ರಸ್ತೆಯ 'ಬಲ್ಲಾಳ್ ರೆಸಿಡೆನ್ಸಿ', ರಾಜಾರಾಂ ಮೋಹನ್ ರಾಯ್ ರಸ್ತೆಯ 'ಹೋಟಲ್ ರಮಣಶ್ರೀ' ಮತ್ತು ಪಕ್ಕದಲ್ಲೇ ಇರುವ 'ಉಡ್‌ಲ್ಯಾಂಡ್ ಹೋಟಲ್' ವಸತಿ ಗೃಹಗಳು. ವುಡ್‌ಲ್ಯಾಂಡ್ ಊಟ-ತಿಂಡಿ-ವಸತಿಗೆ ದೇಶ ಪ್ರಸಿದ್ಧಿ.

ಪಂಚ ತಾರಾ ಹೋಟಲ್‌ಗಳಲ್ಲಿ ದೇಶವಿದೇಶೀ ಸಂಸ್ಕೃತಿ, ಉಪಚಾರ, ಅನುಕೂಲ, ಆತಿಥ್ಯ ಎಲ್ಲವೂ ಕಾಸಿಗೆ ತಕ್ಕಂತೆ ದೊರಕುತ್ತದೆ. ಈ ಪಂಚತಾರಾ ಹೋಟಲ್‌ಗಳು ದೇಶ-ವಿದೇಶದ ಅತಿಥಿಗಳಿಂದ ಮೆಚ್ಚುಗೆ ಪಡೆದಿವೆ.

ಬೆಂಗಳೂರಿನಲ್ಲಿರುವ ಪಂಚತಾರಾ ಹೋಟಲ್‌ಗಳ ಸಂಖ್ಯೆ ಸಾಲದು, ಲಭ್ಯವಿರುವ ಶ್ರೀಮಂತ ಕೊಠಡಿಗಳ ಸಂಖ್ಯೆ ಸಾಲದು, ಇಂಥ ಕೊರತೆಗಳಿಂದ ದೊಡ್ಡ ಗ್ರಾಹಕರಿಗೆ, ವಿದೇಶೀಯರಿಗೆ, ಪ್ರವಾಸಿಗಳಿಗೆ, ವ್ಯಾಪಾರಸ್ಥರಿಗೆ ತುಂಬಾ

ಅನಾನುಕೂಲವಾಗಿದೆ ಎನ್ನುವ ಮಾತು ಈಗ ಕೇಳಿಬರುತ್ತಿದೆ. ಇದಕ್ಕಾಗಿ ಮುಂದಿನ ವರ್ಷಗಳಲ್ಲಿ ಇನ್ನೂ ಅನೇಕ ರಾಜವೈಭವದ ಪಂಚತಾರಾ ಹೋಟಲ್‌ಗಳು ಹುಟ್ಟಿಕೊಳ್ಳಲಿವೆ.

ಇದೀಗ, ಸುಪ್ರಸಿದ್ಧ ಟಾಟಾ ಸಂಸ್ಥೆಯವರು ಬೆಂಗಳೂರಿನಲ್ಲಿ ಮಧ್ಯಮ ದರದ, ತಾರಾ ಮಟ್ಟದ ಹೋಟಲ್ ಒಂದನ್ನು ಪ್ರಾರಂಭಿಸಿದ್ದಾರೆ. 'ಇಂಡಿಒನ್' ಎಂದು ಕರೆಯುವ ಇಂಥ ನೂರಾಐವತ್ತು ಹೋಟಲ್‌ಗಳನ್ನವರು ದೇಶದಲ್ಲಿ ತೆರೆಯಲಿದ್ದಾರೆ. ಬೆಂಗಳೂರಿನದೇ ಈ ಸರಣಿಯ ಮೊದಲನೆಯದು. ಟಾಟಾ ಸಂಸ್ಥೆ ಸ್ಥಾಪಕರಾದ ದಿವಂಗತ ಜೆ.ಆರ್.ಡಿ. ಟಾಟಾ ಅವರ ಶತಮಾನೋತ್ಸವದ ನೆನಪಿಗೆ ಈ ೧೫೦ 'ಇಂಡಿಒನ್' ಸಮರ್ಪಣೆ. ಬೆಂಗಳೂರಿನ ಹೋಟಲ್, ವೈಲ್ಡ್‌ಫೀಲ್ಡ್ ಹತ್ತಿರದ 'ಐಟಿ ಪಾರ್ಕ್' ಬಳಿಯಲ್ಲಿದೆ. 'ಇಂಡಿ ಒನ್' ಇಲ್ಲಿ ಕೊಠಡಿ (ಸಿಂಗಲ್ ರೂಂ) ೯೦೦ ರೂಪಾಯಿಯಿಂದ ೯೫೦ ರೂಪಾಯಿ (ಡಬಲ್ ರೂಂ) ದರ ನಿಗದಿ ಮಾಡಲಾಗಿದೆ. ಬೆಂಗಳೂರು ನಗರ ಭಾರೀ ವ್ಯವಹಾರಸ್ಥರ ಪಟ್ಟಿಯಲ್ಲಿ ಮೊದಲನೆ ಸ್ಥಾನದಲ್ಲಿದೆ ಎನ್ನುವುದೊಂದು ಹೆಮ್ಮೆಯ ವಿಷಯವಲ್ಲವೇ?

■■

ಸುಲಭ-ಉತ್ತಮ ವಾಸ್ತವ್ಯ ಇಲ್ಲೂ ಸಾಧ್ಯ!

* ಬೆಂಗಳೂರು ಸಿಟಿ ರೈಲ್ವೇ ಸ್ಟೇಷನ್‌ನಲ್ಲಿಯೇ ಉತ್ತಮ ವಸತಿ ಸೌಕರ್ಯ ಇದೆ. 'ರೈಲ್ವೇ ರಿಟೈರಿಂಗ್ ರೂಂ'ಗಳ ಬಾಡಿಗೆ ಹೀಗಿದೆ: ಏರ್‌ಕಂಡೀಷನ್ ಡಬ್ಬಲ್ ರೂಂ- ರೂ. ೩೫೦ರಿಂದ ರೂ. ೫೦೦/- ಅಧಿಕವಾಗಿ ಇನ್ನೊಬ್ಬರನ್ನು ಸೇರಿಸಿದರೆ ರೂ. ೧೦೦ರಿಂದ ರೂ. ೧೫೦/- ಕೊಡಬೇಕು. ಸಾಮಾನ್ಯ ಕೊಠಡಿಗಳು: ರೂ. ೨೫೦. (ಇನ್ನೊಬ್ಬರನ್ನು ಸೇರಿಸಿಕೊಂಡರೆ ರೂ. ೧೦೦/-). ಡಾರ್ಮಿಟರಿ ವ್ಯವಸ್ಥೆ: ರೂ. ೧೦೦/- ಹಾಸುಗೆಯೊಂದಕ್ಕೆ (ಬರೀ ಎರಡು ದಿನಗಳಿಗೆ ಮಾತ್ರ ಅವಕಾಶ) ಕಾದಿರಿಸಲು- ಸ್ಟೇಷನ್ ಸೂಪರಿಂಟೆಂಡೆಂಟ್ ಅವರಿಗೆ ಫೋನ್ ಮಾಡಬೇಕು. ನಂ. ೧೩೧

* ಬೆಂಗಳೂರು ಕೆಂಪೇಗೌಡ ಬಸ್‌ಸ್ಟಾಂಡ್‌ನಲ್ಲೂ ಇಂಥದೇ ವ್ಯವಸ್ಥೆ ಇದೆ. 'ಯಾತ್ರಿ- ಲಾಡ್ಜ್ ಮತ್ತು ರೆಸ್ಟ್‌ಹೌಸ್' ದೇಶದಲ್ಲೇ ಇಂಥದೊಂದು ಪ್ರಥಮ ಪ್ರಯೋಗ. ಮುಖ್ಯ ಬಸ್‌ಸ್ಟಾಂಡ್‌ನಲ್ಲೇ ವಿಶ್ರಾಂತಿ ತಾಣ. ಇಲ್ಲಿ ಏರ್‌ಕಂಡೀಷನ್ ಕೊಠಡಿ: ರೂ. ೬೦೦/- ಎಕ್ಸಿಕ್ಯೂಟಿವ್ ಕೊಠಡಿ: ರೂ. ೪೫೦/- ಮತ್ತು ಡೀಲಕ್ಸ್ ಕೊಠಡಿ: ರೂ. ೩೭೫/- (ಒಂದು ದಿವಸಕ್ಕೆ - ೨೪ ಘಂಟೆಗೆ) (ಅಟ್ಯಾಚ್ ಬಾತ್‌ರೂಮ್, ಕೇಬಲ್ ಟಿವಿ, ಟೆಲಿಫೋನ್, ಬಿಸಿನೀರು ಇದೆ). ಸುಂದರ ಡಾರ್ಮಿಟರಿಗಳೂ ಇವೆ. ಕ್ಲಾಸಿಕ್-ರೂ. ೮೦/- ಡೀಲಕ್ಸ್- ರೂ. ೧೦೦/- ಜೊತೆಗೆ, ಕುಳಿತು ವಿಶ್ರಾಂತಿ ತೆಗೆದುಕೊಳ್ಳಲು ಸುಖಾಸೀನ ಕುರ್ಚಿಗಳಿವೆ: ರೂ. ೩೦/- (ಒಬ್ಬರಿಗೆ ಎರಡು ಘಂಟೆ ಅವಧಿಗೆ. ಮುಂದಿನ ಪ್ರತಿ ಘಂಟೆಗೂ ರೂ. ೫/-)

  -ಚೊಕ್ಕಟವಾದ ಟಾಯ್ಲೆಟ್‌ಗಳು, ಟಿವಿ-ಪತ್ರಿಕೆಗಳು, ಕುಡಿಯುವ ನೀರು, ಸ್ನಾನದ ಮನೆ- ಇವೆಲ್ಲ ಸೇವೆ ಸೇರಿದೆ) ಫೋನ್ : ೨೨೦೮೦೧೧೫ (ಫ್ಲಾಟ್‌ಫಾರಂ ನಂ. ೯ರ ಬಳಿ)

೧೦. ತರಕಾರಿ, ಬೆಂಗಳೂರು!

ಬೆಂಗಳೂರೆಂದರೆ ಬರೀ ಪ್ರವಾಸೀ ತಾಣಗಳು ಮಾತ್ರವಲ್ಲ, ಅದರ ಜನಜೀವನವೇ ಅದರ ವ್ಯಕ್ತಿತ್ವ. ಬೆಂಗಳೂರಿನ ಸಾಮಾನ್ಯ ಜನರು ಪ್ರತಿದಿವಸ ಬೆಳಗ್ಗೆ-ಸಂಜೆ ಸಂಭ್ರಮ, ಸಂತಸಗಳಿಂದ ಓಡಾಡುವ ಕೆಲ ಜಾಗಗಳನ್ನು ನೋಡಿದಾಗ ಬೆಂಗಳೂರಿಗರ ವ್ಯಕ್ತಿತ್ವ ಏನು ಎನ್ನುವುದರ ಪರಿಚಯವಾಗುತ್ತದೆ.

ಹಿಂದೆಲ್ಲ ಬೆಂಗಳೂರಿಗರು ಎಲ್ಲಿ ಹೋಗಬೇಕಾದರೂ ನಡೆದುಕೊಂಡೇ ಹೋಗುತ್ತಿದ್ದರು. ಶೇಷಾದ್ರಿಪುರದಿಂದ ಮಲ್ಲೇಶ್ವರ ಮಾರುಕಟ್ಟೆಗೆ ಶ್ರೀರಾಮಪುರಕ್ಕೆ, ಬಸವನಗುಡಿಯಿಂದ ಚಾಮರಾಜಪೇಟೆ ಸಿಟಿಮಾರ್ಕೆಟ್‌ಗೆ, ಎಲ್ಲ ಕಡೆಗಳಿಂದಲೂ ಲಾಲ್‌ಬಾಗ್‌ಗೆ-ಕಬ್ಬನ್‌ಪಾರ್ಕ್‌ಗೆ ನಡೆದುಕೊಂಡೇ ಓಡಾಟ. ಹೆಂಗಸರು-ಮಕ್ಕಳೊಂದಿಗೆ ಹೋಗಬೇಕಾದರೆ ಮಾತ್ರ ಜಟಕಾ. 'ಕ್ಯಾಜೀ, ಆತೀಕ್ಯಾ ಮಲ್ಲೇಸ್ವುರ್?' ಎಂದು ವಿಚಾರಿಸಿ, ಜಟಕಾ ಹತ್ತುತ್ತಿದ್ದರು. ಸಾರಥಿಯೊಂದಿಗೆ ಬಹುಪಾಲು ಉರ್ದುವಿನಲ್ಲೇ ಸಂಭಾಷಣೆ, ಅವರೂ ಅವರದೇ ಉರ್ದು ಮಿಶ್ರಿತ ಕನ್ನಡ ಮಾತನಾಡುತ್ತಿದ್ದರು. ಧರ್ಮಗಳ ಕಂದಕವೇ ಇರುತ್ತಿರಲಿಲ್ಲ. ತುಂಬಾ ದೂರದ ಪ್ರದೇಶಕ್ಕೆ ಹೋಗಬೇಕಾದರೆ, ಒಂದು ಅಥವಾ ಒಂದೂವರೆ ರೂಪಾಯಿ. ಐದು ಮಂದಿಗೆ ಅವಕಾಶ. ಆ ಮುಸ್ಲಿಂ ಸಾರಥಿ ಏನೋ ಹಾಡು ಗುನುಗುತ್ತಲೊ ಗಿರಾಕಿಗಳೊಂದಿಗೆ ಏನೊ ತಮಾಷೆಯಾಗಿ ಹೇಳುತ್ತಲೊ ಪ್ರಯಾಣ ಮುಂದುವರಿಯುತ್ತಿತ್ತು. ನಡನಡುವೆ ಅವನು ಛಾಟಿಯ ಕೋಲನ್ನು ಚಕ್ರದ ಮೇಲಿರಿಸಿ 'ಟರ್‌ರ್' ಎನ್ನುವ ಸದ್ದು ಮಾಡುತ್ತಿದ್ದ. 'ಹೇಯ್ ಹೇಯ್, ಬಾಜೊ, ಬಾಜೊ...' ಎಂದು ಕೂಗುತ್ತಿದ್ದ.

ಆಫೀಸ್‌ಗೆ ಗಂಡಸರು ನಡೆದುಕೊಂಡೇ ಹೋಗುತ್ತಿದ್ದರು. ಮಕ್ಕಳು ಶಾಲಾ-ಕಾಲೇಜ್‌ಗಳಿಗೆ ನಡೆದುಕೊಂಡೇ ಹೋಗುತ್ತಿದ್ದರು. ದೂರದೂರದ ಸಿನಿಮಾ ಮಂದಿರಗಳಿಗೆ ಹೋಗುತ್ತಿದ್ದುದೇ ಅಪರೂಪ. ನಡೆದುಹೋಗಿ ಸಿನಿಮಾ ನೋಡಿ ನಡೆದು ವಾಪಸ್ಸು. ದಾರಿಯಲ್ಲಿ ಎಲ್ಲಾದರೂ ಹೋಟಲ್‌ನಲ್ಲಿ ತಿಂಡಿ ಕಾಫಿ ಸೇವನೆ.

ಇನ್ನೊಂದು ವಿಶೇಷ: ಮೊದಲಿನಿಂದಲೂ ಬೆಂಗಳೂರಿಗರು ಗರಂ ಕಡ್ಲೇಕಾಯಿ (ಗಡಂಗಡ್ಲೇಕಾಯಿ ಎಂದೂ ಹೇಳುತ್ತಿದ್ದುದುಂಟು) ಪ್ರಿಯರು. ದಾರಿಯಲ್ಲಿ ಒಂದು

ಪಾವು (ಆಗ ಹತ್ತು ಪೈಸೆ ಇರಬಹುದು ಕಾಲು ಕೆಜಿಯಷ್ಟು) ಕೊಂಡು ಪ್ಯಾಂಟ್ ಜೇಬಿಗೆ ತುಂಬಿಕೊಂಡುಬಿಟ್ಟರೆ, ಎಷ್ಟು ದೂರ ಬೇಕಾದರೂ ನಡೆದುಬಿಡುತ್ತಿದ್ದರು. ಕಡಲೆಕಾಯಿ ಸಿಪ್ಪೆ ಬಿಡಿಸಿ ಎಸೆದು ಕಾಳುಗಳನ್ನು ಬಾಯಿಗೆಸೆದುಕೊಂಡು ನಿಧಾನವಾಗಿ ಹೆಜ್ಜೆ ಹಾಕುತ್ತಿದ್ದರು. ಇದೊಂದು ಸುಖ ಆಗಿನವರಿಗೆ.

ಆಗೆಲ್ಲ ಟಿವಿ ಇಲ್ಲದಿದ್ದ ಕಾಲ. ಸಂಜೆ ವಾಕಿಂಗ್ ಎಂದರೆ ಮೂರು ನಾಲ್ಕು ಮೈಲಿ ಜನಪ್ರಿಯ ರಸ್ತೆಗಳಲ್ಲಿ ಓಡಾಟ. ಸಂಜೆ ಐದೂವರೆ-ಆರಕ್ಕೆ ಹೊರಟರೆ ರಾತ್ರಿ ಎಂಟೂವರೆ-ಒಂಭತ್ತಕ್ಕೆ ವಾಪಸ್.

ಹೀಗೆಲ್ಲ ಆಗ ಓಡಾಟದ ಜನಪ್ರಿಯ ತಾಣಗಳು: ಗಾಂಧಿಬಜಾರ್, ಮಲ್ಲೇಶ್ವರಂ ಸಂಪಿಗೆ ರಸ್ತೆ ಮೂಲಕ ಆನೆ ಕ್ರಾಸ್ ತರಕಾರಿ ಮಾರುಕಟ್ಟೆ- ಗಣೇಶನ ಗುಡಿ; ಮೆಜೆಸ್ಟಿಕ್ ಮೂಲಕ ಬಳೇಪೇಟೆ, ಚಿಕ್ಕಪೇಟೆಗಳಲ್ಲಿ ಹಾದು, ಅವೆನ್ಯೂ ರೋಡ್ ಮೂಲಕ ಸಿಟಿಮಾರ್ಕೆಟ್ ಪ್ರವೇಶಿಸಿ ಓಡಾಟ; ರೇಸ್‌ಕೋರ್ಸ್ ಮೂಲಕ ನಡೆದು ಇಂಡಿಯನ್ ಎಕ್ಸ್‌ಪ್ರೆಸ್ ಬಿಲ್ಡಿಂಗ್ ದಾಟಿ ಶಿವಾಜಿನಗರ ಪ್ರವೇಶಿಸಿ, ರಸೆಲ್ ಮಾರುಕಟ್ಟೆ ಮತ್ತು ಸುತ್ತಮುತ್ತಲೂ ಓಡಾಟ.

ಈ ಮಲ್ಲೇಶ್ವರ, ಗಾಂಧಿಬಜಾರ್, ಕೆಂಪೇಗೌಡ ರಸ್ತೆ, ಸಿಟಿ ಮಾರ್ಕೆಟ್ ರಸೆಲ್ ಮಾರ್ಕೆಟ್‌ಗಳಂತೂ ಈಗಲೂ ಹಾಗೆಯೇ . ಓಡಾಡಲು ಆಕರ್ಷಕವಾಗಿದೆ. ಮಾರುಕಟ್ಟೆಗಳು ಈಗ ಹಿಂದಿನಂತೆ ಇರದೆ ಒಂದಿಷ್ಟು ಸಂಭ್ರಮ-ಜನಸಂದಣಿ ಕಳೆದುಕೊಂಡಿದೆಯೇನೊ ಅನ್ನಿಸುತ್ತದೆ. ಆದರೆ ಮಲ್ಲೇಶ್ವರ ಸಂಪಿಗೆ ರಸ್ತೆ ಮತ್ತು ಗಾಂಧಿ ಬಜಾರ್ ತಾಣಗಳ ಸಂಭ್ರಮ ಈಗ ಇನ್ನೂ ಹೆಚ್ಚಾಗಿದೆ. ಅದೂ ಸಂಜೆ ಐದು ಘಂಟೆಯ ಅನಂತರ: ಏನಾದರೂ ಕೊಳ್ಳಲು ಓಡಾಡುವವರು, ಸುಮ್ಮನೆ ತಮಾಷೆಯಾಗಿ ಅತ್ತಿತ್ತ ಬಣ್ಣಗಳನ್ನು ನೋಡುತ್ತ ಓಡಾಡುವವರು, ವಿದ್ಯಾರ್ಥಿ ಭವನ ದೋಸೆಗೆ ಬಂದವರು, ಜನತಾ ಹೋಟಲ್ ಉದ್ದಿನವಡೆ ಸಾಂಬಾರ್, ಪೂರಿ, ದೋಸೆಗೆ ಬಂದವರು -ಹೀಗೆ ಜನಸಂದಣಿ ರಾತ್ರಿ ಒಂಭತ್ತು-ಹತ್ತು ಘಂಟೆಯಾದರೂ ಕರಗುವುದೇ ಇಲ್ಲ.

ಗಾಂಧಿಬಜಾರ್ ಈ ಸಂಭ್ರಮಗಳ ರಾಜ. ಸುಮಾರು ಒಂದು ಫರ್ಲಾಂಗ್ (೨೦೦ ಮೀಟರ್) ಉದ್ದದ ಈ ರಸ್ತೆಯಲ್ಲಿ ಅದೆಂಥ ಸಂಭ್ರಮ, ಸಂತೋಷ, ಗಡಿಬಿಡಿ, ರಂಗುಗಳು, ಆರರಿಂದ ಅರವತ್ತರವರೆಗೆ ಎಲ್ಲರೂ ಅಲ್ಲಿರುತ್ತಾರೆ. ತರಕಾರಿ, ಹಣ್ಣುಗಳು, ಬೇಕರಿ, ದಿನಸಿ, ಮಸಾಲೆದೋಸೆ, ಉತ್ತರ ಭಾರತ ತಿಂಡಿಗಳು, ಕನ್ನಡ ಪುಸ್ತಕಗಳು, ಊದಿನಕಡ್ಡಿ-ಕರ್ಪೂರ-ವಿಳ್ಳೇದೆಲೆ ವ್ಯಾಪಾರ, ಖಾರದ ಕಡ್ಲೇಕಾಯಿ-ಕಾಂಗ್ರೆಸ್-ಬರ್ಫಿಗಳು-ಖಾರಾಪುರಿ-ಚಕ್ಕುಲಿ ಇತ್ಯಾದಿ. -ಒಂದೇ ಎರಡೇ! ಇಲ್ಲಿ ಜನ ಬರುವ ಕಾರಣವನ್ನು ಹೀಗೇ ಎಂದು ಹೇಳಲು ಸಾಧ್ಯವೇ ಇಲ್ಲ. ಅತ್ಯಂತ ಸಂಪ್ರದಾಯದ

ಕುಟುಂಬ, ಅತಿ ಆಧುನಿಕ ಕುಟುಂಬ, ಪೈಜಾಮ-ಜುಬ್ಬ, ದಾವಣಿಲಂಗ, ಪ್ಯಾಂಟುಟಾಪ್ -ಹೀಗೆ ಎಲ್ಲವೂ ಅಲ್ಲಿ ವಿಜೃಂಭಿಸುತ್ತದೆ. ಅವರವರು ಅವರವರ ಕೆಲಸಗಳಲ್ಲಿ ಮಗ್ನರಾಗಿರುತ್ತಾರೆ. ಎಲ್ಲ ಅಂಗಡಿಗಳಲ್ಲೂ ಜನ, ಎಲ್ಲ ಬೇಕರಿಗಳು-ಕಾಂಡಿಮೆಂಟ್‌ಗಳಲ್ಲೂ ಜನ, ಎಲ್ಲ ಹೋಟಲ್‌ಗಳಲ್ಲೂ ಜನ, ಜ್ಯೂಸ್ ಅಂಗಡಿ ಹುರಿಗಾಳು ಅಂಗಡಿಯಲ್ಲೂ ತಾಳ್ಮೆಯಿಂದ ಕಾಯಬೇಕು. ಫುಟ್‌ಪಾತ್ ತರಕಾರಿ-ಹಣ್ಣು ಅಂಗಡಿಗಳು ಮುಂದೆಯೂ ಜನ, ವಾಹನ ಇರಿಸಲು ತೊಂದರೆ-ಹೊರಗೆ ತೆಗೆಯಲು ತೊಂದರೆ, ಹೀಗೆಲ್ಲ ಚಡಪಡಿಕೆಗಳ ನಡುವೆಯೂ ಒಂದೇ ಮನಸ್ಸಿನಿಂದ ವ್ಯಾಪಾರ ನಡೆಯುತ್ತದೆ, ಚೌಕಾಸಿ ಇಲ್ಲದ ವ್ಯಾಪಾರವೇ ಇಲ್ಲ. ವ್ಯಾಪಾರ ಮುಗಿಸಿ ಮೂರು ನಾಲ್ಕು ಕೈಚೀಲಗಳ ಭಾರದೊಂದಿಗೆ ವಿದ್ಯಾರ್ಥಿಭವನ ಪ್ರವೇಶಿಸಿ, ಸೀಟಿಗಾಗಿ ಕಾಯುತ್ತ ನಿಲ್ಲುವುದು, ಅರ್ಧಮುಕ್ಕಾಲು ಘಂಟೆ ಕಾದು ಸೀಟು ದೊರಕಿ ಮಸಾಲೆ ದೋಸೆ ತಿಂದು ತೃಪ್ತಿಯಿಂದ ಮನೆಯತ್ತ ಹೊರಡುವುದು.

ಹೀಗೆಯೇ- ಜನಜೀವನ ಮಲ್ಲೇಶ್ವರದಲ್ಲಿಯೂ ಜರುಗುತ್ತದೆ. ಮಲ್ಲೇಶ್ವರ ಸರ್ಕಲ್‌ನಿಂದ ಹದಿಮೂರನೆ ಕ್ರಾಸ್‌ನವರೆಗೆ, ಜನಪ್ರವಾಹ, ವಾಹನ ಪ್ರವಾಹ, ಕೊಡುವವರು-ಕೊಳ್ಳುವವರು, ಸುಮ್ಮನೆ ಠಳಾಯಿಸುತ್ತ ಅತ್ತಿತ್ತ ಬಣ್ಣಗಳನ್ನು ನೋಡುತ್ತ ಹೋಗುವ ಪಡ್ಡೆಗಳು, ಮಲ್ಲೇಶ್ವರದ ಎಲ್ಲ ಕುಟುಂಬಗಳೂ ಇಲ್ಲಿ ಏನಾದರೂ ಕೊಳ್ಳಲು ಓಡಾಡುತ್ತಿವೆಯೇನೊ ಎಂಬಂತೆ ಕಾಣಿಸುವ ಚಟುವಟಿಕೆ- ಸಂಭ್ರಮ. ಆನೆ ಕ್ರಾಸ್‌ನಲ್ಲಿ ನಡೆದು ಅಲ್ಲಿ ದೇವಾಲಯಗಳ ಆವರಣಗಳನ್ನು ಪ್ರವೇಶಿಸಿ ನಮಸ್ಕಾರಗಳನ್ನು ಸಲ್ಲಿಸಿ, ಎತ್ತರದಲ್ಲಿರುವ ಗಣಪತಿಯನ್ನು ಒಂದಿಷ್ಟು ಮೆಟ್ಟಿಲುಗಳು ಹತ್ತಿಹೋಗಿ ವಂದಿಸಿ, ಕುಂಕುಮ ಹಚ್ಚಿಕೊಂಡು ವಾಪಸ್ಸು. ಸಂಪಿಗೆ ರಸ್ತೆಯಲ್ಲಿ, ಆನೆ ಕ್ರಾಸ್ ದೇವಾಲಯಗಳಲ್ಲಿ, ಗಣಪತಿ ಮೆಟ್ಟಿಲು ಏರಿಳಿಕೆಗಳಲ್ಲಿ ಯುವಮಿಡಿತಗಳ ಸಂತಸಗಳೇ ಹೆಚ್ಚು ಎಂದು ಕೆಲದಶಕಗಳಿಂದಲೇ ಅಲ್ಲಿಯವರು ಹೇಳುತ್ತಿರುತ್ತಾರೆ. ಪರೀಕ್ಷೆ ಸಂದರ್ಭಗಳಲ್ಲಿ ಇಲ್ಲಿ 'ರಶ್' ಜಾಸ್ತಿ.

ಮಲ್ಲೇಶ್ವರದ ಎಲ್ಲ ಓಡಾಟಗಳೂ ಕೊನೆಗೆ 'ಜನತಾ ಹೋಟಲ್'ನಲ್ಲಿ ಮುಗಿಯುತ್ತದೆ. ಓಡಾಡಿ ಆಯಾಸಗೊಂಡು ಬಂದು ಇಲ್ಲೇನಾದರೂ ತಿಂಡಿ- ಕಾಫಿ ಆದರೆ ಮನಸ್ಸಿಗೆ ತೃಪ್ತಿ. ಸಂತೋಷದಿಂದ ಮನೆಗೆ ಹೋಗಲು ಸಿದ್ಧ.

ನಡೆದುಕೊಂಡು ನಿಧಾನವಾಗಿ ಹೆಜ್ಜೆಹಾಕುತ್ತ ಓಡಾಡಿದಾಗ ಗಾಂಧಿಬಜಾರ್ ಮತ್ತು ಮಲ್ಲೇಶ್ವರಗಳ ಸೊಬಗು-ಸಂಭ್ರಮಗಳನ್ನು ಬಾಚಿಕೊಳ್ಳಲು ಚೆನ್ನಾಗಿರುತ್ತದೆ.

ಈಗಿನ ದಿನಗಳಲ್ಲಿ ಕೆಲ ಬಡಾವಣೆಗಳಲ್ಲೂ ಈ ಸಂಭ್ರಮ 'ಮಿನಿ' ಆಗಿ ಕಾಣುತ್ತದೆ.

ವಿಜಯನಗರ ಮಾರುಕಟ್ಟೆ, ರಾಜಾಜಿನಗರ ಭಾಷ್ಯಂ ಸರ್ಕಲ್, ಚಾಮರಾಜಪೇಟೆ ಅಂಗಡಿ ಬೀದಿ, ಜಯನಗರ ೯ನೆ ಬ್ಲಾಕ್ ಬಸ್‌ಸ್ಟಾಂಡ್ ಸುತ್ತಮುತ್ತ ಮತ್ತು ಬಹಳ ಮುಖ್ಯವಾಗಿ ಜಯನಗರ ೪ನೆ ಬ್ಲಾಕ್ ಕಾಂಪ್ಲೆಕ್ಸ್ ಅನುಭವ -ಇವೆಲ್ಲ ಮನತಣಿಸುತ್ತವೆ.

ಜಯನಗರ ೪ನೆ ಬ್ಲಾಕ್ ಕಾಂಪ್ಲೆಕ್ಸ್ ಅಂತೂ ಒಂದು ಪ್ರತ್ಯೇಕ ಪ್ರಪಂಚ. ಇದು ಗಾಂಧಿಬಜಾರ್-ಮಲ್ಲೇಶ್ವರಗಳಿಗಿಂತಲೂ ಭಿನ್ನ. ಅವೆರಡೂ ಮಧ್ಯಮ ವರ್ಗಗಳ ಲೋಕವಾದರೆ, ಕಾಂಪ್ಲೆಕ್ಸ್ ಉಳ್ಳವರ ಪ್ರಪಂಚ. ಎಲ್ಲವೂ ಆಧುನಿಕ, ಕಾಸ್ಮೋಪಾಲಿಟನ್, ಯುವಪ್ರಪಂಚ, ಕಾರುಗಳ ವೈಭವ.

ಬೆಂಗಳೂರಿನಲ್ಲಿ ಈಚಿನ ವರ್ಷಗಳಲ್ಲಿ ಯುವಜನಾಂಗ ಅವರ ತಂದೆ, ತಾತನಿಗಿಂತಲೂ ಹತ್ತರಷ್ಟು-ಇಪ್ಪತ್ತರಷ್ಟು ಹಣ ಸಂಪಾದಿಸುತ್ತಿದೆ. ಇಪ್ಪತ್ತು ಸಾವಿರ, ಮೂವತ್ತು ಸಾವಿರಗಳೆಲ್ಲ ಸಾಮಾನ್ಯವಾಗಿ ಹೋಗಿ, ಐವತ್ತು ಸಾವಿರ-ಒಂದು ಲಕ್ಷ ತಿಂಗಳಿಗೆ ಸಂಪಾದಿಸುವ ೩೦ ವಯಸ್ಸಿನೊಳಗಿನವರು ಲಕ್ಷಾಂತರ ಮಂದಿ ಇದ್ದಾರೆ. ತಿಂಗಳಿಗೆ ಮೂರರಿಂದ-ಐದು ಲಕ್ಷ ಸಂಪಾದಿಸುವವರೂ ಸಾವಿರಾರು ಮಂದಿ ಇದ್ದಾರೆ. ವರ್ಷಕ್ಕೆ ಒಂದು-ಎರಡು ಕೋಟಿ ಸಂಪಾದಿಸುವವರು ಬೇಕಾದಷ್ಟು ಮಂದಿ ಇದ್ದಾರೆ.

ಹಣ ಸುಲಭವಾಗಿ ಚಲಾವಣೆಯಾಗುತ್ತಿದೆ-ಪಬ್‌ಗಳಲ್ಲಿ, ಕ್ಲಬ್‌ಗಳಲ್ಲಿ, ಪಂಚತಾರಾ ಸಂಸ್ಕೃತಿಯಲ್ಲಿ, ಶ್ರೀಮಂತ ಸಿದ್ಧ ಉಡುಪುಗಳು, ಆಧುನಿಕ ಕಾರುಗಳು, ಸೂಪರ್‌ಸ್ಟಾರ್ ಫ್ಲಾಟ್‌ಗಳಲ್ಲಿ, ದಾನಧರ್ಮಗಳಲ್ಲಿ, ಹೋಟಲ್-ಸಿನಿಮಾ, ಎಲೆಕ್ಟ್ರಾನಿಕ್ ವಸ್ತುಗಳಲ್ಲಿ, ಮೊಬೈಲ್‌ಗಳಲ್ಲಿ -ಹಣ ಸೇರಿಹೋಗುತ್ತಿದೆ, ಕರಗಿ ಹೋಗುತ್ತಿದೆ.

ಈ ಪಟ್ಟಿಗೆ ಹೊಸದಾಗಿ ಕೆಲವು 'ಮಾಲ್'ಗಳು (ಸರ್ವವಸ್ತು ಭಂಡಾರಗಳು) ಸೇರ್ಪಡೆಯಾಗಿವೆ. ರಿಚ್‌ಮಂಡ್ ಟೌನ್‌ನಲ್ಲಿ (ಫುಟ್‌ಬಾಲ್ ಸ್ಟೇಡಿಯಂ ಎದುರು) ಪ್ರಾರಂಭವಾದ 'ದಿ ಶಾಪರ್ಸ್ ಸ್ಟಾಪ್' ಆಧುನಿಕ ಮಳಿಗೆ ಇದಕ್ಕೆ ನಾಂದಿ ಹಾಡಿತು. ಇದರ ಯಶಸ್ಸಿನಿಂದ ಹುರುಪುಗೊಂಡ ಅನೇಕ ಶ್ರೀಮಂತ ಸಂಸ್ಥೆಗಳು ಬೆಂಗಳೂರಿನ ಶ್ರೀಮಂತರ ಬಡಾವಣೆಗಳಲ್ಲಿ ಹೊಸ ಹೊಸ ಆಧುನಿಕ ಸರ್ವವಸ್ತು ಮಳಿಗೆಗಳನ್ನು ಪ್ರಾರಂಭಿಸಿದವು. 'ಫಾಬ್‌ಮಾಲ್' ಎನ್ನುವ ಸೂಪರ್ ಅಂಗಡಿ ಬೆಂಗಳೂರಿನ ಪ್ರಮುಖ ಪ್ರದೇಶಗಳಲ್ಲಿ ಬೃಹತ್ ಮಳಿಗೆಗಳನ್ನು ಹೊಂದಿದೆ. ಕೋರಮಂಗಲದಲ್ಲಿ 'ಸೂಪರ್ ಮಾರ್ಕೆಟ್' ಇದೆ. ಮತ್ತು ಇಲ್ಲಿಯೇ ಹೊಸೂರು ಮುಖ್ಯರಸ್ತೆಯಲ್ಲಿ (ಮಡಿವಾಳ ಚೆಕ್ ಪೋಸ್ಟ್ ಹತ್ತಿರ) 'ಬಿಗ್ ಬಜಾರ್' ಇದೆ ('ನಮಗಿಂತಲೂ ಬೇರೆ ಯಾರೂ ಉತ್ತಮವಾದ್ದನ್ನು-ಕಡಮೆ ಬೆಲೆಗೆ ಮಾರುವುದಿಲ್ಲ' -ಇದು ಈ ಮಳಿಗೆಯ ಅಂತಿಮ

ವಾಕ್ಯ). ಕನಕಪುರ ರಸ್ತೆಯಲ್ಲಿರುವ 'ಫ್ಯಾಮಿಲಿ ಮಾರ್ಟ್' (ಟಿನೆ ಕ್ರಾಸ್, ಜೆಪಿ ನಗರ) -ಭಾರತದ ಮೊಟ್ಟಮೊದಲ 'ಸೂಪರ್ ಸೆಂಟರ್' ಎಂದು ಹೆಮ್ಮೆಯಿಂದ ಹೇಳುತ್ತದೆ. ಬೆಂಗಳೂರು ಬಹುಪಾಲು ಪ್ರದೇಶಗಳಲ್ಲಿರುವ 'ಫುಡ್‌ವರ್ಲ್ಡ್' -ಬೆಂಗಳೂರಿಗರಿಗೊಂದು ವಿಶೇಷ ಅನುಭವ.

ದಿಢೀರನೇ 'ಮೆಟ್ರೋ' ಎನ್ನುವ ವಿಶ್ವರೂಪ ಬೆಂಗಳೂರಿನಲ್ಲಿ ಪ್ರತ್ಯಕ್ಷವಾಗಿದೆ. ಇದು ಇತರ ಸಣ್ಣಪುಟ್ಟ ವ್ಯಾಪಾರ ಮಳಿಗೆಗಳಿಗೆ ಅತಿ ಕಡಮೆ ಬೆಲೆಯಲ್ಲಿ, ದಿನಸಿಯಿಂದ ಹಿಡಿದು ಎಲೆಕ್ಟ್ರಾನಿಕ್ ಪದಾರ್ಥಗಳವರೆಗೆ ಎಲ್ಲವನ್ನೂ ಮಾರುತ್ತಿದೆ. ಆ ಅಂಗಡಿಗಳು ಎಂದಿನ ಇತರ ಮಳಿಗೆಗಳ ದರಕ್ಕೆ ಮಾರಿ ಸಾಕಷ್ಟು ಲಾಭ ಮಾಡಿಕೊಳ್ಳಬಹುದು. ಯಶವಂತಪುರದಲ್ಲಿ (ಕಿರ್ಲೋಸ್ಕರ್ ಎಲೆಕ್ಟ್ರಿಕ್ ಕಾಂಪೌಂಡ್‌ನಲ್ಲಿ) ಇರುವ 'ಮೆಟ್ರೋ' ನಿಜವಾಗಲೂ 'ಫಾರಿನ್' ನೋಟ ಬೀರುತ್ತದೆ.

ಬೆಂಗಳೂರು ಇನ್ನೂ ಕೆಂಪೇಗೌಡನ ಕಾಲದಲ್ಲಿಯೇ ಇರುವಂತೆ ಕಂಡರೂ ಕೂಡ, ಅತ್ಯಾಧುನಿಕತೆಯನ್ನು ಅಳವಡಿಸಿಕೊಳ್ಳುವುದರಲ್ಲಿ ಯಾವ ಮುಂದುವರಿದ ದೇಶಕ್ಕೂ ಕಡಮೆಯೇನೂ ಇದ್ದಂತಿಲ್ಲ.

■■

'ಅಪ್-ಟು' ೫೦% ಇಳುವರಿ!

ಬೆಂಗಳೂರಿನಲ್ಲಿ ಯಾವಾಗಲೂ ಇಳುವರಿಗಳ ಭರಾಟೆ ನಡೆದೇ ಇರುತ್ತದೆ. ರೆಡಿಮೇಡ್ ಉಡುಪುಗಳು, ಸಿಲ್ಕ್ ಸೀರೆಗಳು, ಚಪ್ಪಲಿ-ಶೂಸ್ ಮೊದಲಾಗಿ ಅನೇಕ ದೈನಂದಿನ ಉಪಯೋಗಿ ವಸ್ತುಗಳು ವರ್ಷದ ಎಲ್ಲ ಕಾಲದಲ್ಲೂ ಇಳುವರಿ ಬೆಲೆಯಲ್ಲಿ ಮಾರಾಟವಾಗುತ್ತದೆ. ಕೆಲವು ಜಾಗಗಳಲ್ಲಿ ಐವತ್ತು ರೂಪಾಯಿಯಿಂದ ಒಂದು ನೂರು ರೂಪಾಯಿಗೆ ಉತ್ತಮ ರೆಡಿಮೇಡ್ ಷರ್ಟ್‌ಗಳು ಸಿಗುತ್ತವೆ.

ಅತ್ಯುತ್ತಮ ಪುಸ್ತಕಗಳ ಪ್ರದರ್ಶನ ಬೆಂಗಳೂರಿನಲ್ಲಿ ಬೇರೆಬೇರೆ ಕಡೆ ಜರುಗುತ್ತಲೇ ಇರುತ್ತದೆ. ಬೇರೆಲ್ಲೂ ಸಿಗದಂಥ ಪತ್ಯಪುಸ್ತಕಗಳು, ತಾಂತ್ರಿಕ ಪುಸ್ತಕಗಳು, ಕಂಪ್ಯೂಟರ್ ಪುಸ್ತಕಗಳು, ಅಪರೂಪವಾದ ಮಕ್ಕಳ ಪುಸ್ತಕಗಳು ಇಲ್ಲಿ ದೊರಕುತ್ತವೆ.

ಇಂಡಿಯನ್ ಎಕ್ಸ್‌ಪ್ರೆಸ್ - ಕನ್ನಡಪ್ರಭ ಕಛೇರಿ ಎದುರು ಇರುವ ಇನ್ಸ್‌ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಯಾವಾಗಲೂ ಒಂದಲ್ಲ ಒಂದು ಪುಸ್ತಕ ಪ್ರದರ್ಶನ-ಮಾರಾಟ ನಡೆಯುತ್ತಿರುತ್ತದೆ. ಕೆಲವೊಮ್ಮೆ ಇಳುವಳಿ ಶೇ. ೬೦ರಷ್ಟು ಆಗಿಬಿಡುತ್ತದೆ. ಪುಸ್ತಕ ಪ್ರಿಯರಿಗಂತೂ ನಿಜವಾಗಲೂ ಬೆಂಗಳೂರು ಒಂದು ರೀತಿ 'ಸಾಹಿತ್ಯಸ್ವರ್ಗ!'

೧೧. ನೋಡುವ, ಬೆಂಗಳೂರು!

ಬೆಂಗಳೂರು ನಗರದಲ್ಲಿ ಪ್ರವಾಸಿಗರು ಬಂದರೆ ನೋಡಲು ಏನೇನಿದೆ?

ನೋಡಲು ಸುಂದರ, ಆಧುನಿಕ, ಉದ್ಯಾನನಗರಿಯೇ ಇದೆ. ನಗರದ ಹೃದಯ ಭಾಗಗಳಲ್ಲಿ ಎಲ್ಲೆಲ್ಲಿ ಓಡಾಡಿದರೂ ಕಣ್ಮನ ಸೆಳೆಯುವ ನಗರದ ವ್ಯಕ್ತಿತ್ವ ಎದ್ದು ಕಾಣಿಸುತ್ತದೆ. ಕೆಂಪೇಗೌಡರಸ್ತೆ, ಪೇಟೆಗಳು, ಮಹಾತ್ಮಾಗಾಂಧಿ ರಸ್ತೆ, ಬ್ರಿಗೇಡ್ ರಸ್ತೆ, ಕಮರ್ಶಿಯಲ್ ರಸ್ತೆ, ಮಲ್ಲೇಶ್ವರ ಸಂಪಿಗೆ ರಸ್ತೆ, ಗಾಂಧಿಬಜಾರ್ -ಇಲ್ಲೆಲ್ಲ ಎಷ್ಟು ಬೇಕಾದರೂ ಓಡಾಡಿ ಆನಂದಿಸಬಹುದು.

ಜೊತೆಗೆ, ಕೆಂಪೇಗೌಡನ ಪುಟ್ಟ ಬೆಂಗಳೂರು ಗ್ರಾಮ, ಈಗ ನಾಲ್ಕು ನೂರಾ ಅರವತ್ತೇಳು ವರ್ಷಗಳ ಅನಂತರ (೨೦೦೪ರಲ್ಲಿ) - ಕೆಂಪೇಗೌಡ ಕನಸು ಮನಸಿನಲ್ಲೂ ಯೋಚಿಸದ ರೀತಿಯಲ್ಲಿ ಆಧುನಿಕ ಪಟ್ಟಣವಾಗಿ ಬೆಳೆದಿರುವುದನ್ನು ಕಾಣಬಹುದು. ಇಲ್ಲಿ ಕೆಂಪೇಗೌಡನ ಕಾಲದ್ದೂ ಇದೆ, ಮುಸ್ಲಿಮ್-ಮರಾಠಿ ಆಡಳಿತಗಾರರ ಕಾಲದ್ದೂ ಇದೆ, ಮೈಸೂರು ಅರಸರ ಕಾಲದ್ದೂ ಇದೆ, ಹೈದರಾಲೀ-ಟೀಪೂಸುಲ್ತಾನ್ ಕಾಲದ್ದೂ ಇದೆ, ಇಂಗ್ಲಿಷ್‌ನವರ ಕಾಲದ್ದೂ ಇದೆ. ಅಷ್ಟೇ ಅಲ್ಲ, ಇದೆಲ್ಲ ವಿಧವಿಧ ಧರ್ಮಗಳ, ರಾಜಮಹಾರಾಜರ ಪ್ರಭಾವ ಬೆಂಗಳೂರು ಜನಗಳ ಮೇಲೂ ಆಗಿದೆ, ಜನ ಬದುಕಿನ ಮೇಲೂ ಆಗಿದೆ. ಭಾಷೆ-ಸಂಸ್ಕೃತಿಯ ಮೇಲೂ ಆಗಿದೆ.

೧೫೩೭ರಿಂದ ಕೆಂಪೇಗೌಡನ ಆಡಳಿತದಿಂದ ಪ್ರಾರಂಭವಾಗಿ, ಇಂಗ್ಲಿಷರು ಮತ್ತು ಮೈಸೂರು ಅರಸರವರೆಗೆ ಸುಮಾರು ಮುನ್ನೂರೈವತ್ತು ವರ್ಷಗಳು ಬೆಂಗಳೂರು ಹೊಸ ಹೊಸದನ್ನು ತನ್ನಲ್ಲಿ ಬಿತ್ತಿಕೊಳ್ಳುತ್ತ ಬೆಳೆದಿದೆ. ಬಹುಬೇಗ ಜನಾಕರ್ಷಕ ಊರಾಗಿ ಅಭಿವೃದ್ಧಿಗೊಂಡಿದೆ.

ಕೆಂಪೇಗೌಡ ಕೆರೆಕಟ್ಟೆಗಳು-ದೇವಾಲಯಗಳನ್ನು ಕಟ್ಟಿಸಿದರೆ, ಮುಸ್ಲಿಮರು ಮಸೀದಿಗಳನ್ನು ಕಟ್ಟಿಸಿದ್ದಾರೆ, ಇಂಗ್ಲಿಷರು ಚರ್ಚುಗಳನ್ನು ಸೇರಿಸಿದ್ದಾರೆ.

ಈಚಿನ ೨೦೦ ವರ್ಷಗಳ ಹಿಂದಿನಿಂದ ಬೆಂಗಳೂರು ನಗರದ ವ್ಯಕ್ತಿತ್ವವನ್ನು ಬಿತ್ತಿಕೊಳ್ಳಲು ಪ್ರಾರಂಭಿಸಿದೆ: ದೊಡ್ಡ ದೊಡ್ಡ ಕಟ್ಟಡಗಳು, ವಿಶ್ವವಿದ್ಯಾಲಯ, ನಗರ

ಭವನಗಳು, ಆಡಳಿತ ಕಟ್ಟಡ ಸಂಕೀರ್ಣಗಳು, ಸಂಶೋಧನಾಲಯಗಳು, ಕಾರ್ಖಾನೆಗಳು, ಮ್ಯೂಸಿಯಂಗಳು, ಕಲಾಕೇಂದ್ರಗಳು ಬೆಂಗಳೂರಿನ ಮಡಿಲು ಸೇರಿವೆ. ಕೆಂಪೇಗೌಡನ ಪುಟ್ಟ ಊರನ್ನು ವಿಸ್ತಾರವಾದ ಬೃಹತ್ ಪಟ್ಟಣವಾಗಿಸಿದೆ.

ಹೀಗಿದ್ದರೂ, ಬೆಂಗಳೂರಿನ ವಿಶೇಷ ತಾಣಗಳನ್ನು ಎರಡು ಮೂರು ದಿನಗಳಲ್ಲಿ ನೋಡಿ ಮುಗಿಸಿಬಿಡಬಹುದು. ಒಂದೇ ದಿನದಲ್ಲಿ ಬೆಂಗಳೂರಿನ ಪ್ರವಾಸೀ ತಾಣಗಳನ್ನು ಸುತ್ತಾಡಿಸಿ ತೋರಿಸಿಕೊಂಡು ಬರುವ ಪ್ರವಾಸೀ ಬಸ್ ಅನುಕೂಲಗಳಿವೆ.

ಕರ್ನಾಟಕ ರಾಜ್ಯ ಪ್ರವಾಸ ಅಭಿವೃದ್ಧಿ ನಿಗಮ (ಕೆಎಸ್‌ಟಿಡಿಸಿ) ಪ್ರತಿದಿವಸ 'ಬೆಂಗಳೂರು ನಗರ ಸಂಚಾರ' ಬಸ್‌ಗಳನ್ನು ಏರ್ಪಡಿಸಿದೆ. (ಫೋನ್ ನಂಬರ್: ೨೨೩೫೨೯೦೧, ೨೨೩೫೨೮೨೮) ನಗರ ಸಾರಿಗೆ (೨೨೮೭೨೦೯೦)

ಈ ಬಸ್ಸುಗಳು ನಿಮಗೆ ಬೆಂಗಳೂರಿನ ಬಹುಪಾಲು ಮುಖ್ಯ ತಾಣಗಳನ್ನು ತೋರಿಸಿಕೊಂಡು ಬರುತ್ತದೆ.

ಬೇಕಾದರೆ ನೀವೇ ಒಂದೊಂದು ದಿನಕ್ಕೆ ಇಷ್ಟಿಷ್ಟು ತಾಣಗಳು ಎಂದು ಆರಿಸಿಕೊಂಡು ಹೋಗಿಬರಬಹುದು. ಒಂದೊಂದು ದಿನಕ್ಕೆ ಒಂದೊಂದು ಪ್ರದೇಶವನ್ನು ಆಯ್ಕೆ ಮಾಡಿಕೊಂಡು ಬೆಳಗಿನಿಂದ-ಸಂಜೆವರೆಗೆ ಓಡಾಡಿಕೊಂಡು ಬರಬಹುದು. ಒಂದಿಷ್ಟು ಆಯಾಸವೇನೊ ಆಗುತ್ತದೆ. ಆದರೆ ಸುಧಾರಿಸಿಕೊಳ್ಳಲು, ಆಯಾಸ ಪರಿಹರಿಸಿಕೊಳ್ಳಲು ಅಲ್ಲಲ್ಲಿ ಉದ್ಯಾನಗಳಿವೆ. ತಿಂಡಿ ತಿನಿಸು ಊಟ ತಾಣಗಳಿವೆ. ಏನೂ ಚಿಂತಿಸಬೇಕಾಗಿಲ್ಲ.

ಬೇಕಾದರೆ ಹೀಗೆ ಮಾಡಬಹುದು: ಮೊದಲನೆ ದಿವಸವೇ 'KSTDC' ಏರ್ಪಡಿಸಿರುವ 'ಬೆಂಗಳೂರು ನಗರ ಸಂಚಾರ' ಸುತ್ತನ್ನು ಮುಗಿಸಿಬಿಡಿ. ನಿಮಗೆ ಸುಮಾರಾಗಿ ಬೆಂಗಳೂರಿನ ಪರಿಚಯವಾಗುತ್ತದೆ -ಈ ಬಸ್ಸು ಬೆಂಗಳೂರು ನಗರ ಮತ್ತು ದಂಡು ಪ್ರದೇಶಗಳೆರಡನ್ನೂ ಮುಟ್ಟುತ್ತದೆ.

ಸರ್ಕಾರೀ ಟ್ರಿಪ್ ಆದಮೇಲೆ ನೀವೇ ಬಸ್‌ಗಳನ್ನು ಹತ್ತಿ ಒಂದೊಂದು ದಿನ ಒಂದೊಂದು ಪ್ರದೇಶಕ್ಕೆ ಹೋಗಿ ಅಲ್ಲಿನೆಲ್ಲ ಜಾಗಗಳನ್ನೂ ನೋಡಬಹುದು.

ಇನ್ನೊಂದು ಸೂಚನೆ: ನೀವು ಮನೆಯಿಂದ ಹೊರಟು ಮೊದಲು ಹತ್ತುವ ಬಸ್ ಕಂಡಕ್ಟರ್‌ನಿಂದಲೇ ಇಪ್ಪತ್ತೈದು ರೂಪಾಯಿ ಟಿಕೆಟ್ ಪಡೆದು, ಬೆಳಗಿನಿಂದ ರಾತ್ರಿಯವರೆಗೆ ಇಡೀ ದಿನ ಎಲ್ಲ ಸರ್ಕಾರೀ ನಗರ ಸಾರಿಗೆ ಬಸ್‌ಗಳಲ್ಲಿ (ಪುಷ್ಪಕ್, ರೆಡ್‌ಬೋರ್ಡ್ ಮತ್ತು ಗ್ರಾಮೀಣ ಸಾರಿಗೆಗಳನ್ನು ಬಿಟ್ಟು) ಓಡಾಡಬಹುದು -ಮತ್ತೆ ಟಿಕೆಟ್ ಕೊಳ್ಳಬೇಕಾಗಿಯೇ ಇಲ್ಲ. ಇದು ತುಂಬ ಅನುಕೂಲಕರ ಎಂದೇ ಹೇಳಬಹುದು.

ಈ 'ಬೆಂಗಳೂರು ದರ್ಶನ'ವನ್ನು ಐದು ಭಾಗಗಳಾಗಿ ವಿಂಗಡಿಸಿಕೊಳ್ಳಿರಿ.

ಒಂದೊಂದು ದಿವಸ ಒಂದೊಂದು ಭಾಗವನ್ನು 'ಕವರ್' ಮಾಡಿರಿ.

೧

ನಿಮ್ಮ ಬಡಾವಣೆಯಿಂದ ವಿಧಾನಸೌಧಕ್ಕೆ ಬಂದುಬಿಡಿ (ಬೇಕಾದಷ್ಟು ಬಸ್‌ಗಳಿವೆ). ವಿಧಾನಸೌಧದ ಮುಂದೆ ಇಳಿದು ಅದರ ದರ್ಶನ ಮಾಡಿ, ಕೆಲ ಹೊತ್ತು ಅಲ್ಲಿ ಕಾಲ ಕಳೆಯಿರಿ. ಅನಂತರ ಎದುರಿಗಿರುವ ಹೈಕೋರ್ಟ್ ಕಟ್ಟಡದತ್ತ ಹೆಜ್ಜೆ ಹಾಕಿರಿ. ಅದರ ದರ್ಶನ ಮಾಡಿ, ಹೈಕೋರ್ಟ್ ಮೂಲಕವೇ ಕಬ್ಬನ್‌ಪಾರ್ಕ್ ನೊಳಗಿಳಿದು ಬ್ಯಾಂಡ್‌ಸ್ಟಾಂಡ್ ನೋಡುತ್ತ ನಡೆಯಿರಿ. ನೇರವಾಗಿ ಎದುರು ಮಹಾವೃಕ್ಷಗಳ ಹಾದಿಯಲ್ಲಿ ನಡೆದಾಗ ಎದುರು ನಿಮಗೆ ಸರ್ಕಾರಿ ಮ್ಯೂಜಿಯಂನ ಕೆಂಪು ಕಟ್ಟಡ ಕಾಣಿಸುತ್ತದೆ.

ಮ್ಯೂಜಿಯಂ ೧೮೮೮ರಲ್ಲಿ ಸ್ಥಾಪಿಸಿದ್ದು. ಇಲ್ಲಿ ಕರ್ನಾಟಕ ಇತಿಹಾಸದ ಅನೇಕ ಪಳೆಯುಳಿಕೆಗಳಿವೆ. ಪ್ರಾಚೀನ ಕಲಾಕೃತಿಗಳು, ಶಿಲ್ಪಗಳು, ಕಾಸುಗಳು, ಶಿಲಾಶಾಸನಗಳು ಇವೆ. ಪ್ರಾಚ್ಯವಸ್ತು ಇಲಾಖೆ ಸಂಪಾದಿಸಿರುವ ಶಾಸನಗಳು -ವೀರಗಲ್ಲುಗಳು ಇವೆ. ಮೈಸೂರು-ಕರ್ನಾಟಕ ರಾಜರ ಕಾಲದ ವಸ್ತುಗಳಿವೆ. ಹಿರಿಯರಿಗೆ-ಕಿರಿಯರಿಗೆ ಬಹಳಷ್ಟು ಮಾಹಿತಿ ನೀಡುತ್ತದೆ. ಬೆಳಗ್ಗೆ ಹತ್ತರಿಂದ ಸಂಜೆ ಐದೂವರೆವರೆಗೆ ಮ್ಯೂಜಿಯಂ ತೆರೆದಿರುತ್ತದೆ- ಸೋಮವಾರಗಳು ರಜಾದಿನ. ಟಿಕೆಟ್ ಮೂಲಕ ಪ್ರವೇಶ.

ಮ್ಯೂಜಿಯಂನ ಎಡ-ಬಲದಲ್ಲಿ ಹೊಸ ಮ್ಯೂಸಿಯಂಗಳಿವೆ. ಎಡಗಡೆ 'ವಿಶ್ವೇಶ್ವರಯ್ಯ ತಾಂತ್ರಿಕ ಮ್ಯೂಜಿಯಂ' ಇದೆ. ಇದು ಕಿರಿಯರನ್ನು ತಾಂತ್ರಿಕ ಲೋಕಕ್ಕೆ ಕೊಂಡೊಯ್ಯುತ್ತದೆ. ಶಾಲಾ-ಕಾಲೇಜ್‌ಗಳಲ್ಲಿ ಓದಿನ ತಾಂತ್ರಿಕ ಸಂಶೋಧನೆಗಳು, ಭಾರತ ಬೆಳೆದುಬಂದ ತಾಂತ್ರಿಕತೆಯ ಇತಿಹಾಸ ಎಲ್ಲ ಇವೆ. ಈಚೆಗೆ ಬೆಂಗಳೂರಿನ 'ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್' (ಬಿಇಎಲ್) ಸಂಸ್ಥೆ ಇಲ್ಲೊಂದು 'ಎಲೆಕ್ಟ್ರಾನಿಕ್ಸ್' ವಿಭಾಗ ಪ್ರಾರಂಭಿಸಿ ಆಸಕ್ತರನ್ನು ಹೊಸ ಲೋಕಕ್ಕೆ ಕೊಂಡೊಯ್ಯುತ್ತದೆ.

ಈ ಮ್ಯೂಜಿಯಂ ಎದುರು ಒಂದು ರೈಲ್ವೇ ಇಂಜಿನ್ ಮತ್ತು ಜೆಟ್ ವಿಮಾನ ಇರಿಸಲಾಗಿದೆ. ಜನ ಹತ್ತಿರದಿಂದ ಇವೆರಡನ್ನೂ ಗಮನಿಸಬಹುದು.

ಸರ್ಕಾರಿ ಮ್ಯೂಜಿಯಂನ ಬಲಭಾಗದಲ್ಲಿ ಹಸಿರು ಪರಿಸರದ ನಡುವೆ 'ವೆಂಕಟಪ್ಪ ಆರ್ಟ್ ಗ್ಯಾಲರಿ' ಇದೆ. ಇಲ್ಲಿ ಕರ್ನಾಟಕದ ಚಿತ್ರಕಲಾ ಲೋಕದ ಪರಿಚಯವಾಗುತ್ತದೆ. ವರ್ಣವೈವಿಧ್ಯದ ವರ್ಣಚಿತ್ರಗಳಿವೆ. ಪ್ಲಾಸ್ಟರ್ ಆಫ್ ಪ್ಯಾರಿಸ್ ಮತ್ತು ಮರದ ಶಿಲ್ಪಗಳಿವೆ. ಇಲ್ಲಿ ಯಾವಾಗಲೂ ಒಂದು ಕಲಾಚಿತ್ರ ಪ್ರದರ್ಶನ ನಡೆಯುತ್ತಿರುತ್ತದೆ.

ವಿಶ್ವೇಶ್ವರಯ್ಯ ಮ್ಯೂಸಿಯಂ ಪಕ್ಕದಲ್ಲೇ 'ಸರ್ಕಾರೀ ಮತ್ಸ್ಯಾಲಯ' ಇದೆ. ಇಲ್ಲಿ ವೈವಿಧ್ಯಮಯವಾದ ಮೀನುಗಳಿವೆ. ಜೊತೆಗೊಂದು 'ಮೀನು ತಿನಿಸು' ತಾಣವೂ ಇದೆ. ಇದಕ್ಕೂ ಸೋಮವಾರ ಮತ್ತು ಎರಡನೆ ಮಂಗಳವಾರ ರಜ.

ಮತ್ಸ್ಯಾಲಯದ ಮುಂದೆಯೇ 'ಜವಹರ್ ಬಾಲಭವನ' ಇದೆ. ಪುಟಾಣಿ ರೈಲು ಇದೆ. ಮಕ್ಕಳಿಗಾಗಿ ಸುಂದರ ವಾತಾವರಣವಿದೆ. ಬಾಲಭವನದಲ್ಲಿ ಆಗಾಗ ಮಕ್ಕಳಿಗಾಗಿ ಕಾರ್ಯಕ್ರಮಗಳು, ಚಿತ್ರ ಪ್ರದರ್ಶನಗಳು ಇರುತ್ತವೆ. 'ಪುಟಾಣಿ ರೈಲು' ಸಂಚಾರವಂತೂ ಆಹ್ಲಾದಕರ. ಮಕ್ಕಳು ತುಂಬಾ 'ಎಂಜಾಯ್' ಮಾಡುತ್ತಾರೆ.

ಮತ್ಸ್ಯಾಲಯದ ಎದುರಿನಲ್ಲಿಯೇ 'ವಿಕ್ಟೋರಿಯಾ ರಾಣಿ'ಯ ಪ್ರತಿಮೆ (ಸ್ಟಾಚ್ಯೂ) ಸಿಗುತ್ತದೆ. ಇದರ ಎದುರಿನ ಮೂಲೆಯಲ್ಲಿ (ರಸ್ತೆಯಾಚೆ) ಇರುವುದೇ ಮಹಾತ್ಮಾಗಾಂಧಿ ಪಾರ್ಕ್. ಚಿಕ್ಕ ಸುಂದರ ಉದ್ಯಾನ, ಗಾಂಧಿ ಶಿಲ್ಪ ಇದೆ. ಇದರ ಮುಂದಿನ ರಸ್ತೆಯೇ ಮಹಾತ್ಮಾಗಾಂಧಿ ರಸ್ತೆ.

ಕಬ್ಬನ್ ಪಾರ್ಕ್‌ನಲ್ಲಿ ವಿಕ್ಟೋರಿಯಾ ರಾಣಿಯ ಪ್ರತಿಮೆ ಅಲ್ಲದೆ, ಹೈಕೋರ್ಟ್ ಕಟ್ಟಡದ ಮುಂದೆ ಮಾರ್ಕ್‌ಕಬ್ಬನ್ (ಬೆಂಗಳೂರಿನ ಬ್ರಿಟಿಷ್ ಅಧಿಕಾರಿ) ಪ್ರತಿಮೆ ಇದೆ. ಬ್ಯಾಂಡ್‌ಸ್ಟಾಂಡ್‌ಗೆ ಬಲಪಕ್ಕದ ತಿರುವಿನಲ್ಲಿ ಚಾಮರಾಜ ಒಡೆಯರ ಶಿಲ್ಪವಿದೆ. ಅದರೆದುರು ಅದ್ಭುತವಾದೊಂದು 'ಫೌಂಟನ್' (ನೀರುಬುಗ್ಗೆ-ಕಾರಂಜಿ) ಇದೆ. ಮುಸ್ಸಂಜೆಯಾಗಿ ಕತ್ತಲಾದಾಗ ಇಲ್ಲಿಂದ ನೀರೆದ್ದು ಮೇಲೆ ಚಿಮ್ಮುವಾಗ ವರ್ಣ ದೀಪಗಳ ಪ್ರಕಾಶ ಕಣ್ಸೆಳೆಯುತ್ತದೆ.

ಈ ಕಾರಂಜಿಯ ಪಕ್ಕದಲ್ಲಿ ಕಾಣುವ ಕೆಂಪು ಕಟ್ಟಡವೇ 'ಶೇಷಾದ್ರಿ ಐಯ್ಯರ್ ಮೆಮೊರಿಯಲ್ ಹಾಲ್' ಎನ್ನುವ ಹೆಸರಿನ 'ಪಬ್ಲಿಕ್ ಲೈಬ್ರರಿ'. ಇದನ್ನು ನಿರ್ಮಿಸಿದ್ದು ೧೯೧೩ರಲ್ಲಿ- ಮೈಸೂರು ರಾಜ್ಯದ ದಿವಾನರಾಗಿದ್ದ ಶೇಷಾದ್ರಿ ಐಯ್ಯರ್ ಅವರ ನೆನಪಿಗಾಗಿ. ಈ ಕಟ್ಟಡದ ಎದುರಿನಲ್ಲಿಯೇ ಸುಂದರ ಹೂತೋಟದ ನಡುವೆ, ಶೇಷಾದ್ರಿ ಐಯ್ಯರ್ ಅವರ ಪ್ರತಿಮೆಯನ್ನು ಸ್ಥಾಪಿಸಲಾಗಿದೆ.

'ಪಬ್ಲಿಕ್ ಲೈಬ್ರರಿ'ಯಲ್ಲಿ ಅದ್ಭುತವಾದ ಪುಸ್ತಕ ಭಂಡಾರವಿದೆ. ಅತಿ ಹಿಂದಿನದು, ಅತಿ ಹೊಸದು ಎಲ್ಲವೂ ಇದೆ. ಆಕರ ಗ್ರಂಥಗಳಿವೆ. ದೇಶದ ಪ್ರಮುಖ ರಾಷ್ಟ್ರೀಯ ಲೈಬ್ರರಿಗಳಲ್ಲಿ ಒಂದು ಇದು.

ಮತ್ತೆ, ವಿಧಾನಸೌಧದ ಮುಂದೆ ಬಂದು ಬಲಭಾಗದ ರಸ್ತೆಗಿಳಿದರೆ, ಅಲ್ಲಿ ಹೊಸದಾಗಿ ನಿರ್ಮಾಣವಾಗುತ್ತಿರುವ, ಆಧುನಿಕ ವಿಧಾನಸೌಧ 'ವಿಕಾಸಸೌಧ'ವನ್ನು ನೋಡಬಹುದು. ಇದು ಇನ್ನೂ ಸ್ವಲ್ಪ ಕೆಲಸ ಉಳಿಸಿಕೊಂಡಿದೆ. ಇದು ಮುಗಿದಾಗ,

ಸರ್ಕಾರದ ಬಹುಪಾಲು ಮಂತ್ರಿಗಳ ಕಛೇರಿಗಳು ಮತ್ತು ಸಿಬ್ಬಂದಿಗಳು ಇಲ್ಲಿಗೆ ವರ್ಗಾವಣೆಯಾಗುತ್ತದೆ. ಬಹುಶಃ, ಇತಿಹಾಸ ಸೇರಲಿರುವ ಇನ್ನೊಂದು ಕಟ್ಟಡ ಶಿಲ್ಪ ಇದಾಗಲಿದೆ.

ವಿಕಾಸಸೌಧ-ವಿಧಾನಸೌಧದ ನಡುವಿನ ರಸ್ತೆಯಲ್ಲಿ ನೇರವಾಗಿ ನಡೆದರೆ ಕೊನೆಯಲ್ಲಿ 'ಅಶ್ವಾರೋಹಿ' ಬಸವೇಶ್ವರರ ಸುಂದರ ಪ್ರತಿಮೆ ಸಿಗುತ್ತದೆ. ಇದರ ಎದುರಿನಲ್ಲಿರುವುದೇ 'ಜವಹರಲಾಲ್ ನೆಹರೂ ಪ್ಲಾನಟೇರಿಯಂ' -ನಕ್ಷತ್ರಲೋಕ ಕಟ್ಟಡ. ಇದರ ಪಕ್ಕದಲ್ಲಿ ನಡುಗಡ್ಡೆಯ ಹಾಗೆ 'ಬಸವ ಭವನ'ದ ಬೃಹತ್ ಕಟ್ಟಡವಿದೆ.

ಅಂತರಿಕ್ಷದ ಅಪೂರ್ವ ದೃಶ್ಯಗಳನ್ನೆಲ್ಲ ಕ್ಯಾಮೆರಾ ಕಣ್ಣಿನಲ್ಲಿ ತೋರಿಸುವ 'ಪ್ಲಾನಟೇರಿಯಂ'ನ ಕತ್ತಲ ಲೋಕದಲ್ಲಿ ಕುಳಿತು ಆಕಾಶದ ನಕ್ಷತ್ರಲೋಕದ ಬೆರಗು ನೋಡುವುದೇ ಒಂದು ವಿಶಿಷ್ಟ ಅನುಭವ. ಇಲ್ಲಿ ಪ್ರತಿದಿವಸ (ಸೋಮವಾರ ಮತ್ತು ಎರಡನೆ ಮಂಗಳವಾರವನ್ನುಳಿದು) ಸಂಜೆ ೩ ರಿಂದ ೪.೩೦ ಕನ್ನಡ ವಿವರಣೆಯೊಂದಿಗೆ ಮತ್ತು ೪.೩೦ ರಿಂದ ೫.೧೫ ವರೆಗೆ ಇಂಗ್ಲಿಷ್ ಕಾಮೆಂಟರಿಯೊಂದಿಗೂ ದೃಶ್ಯಲೋಕದ ದರ್ಶನವಾಗುತ್ತದೆ. ಪ್ರವೇಶ ಟಿಕೆಟ್ ಮೂಲಕ.

ಪ್ಲಾನಟೇರಿಯಂನ ಎದುರಿನ ವಿಶಾಲ ವನ್ಯಪ್ರದೇಶದಲ್ಲಿ 'ಸಂಗೀತ ನೃತ್ಯ ಕಾರಂಜಿ' ಇದೆ. ಸಂಜೆ ೭ ರಿಂದ ೭.೩೦ ವರೆಗೆ ಮತ್ತು ೮ ರಿಂದ ೮.೩೦ ವರೆಗೆ. ಇಲ್ಲೂ ಟಿಕೆಟ್ ಇದೆ. (ಸೋಮವಾರ, ಎರಡನೆ ಮಂಗಳವಾರ ರಜ). ಇದೊಂದು ಅತ್ಯಂತ ಸುಂದರ ಅನುಭವ. ಮೈಸೂರಿನ ಬೃಂದಾವನದ ಬುಗ್ಗೆಗಳು, ನೀರೋಟಗಳು ನೀಡುವ ಸಂತಸವನ್ನು ಇದು ನೀಡುತ್ತದೆ.

-ಇಲ್ಲಿಗೆ ಇಂದಿನ ಓಡಾಟವನ್ನು ಮುಗಿಸಿ ಮನೆಗೆ ಹಿಂತಿರುಗಬಹುದು. ಸಂಗೀತ ನೃತ್ಯ ಕಾರಂಜಿಯ ಬದಿಯ ದಾರಿಯಲ್ಲಿ ತಿರುಗಿ ಇನ್‌ಫೆಂಟ್ರಿ ರಸ್ತೆಗೆ ಬಂದರೆ ಅಲ್ಲಿ 'ಸೌಮ್ಯ ವೆಜಿಟೇರಿಯನ್ ರೆಸ್ಟಾರಂಟ್' ಇದೆ. ಶುಚಿರುಚಿಯ ತಿನಿಸು ತಾಣ. ಅಲ್ಲಿ ಮನಸ್ಸಿಗೊಪ್ಪುವಂತೆ ಏನಾದರೂ ತಿಂದು, ಕಾಫಿ ಕುಡಿದು ಹೊರಬಂದರೆ, ಬಸ್ ಸ್ಟಾಂಡ್ ಇದೆ. ಇಲ್ಲಿ ಬಸ್ ಹತ್ತಿ ಶಿವಾಜಿನಗರ ತಲುಪಿದರೆ, ಅಲ್ಲಿಂದ ನಿಮ್ಮ ಬಡಾವಣೆಗೆ ಬೇಕಾದಷ್ಟು ಬಸ್‌ಗಳು ಸಿಗುತ್ತವೆ.

೨

ಎರಡನೆಯ ದಿವಸ ಸಿಟಿಮಾರ್ಕೆಟ್‌ಗೆ ಬಸ್‌ನಲ್ಲಿ ತಲುಪಿದರೆ, ಬೆಂಗಳೂರು ನಗರದ ಹಳೇ ಮಾರುಕಟ್ಟೆ ಮತ್ತದರ ಪರಿಸರ, ನೋಡಬಹುದು. ಈ ಪ್ರದೇಶ ಎಷ್ಟೋ ವರ್ಷಗಳಿಂದ ಏನೇನೂ ಬದಲಾಯಿಸಿಲ್ಲ. ಹಳೆ ಸಿಟಿ ಮಾರ್ಕೆಟ್ ಹೋಗಿ

ಹೊಸ ಕಟ್ಟಡ ಬಂದಿದೆ. ಆದರೆ, ಇಲ್ಲಿ ಹಿಂದಿನ ವೈಭವ ಇಲ್ಲ, ಏಕೆಂದರೆ ಹಣ್ಣು-ತರಕಾರಿಯ 'ಹೋಲ್‌ಸೇಲ್' ವ್ಯಾಪಾರವನ್ನು ಇಲ್ಲಿಂದ ಪ್ರತ್ಯೇಕಿಸಿ ದೂರದ ಪ್ರದೇಶಕ್ಕೆ ಕಳುಹಿಸಿಬಿಟ್ಟಿದೆ.

ಸಿಟಿಮಾರ್ಕೆಟ್ ಒಳಗೆ ನುಸುಳಿ ಒಂದಿಷ್ಟು ಓಡಾಡಬಹುದು. ಅನಂತರ ಹೊರಬಂದು ನೇರವಾಗಿ ವಿಕ್ಟೋರಿಯಾ ಆಸ್ಪತ್ರೆ ಕಡೆ ನಡೆದು ಹೋದರೆ ಅಲ್ಲಿ ಹೈದರಾಲೀ ನಿರ್ಮಿಸಿದ ಕಲ್ಲಿನ ಕೋಟೆಯ ಪಳೆಯುಳಿಕೆಯೊಂದಿದೆ. ಟೀಪೂ ಸುಲ್ತಾನನೊಂದಿಗೆ ಇಂಗ್ಲಿಷರು ಯುದ್ಧ ಮಾಡಿದಾಗ ಬಿದ್ದ ಫಿರಂಗಿಗಳ ಏಟಿನಿಂದ ನಾಶವಾದ ಕಲ್ಲಿನ ಕೋಟೆಯ ಅಳಿದುಳಿದ ಭಾಗ ಇದು. ಇದರ ಒಳಗೆ ಹೋಗಬಹುದು. 'ಕತ್ತಲೆ ಕೋಣೆ ಸೆರೆಮನೆ'ಯನ್ನು ನೋಡಬಹುದು.

ಮತ್ತೆ ಮುಖ್ಯರಸ್ತೆಗೆ ಬಂದರೆ, ಅಲ್ಲಿ ಎಡಬದಿ ಫುಟ್‌ಪಾತ್ ಕಡೆ ಪ್ರಾಚೀನ 'ಕೋಟೆ ಆಂಜನೇಯಸ್ವಾಮಿ' ದೇವಾಲಯವಿದೆ. ಇಲ್ಲಿಂದ ನೇರವಾಗಿ ನಡೆದರೆ 'ಕೋಟೆ ವೆಂಕಟರಮಣ' ದೇವಾಲಯ ಮತ್ತು ಟಿಪ್ಪುಸುಲ್ತಾನನ ಅರಮನೆ ಸಿಗುತ್ತದೆ.

ಹೈದರಾಲೀ ಪ್ರಾರಂಭಿಸಿದ ಅವನ ಬೆಂಗಳೂರು ಅರಮನೆ ಇದು. ಸುತ್ತಮುತ್ತಲ ಎಲ್ಲ ಪ್ರದೇಶಗಳನ್ನೂ ಸೇರಿಸಿಕೊಂಡು ನಿರ್ಮಿಸಿದ್ದ, ಸುಂದರ ಉದ್ಯಾನವಿದ್ದ ಅರಮನೆಯಾಗಿ ಟೀಪೂ ಕಾಲದಲ್ಲಿ ವಿಜೃಂಭಿಸಿತು. ಆದರೆ ಇಂಗ್ಲಿಷರೊಂದಿಗಿನ ಕೊನೆಯ ಯುದ್ಧದಲ್ಲಿ ಇದು ಮುಕ್ಕಾಲು ಪಾಲು ನಾಶವಾಯಿತು. ಅನಂತರ ಇಂಗ್ಲಿಷರು ಅದರ ಇನ್ನೊಂದಿಷ್ಟು ಭಾಗವನ್ನು ಒಡೆದುಹಾಕಿದರು. ಈಗ ಅಲ್ಪಸ್ವಲ್ಪ ಭಾಗ ಉಳಿದಿದೆ. ಇದರೊಳಗೆ ಅಂದಿನ ಸುಲ್ತಾನ ವೈಭವದ ಕಿರುನೋಟಗಳಿವೆ. ಸೊಗಸಾದ ಐತಿಹಾಸಿಕ ತೈಲ ಚಿತ್ರಗಳಿವೆ. ಎರಡು ಅಂತಸ್ತಿನ ಈ ಕಟ್ಟಡ ರಾಷ್ಟ್ರೀಯ ಸ್ಮಾರಕರಾಗಿ ಉಳಿದಿದೆ. ಬೆಳಗ್ಗೆ ಎಂಟು ಘಂಟೆಯಿಂದ ಸಂಜೆ ಐದೂವರೆವರೆಗೆ ಪ್ರವೇಶಕ್ಕೆ ಲಭ್ಯವಿದೆ.

ಈ ಅರಮನೆ ಪಕ್ಕದಲ್ಲೆ 'ಕೋಟೆ ವೆಂಕಟರಮಣಸ್ವಾಮಿ' ದೇವಾಲಯವಿದೆ. ಸುಮಾರು ೩೨೫ ವರ್ಷಗಳಿಗೆ ಹಿಂದೆ ಆಗಿನ ಮೈಸೂರು ಮಹಾರಾಜರಾಗಿದ್ದ ಚಿಕ್ಕದೇವರಾಜ ಒಡೆಯರು ನಿರ್ಮಿಸಿದ ದೇವಾಲಯ ಇದು. ಕಾಲದಿಂದ ಕಾಲಕ್ಕೆ ಬೇರೆ ಬೇರೆ ಆಳ್ವಿಕೆಗಳಿಂದ ಮತ್ತು ವಿವಿಧ ಯುದ್ಧಗಳಿಂದ ಈ ದೇವಾಲಯ ಝರ್ಝರಿತವಾಗಿದ್ದರೂ ಮುಂದೆ ಹೈದರಾಲೀ-ಟೀಪೂ ತರುವಾಯ ಈ ದೇವಾಲಯ ಜೀರ್ಣೋದ್ಧಾರಗೊಂಡಿದೆ. ಈಗ ಬೆಂಗಳೂರಿನ ಅತ್ಯಂತ ಪ್ರಮುಖ ದೇವಾಲಯ ಇದು- ದೊಡ್ಡ ಏಕಾದಶಿ ದಿವಸ ಬೆಳಗಿನಿಂದ-ರಾತ್ರಿಯವರೆಗೂ ಭಕ್ತರು ಇಲ್ಲಿ ಘಂಟೆಗಟ್ಟಲೆ 'ಕ್ಯೂ' ನಿಂತು ವೆಂಕಟರಮಣನ ದರ್ಶನ ಮಾಡುತ್ತಾರೆ- ಆ ದಿವಸ ಇಲ್ಲಿನ 'ಸ್ವರ್ಗದ ಬಾಗಿಲು' ಭಕ್ತರಿಗಾಗಿ ತೆರೆಯಲ್ಪಡುತ್ತದೆ.

ಲಾಲ್‌ಬಾಗ್ ಪುಷ್ಪ ಪ್ರದರ್ಶನ

ಗವಿಗಂಗಾಧರೇಶ್ವರ ಬಹ್ಮರಥೋತ್ಸವ!

ಇಸ್ಕಾನ್



ರಾಗಿಗುಡ್ಡ

ಅರಮನೆ-ದೇವಾಲಯ ನೋಡಿ ಅಲ್ಲೇ ಒಂದು ಆಟೋ ಹತ್ತಿ 'ದೊಡ್ಡ ಗಣಪತಿ ದೇವಾಲಯ' ಎಂದು ಹೇಳಿದರೆ (ಮಿನಿಮಂ ಛಾರ್ಜು ಹತ್ತು ರೂಪಾಯಿ) ಅಲ್ಲಿ ತಲುಪಬಹುದು. ಅದು ಬೆಂಗಳೂರಿನ ಅತ್ಯಂತ ಜನಪ್ರಿಯ ತಾಣ. ಪ್ರತಿದಿನ ಬೆಳಿಗ್ಗೆ-ಸಂಜೆ ನೂರಾರು ಸಂಖ್ಯೆಯಲ್ಲಿ ಜನ ಬರುತ್ತಾರೆ. ಸಿನಿಮಾ ಮುಹೂರ್ತಗಳು, ಶೂಟಿಂಗ್ ನಡೆಯುತ್ತವೆ.

ಇಲ್ಲಿನ ದೊಡ್ಡ ಗಣೇಶ, ದೊಡ್ಡ ಬಸವಣ್ಣ, ಕಾರಂಜಿ ಆಂಜನೇಯ ದೇವಾಲಯಗಳು ಕೆಂಪೇಗೌಡನ ಕಾಲಕ್ಕಿಂತಲೂ ಹಿಂದಿನವು. ಕೆಂಪೇಗೌಡನಿಂದ ಇವುಗಳ ಅಭಿವೃದ್ಧಿ ಆಗಿದೆ. ಆರುನೂರು ವರ್ಷಗಳಿಗೂ ಹಿಂದಿನ ಈ ದೇವಾಲಯಗಳು ಇಂದಿಗೂ ವಿಶೇಷ ಪೂಜೆಗಳಿಂದ, ಭಕ್ತರ ಆಗಮನದಿಂದ ವಿಜೃಂಭಿಸುತ್ತಿದೆ.

ಎಂಟು ಅಡಿ ಎತ್ತರ-ಹನ್ನೆರಡು ಅಡಿ ಅಗಲದ ದೊಡ್ಡ ಗಣಪತಿ ಬೆಂಗಳೂರಿನ ಎಲ್ಲ ವಯಸ್ಸಿನವರ ಆರಾಧ್ಯಮೂರ್ತಿ. ಜನ ಈ ಗಣಪನಿಗೆ ಬೇಡಿಕೆಗಳನ್ನು ಸಲ್ಲಿಸುತ್ತಾರೆ. ಅದೇ ಪರಿಸರದಲ್ಲೇ ಇರುವ ದೊಡ್ಡ ಬಸವಣ್ಣನ ಗುಡಿ ಬೃಹತ್ ದೇವಾಲಯ-ಹದಿನೆಂಟು ಅಡಿ ಎತ್ತರ ಬಸವಣ್ಣ ವಿಗ್ರಹ ಜನಮನ ಸೆಳೆಯುತ್ತದೆ. ವಿಶಾಲ ಪ್ರಾಕರಗಳಿವೆ. ಹಿಂದೆ ಈ ಬಸವನ ಪಾದದಿಂದ ವೃಷಭಾವತಿ ನದಿ ಹೊರಡುತ್ತಿತ್ತೆಂದು ಹೇಳುತ್ತಾರೆ. ಈ ನದಿ ಇತ್ತೀಚಿನ ವರ್ಷಗಳಲ್ಲಿ ಬತ್ತಿಹೋಗಿದೆ-ಮಾದರಿಗೆ ಮೈಸೂರು ರಸ್ತೆಯ ಗಾಳಿ ಆಂಜನೇಯ ಸ್ವಾಮಿ ದೇವಾಲಯದ ಸುತ್ತಲೂ ಹರಿಯುವ ಕೊಚ್ಚೆ ನೀರನ್ನು ಗಮನಿಸಬಹುದು- ಅಂದಿನ ಪವಿತ್ರ ಜಲ ಇಂದು ಅಪವಿತ್ರ ಕೊಚ್ಚೆಯಾಗಿದೆ. ಈ ಕೊಚ್ಚೆಯನ್ನು ಸಂಪೂರ್ಣವಾಗಿ ನಿರ್ಮೂಲನ ಮಾಡುವ ಯೋಜನೆ ಜಾರಿಯಲ್ಲಿದೆ.

ಗಣಪ-ಬಸವ-ಆಂಜನೇಯ ದೇವಾಲಯಗಳಿರುವ ಈ ಪ್ರದೇಶ ಬಸವನಗುಡಿ ಬಡಾವಣೆಯಾಯಿತು. ಪ್ರತಿವರ್ಷ ಈ ಆವರಣದಲ್ಲಿ 'ಕಡಲೇ ಕಾಯಿ ಪರಿಷೆ' ನಡೆಯುತ್ತದೆ. ಹೊಸದಾಗಿ ಬೆಳೆದ ಕಡಲೇಕಾಯನ್ನು ರೈತಾಪಿ ಜನರು ಇಲ್ಲಿಗೆ ತಂದು ಬಸವಣ್ಣನಿಗೆ ಸಮರ್ಪಿಸುತ್ತಾರೆ. ಇಡೀ ಬೆಂಗಳೂರು ಕಡಲೇಕಾಯಿ ತಿನ್ನಲು ಇಲ್ಲಿಗೆ ಬಂದು ನೆರೆಯುತ್ತದೆ. ಈಗಲೂ ಇದೊಂದು ಜಾತ್ರೆಯ ಹಾಗೆ ನಡೆಯುತ್ತದೆ.

ದೊಡ್ಡ ಗಣೇಶನ ದೇವಾಲಯದ ಹಿಂದೆಯೇ ಬೇಡರ ಕಣ್ಣಪ್ಪನ ದೇವಾಲಯವಿದೆ.

ಈ ದೇವಾಲಯಗಳ ಆವರಣದಿಂದ ರಸ್ತೆಗೆ ಬಂದು ಒಂದಿಷ್ಟು ಹಿಂದೆ ನಡೆದರೆ, ಬೆಂಗಳೂರಿನ ಅತ್ಯಂತ ಜನಪ್ರಿಯ ತಿನಿಸು ತಾಣ, 'ದ್ವಾರಕಾ ಹೋಟಲ್' ಸಿಗುತ್ತದೆ.

ಇಲ್ಲಿನ ಖಾಲಿದೋಸೆ ನಗರ ಪ್ರಸಿದ್ಧ. ಬೆಂಗಳೂರಿಗೆ ಬಂದವರು ಇಲ್ಲಿ ಖಾಲಿ ದೋಸೆ ತಿನ್ನಲು ಬರಲೇಬೇಕು. ಇಲ್ಲಿ ನಿಮಗೆ ಇಷ್ಟವಾಗುವಷ್ಟು ಖಾಲಿ ದೋಸೆ ತಿಂದು ಕಾಫಿ ಕುಡಿದು, ಹೊರಗೆ ಬನ್ನಿರಿ.

ಇಲ್ಲಿಂದ ಸ್ವಲ್ಪ ಮುಂದೆ ಇತ್ತೀಚೆಗೆ ನಿರ್ಮಾಣವಾಗಿರುವ 'ಉಡುಪಿ ಪುತ್ತಿಗೆ ಕೃಷ್ಣದೇವಾಲಯ' ಅಪರೂಪವಾದದ್ದು. ಕೃಷ್ಣ ಬೆಟ್ಟವನ್ನು ಕಿರುಬೆರಳಲ್ಲಿ ಹೊತ್ತ ದೃಶ್ಯದಂತೆ, ಗಿರಿಯ ಹಾಗೆ ವಿನ್ಯಾಸ ಮಾಡಿರುವ ಗುಡಿ ಇದು. ಖಂಡಿತ ಭೇಟಿ ಕೊಡಬೇಕು.

ಅಲ್ಲೇ ಒಂದು ಆಟೋ ಹತ್ತಿರಿ. 'ಗವಿಗಂಗಾಧರೇಶ್ವರ ದೇವಾಲಯ' ಮತ್ತು ಹನುಮಂತನಗರದ 'ಆನಂದ ಮಿಲನಾದ್ರಿ' ದೇವಾಲಯ ತೋರಿಸಿಕೊಂಡು, 'ಕುಮಾರ ಸ್ವಾಮಿ ದೇವಸ್ಥಾನ' ತೋರಿಸಿಕೊಂಡು, ಬನಶಂಕರಿ ದೇವಾಲಯಕ್ಕೆ ಕರೆದುಕೊಂಡು ಹೋಗಿ ಬಿಡಲು ಹೇಳಿರಿ. ಬನಶಂಕರಿ ದೇವಾಲಯದ ಮುಂದೆ ಇಳಿಯಿರಿ. (ಆಟೋ: ೨೫ ಅಥವಾ ೩೦ ರೂಪಾಯಿ ಆಗಬಹುದು). ಬನಶಂಕರಿ ದೇವಿಯನ್ನು ದರ್ಶನ ಮಾಡಿರಿ. ಬೆಂಗಳೂರಿನ ಪ್ರಾಚೀನ ದೈವಗಳಲ್ಲಿ ಒಬ್ಬಳು ಬನಶಂಕರಿ ತಾಯಿ. ಮತ್ತೆ ಆಟೋ ಹತ್ತಿ, 'ಜಯನಗರ ೯ನೆ ಬ್ಲಾಕ್‌ನ ರಾಗಿಗುಡ್ಡ ಆಂಜನೇಯ ದೇವಾಲಯ' ಎಂದು ಹೇಳಿರಿ. (೨೦/೨೫ ರೂಪಾಯಿ ಆಗಬಹುದು). ರಾಗಿಗುಡ್ಡ ಆಂಜನೇಯ ಈಚಿನದು. ಬಹುಬೇಗ ಜನಪ್ರಿಯವಾದ, ವೈಭವದಿಂದ ಕಂಗೊಳಿಸುತ್ತಿರುವ ತಾಣ. ಈ ದೈವ ಪರಿಸರದಲ್ಲಿ ಸ್ವಲ್ಪ ಹೊತ್ತು ಕಾಲ ಕಳೆಯಿರಿ.

ಆಮೇಲೆ ಒಂದಿಷ್ಟು ನಡೆದು ೯ನೆ ಬ್ಲಾಕ್ ಬಸ್‌ಸ್ಟಾಂಡ್‌ಗೆ ಬನ್ನಿರಿ. ಅಲ್ಲಿಂದ ನಿಮ್ಮ ಬಡಾವಣೆಗೆ ಸಾಕಷ್ಟು ಬಸ್‌ಗಳಿವೆ. ಹತ್ತಿಹೋಗಿ ಮನೆ ತಲುಪಿರಿ.

೩

ಈ ದಿವಸ ಶೇಷಾದ್ರಿಪುರ-ಮಲ್ಲೇಶ್ವರ ಪ್ರದೇಶಗಳಲ್ಲಿರುವ ಜನಪ್ರಿಯ ತಾಣಗಳನ್ನು ಸಂದರ್ಶಿಸೋಣ.

ಆಟೋ ಹತ್ತಿ 'ಚಿತ್ರಕಲಾ ಪರಿಷತ್, ಕುಮಾರಪಾರ್ಕ್ ಬಡಾವಣೆ' ಎಂದು ಹೇಳಿರಿ. ಚಿತ್ರಕಲಾ ಪರಿಷತ್ ಮುಂದೆ ಇಳಿಯಿರಿ.

'ಚಿತ್ರಕಲಾ ಪರಿಷತ್ತು' ಕರ್ನಾಟಕದಲ್ಲಿ ಅತಿದೊಡ್ಡ ಚಿತ್ರಕಲೆಯ ವಿದ್ಯಾಕೇಂದ್ರ-ಭಂಡಾರ. ಇಲ್ಲಿ ಪಿಯೂಸಿ ಮುಗಿಸಿದವರಿಗೆ ಚಿತ್ರಕಲೆ ಡಿಗ್ರಿ (ವಿಶ್ವವಿದ್ಯಾಲಯದಿಂದ ಮಾನ್ಯವಾದದ್ದು) ಓದಲು ಅವಕಾಶವಿದೆ. ಇಲ್ಲಿ ಡಿಗ್ರಿ ಮುಗಿಸಿದವರಿಗೆ ಜಾಹಿರಾತು, ಇಂಟರ್‌ನೆಟ್, ಸಾಫ್ಟ್‌ವೇರ್ ಕಂಪನಿಗಳಲ್ಲಿ ಒಳ್ಳೆಯ ಕೆಲಸ ಸಿಗುತ್ತದೆ. ಚಿತ್ರಕಲಾ ಲೋಕದಲ್ಲಿ ಇಲ್ಲಿನ ವಿದ್ಯಾರ್ಥಿಗಳಿಗೆ ತುಂಬಾ ಗೌರವವಿದೆ

(ಇಂಥದೇ ಇನ್ನೊಂದು ಉತ್ತಮ ಕಲಾಶಾಲೆ, ಕೇಷಾದ್ರಿಪುರದಲ್ಲಿ ಇರುವ 'ಕೆನ್ ಆರ್ಟ್ ಸ್ಕೂಲ್' - ಕಲಾವಿದ ಹಡಪದ್ ಸ್ಥಾಪಿಸಿದ್ದು).

'ಚಿತ್ರಕಲಾ ಪರಿಷತ್'ನಲ್ಲಿ ಕಲಾ ಇತಿಹಾಸದ ಅದ್ಭುತ ಚಿತ್ರಗಳ ಅಪೂರ್ವ ಸಂಗ್ರಹವಿದೆ. ಒಂದು ಅಪೂರ್ವ ಚಿತ್ರಗಳ ಪ್ರದರ್ಶನಾಲಯವಿದೆ. ಯಾವಾಗಲೂ ಒಂದು ಚಿತ್ರಕಲಾ ಪ್ರದರ್ಶನ ನಡೆಯುತ್ತಲೇ ಇರುತ್ತದೆ. ಇವನ್ನೆಲ್ಲ ಸಾವಕಾಶವಾಗಿ ನೋಡಬೇಕು. ಅಲ್ಲಿಯ ದರ್ಶನವಾದ ಮೇಲೆ ಆಟೋ ಹತ್ತಿ, 'ಬೆಂಗಳೂರು ಅರಮನೆ' ಕಡೆ ಬಂದು ಅದನ್ನು ಹತ್ತಿರದಿಂದ ನೋಡಬಹುದು. ಮತ್ತೆ ಆಟೋ ಹತ್ತಿ 'ಟಾಟಾ ಇನ್‌ಸ್ಟಿಟ್ಯೂಟ್' ಎಂದು ಹೇಳಿ ಹೋದಾಗ, ದಾರಿಯಲ್ಲಿ ನಿಮಗೆ ಪಿಟೀಲಿನ ಆಕಾರದಲ್ಲಿ ನಿರ್ಮಾಣವಾಗಿರುವ 'ಚೌಡಯ್ಯ ಮೆಮೊರಿಯಲ್ ಹಾಲ್' ಸಿಗುತ್ತದೆ. ಆಟೋ ನಿಲ್ಲಿಸಿ ಕೆಲ ನಿಮಿಷ ಈ ಕಟ್ಟಡ ನೋಡಬಹುದು. ಆಮೇಲೆ ಹೊರಟು 'ಟಾಟಾ ಇನ್ಸ್‌ಟಿಟ್ಯೂಟ್' ಮುಂದೆ ಇಳಿದು ಆಟೋ ಕಳುಹಿಸಿಬಿಡಬೇಕು.

ಸುಪ್ರಸಿದ್ಧ ಭಾರತೀಯ ಸಂಸ್ಥೆ ಟಾಟಾದ ಮೂಲ ವ್ಯಕ್ತಿಯೊಬ್ಬರಾದ 'ಜೆಮ್‌ಶೆಡ್‌ಜೀ ಟಾಟಾ' ಅವರ ನೆನಪಿನಲ್ಲಿ ೧೯೦೯ರಲ್ಲಿ ನಿರ್ಮಿಸಲಾದ ಸಂಸ್ಥೆ 'ಟಾಟಾ ಇನ್ಸ್‌ಟಿಟ್ಯೂಟ್'. ಅತ್ಯಾಧುನಿಕ ತಾಂತ್ರಿಕತೆ ಮತ್ತು ವಿಜ್ಞಾನ ವಿಷಯಗಳಲ್ಲಿ ಇಲ್ಲಿ ಅತಿ ಉನ್ನತ ವಿದ್ಯಾಭ್ಯಾಸ ಮಾಡಬಹುದು. ಅತಿ ವಿಸ್ತಾರವಾದ, ಅನೇಕಾನೇಕ ಅಧ್ಯಯನ ವಿಷಯಗಳ ವ್ಯಾಪ್ತಿಯ ಈ ಸಂಸ್ಥೆಗೆ ಈಗ 'ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಸೈನ್ಸ್' ಎಂದು ಹೆಸರು. ಬಹುಶಃ, ಭಾರತದಲ್ಲಿ ಪದವಿಯೋತ್ತರ ಉನ್ನತ ವ್ಯಾಸಂಗ, ಅಧ್ಯಯನ ಸಂಶೋಧನೆಗಳಿಗೆ ಇಂಥ ಬೇರೊಂದು ಸಂಸ್ಥೆ ಇರಲಾರದು. ಇದು ಬೆಂಗಳೂರಿನ, ಭಾರತದ ಹೆಮ್ಮೆ. ಇಲ್ಲಿ ಒಳಗೆ ಸಂಚರಿಸಲು ಅನುಮತಿ ಬೇಕಾಗಿಲ್ಲ. ಆದರೆ, ಸಂಸ್ಥೆಯ ಕಟ್ಟಡಗಳೊಳಗೆ ಪ್ರವೇಶಿಸಿ ಅಲ್ಲಿನ ಕಾರ್ಯವೈಖರಿ ಗಮನಿಸಲು ಅನುಮತಿ ಬೇಕಾಗುತ್ತದೆ. (೨೩೯೪೨೦೦೧ ಎನ್ನುವ ನಂಬರಿಗೆ ಫೋನ್ ಮಾಡಿ 'ಪಬ್ಲಿಕ್ ರಿಲೇಷನ್ ಆಫೀಸರ್'ನ್ನು ಮಾತನಾಡಿಸಿ ಅನುಮತಿ ಕೋರಬಹುದು).

'ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಸೈನ್ಸ್'ನಿಂದ ಸುಮಾರು ಒಂದು ಕಿಲೋಮೀಟರ್‌ನಷ್ಟು ಮಲ್ಲೇಶ್ವರದ ಕಡೆಗೆ ನಡೆದುಬಂದರೆ, 'ಕಾಡು ಮಲ್ಲೇಶ್ವರ ದೇವಾಲಯ' ಸಿಗುತ್ತದೆ. ಇದು ತುಂಬಾ ಪ್ರಾಚೀನವಾದ ದೇವಾಲಯವಾಗಿದ್ದು, ದಟ್ಟವಾದ ಕಾಡಿನ ನಡುವೆ ಒಂದು ಪುಟ್ಟ ಗುಡಿಯಾಗಿ ಇತ್ತು. ೩೫೦ ವರ್ಷಗಳಿಗೂ ಹಿಂದೆ ಶಿವಾಜಿಯ ತಂದೆ ಷಹಜಿಯ ಹಿರಿಮಗ ಎಕ್ಕೋಜಿ ಮಹಾರಾಜ ಈ ದೇವಾಲಯದ ಜೀರ್ಣೋದ್ಧಾರ ಮಾಡಿಸಿದ. ಆಧುನಿಕ ಕಾಲದಲ್ಲಿ ಇದು ಕಾಲಾಕಾಲಕ್ಕೆ ರಿಪೇರಿಗಳನ್ನು ಕಂಡು ಈಗಿನ ಸ್ಥಿತಿಯಲ್ಲಿದೆ. ಈ ದೇವಾಲಯದ ಪಕ್ಕದಲ್ಲೇ ಈಚಿನ ನಿರ್ಮಾಣವಾದ 'ಅಯ್ಯಪ್ಪಸ್ವಾಮಿ ದೇವಾಲಯ'ವಿದೆ. (ಬೆಂಗಳೂರಿನ ಅತಿ ವೈಭವದ 'ಅಯ್ಯಪ್ಪ ಸ್ವಾಮಿ ದೇವಾಲಯ' ಜಾಲಹಳ್ಳಿ ಪ್ರದೇಶದಲ್ಲಿದೆ).

ಈ ದೇವಾಲಯದಿಂದ ನೇರವಾಗಿ ಇನ್ನೊಂದು ಕಿಲೊಮೀಟರ್ ಸಂಪಿಗೆ ರಸ್ತೆಯಲ್ಲಿ ನಡೆದುಬಂದರೆ, ಮಲ್ಲೇಶ್ವರ ೩ನೆ ಕ್ರಾಸ್‌ನಲ್ಲಿ 'ಹಳ್ಳಿಮನೆ' ಹೋಟಲ್ ಇದೆ. ಇದೊಂದು ವಿಶಿಷ್ಟ ಹೋಟಲ್. ಗ್ರಾಮೀಣ ವಾತಾವರಣ, ಮನೆಯ ಶುಚಿರುಚಿ ಇರುವ ಹೋಟಲ್. ಇಲ್ಲಿ ಊಟ ಮಾಡಬಹುದು.

ಊಟ ಮುಗಿಸಿ ಅಲ್ಲೆ ಸ್ವಲ್ಪ ಹೊತ್ತು ಸುತ್ತಮುತ್ತಲಿನದನ್ನು ನೋಡುತ್ತ ಕುಳಿತು ಆಮೇಲೆ ಆಟೋ ಹತ್ತಿ ಮಹಾಲಕ್ಷ್ಮೀ ಲೇಔಟ್‌ಗೆ ಹೋಗಬೇಕು. ಅಲ್ಲಿ ಬೃಹತ್ ಆಂಜನೇಯ ಮೂರ್ತಿ ಇದೆ. ಅದ್ಭುತ ಸುಂದರಮೂರ್ತಿ. ಅದರ ಮುಂದೆ ಮನುಷ್ಯ ಕುಬ್ಜನಾಗುತ್ತಾನೆ. ಈ ಆವರಣದಲ್ಲಿ ಈ ಪ್ರಸನ್ನ ವೀರಾಂಜನೇಯ ಆಲಯವಲ್ಲದೆ, ತಿರುಪತಿ ತಿಮ್ಮಪ್ಪನ ಪ್ರತಿರೂಪದಂತಿರುವ ವೆಂಕಟೇಶ್ವರದ ಆಲಯವಿದೆ, ಪಂಚಮುಖಿ ಗಣಪತಿ ಆಲಯವಿದೆ. ಇವೆಲ್ಲವನ್ನೂ ದರ್ಶಿಸಿರಿ. ಮಹಾಲಕ್ಷ್ಮಿ ಲೇಔಟ್‌ನ ಸಂಸ್ಕೃತಿ ತಾಣ ಅದು. ಆ ಪ್ರದೇಶದವರೆಲ್ಲರ ಹೆಮ್ಮೆಯ ತಾಣವಿದು.

ಈ ದೇವಾಲಯಗಳನ್ನು ದರ್ಶಿಸಿ ಮುಖ್ಯರಸ್ತೆಗೆ ನಡೆದುಬಂದರೆ ಒಂದು ಹತ್ತು ನಿಮಿಷದ ನಡಿಗೆಯಲ್ಲಿ 'ಇಸ್ಕಾನ್ ದೇವಾಲಯ' ಸಿಗುತ್ತದೆ.

'ಇಸ್ಕಾನ್' ದೇವಾಲಯ ಸಂಕೀರ್ಣ ಒಂದು ದೈವ ಕಲಾತಾಣ, ಅದ್ಭುತ ಕಟ್ಟಡ ನಿರ್ಮಾಣಕ್ಕೆ ಮಾದರಿ. ಇಲ್ಲಿ ಲಕ್ಷ್ಮೀನರಸಿಂಹ, ವೆಂಕಟೇಶ್ವರ ಮತ್ತು ಮೂಲದೈವವಾಗಿ ಕೃಷ್ಣಬಲರಾಮ ದೇಗುಲಗಳಿವೆ. ಭಾರತದಲ್ಲಿ ಮತ್ತು ದೇಶವಿದೇಶಗಳಲ್ಲಿ 'ಶ್ರೀಕೃಷ್ಣ ಪ್ರಜ್ಞೆ' ಎನ್ನುವುದೊಂದು ದೈವಕಲ್ಪನೆಯನ್ನು ಸೃಜಿಸಿಕೊಂಡು, ಇಡೀ ವಿಶ್ವದಲ್ಲಿ 'ಶ್ರೀಕೃಷ್ಣ ಪ್ರಜ್ಞೆ'ಯನ್ನಲ್ಲದೆ, ಅನೇಕ 'ಇಸ್ಕಾನ್' ದೇವಾಲಯಗಳನ್ನು ನಿರ್ಮಿಸಿದ ಕೀರ್ತಿ ಶ್ರೀಭಕ್ತಿ ವೇದಾಂತಸ್ವಾಮಿ ಪ್ರಭುಪಾದ ಅವರದ್ದು. ಈಗ ಅವರ ಅನುಯಾಯಿಗಳು 'ಶ್ರೀಕೃಷ್ಣ ಪ್ರಜ್ಞಾವರ್ತಿ'ಗಳಾಗಿ ಆ ಮಹನಿಯರು ಹಾಕಿಕೊಟ್ಟ ದಾರಿಯಲ್ಲಿ ಮುಂದುವರಿದಿದ್ದಾರೆ, ಬೆಳೆದಿದ್ದಾರೆ.

ಖಂಡಿತ ನೋಡಲೇಬೇಕಾದ ತಾಣ 'ಇಸ್ಕಾನ್'. ಹರೇಕೃಷ್ಣ ಗುಡ್ಡದ ಅನೇಕಾನೇಕ ಮೆಟ್ಟಿಲುಗಳನ್ನು ಹತ್ತಿ ದರ್ಶನ ಮಾಡಿ ಪ್ರಸಾದ ಸ್ವೀಕರಿಸಿ ಹೊರಬರಲು ಒಂದೆರಡು ಘಂಟೆಗಳೇ ಆಗಬಹುದು. ಅಲ್ಲಿ ಪ್ರಕಟವಾಗುವ 'ಭಕ್ತಿವೇದಾಂತ ದರ್ಶನ' ಮಾಸಪತ್ರಿಕೆಯನ್ನು ಕೇಳಿ ಪಡೆಯಿರಿ (ಬೆಲೆ. ರೂ. ೧೫/-) ಅತ್ಯಂತ ಸುಂದರ, ಶ್ರೀಮಂತ, ಉಪಯುಕ್ತ ಪತ್ರಿಕೆ.

ಸಂಜೆಯಾಗುತ್ತಿದೆಯಲ್ಲವೇ?

ನಿಮ್ಮ ಬಡಾವಣೆಗೆ ಆಟೋದಲ್ಲೇ ಹೋಗಬೇಕು. ಅಥವಾ ಇಸ್ಕಾನ್‌ನಿಂದ ರಸ್ತೆಯ ಎಡದಿಕ್ಕಿಗೆ ಒಂದಿಷ್ಟು ನಡೆದರೆ, ರಾಜಾಜಿನಗರ ಮೊದಲನೆ ಬ್ಲಾಕ್‌ನ ಬಸ್‌ಸ್ಟಾಂಡ್ ಸಿಗುತ್ತದೆ. ಅಲ್ಲಿ ವಿಚಾರಿಸಿ ನಿಮ್ಮ ಬಡಾವಣೆಗೆ ಬಸ್ ಹತ್ತಬಹುದು.

೪

ನಾಲ್ಕನೆ ಹಂತದಲ್ಲಿ ನೀವು ಬೆಂಗಳೂರಿನ ಹೊರವಲಯದ ವಿಶೇಷ ತಾಣಗಳಿಗೆ ಭೇಟಿ ಕೊಡಬಹುದು.

ಬನ್ನೇರುಘಟ್ಟ ನ್ಯಾಷನಲ್ ಪಾರ್ಕ್.

ಬೆಂಗಳೂರು ಆನೇಕಲ್ ಮಾರ್ಗದಲ್ಲಿದೆ. ಸುಮಾರು ೨೦ ಕಿಲೋ ಮೀಟರ್ ದೂರದಲ್ಲಿದೆ. ಇದೊಂದು ವನ್ಯಮೃಗಗಳ ತಾಣ. ಕಾಡೆಮ್ಮೆಗಳು, ಸಿಂಹ, ಹುಲಿ, ಮೊಸಳೆಗಳು, ಮಂಗಗಳು, ಆನೆಗಳು ಮೊದಲಾದ ಪ್ರಾಣಿಗಳಲ್ಲದೆ ಅಪರೂಪ ಪಕ್ಷಿಗಳ ಸಂಗ್ರಹಾಲಯವಿದೆ. ಅಲ್ಲಿ ಒಳಗೆಲ್ಲ ಕರೆದೊಯ್ಯುವ 'ಸವಾರಿ ಪಾರ್ಕ್ ವಾಹನ' ಇದೆ. ಬೆಳಗ್ಗೆ ೧೦ ರಿಂದ ೧೨, ಮಧ್ಯಾಹ್ನ ೨ ರಿಂದ ೫. 'ಸರ್ಪೋದ್ಯಾನ' ಇದೆ. ಬೇರೆ ಬೇರೆ ವಸ್ತು ಮಳಿಗೆಗಳಿವೆ. ಮನರಂಜನಾ ಉದ್ಯಾನವಿದೆ. ಕರ್ನಾಟಕ ಪ್ರವಾಸ ನಿಗಮದ ರೆಸ್ಟಾರೆಂಟ್ ಇದೆ. ನೀವೇ ಮನೆಯಿಂದ ತಿಂಡಿಗಳನ್ನು ಕಟ್ಟಿಕೊಂಡು ಬರಬಹುದು. ಬೆಂಗಳೂರು ಊರು ಬಸ್ ನಿಲ್ದಾಣದಿಂದಲೂ, ಸಿಟಿ ಮಾರ್ಕೆಟ್ ಹತ್ತಿರದ ಕಲಾಸೀ ಪಾಳ್ಯದಿಂದಲೂ ಸಾಕಷ್ಟು ಬಸ್‌ಗಳಿವೆ. ಅನುಕೂಲವಾಗಿ ಹೋಗಿಬರಬಹುದು.

ಆನೇಕಲ್ ಮಾರ್ಗದಲ್ಲಿಯೇ ಬನ್ನೇರುಘಟ್ಟದಿಂದ ಬಸ್ ಹತ್ತಿಹೋದರೆ ಇಪ್ಪತ್ತೈದು ಕಿಮೀ ಆಚೆ ಮುತ್ಯಾಲ ಮಡವು (ಪರ್ಲ್ ವ್ಯಾಲಿ) ಸಿಗುತ್ತದೆ. ೩೦೮ ಅಡಿ ಕೆಳಗೆ ಆಳದಲ್ಲಿ ಮೇಲಿನಿಂದ ತೆಳ್ಳಗೆ ನೀರು ಇಳಿಯುವ ಕಿರು ಜಲಪಾತಗಳು. ಮನೋಹರ ತಾಣ, ಕೆಳಗೆ ಇಳಿದು ಸ್ಫಟವಾದ ನೀರಿನಲ್ಲಿ, ಸ್ನಾನ ಮಾಡಬಹುದು. ಇಲ್ಲೂ ಸಹ ಒಂದು ಕರ್ನಾಟಕ ರಾಜ್ಯ ಪ್ರವಾಸ ನಿಗಮದ ರೆಸ್ಟಾರೆಂಟ್ ಇದೆ.

ಒಂದು ದಿನಕ್ಕೆ ಇವೆರಡು ತಾಣಗಳನ್ನು ನೋಡಿ ಮನೆಗೆ ಹಿಂತಿರುಗುವುದರಲ್ಲಿ ದಿನ ಕಳೆದಿರುತ್ತವೆ.

೫

* ಬೆಂಗಳೂರು ಹೊರವಲಯದ ಇನ್ನೂ ಕೆಲವು ನೋಡುವ ತಾಣಗಳಿವೆ. ವಸಂತಪುರದ 'ವಸಂತ ವಲ್ಲಭರಾಯ ಸ್ವಾಮಿ' ದೇವಾಲಯ (೧೨ ಕಿ.ಮೀ.)

* ವೈಟ್‌ಫೀಲ್ಡ್ ಹತ್ತಿರ 'ಬೃಂದಾವನ'ದಲ್ಲಿ ಶ್ರೀಸತ್ಯಸಾಯಿ ಆಶ್ರಮ. (೧೮ ಕಿ.ಮೀ.)

* ಪೀಣ್ಯದಿಂದಾಚೆ 'ವಿಶ್ವರೂಪ ವಿಜಯ ವಿಠ್ಠಲ' ಆಶ್ರಮ ವಿಸ್ತಾರವಾದ ಅನೇಕ ದೈವಗಳ ಸುಂದರ ತಾಣ. ಉಣ್ಣಲು-ತಿನ್ನಲು ತೆಗೆದುಕೊಂಡು ಹೋದರೆ ಒಳ್ಳೆಯದು (೨೪ ಕಿ.ಮೀ.)

* ಬೆಂಗಳೂರು-ರಾಮನಗರದಲ್ಲಿ 'ಜನಪದ ಲೋಕ' -ಇಲ್ಲಿಂದ ಸುಮಾರು ೫೩ ಕಿಲೋ ಮೀಟರ್ ಆಗುತ್ತದೆ. ಜಾನಪದ ಇತಿಹಾಸ ಕಾಣಿಸುವಂಥ ಅಪೂರ್ವ ವಸ್ತುಗಳು, ಕಲಾಪ್ರಕಾರಗಳ ಪರಿಚಯ -ಇಲ್ಲಿ ಕಾಣಬಹುದು.

ಇದಕ್ಕೆ ಅಂಟಿದಂತೆ ಒಂದು 'ಕಾಮತ್ ರೆಸ್ಟಾರೆಂಟ್' ಇದೆ.

* ದೊಡ್ಡ ಆಲದಮರ-ರಾಮೋಹಳ್ಳಿ, ಬೆಂಗಳೂರಿನಿಂದ ಸುಮಾರು ೨೮ ಕಿಲೋ ಮೀಟರ್ ದೂರದಲ್ಲಿದೆ. ೪೦೦ ವರ್ಷಗಳ ಹಳೆಯ ಬೃಹತ್ ಆಲದಮರ ಸಮೂಹವಿದೆ- ೪ ಎಕರೆಯಷ್ಟು ಹರಡಿಕೊಂಡುಬಿಟ್ಟಿದೆ. ಅತ್ಯಂತ ಸುಂದರ 'ಪಿಕ್‌ನಿಕ್' ತಾಣ. ಇಲ್ಲೂ ಒಂದು ಪ್ರವಾಸೀ ನಿಗಮದ ರೆಸ್ಟಾರೆಂಟ್ ಇದೆ.

* ಬೆಂಗಳೂರಿನಿಂದ ೫೩ ಕಿಲೋಮೀಟರ್ ದೂರದಲ್ಲಿ 'ಘಾಟಿ ಸುಬ್ರಹ್ಮಣ್ಯ' ಕ್ಷೇತ್ರವಿದೆ. ಅತಿ ಪುರಾತನವಾದ, ಐತಿಹಾಸಿಕ ಸುಬ್ರಹ್ಮಣ್ಯ ದೇವಾಲಯವಿದೆ. ಪ್ರತಿವರ್ಷ ಇಲ್ಲಿ ನಡೆಯುವ ತೇರಿಗೆ ಸಾವಿರಾರು ಜನ ಯಾತ್ರಿಕರು ಸೇರುತ್ತಾರೆ.

* ೨೯ ಕಿಲೋ ಮೀಟರ್ ಅಳತೆಯಲ್ಲಿರುವ 'ಹೆಸರುಘಟ್ಟ ಫಾರಂ' ಬಹಳ ಹಿಂದಿನಿಂದಲೂ ಬೆಂಗಳೂರಿಗರ ವಾರಾಂತ್ಯ ಪ್ರವಾಸದ ಜನಪ್ರಿಯ ತಾಣವಾಗಿದೆ. ಸುಂದರ ಹೆಸರಘಟ್ಟ ಕೆರೆ ಇದೆ. ಅತ್ಯುತ್ತಮ ಪಿಕ್‌ನಿಕ್ ತಾಣ.

ಇಲ್ಲೇ ಹತ್ತಿರದಲ್ಲೇ 'ನೃತ್ಯಗ್ರಾಮ' ಇದೆ. ನೃತ್ಯ ಕಲಿಯಲು ಇಲ್ಲಿ ದೇಶ ವಿದೇಶಗಳಿಂದ ಆಸಕ್ತ ವಿದ್ಯಾರ್ಥಿಗಳು ಬರುತ್ತಾರೆ. ಆಗಾಗ ಉತ್ತಮ ಕಾರ್ಯಕ್ರಮಗಳು ನಡೆಯುತ್ತದೆ. ವರ್ಷಕ್ಕೊಮ್ಮೆ 'ವಸಂತ ಹಬ್ಬ' ಜರುಗುತ್ತದೆ. ಇಡೀ ರಾತ್ರಿ ಸಂಗೀತ-ನೃತ್ಯ ಕಾರ್ಯಕ್ರಮಗಳು ನಡೆಯುತ್ತವೆ.

* ದೇವರಾಯನ ದುರ್ಗ-ಶಿವಗಂಗೆ-ನಾಮದ ಚಿಲುಮೆ : ಬೆಂಗಳೂರು-ತುಮಕೂರು ದಾರಿಯಲ್ಲಿದೆ.

* ಮಳೂರು-ಬೆಂಗಳೂರು ಚನ್ನಪಟ್ಟಣದ ದಾರಿಯಲ್ಲಿದೆ. ಪುರಂದರದಾಸರು 'ಆಡಿಸಿದಳೆಶೋಧೆ' ದೇವರನಾಮ ಹಾಡಿದ ಪುಣ್ಯತಾಣ. ಅತಿಸುಂದರ ಅಂಬೆಗಾಲು ಕೃಷ್ಣ ಮೂರ್ತಿ ಇದೆ.

* ಬೆಂಗಳೂರಿನ 'ಊಟಿ' ಎನ್ನಬಹುದಾದ 'ತಂಪು ತಾಣ' ನಂದಿಬೆಟ್ಟ-೫೯ ಕಿಲೋಮೀಟರ್ ದೂರದಲ್ಲಿ, ಚಿಕ್ಕಬಳ್ಳಾಪುರ ಮಾರ್ಗದಲ್ಲಿದೆ. ಸಮುದ್ರ ಮಟ್ಟದಿಂದ ೪೮೫೦ ಅಡಿ ಎತ್ತರದಲ್ಲಿರುವ ಈ ನಂದಿಬೆಟ್ಟ ಗಿರಿಧಾಮ ಹಸಿರು- ಉಸಿರು ತುಂಬಿದ ಅತ್ಯುತ್ತಮ 'ಪಿಕ್‌ನಿಕ್' ತಾಣ. ವಸತಿ-ಊಟ ಸೌಕರ್ಯವಿದೆ. ಆದರೆ ಮೊದಲೇ ಬೆಂಗಳೂರು ಲಾಲ್‌ಬಾಗ್ ಕಛೇರಿಯಲ್ಲಿ (ಫೋನ್: ೨೬೫೭೯೭೫) ಅಥವಾ ಗಿರಿಧಾಮದಲ್ಲಿರುವ ಪ್ರವಾಸೀ ವಿಭಾಗದಲ್ಲಿ (ಫೋನ್: ೦೮೧೫೬-೭೮೬೨೪)

ರಿಸರ್ವ್ ಮಾಡಿಸಬೇಕು. ಬೆಂಗಳೂರಿನಿಂದ ಬೇಕಾದಷ್ಟು ಸರ್ಕಾರೀ ಬಸ್‌ಗಳು ಹೋಗಿಬರುತ್ತಿರುತ್ತವೆ. ಟೂರಿಸ್ಟ್ ಕಾರ್ ಮಾಡಿಕೊಂಡು ಬೆಳಗ್ಗೆ ಹೋಗಿ-ಸಂಜೆ ಹಿಂತಿರುಗಿಬಿಡಬಹುದು.

ನಂದಿಬೆಟ್ಟದ ತಪ್ಪಲಿನಲ್ಲಿಯೇ, ಭಾರತರತ್ನ, ಇಂಜಿನಿಯರಿಂಗ್ ಶಿಲ್ಪಿ, ಮೈಸೂರು ದಿವಾನರಾಗಿದ್ದವರಾದ, ಸರ್ ಎಂ. ವಿಶ್ವೇಶ್ವರಯ್ಯ ಅವರ ಜನ್ಮಸ್ಥಳ- ಸಮಾಧಿಸ್ಥಳ 'ಮುದ್ದೇನ ಹಳ್ಳಿ' ಇದೆ. ಅವರು ಹುಟ್ಟಿದ ಮನೆ ಇದೆ. ಅಲ್ಲಿ ಅವರು ಉಪಯೋಗಿಸುತ್ತಿದ್ದ ವಸ್ತುಗಳು ಮತ್ತು ಪ್ರಶಸ್ತಿಗಳು ಇವೆ. ಅವರ ಸಮಾಧಿ ಸ್ಥಳದಲ್ಲೊಂದು ಅತ್ಯಂತ ಸುಂದರ ಹೂತೋಟವಿದೆ.

* * *

ಬೆಂಗಳೂರು ನಗರದ ಮತ್ತು ಸುತ್ತಮುತ್ತಲ ಹೊರವಲಯ ಪ್ರವಾಸೀ ತಾಣಗಳನ್ನು ಹೀಗೆ ನೋಡಿ ಮುಗಿಸಿದ ಮೇಲೆ ಆಮೇಲೆ ಪ್ರವಾಸೀ ಬಸ್‌ಗಳಲ್ಲೊ ಅಥವಾ ಕಾರ್ ಮಾಡಿಕೊಂಡೋ ಬೆಂಗಳೂರಿನಿಂದ ಹೋಗಬಹುದಾದ ಸುಪ್ರಸಿದ್ಧ ಪ್ರವಾಸೀ ತಾಣಗಳ ದರ್ಶನ ಮಾಡಬಹುದು.

■■

'ಕದಂಬಂ' - ಅಯ್ಯಂಗಾರ್ ಸ್ಪೆಷಲ್ ಹೋಟಲ್‌ಗಳು

ಅಯ್ಯಂಗಾರ್ ಸ್ಪೆಷಲ್ ಎಂದಕೂಡಲೇ ಮೊದಲು ನೆನಪಿಗೆ ಬರುವುದು ಪುಳಿಯೋಗರೆ ಮತ್ತು ದಧ್ಯಾನ್ನ (ಮೊಸರನ್ನ). ಬಹುಪಾಲು ದೇವಸ್ಥಾನಗಳಲ್ಲಿ ಈಗಲೂ ಪುಳಿಯೋಗರೆ-ದಧ್ಯಾನ್ನ ಪ್ರಸಾದ ಕೊಡುತ್ತಾರೆ. ಅದೂ ಜನವರಿ-ಮಾಘ ಮಾಸದಲ್ಲಿ ವಿಶೇಷ.

ದಿಢೀರನೆ ಅಯ್ಯಂಗಾರ್ ತಲೆಯೊಂದು ಚುರುಕಾಗಿ ಕೆಲಸ ಮಾಡಿದ ಫಲ: ಒಂದು ಲಾಭಕರ ಹೋಟಲ್ ಉದ್ಯಮವೇ ಸೃಷ್ಟಿಯಾಗಿ ಹೋಯಿತು.

ಜಯನಗರ ೩ನೆ ಬ್ಲಾಕ್. ಎನ್‌ಎಂಕೆಆರ್‌ವಿ ಮಹಿಳಾ ಕಾಲೆಜ್ ಎದುರು ಪ್ರಾರಂಭವಾದ 'ಕದಂಬಂ' ಹೋಟಲ್ ಮೊದಲ ದಿನದಿಂದಲೇ ಜನಪ್ರಿಯ. ತಿಂಡಿತಿನಿಸು-ಊಟ ಎಲ್ಲ ಸುಲಭ ಬೆಲೆಯಲ್ಲಿ ದೊರಕುವಂತಾಯಿತು. ಪುಳಿಯೋಗರೆ, ಕಂಚಿ ಇಡ್ಲಿ ವಿಶೇಷ.

ಎಂಜಿ ರಸ್ತೆಯ ಹತ್ತಿರದ 'ಮಣಿಪಾಲ್ ಸೆಂಟರ್'ನಲ್ಲೂ ಮತ್ತು ವೆಸ್ಟ್ ಆಫ್ ಕಾರ್ಡ್ ರೋಡ್, ಮೋದಿ ಆಸ್ಪತ್ರೆ ಎದುರೂ ಶಾಖೆಗಳಿವೆ.

ಕದಂಬಂ, ೮ನೆ ಕ್ರಾಸ್, ೨೨ನೆ ಕ್ರಾಸ್, ೩ನೆ ಬ್ಲಾಕ್, ಜಯನಗರ
(ದೂರವಾಣಿ : ೨೬೫೪೮೮೨)

೧೨. ಪಬ್, ಬೆಂಗಳೂರು!

ಬರೀ ಹತ್ತು ಹದಿನೈದು ವರ್ಷಗಳಿಗೆ ಹಿಂದೆ ಬೆಂಗಳೂರಿಗೆ ಮನರಂಜನೆ ಎಂದರೆ ನಗರದ ಜನಪ್ರಿಯ ರಸ್ತೆಗಳಲ್ಲಿ ಓಡಾಡುವುದು, ಸಿನಿಮಾ ನೋಡುವುದು, ಹೋಟಲ್‌ಗಳಿಗೆ ಭೇಟಿ (ಖಂಡಿತ ತಿಂಡಿತಿನಿಸು ಪ್ರಿಯರು). ಕಬ್ಬನ್‌ಪಾರ್ಕ್-ಲಾಲ್‌ಬಾಗ್‌ಗಳಲ್ಲಿ ಓಡಾಡುವುದು-ಇಷ್ಟು ಬಿಟ್ಟರೆ ಬೇರೇನೂ ಇರಲಿಲ್ಲ.

ಆದರೆ, ಈಗ ಬೆಂಗಳೂರು ಆಧುನಿಕವಾಗಿವೆ. ಇಡೀ ಪ್ರಪಂಚ ಸುತ್ತಿರುವ ಜನರು ಬೆಂಗಳೂರಿನಲ್ಲಿದ್ದಾರೆ. ಕಾಲಕಳೆಯಲು ಬೇರೆ ಬೇರೆ ದೇಶಗಳಲ್ಲಿ ಏನೇನಿವೆಯೊ ಅವನ್ನೆಲ್ಲ ನೋಡಿದ್ದಾರೆ. ಬೆಂಗಳೂರಿಗರ ತಿಂಗಳ ವರಮಾನ ಸಾವಿರಾರು ರೂಪಾಯಿಗಳಿಂದ ಲಕ್ಷಾಂತರ ರೂಪಾಯಿ ಆಗಿದೆ. ವ್ಯಾಪಾರ ವಹಿವಾಟುಗಳು ಕೋಟಿಗಟ್ಟಲೆ ಆಗಿ ಕೋಟಿಗಟ್ಟಲೆ ಆದಾಯ ತರುತ್ತಿದೆ. ಪ್ರತ್ಯಕ್ಷ ಸಂಪಾದನೆ, ಅಪ್ರತ್ಯಕ್ಷ ಸಂಪಾದನೆ -ಹೀಗೆ ಬಹುಪಾಲು ಬೆಂಗಳೂರಿಗರ ಕೈಯಲ್ಲಿ ಬೇಕಾದಷ್ಟು ಹಣ ಓಡಾಡುತ್ತಿದೆ (ಇದಕ್ಕೆ ಸಣ್ಣ ಕುಟುಂಬ ರೀತಿಯೂ ಕಾರಣವಾಗಿರಬಹುದು).

ಹಣವಿರುವ ಕಡೆ ಖರ್ಚು ಮಾಡುವ ದಾರಿಗಳು ಹುಟ್ಟುತ್ತವೆ. ಖರ್ಚು ಮಾಡಿಸಲೆಂದೇ ವ್ಯವಹಾರಗಳು ಹುಟ್ಟಿಕೊಳ್ಳುತ್ತವೆ. ಹಿಂದೆಲ್ಲ ಕ್ಲಬ್ಬು, ಪಬ್ಬು, ರೇಸುಗಳಿಗೆ ಹೋಗುವವರೆಲ್ಲ ಮುಚ್ಚುಮರೆಮಾಡಿ ಹೋಗಿಬರುತ್ತಿದ್ದರು. ಈಗ ಇವೆಲ್ಲ ಹಿರಿಯರು-ಕಿರಿಯರು ಸಂಕೋಚವಿಲ್ಲದೆ, ಮುಕ್ತವಾಗಿ ಮಾಡುತ್ತಿರುವ ದೈನಂದಿನ ಚಟುವಟಿಕೆಗಳಾಗಿವೆ.

ಬೆಂಗಳೂರಿನ ತುಂಬಾ 'ಪಬ್'ಗಳಿವೆ. ಪಬ್‌ಗಳೆಂದರೆ 'ಮಾದಕ ಪಾನೀಯ'ಗಳನ್ನು ರಾತ್ರಿ ಬಹಳ ಹೊತ್ತಿನವರೆಗೂ ಸರಬರಾಜು ಮಾಡುವ (ಹಿಂದಿನ ಕಾಲದ 'ಬಾರ್'ಗಳ ಹಾಗೆ) ಆಧುನಿಕ ತಾಣಗಳು. ಇದನ್ನು ಪ್ರೋತ್ಸಾಹಿಸುತ್ತಿರುವವರಲ್ಲಿ ಯುವಜನಾಂಗದವರೇ ಹೆಚ್ಚು. ಸಂತೋಷದಿಂದ ಕಾಲ ಕಳೆಯಲು, ದಿನವೆಲ್ಲ ದುಡಿದ ಬೇಸರ ಕಳೆಯಲು 'ಉಳ್ಳವರು' ಇಲ್ಲಿ ಕುಡಿಯುತ್ತ ಹಾಯಾಗಿ ಕಾಲಕಳೆಯಲು ಬರುತ್ತಾರೆ. ಬೆಂಗಳೂರು ಈಗ 'ಪಬ್‌ಗಳ ನಗರ' ಎನ್ನುವ ರಾಷ್ಟ್ರೀಯ-ಅಂತಾರಾಷ್ಟ್ರೀಯ ಖ್ಯಾತಿ ಪಡೆದಿದೆ.

ಕೆಲ 'ಪಾನೀಯ ಮಂದಿರ'ಗಳಲ್ಲಿ ಅಂಗನೆಯರ ಅಂಗವಿನ್ಯಾಸ ನೃತ್ಯಗಳೂ ಇರುತ್ತವೆ. ಇದು ಎಲ್ಲೆ ಮೀರಬಾರದೆಂಬ ನಿಯಮವೂ ಇದೆ. ಈ ನೃತ್ಯಗಾರ್ತಿಯರನ್ನು 'ಲೈವ್ ಬ್ಯಾಂಡ್' ಎಂದು ಕರೆಯುತ್ತಾರೆ.

ಬ್ರಿಟಿಷರು ಬೆಂಗಳೂರಿಗೆ ಬಂದು ಕಂಟೋನ್ಮೆಂಟ್ ಸ್ಥಾಪಿಸಿದಾಗ (ಸುಮಾರು ೧೮೦೯ರ ವೇಳೆಗೆ) ತಮ್ಮ ಕಾಲಹರಣಕ್ಕಾಗಿ, ಸುಖಕ್ಕಾಗಿ, ಮನರಂಜನೆಗಾಗಿ ಸೌಥ್ ಪೆರೇಡ್ (ಇಂದಿನ ಮಹಾತ್ಮಾಗಾಂಧಿ ರಸ್ತೆ), ಬ್ರಿಗೇಡ್ ರೋಡ್ ಮೊದಲಾದವನ್ನು ನಿರ್ಮಿಸಿದರು. ಇಲ್ಲೆಲ್ಲ ಬ್ರಿಟಿಷ್ ಅಧಿಕಾರಿಗಳ, ಸೈನಿಕರ ಸುಖಸಂತೋಷಗಳ ಕ್ಲಬ್ಬುಗಳು ಇದ್ದವು. ಬಾಲ್‌ರೂಂ ಡ್ಯಾನ್ಸಿಂಗ್, ಬಾರ್, ಆಟನೋಟಗಳು -ಹೀಗೆ ಎಲ್ಲವೂ ಅಲ್ಲಿದ್ದವು-ಅವರ ದೇಶಗಳಲ್ಲಿ ಇದ್ದಹಾಗೆ. ಇದು ಅವರ ಸಂಸ್ಕೃತಿ. ಆದರೆ, ಬ್ರಿಟಿಷರ ಜೊತೆಜೊತೆಗೇ ನಮ್ಮವರೂ ಈ ಸಂಸ್ಕೃತಿಯನ್ನು ಮೈಗೂಡಿಸಿಕೊಂಡರು -ತಮ್ಮ ಸಂತೋಷಕ್ಕಾಗಿ ಮತ್ತು ಬ್ರಿಟಿಷ್ ಅಧಿಕಾರಿಗಳ ಸಂತೋಷಕ್ಕಾಗಿ. ಈ ಸಂಸ್ಕೃತಿ ಸ್ವಾತಂತ್ರ್ಯ ಬಂದಮೇಲೆ ಬ್ರಿಟಿಷರ ಜೊತೆಗೆ 'ಭಾರತ ಬಿಟ್ಟು ತೊಲಗಲಿಲ್ಲ'. ಇಲ್ಲೇ ನೆಲೆಸಿತು, ಬಲವಾಗಿ ಬೇರೂರಿತು. ಎರಡು ಮೂರು ತಲೆಮಾರು ಇದನ್ನು ತಮ್ಮದಾಗಿಸಿಕೊಂಡವು. ಹೊಸ ತಲೆಮಾರಿಗೆ ಇದೇನು ವಿಶೇಷ ವಿಷಯವಲ್ಲ. ದೈನಂದಿನ ಆಗುಹೋಗುಗಳಲ್ಲಿ ಒಂದು. ಸಿಗರೆಟ್, ಕಾಫಿ-ಟೀಗಳೂ ಸಹ ನಮಗೆ ಬ್ರಿಟಿಷ್ ಅಣ್ಣಂದಿರ ಬಳುವಳಿ.

ಬ್ರಿಟಿಷರು ತಮಗಾಗಿ ಕ್ಲಬ್‌ಗಳನ್ನು ಸ್ಥಾಪಿಸಿಕೊಂಡರು. ಸೆಂಚುರಿ ಕ್ಲಬ್, ಬೌರಿಂಗ್ ಕ್ಲಬ್, ಬೆಂಗಳೂರು ಕ್ಲಬ್ ಎಂದು ಎಲ್ಲವೂ ಅವರಿಂದ ಕಂಟೋನ್ಮೆಂಟ್ ಪ್ರದೇಶದಲ್ಲೆ ಇತ್ತು. ಆ ಕ್ಲಬ್‌ಗಳಲ್ಲಿ ಆ ಕಾಲದಲ್ಲಿ ಬ್ರಿಟಿಷರಿಗೆ ಮಾತ್ರ ಪ್ರವೇಶ. ಭಾರತೀಯರಿಗೆ ಪ್ರವೇಶವಿರಲಿಲ್ಲ. ಬ್ರಿಟಿಷರು ದೇಶಬಿಟ್ಟು ಹೋಗುತ್ತಿದ್ದಂತೆಯೆ ಈ ಸಮಸ್ತ ಆಸ್ತಿ-ಸಂಸ್ಕೃತಿ ನಮ್ಮವರದಾಯಿತು. ಕ್ಲಬ್‌ಗಳೆಲ್ಲ ನಮ್ಮದಾಯಿತು. ನೃತ್ಯ (ಬಾಲ್ ರೂಂ, ಕ್ಯಾಬರೆ ಇತ್ಯಾದಿ) ರೀತಿಗಳೆಲ್ಲ ನಮ್ಮದಾದವು. 'ಮದ್ಯ' ಸಂಸ್ಕೃತಿಯೂ ಜೊತೆಗೆ ಬೆಳೆಯಿತು.

ಬ್ರಿಟಿಷರು ಬಳುವಳಿಯಾಗಿ ಬಿಟ್ಟುಹೋದ ಕ್ಲಬ್‌ಗಳು ಈಗ ಪ್ರತಿಷ್ಠಿತರ ತಾಣಗಳು. ಅಲ್ಲಿ ಸಾಮಾನ್ಯರಿಗೆ ಪ್ರವೇಶ ಬಹಳ ಕಷ್ಟ (ಇನ್ನೊಂದು ರೀತಿಯ ಬ್ರಿಟಿಷ್ ಪರಿಪಾಲನೆ). ಹೀಗಾಗಿ, ಶ್ರೀಸಾಮಾನ್ಯರು ತಮ್ಮ ತಮ್ಮ ಬಡಾವಣೆಗಳಲ್ಲಿ ತಮ್ಮದೇ ಆದ ಕ್ಲಬ್‌ಗಳನ್ನು ಸ್ಥಾಪಿಸಿಕೊಂಡರು; ಜಯನಗರ ಕ್ಲಬ್, ವಿಜಯನಗರ ಕ್ಲಬ್, ಬಸವನಗುಡಿ ಕ್ಲಬ್, ಮಲ್ಲೇಶ್ವರ ಕ್ಲಬ್ -ಹೀಗೆ ನಾಗರಿಕರ ಜನಪ್ರಿಯ ತಾಣಗಳು ಪ್ರಾರಂಭವಾದವು. ಇವೆಲ್ಲ ಸಹಕಾರ ತತ್ವದ ಆಧಾರದ ಮೇಲೆ ಪ್ರಾರಂಭವಾದವುಗಳು. ಆದರೆ, ಈಚಿನ ವರ್ಷಗಳಲ್ಲಿ ಬೆಂಗಳೂರಿನ ಹೊರವಲಯಗಳಲ್ಲೆಲ್ಲ 'ಆಧುನಿಕ ಕ್ಲಬ್'ಗಳು ಪ್ರಾರಂಭವಾಗಿವೆ. ಇವೆಲ್ಲ ಶ್ರೀಮಂತ ಸಂಸ್ಥೆ-ವ್ಯಕ್ತಿಗಳು

ವ್ಯಾಪಾರೋದ್ಯಮವಾಗಿ ಪ್ರಾರಂಭಿಸಿದ ಸರ್ವವಸ್ತು ಭಂಡಾರಗಳು -ಇಲ್ಲಿ ಸದಸ್ಯರಾಗಲು ಸಾವಿರಾರು ರೂಪಾಯಿ ಕೊಡಬೇಕು. ಇಲ್ಲಿ ಪಾನೀಯಗಳು, ಊಟ-ತಿಂಡಿ, ವ್ಯಾಯಾಮ, ಯೋಗಾ, ಮಾನಸಿಕ ಸ್ಥಿಮಿತತೆ, ಆಯುರ್ವೇದ, ಅತಿಥಿ ಗೃಹಗಳು, ಮನರಂಜನಾ ಕಾರ್ಯಕ್ರಮಗಳು, ಒಳಾಂಗಣ-ಹೊರಾಂಗಣ ಕ್ರೀಡೆಗಳು -ಎಂದು ಸರ್ವಸ್ವವನ್ನೂ ಒಳಗೊಂಡಿರುವ ಕ್ಲಬ್‌ಗಳು ಇವು. ಎಲ್ಲದರಲ್ಲೂ ಭಾಗವಹಿಸುವುದು ಸಾಮಾನ್ಯರಿಗೆ ಎಟುಕುವುದಿಲ್ಲ. ಎಲ್ಲವೂ 'ಉಳ್ಳವರ' ಪ್ರಪಂಚ. ಈಗ ಇಪ್ಪತ್ತು-ಇಪ್ಪತ್ತೆರಡು-ಮೂವತ್ತು ವಯಸ್ಸಿನವರೂ ತಿಂಗಳಿಗೆ ಐವತ್ತು ಸಾವಿರ-ಒಂದು ಲಕ್ಷ ಸಂಪಾದಿಸುತ್ತಿರುವುದರಿಂದ ಈ ಕ್ಲಬ್‌ಗಳಿಗೆ ದಿನದಿನವೂ ಹಬ್ಬ.

ಇದರ ಜೊತೆಗೆ ಬೆಂಗಳೂರಿನ ತುಂಬಾ 'ಬ್ಯೂಟಿ ಪಾರ್ಲರ್'ಗಳು ಮತ್ತು 'ಆಯುರ್ವೇದ ಚಿಕಿತ್ಸೆ ಮತ್ತು ಮರ್ದನ' ತಾಣಗಳು ಬೇಕಾದ ಹಾಗೆ ಹುಟ್ಟಿಕೊಂಡಿವೆ. 'ಬ್ಯೂಟಿ ಪಾರ್ಲರ್'ಗಳು ಸಾಮಾನ್ಯರ ಅಲಂಕಾರಿಕೆಗೆ ಆಶೋತ್ತರಗಳಿಗೆ ಆಧಾರವಾಗಿ ಉಳಿದುಕೊಂಡಿದ್ದರೆ, 'ಚಿಕಿತ್ಸೆ ಮತ್ತು ಮರ್ದನ' ತಾಣಗಳು ಒಂದಿಷ್ಟು ಅಪಕೀರ್ತಿ ಅಂಟಿಸಿಕೊಂಡು ಬಿಟ್ಟಿವೆ. ಇಂಥ ಮರ್ದನ ಚಿಕಿತ್ಸಾ ತಾಣಗಳಿಗೆ ಸರಿಯಾಗಿ ವಿಚಾರಿಸಿ-ನೋಡಿಕೊಂಡು ಹೋಗಬೇಕು ಎಂದು ಹೇಳುವಂತಾಗಿದೆ. ನಿಜವಾಗಲೂ ಬಹುಪಾಲು ಬ್ಯೂಟಿ ಪಾರ್ಲರ್‌ಗಳು ಉಪಯುಕ್ತ ಸೇವೆ ಸಲ್ಲಿಸುತ್ತಿವೆ ಎಂದು ಹೇಳಿದರೆ ತಪ್ಪಾಗಲಾರದು. ಮರ್ದನ ತಾಣದ ವಿಷಯವಾಗಿ ಇಷ್ಟು ನಂಬಿಕೆಯಿಂದ ಹೇಳಲಾಗುವುದಿಲ್ಲ.

ಆದರೂ, ಕೆಲವರ ಒಳ್ಳೆಯ ಅನುಭವಗಳು, ಮೆಚ್ಚುಗೆಯ ಮಾತುಗಳು, ನಂಬಿಕೆಗಳ ಆಧಾರದ ಮೇಲೆ ಇಂಥ ಆಧುನಿಕ ಸುಖಸಂವೇದನಾ-ಅಲಂಕಾರಿಕ ತಾಣಗಳೆಲ್ಲ ಚೆನ್ನಾಗಿಯೇ ನಡೆದಿದೆ, ನಡೆಯುತ್ತಿದೆ, ಲಾಭಕರವಾಗಿಯೂ ಇದೆ.

* * *

ಸಿನಿಮಾ, ನಾಟಕ, ನೃತ್ಯ ಪ್ರದರ್ಶಿಸುವ ತಾಣಗಳೇ ನಿಜವಾದ ಜನಪ್ರಿಯ ಮನರಂಜನಾ ತಾಣಗಳು. ೧೧೬ಕ್ಕೂ ಹೆಚ್ಚಿನ ಸಿನಿಮಾ ಮಂದಿರಗಳಿವೆ. ಎಲ್ಲ ಬಡಾವಣೆಗಳಲ್ಲೂ ಸಿನಿಮಾ ಮಂದಿರಗಳಿವೆ ಅಥವಾ ಅರೆಕಾಲಿಕ ಸಿನಿಮಾ ಮಂದಿರಗಳಿವೆ. ಹಿಂದಿನ ಕಾಲದಲ್ಲಿ ಹೊಸ ಸಿನಿಮಾಗಳು 'ಟೆಂಟ್'ಗಳಲ್ಲಿ ಬಿಡುಗಡೆ ಆಗಬೇಕಾದರೆ ವರ್ಷಾನುಗಟ್ಟಲೆ ಕಾಯಬೇಕಾಗಿತ್ತು. ಈಗ ಹಾಗಲ್ಲ -ಒಂದು ಹೊಸ ಚಿತ್ರ ನಗರ ಹೃದಯ ಭಾಗದ ಅತ್ಯಾಧುನಿಕ ಚಿತ್ರಮಂದಿರ ವೊಂದರಲ್ಲಿ ಬಿಡುಗಡೆಯಾದರೆ, ಅದೇ ಚಿತ್ರ ಬಡಾವಣೆಯ ಒಂದು 'ಟೆಂಟ್' ಸಿನಿಮಾದಲ್ಲಿ ಅದೇ ದಿವಸ ಬಿಡುಗಡೆಯಾಗುತ್ತದೆ. ಒಂದೇ ಚಿತ್ರ ಏಕಕಾಲದಲ್ಲಿ ನಗರದ ಎಂಟು-ಹತ್ತು ಸಿನಿಮಾ ಮಂದಿರಗಳಲ್ಲಿ ಬಿಡುಗಡೆಯಾಗುತ್ತದೆ. ಹೀಗಾಗಿ ಎಲ್ಲ ವರ್ಗದವರೂ,

ಎಲ್ಲ ಬಡಾವಣೆಗಳವರೂ ಹೊಸ ಚಿತ್ರವನ್ನು ಬಿಡುಗಡೆಯಾದ ಕೂಡಲೇ ನೋಡಬಹುದು.

ಬೆಂಗಳೂರಿಗೆ ಹೊಸದಾಗಿ ಬಂದವರು ಒಳ್ಳೆಯ ಅನುಭವಕ್ಕಾಗಿ ಕೆಲವು ಪ್ರಮುಖ ಸಿನಿಮಾ ಮಂದಿರಗಳಿಗೆ ಭೇಟಿ ಕೊಟ್ಟರೆ ಚೆನ್ನಾಗಿರುತ್ತದೆ.

ಕೆಂಪೇಗೌಡ ರಸ್ತೆಯಲ್ಲಿರುವ ಅಭಿನಯ್, ಸಂತೋಷ್, ಸಪ್ನಾ, ನರ್ತಕಿ, ತ್ರಿಭುವನ್ ಮತ್ತು ಎಂಟಿಆರ್ ಹೋಟಲ್‌ನ ಬಳಿ ಇರುವ 'ಊರ್ವಶಿ' ಮತ್ತು ವಿಜಯನಗರದಲ್ಲಿರುವ 'ವೀರೇಶ್' ಥೆಯೆಟರ್‌ಗಳು ಅತ್ಯುತ್ತಮ ಧ್ವನಿ ವ್ಯವಸ್ಥೆಯನ್ನು ಹೊಂದಿವೆ. ಮೆಜೆಸ್ಟಿಕ್ ಪ್ರದೇಶದಲ್ಲಿಯೇ ಇರುವ 'ಕಪಾಲಿ' ದೊಡ್ಡ ವಿಶಾಲವಾದ ಸಿನಿಮಾ ಮಂದಿರ. ಹೀಗೆಯೇ ಸಂಪಂಗಿ ಕೆರೆ ಏರಿಯ ಮೇಲಿರುವ (ಕಂಠೀರವ ಸ್ಟೇಡಿಯಂ ಎದುರು) 'ಪಲ್ಲವಿ' ಚಿತ್ರಮಂದಿರ ಸುಂದರವಾಗಿದೆ. ಮಾಗಡಿ ರಸ್ತೆಯಲ್ಲಿರುವ 'ಪ್ರಸನ್ನ-ಪ್ರಮೋದ್' ಅವಳಿ ಮಂದಿರಗಳು ವಿಶೇಷ ಜನಸಂದಣಿಯನ್ನು ಒಳಗೊಂಡಿರುತ್ತದೆ. ಚಾಮರಾಜ ಪೇಟೆಯಲ್ಲಿರುವ 'ಉಮಾ' ಚಿತ್ರಮಂದಿರ ಬರೀ ಕನ್ನಡ ಚಿತ್ರಮಂದಿರಗಳಿಗೆ ಮಾತ್ರ ಮೀಸಲು. ಮಹಾತ್ಮಾಗಾಂಧಿ ರಸ್ತೆಯಲ್ಲಿರುವ ಪ್ಲಾಜಾ, ಶಂಕರ್‌ನಾಗ್ ಮತ್ತು ರೆಕ್ಸ್ (ಬ್ರಿಗೇಡ್ ರಸ್ತೆ) ಇಂಗ್ಲಿಷ್ ಸಿನಿಮಾಗಳಿಗೆ ಮೀಸಲು. ಇಲ್ಲಿ ಹಿಂದಿನ ದಂಡು ಕಾಲದ ಶಿಸ್ತು ಅಲ್ಪಸ್ವಲ್ಪ ಅಂಟಿಕೊಂಡಿರುವುದನ್ನು ಗಮನಿಸಬಹುದು. ಸಂಜಯನಗರ (ಕೃಷಿ ವಿಶ್ವವಿದ್ಯಾಲಯದ ಹಿಂದೆ) ಪ್ರದೇಶದಲ್ಲಿ 'ವೈಭವ' ಎನ್ನುವ ಅತ್ಯಾಧುನಿಕ ಥೆಯೆಟರ್ ಆಗಿದೆ -ಇದೇ ಇತ್ತೀಚಿನದು. ಜೊತೆಗೆ ಇಡೀ ದಕ್ಷಿಣ ಭಾರತಕ್ಕೆ ಮೊದಲ 'ಚಿತ್ರ-ಮನರಂಜನೆ-ವ್ಯಾಪಾರ ಸಂಕೀರ್ಣ' 'ಇನೊವೇಟಿವ್ ಮಲ್ಟಿಪ್ಲೆಕ್ಸ್' (Innovative Multiplex) -ರಿಂಗ್ ರಸ್ತೆಯಲ್ಲಿ ಮಾರುತ ಹಳ್ಳಿಯ ಕಡೆ ಇದೆ. ಇದನ್ನು ಖಂಡಿತ ದರ್ಶಿಸಬೇಕು (ಮೆಜೆಸ್ಟಿಕ್-ಸಿಟಿ ಮಾರ್ಕೆಟ್-ಶಿವಾಜಿನಗರ ಬಸ್ ಸ್ಟಾಂಡ್‌ಗಳಿಂದ ಮಾರುತ ಹಳ್ಳಿಗೆ ಬಸ್‌ಗಳಿವೆ. ಅವು 'ಮಲ್ಟಿಪ್ಲೆಕ್ಸ್' ಮುಂದೆ ನಿಲ್ಲುತ್ತವೆ. 'ಮಲ್ಟಿಪ್ಲೆಕ್ಸ್'ನಲ್ಲಿ ಬೇರೆ ಬೇರೆ ಮನರಂಜನಾ ತಾಣಗಳು, ಹೋಟಲ್‌ಗಳು, ವ್ಯಾಪಾರ ಮಳಿಗೆಗಳು ಇವೆ. ಮಕ್ಕಳಿಗೆ ಆಟದ ವಿಭಾಗಗಳಿವೆ. ನಾಲ್ಕೈದು ದೊಡ್ಡ ಸಿನಿಮಾ 'ತೆರೆ' (ಸ್ಕ್ರೀನ್)ಗಳಿವೆ.

* * *

ಬರೀ ಕ್ಲಬ್‌ಗಳೂ, ಬಾರ್‌ಗಳೂ, ಪಬ್‌ಗಳೂ ಮಾತ್ರವಲ್ಲದೆ ಬೆಂಗಳೂರಿನಲ್ಲಿ ಮನಸ್ಸಿಗೆ ಆಹ್ಲಾದವನ್ನುಂಟುಮಾಡುವ, ಹೊಸ ಅನುಭವ ನೀಡುವ ಕೆಲವು ತಾಣಗಳಿವೆ. ಅವುಗಳಲ್ಲಿ ಥ್ರಿಲ್ಲರಿಯಂ, ಬೌಲಿಂಗ್, ಗೊ-ಕಾರ್ಟಿಂಗ್, ಬೋಟಿಂಗ್ ಮೊದಲಾದ

ತಾಣಗಳಲ್ಲದೇ. ಇಡೀ ಕುಟುಂಬ ಇಡೀ ದಿನ ಕಾಲ ಕಳೆಯಬಹುದಾದ 'ವಿನೋದ ಕ್ರೀಡೆ ತಾಣಗಳು' (Amusement Centres) ಇವೆ. ಇಲ್ಲಿ ಮನೆಯವರೆಲ್ಲರೂ ಒಟ್ಟಾಗಿ ಆಟವಾಡುತ್ತ ಮೈಮರೆಯಬಹುದು.

'ಥ್ರಿಲ್ಲರಿಯಂ', ಬ್ರಿಗೇಡ್ ರಸ್ತೆಯ ಮೋಟಾರಾಯಲ್ ಆರ್ಕೇಡ್‌ನ ಎರಡನೆಯ ಮಹಡಿಯಲ್ಲಿದೆ. ಇಲ್ಲಿ ಕಂಪ್ಯೂಟರ್‌ಗಳಲ್ಲಿ ನಾವು ಗಗನಯಾತ್ರೆ ಮಾಡಬಹುದು. ಮೈನವಿರೇಳಿಸುವ ಅನುಭವ ಇದು. ಹಿರಿಯರು-ಕಿರಿಯರು ಎಲ್ಲರೂ ಆನಂದಿಸಬಹುದು. (೨೫೩೨೩೮೦ಳಗೆ ಫೋನ್ ಮಾಡಿ ವಿಚಾರಿಸಿ)

'ಬೌಲಿಂಗ್' ಬೆಂಗಳೂರಿಗೆ ಇತ್ತೀಚಿನ ಸೇರ್ಪಡೆ. ಟಿವಿಯಲ್ಲಿ ನಾವು ನೋಡಿರುವ ಆಟ ಇದು. ಹಿಂದಿನ ಕಾಲದ ಗೋಲಿ ಆಟದ ನೆನಪು ಬರುತ್ತದೆ. ಎದುರಿನ ಸ್ವಲ್ಪ ದೂರದಲ್ಲಿ ಮರದ ತುಂಡುಗಳನ್ನು ನಿಲ್ಲಿಸಿರುತ್ತಾರೆ. ಇಲ್ಲಿಂದ ದಾಂಡು ಬೀಸಿ ಒಂದೇ ಸಲಕ್ಕೆ ಇವನ್ನೆಲ್ಲ ಉರುಳಿಸಬೇಕು. ಇದು ಅಂತಾರಾಷ್ಟ್ರೀಯ ಕ್ರೀಡೆಯೂ ಆಗಿಹೋಗಿದೆ. ಎಲ್ಲವೂ ಯುವಮಿಡಿತದ ಪ್ರಭಾವ. ಇಂಥವು ಎರಡು ಬೆಂಗಳೂರಿನಲ್ಲಿದೆ. 'ಮೆಗಾಬೌಲ್' (ಟೆಲಿಫೋನ್: ೨೫೨೨೯೭೪೬) ಮತ್ತು 'ಅಮಿಯೋಬ' (ಟೆಲಿಫೋನ್: ೨೫೫೯೪೬೧೧). ಫೋನ್ ಮಾಡಿ ವಿಚಾರಿಸಿ ಸ್ಥಳ ಪರಿಚಯ ಮಾಡಿಕೊಂಡು ಹೋಗಬಹುದು.

ಹೀಗೆಯೇ, ಅಂತಾರಾಷ್ಟ್ರೀಯ ಮೋಟರ್ ಕಾರ್ ರೇಸಿಂಗ್ ಅಂಥದೇ ಜಾಡಿನ ಸುಲಭದ ರೂಪ 'ಗೊ-ಕಾರ್ಟಿಂಗ್' (ಫೋನ್ ನಂ.: ೨೩೩೩೭೫೭೫) ಪುಟ್ಟ ಕಾರುಗಳಲ್ಲಿ ಕುರಿತು ರೇಸ್ ಮಾಡಬಹುದು. ಸಚಿನ್ ತೆಂಡೊಲ್ಕರ್‌ಗೆ ಮೆಚ್ಚಿನ ಆಟ ಇದು. ಟಿವಿಯಲ್ಲೂ ಸಚಿನ್ ಇದನ್ನು ಆಡಿದ್ದನ್ನು ತೋರಿಸಿದ್ದರು.

ಇಂಥದೇ ಇನ್ನೊಂದು ಮನರಂಜನೆ-ದೋಣಿ ವಿಹಾರ-ಬೋಟಿಂಗ್, ಇದು ಬೆಂಗಳೂರಿನ ಕೆಲವು ಕಡೆ ಇದೆ. ಅಲಸೂರು ಕೆರೆಯಲ್ಲಿ ಪ್ರತಿದಿವಸ ಬೆಳಗ್ಗೆ ೯ ಘಂಟೆಯಿಂದ ಸಂಜೆ ೬ ಘಂಟೆಯವರೆಗೆ ಇರುತ್ತದೆ (ಬುಧವಾರ ರಜಾದಿನ). ಈ ಬೋಟ್ ಪ್ರಯಾಣದಲ್ಲಿ ಬೆಂಗಳೂರು ಜನಬದುಕಿನ ಸೊಗಸನ್ನು ಸುತ್ತಲೂ ನೋಡಬಹುದು. ಹೆಸರಘಟ್ಟದಲ್ಲಿ, ಸ್ಯಾಂಕಿ ಕೆರೆಯಲ್ಲಿ (ಸದಾಶಿವನಗರ) ಎಡೆಯೂರು ಕೆರೆಯಲ್ಲಿ (ಬಸವನಗುಡಿ) ದೋಣಿ ವಿಹಾರಕ್ಕೆ ಅವಕಾಶವಿದೆ. ನಗರ ಸಾರಿಗೆ ಬಸ್‌ಗಳಲ್ಲಿ ಈ ಕೆರೆಗಳ ಸ್ಥಳಗಳಿಗೆ ಹೋಗಿ ಸೇರಬಹುದು. ಕೆರೆಯ ಸೌಂದರ್ಯವನ್ನು, ಅಲ್ಲಿ ಜನಜಂಗುಳಿಯನ್ನು ನೋಡಬಹುದು, ನೀವು ಹೋದ ಸಮಯದಲ್ಲಿ ಅಲ್ಲಿ ದೋಣಿ ವಿಹಾರ ಇದ್ದರೆ ಅದರ ಅನುಭವವನ್ನೂ ಪಡೆದುಬಿಡಬಹುದು.

ಈಚಿನ ವರ್ಷಗಳಲ್ಲಿ ಬೆಂಗಳೂರು 'ವಿನೋದ ವಿಹಾರ ಕೇಂದ್ರ'ಗಳು ದಿಢೀರನೆ ತಲೆಯೆತ್ತುವುದನ್ನು ಕಂಡಿದೆ. ಇದಕ್ಕೆ ಕಾಯುತ್ತಿದ್ದವರ ಹಾಗೆ ಬೆಂಗಳೂರಿಗರು ಕೂಡ ದಿಢೀರನೆ ಇದಕ್ಕೆ ಹೊಂದಿಕೊಂಡು ಬಿಟ್ಟಿದ್ದಾರೆ. ನಗರದ ಸಣ್ಣಪುಟ್ಟ ಹೋಟಲ್‌ಗಳಿಗೆ ಇಡ್ಲಿ ವಡೆ ದೋಸೆ ತಿನ್ನಲು ಹೋಗುವ ಹಾಗೆ ಬೆಂಗಳೂರು ಮಹಾಜನ ಈ ಜಾಗಗಳಿಗೆ ವಾರಾಂತ್ಯ ಮತ್ತು ರಜಾದಿನಗಳನ್ನು ತಪ್ಪದೇ ಭೇಟಿ ಕೊಡುತ್ತಾರೆ.

* **'ಕ್ಯೇಜಿ ವಾಟರ್ಸ್'**, ಬನ್ನೇರುಘಟ್ಟ - ಫೋನ್ : ೨೬೫೮೪೯೧೦

* **'ನೀಲಾದ್ರಿ ಅಮ್ಯೂಸ್‌ಮೆಂಟ್ ಪಾರ್ಕ್'**, ಹೊಸೂರು ರಸ್ತೆ - ೨೬೫೨೪೩೦

* **'ಫನ್ ವರ್ಲ್ಡ್'**, ಅರಮನೆ ಮೈದಾನ - ೨೩೪೩೦೪೯೬

* **'ಜಾಂಬಾ ಜಂಗಲ್'**, ಡಿಕನ್‌ಸನ್ ರಸ್ತೆ - ೨೫೦೯೨೨೩೩

-ಇವೆಲ್ಲವೂ ಬೆಂಗಳೂರು ನಗರ ಎಲ್ಲೆಗೆ ಅಂಟಿಕೊಂಡಿದೆ. ಇಲ್ಲಿಗೆ ಹೋಗಲು ಸ್ವಂತ ವಾಹನಗಳಿದ್ದರೆ ಅನುಕೂಲ. ಏಕೆಂದರೆ ಅಲ್ಲಿನ ಎಲ್ಲವನ್ನೂ ಅನುಭವಿಸಿ ಸಂತೃಪ್ತಿಯಿಂದ ಹೊರಬಹುದು. ಇಲ್ಲಿ ಪ್ರಮುಖವಾಗಿ ನೀರಿನ ಆಟಗಳು ಹೆಚ್ಚು. ನೀರಿನಲ್ಲಿ ಆಟ, ತೇಲಿಕೊಂಡು ಬರುವುದು, ತೆಪ್ಪದಂತಹ ತುಂಡಿನ ಮೇಲೆ ಕುಳಿತು ನೀರಿನ ದಾರಿಗಳಲ್ಲಿ ರಭಸದಿಂದ ಬರುವುದು. ಸಫಾರಿ ಕಾರುಗಳು, ಹಾರುವ ಕುರ್ಚಿಗಳು, ರಂಗರಾಟನ (ಮೆರ್ರಿ-ಗೋ-ರೌಂಡ್), ಢಿಕ್ಕಿ ಹೊಡೆಯುವ ಕಾರುಗಳು -ಹೀಗೆ ಆ ಪ್ರದೇಶದ ತುಂಬಾ ಆಟಗಳಮಯ. ಇಡೀ ಕುಟುಂಬ ತುಂಬ ಖುಷಿಯಿಂದ ಎಲ್ಲವನ್ನೂ ಮರೆತು ನಗುನಗುತ್ತಲೇ ರಜಾ ದಿನ ಕಳೆಯಬಹುದಾದ ವಿನೋದ ತಾಣ. (ಇವೆಲ್ಲ ಬೆಳಗ್ಗೆ ೧೦ ಘಂಟೆಯಿಂದ ರಾತ್ರಿ ಏಳೆಂಟು ಘಂಟೆಯವರೆಗೂ ಇರುತ್ತವೆ. ಖರ್ಚು ಧಾರಾಳವಾಗಿಯೇ ಆಗಬಹುದು). ಇಂಥದೊಂದು ಹೊಸದಾಗಿ ನಂದಿ ಬೆಟ್ಟದ ತಪ್ಪಲಿನಲ್ಲಿಯೂ ಪ್ರಾರಂಭವಾಗಿದೆ. ಶ್ರೀರಂಗಪಟ್ಟಣ-ಮೈಸೂರು ನಡುವೆ ಇರುವ ವಾಟರ್ ಪಾರ್ಕ್ ಕರ್ನಾಟಕದಲ್ಲೇ ಅತ್ಯಂತ ದೊಡ್ಡದು ಮತ್ತು ವೈವಿಧ್ಯಮಯವಾದದ್ದು.

ಈಜು ಪ್ರಿಯರಿಗೆ ಬೆಂಗಳೂರಿನ ಬಹುಪಾಲು ಎಲ್ಲ ಕಡೆಯೂ ಉತ್ತಮ ಮಟ್ಟದಲ್ಲಿ ನಡೆಸುತ್ತಿರುವ ಈಜು ಕೊಳಗಳಿವೆ. ಆಧುನಿಕ ರೀತಿಯ ಅಗತ್ಯ ಸೌಲಭ್ಯಗಳಿವೆ. ಸದಾಶಿವನಗರ, ಜಯನಗರ, ವಿಜಯನಗರ (ಆರ್‌ಪಿಸಿ ಲೇಔಟ್), ಮಹಾನಗರ ಪಾಲಿಕೆ ಆವರಣ, ಶೇಷಾದ್ರಿಪುರ, ನ್ಯಾಷನಲ್ ಕಾಲೇಜ್ ಹತ್ತಿರ -ಹೀಗೆ ಬೆಂಗಳೂರಿನ ನಾನಾಕಡೆ ಅತ್ಯುತ್ತಮ ಈಜುಕೊಳಗಳಿವೆ. ಇಲ್ಲಿ ಎಲ್ಲ ಕಡೆಯೂ, ಗಮನಿಸುವವರು, ತರಬೇತುದಾರರು ಇರುತ್ತಾರೆ. ಈಜುಗಾರಿಕೆಯಲ್ಲಿ ಸಂಪೂರ್ಣ ಪರಿಣತಿ ಇಲ್ಲದೆ ಯಾರೂ ಬೆಂಗಳೂರಿನ ದೊಡ್ಡ ಕೆರೆಗಳಲ್ಲಿ ಈಜಲು ಧುಮುಕಬಾರದು. ಆದರೆ, ಈಜುಕೊಳಗಳೆಲ್ಲವೂ (Swimming Pools) ಸಂಪೂರ್ಣ ಸುರಕ್ಷಿತ.

ಬೆಂಗಳೂರಿನ ಎಲ್ಲ ಬಡಾವಣೆಗಳಲ್ಲೂ ನಗರ ಕೇಂದ್ರ ಗ್ರಂಥಾಲಯಗಳಿವೆ. ಪುಸ್ತಕಗಳು-ಪತ್ರಿಕೆಗಳು ಓದಲು ಸಿಗುತ್ತವೆ. ಬಸ್‌ಗಳಲ್ಲಿ ಗ್ರಂಥಗಳನ್ನು ಅಳವಡಿಸಿ 'ನಗರ ಸಂಚಾರಿ ಗ್ರಂಥಾಲಯ'ಗಳೂ ಇವೆ. ಇವು ಪ್ರತಿದಿವಸ ಒಂದೊಂದು ಬಡಾವಣೆಯಲ್ಲಿ, ವಾಸದ ಮನೆಗಳ ಹತ್ತಿರ ಬಂದು ನಿಲ್ಲುತ್ತವೆ. ವಿಜಯನಗರ ೨ನೆ ಹಂತ (ಆರ್‌ಪಿಸಿ ಲೇಔಟ್)ದಲ್ಲಿ ಈಚೆಗೆ ಪ್ರಾರಂಭವಾದ 'ನಗರ ಕೇಂದ್ರ ಗ್ರಂಥಾಲಯ' ಬೆಂಗಳೂರಿನ ಒಂದು ಹೆಮ್ಮೆಯ ತಾಣ. ಅಂತಾರಾಷ್ಟ್ರೀಯ ರೀತಿನೀತಿಗಳ ಮಟ್ಟದಲ್ಲಿ ಈ ಗ್ರಂಥಾಲಯವನ್ನು ಯೋಜಿಸಿದ್ದಾರೆ. ಮೂರು ಮಹಡಿಯ ಈ ಗ್ರಂಥಾಲಯ ವಿಶಾಲವಾದ ಕಾಂಪೌಂಡ್‌ನಲ್ಲಿದೆ. ಸೊಗಸಾದ ದೊಡ್ಡ ಮಂದಿರವಿದೆ-ಸಾಹಿತ್ಯ ಸಂಸ್ಕೃತಿ ಕಾರ್ಯಕ್ರಮಗಳಿಗೆ ಅತಿ ಸೂಕ್ತವಾದ 'ಹಾಲ್' ಇದು. ಗ್ರಂಥ ಭಂಡಾರ, ಆಕರ ಗ್ರಂಥ ವಿಭಾಗ, ಕಂಪ್ಯೂಟರ್ ಲೋಕ, ಮಕ್ಕಳ ವಿಭಾಗ, ಪತ್ರಿಕಾ ವಿಭಾಗ ಮತ್ತು ಒಂದು ಕ್ಯಾಂಟೀನ್ -ಇಷ್ಟೊಂದನ್ನು ಇಲ್ಲಿ ಅಳವಡಿಸಿದ್ದಾರೆ. ಜೊತೆಗೆ, ಹಿರಿಯ ಗ್ರಂಥಪಾಲಕರೊಬ್ಬರು ಆಡಳಿತದ ಚುಕ್ಕಾಣಿ ಹಿಡಿದಿದ್ದಾರೆ. ನೀವೊಮ್ಮೆ ಈ ಗ್ರಂಥಾಲಯಕ್ಕೆ ಭೇಟಿ ಕೊಡಲೇಬೇಕು. (ಆರ್‌ಪಿಸಿ ಲೇಔಟ್ ಕೊನೆಯ ಬಸ್‌ಸ್ಟಾಂಡ್ ಹತ್ತಿರವೇ ಇದೆ).

* * *

ನಾಟಕ, ನೃತ್ಯ ಕಾರ್ಯಕ್ರಮಗಳು ಮತ್ತು ಸಾಹಿತ್ಯ, ಸಂಸ್ಕೃತಿ ಕಾರ್ಯಕ್ರಮಗಳನ್ನು ನಡೆಸಲು ಬೆಂಗಳೂರಿನಲ್ಲಿ ಅತ್ಯುತ್ತಮ ರಂಗಮಂದಿರಗಳಿವೆ. ಇಲ್ಲಿ ನಿರಂತರವಾಗಿ ಏನಾದರೊಂದು ಉತ್ತಮ ಕಾರ್ಯಕ್ರಮ ನಡೆಯುತ್ತಲೇ ಇರುತ್ತದೆ.

ಮಲ್ಲೇಶ್ವರದ ಸ್ಯಾಂಕಿ ಕೆರೆಗೆ ಹತ್ತಿರವಿರುವ 'ಚೌಡಯ್ಯ ಸ್ಮಾರಕ ಭವನ' ವಿಶಾಲವಾದ, ಸೊಗಸಾದ ಥೆಯೆಟರ್. ಇಲ್ಲಿ ಅನೇಕ ಅತ್ಯುತ್ತಮ ಸಂಗೀತ-ನೃತ್ಯ-ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತಲೇ ಇರುತ್ತವೆ. ಕರ್ನಾಟಕ ಸಂಗೀತ ಪಿಟೀಲು ವಿದ್ವಾಂಸರಲ್ಲೊಬ್ಬರಾದ ದಿವಂಗತ ಮೈಸೂರು ಟಿ. ಚೌಡಯ್ಯ (ನಮ್ಮ ಸಿನಿಮಾ ಕಲಾವಿದರಾದ ಅಂಬರೀಷ್ ತಾತ) ಅವರ ನೆನಪಿಗೆ ನಿರ್ಮಿಸಿರುವ ಮಂದಿರ ಮೇಲಿನಿಂದ ಪಿಟೀಲು ಆಕಾರದಲ್ಲಿಯೇ ನಿರ್ಮಾಣಗೊಂಡಿದೆ. ಸ್ಯಾಂಕಿ ರಸ್ತೆಯ ಮೇಲೆ ನಿಂತು ನೋಡಿದರೆ, ಒಂದು ಬೃಹತ್ ಪಿಟೀಲು ನೋಡಿದಂತೆನಿಸುತ್ತದೆ.

ಬೆಂಗಳೂರು ಕಾರ್ಪೊರೇಷನ್ ಆಫೀಸ್ (ಮಹಾನಗರ ಪಾಲಿಕೆ) ಕಟ್ಟಡ ದಾಟಿ ಮುಂದೆ, ಯೂನಿಟಿ ಕಟ್ಟಡ ದಾಟಿದರೆ, ಬೆಂಗಳೂರಿನ ಪುರಭವನ 'ಪುಟ್ಟಣ್ಣ ಶೆಟ್ಟಿ ಟೌನ್ ಹಾಲ್' ಬರುತ್ತದೆ. ಏಳೆಂಟು ದಶಕಗಳ ಹಿಂದಿನ ಭವನ. ಭವ್ಯವಾಗಿ ಕಾಣಿಸುತ್ತದೆ. ಆ ಕಾಲದಲ್ಲಿ ಸುತ್ತಲೂ ಯಾವ ದೊಡ್ಡ ಕಟ್ಟಡಗಳೂ ಇಲ್ಲದೆ ಮೂರು ಭವ್ಯರಸ್ತೆಗಳ ನಡುವೆ ಇದು ಹೇಗೆ ನಗರದ ಹೆಗ್ಗುರುತಾಗಿ ನಿಂತಿದ್ದಿರಬಹುದು ಎಂದು

ಯೋಚಿಸಿಕೊಂಡಾಗ, ರೋಮನ್ ಸಾಮ್ರಾಜ್ಯದ ಭವ್ಯ ಸ್ಮಾರಕಗಳ ನೆನಪು ಬರುತ್ತದೆ. ಇಂದಿಗೂ ಬೆಂಗಳೂರು ಗೌರವಾನ್ವಿತ ನಾಗರಿಕ ಮಹನೀಯರಲ್ಲಿ ಒಬ್ಬರಾದ ದಿವಂಗತ ಪುಟ್ಟಣ್ಣ ಶೆಟ್ಟರ ನೆನಪನ್ನು ನಿರಂತರವಾಗಿ ಉಳಿಸಿಕೊಂಡು ಬಂದಿರುವ ಬೆಂಗಳೂರು ಪ್ರಜೆಗಳ ಹೆಮ್ಮೆಯ ಕಟ್ಟಡ ಇದು.

ಇದರ ಪಕ್ಕದಲ್ಲೇ ರವೀಂದ್ರ ಕಲಾಕ್ಷೇತ್ರ, ಕನ್ನಡ ಭವನ ಇವೆ. ರವೀಂದ್ರ ಕಲಾಕ್ಷೇತ್ರ ಸ್ವಲ್ಪ ಹಳೆಯದು. ಕನ್ನಡ ಭವನ ಇತ್ತೀಚಿನದು. ಎರಡೂ ಅತ್ಯಂತ ಸುಂದರ, ಭವ್ಯ ಕಲಾದೇಗುಲಗಳು. ಆಧುನಿಕ ಬೆಳಕು-ಧ್ವನಿ ವ್ಯವಸ್ಥೆ ಇರುವ ಭವನಗಳು. ಟಾಟಾ ಇನ್ಸ್‌ಟಿಟ್ಯೂಟ್‌ನಲ್ಲಿ ಅತ್ಯುತ್ತಮವಾದ ಆಧುನಿಕ ಭವ್ಯ ಭವನವಿದೆ.

ಹಾಗೆಯೇ, ವಸಂತನಗರದ ಮಿಲ್ಲರ್ಸ್ ರಸ್ತೆಯ ಡಾ. ಬಿ.ಆರ್. ಅಂಬೇಡ್ಕರ್ ಭವನ; ಮಲ್ಲೇಶ್ವರದ ಅನನ್ಯ ಸಭಾಂಗಣ (೪ನೆ ಮೈನ್); ರವೀಂದ್ರ ಕಲಾಕ್ಷೇತ್ರದ ಎದುರಿನಲ್ಲೇ ಇರುವ ಎಡಿಎ ರಂಗಮಂದಿರ; ವಿಜಯನಗರ ಮುಖ್ಯ ರಸ್ತೆಯಲ್ಲಿರುವ ಬಂಟ್ಸ್ ಸಂಘ ಭವನ (ತುಂಬಾ ವಿಶಾಲವಾಗಿ ಸೊಗಸಾಗಿದೆ. ದಕ್ಷಿಣ ಕನ್ನಡ ಜಿಲ್ಲೆ ಬಂಟರ ಸಾಧನೆ ಇದು); ಮಿಲ್ಲರ್ಸ್ ಟ್ಯಾಂಕ್ ಬಳಿಯ ಗುರುನಾನಕ್ ಭವನ; ಸಿಟಿ ಮಾರ್ಕೆಟ್ ಎದುರಿನ ಕೃಷ್ಣರಾಜೇಂದ್ರ ರಸ್ತೆಯಲ್ಲಿರುವ ಕುವೆಂಪು ಕಲಾಕ್ಷೇತ್ರ (ಸೊಗಸಾದ ಮಂದಿರ) ಮತ್ತು ಇದರ ಎದುರೇ ಇರುವ 'ಗಾಯನ ಸಮಾಜ' (ಸಂಗೀತ ಕಾರ್ಯಕ್ರಮಗಳಿಗೆ ಪ್ರಧಾನ ಸಂಸ್ಥೆ. ನವೀಕರಣಗೊಳಿಸಿರುವ ಸಭಾಭವನ); ಡಾ. ಎಚ್.ಎನ್. ಕಲಾಕ್ಷೇತ್ರ (ಜಯನಗರ ೭ನೆ ಬ್ಲಾಕ್); ಶಿವರಾತ್ರೀಶ್ವರ ಸಂಸ್ಕೃತಿ ಭವನ, ೮ನೆ ಬ್ಲಾಕ್ ಜಯನಗರ -ಮೊದಲಾದವು ಬೆಂಗಳೂರು ನಗರದ ಸಾಂಸ್ಕೃತಿಕ ಹೆಗ್ಗುರುತುಗಳು. ಇಲ್ಲೆಲ್ಲ ಪ್ರತಿದಿವಸ ಏನಾದರೊಂದು ಉತ್ತಮ ಕಾರ್ಯಕ್ರಮ (ನಾಟಕ, ನೃತ್ಯ, ಪುಸ್ತಕ ಬಿಡುಗಡೆ, ಸಾಹಿತ್ಯ ಉಪನ್ಯಾಸ) ನಡೆಯುತ್ತಲೇ ಇರುತ್ತವೆ.

ಬೆಂಗಳೂರು ಭಾರತೀಯ ವಿದ್ಯಾಭವನ (ರೇಸ್‌ಕೋರ್ಸ್ ರಸ್ತೆ), ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್ (ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ); ಮಿಥಿಕ್ ಸೊಸೈಟಿ ಮತ್ತು ಯವನಿಕಾ (ನೃಪತುಂಗ ರಸ್ತೆ); ಗೋಖಲೆ ಸಾರ್ವಜನಿಕ ಸಂಸ್ಥೆ (ಬುಲ್‌ಟೆಂಪಲ್ ರಸ್ತೆ, ಬಸವನಗುಡಿ); ಗಾಂಧಿ ಸಾಹಿತ್ಯ ಸಂಘ (ಮಲ್ಲೇಶ್ವರ ೬ನೆ ಕ್ರಾಸ್); ಬಿಎಂಶ್ರೀ ಪ್ರತಿಷ್ಠಾನ (ನರಸಿಂಹರಾಜಾ ಕಾಲನಿ); ಶಿವಬಾಲಯೋಗಿ ಆಶ್ರಮ (ಜೆಪಿ ನಗರ ೩ನೆ ಹಂತ); ಪುಣ್ಯಧಾಮ (ರಾಜಾಜಿನಗರ 'ಎನ್' ಬ್ಲಾಕ್); ಅಖಿಲ ಹವ್ಯಕ ಸಭಾಂಗಣ (ಎಂಟನೆ ಮೈನ್, ಹನ್ನೊಂದನೆ ಕ್ರಾಸ್, ಮಲ್ಲೇಶ್ವರ); ರಾಗಿಗುಡ್ಡ (ಜಯನಗರ ೯ನೆ ಬ್ಲಾಕ್) ಮತ್ತು ರಾಮಕೃಷ್ಣಾಶ್ರಮ (ಬುಲ್ ಟೆಂಪಲ್ ರಸ್ತೆ, ಬಸವನಗುಡಿ) -ಇಲ್ಲೆಲ್ಲ ಅತ್ಯುತ್ತಮ, ಅರ್ಥವತ್ತಾದ ದೈವಿಕ, ಸಾಹಿತ್ಯಕ, ಸಾಂಸ್ಕೃತಿಕ

ಕಾರ್ಯಕ್ರಮಗಳು ನಡೆಯುತ್ತಿರುತ್ತವೆ. ಬೆಂಗಳೂರಿನ ಜನ ಇಲ್ಲಿ ನೂರಾರು ಸಂಖ್ಯೆಯಲ್ಲಿ ಸೇರುತ್ತಾರೆ.

ಕರ್ನಾಟಕದವರೆಲ್ಲರ ಮಾತೃಸಂಸ್ಥೆ 'ಕನ್ನಡ ಸಾಹಿತ್ಯ ಪರಿಷತ್ತು' ಎಲ್ಲರೂ ಭೇಟಿ ಮಾಡಲೇಬೇಕಾದ ತಾಣ. ಸಾಧ್ಯವಾದರೆ ಅಧ್ಯಕ್ಷರನ್ನೂ ಮಾತನಾಡಿಸಬಹುದು. ಇಲ್ಲಿ 'ಶ್ರೀಕೃಷ್ಣ ರಾಜೇಂದ್ರ ಮಂದಿರ'ದಲ್ಲಿ ಪ್ರತಿದಿವಸ ಏನಾದರೊಂದು ಸಾಹಿತ್ಯ-ಸಂಸ್ಕೃತಿ ಕಾರ್ಯಕ್ರಮ ನಡೆಯುತ್ತಿರುತ್ತದೆ. ಆಗಾಗ ಕನ್ನಡ ಪುಸ್ತಕಗಳ ಪ್ರದರ್ಶನ ಜರುಗುತ್ತದೆ.

ಮೆಜೆಸ್ಟಿಕ್ ಪ್ರದೇಶದ ಗಾಂಧಿನಗರದಲ್ಲಿರುವ (ಕಪಾಲಿ ಟಾಕೀಸ್ ಎಡಭಾಗದ ರಸ್ತೆ) 'ಗುಬ್ಬಿ ಥೆಯೆಟರ್' -ಕರ್ನಾಟಕ ರಂಗಭೂಮಿ ಇತಿಹಾಸ ದೊಂದಿಗೆ ಜೋಡಣೆಯಾಗಿರುವ ರಂಗಸಂಸ್ಥೆ. 'ಗುಬ್ಬಿ ಕಂಪನಿ' ಜಿ.ಎಚ್. ವೀರಣ್ಣ ಅವರು ಸ್ಥಾಪಿಸಿದ ರಂಗಮಂದಿರದ ಜಾಗದಲ್ಲಿಯೇ ಇದೆ. ಇಲ್ಲಿ ಆಗಾಗ ಕನ್ನಡ ವೃತ್ತಿರಂಗಭೂಮಿಯ ಸುಪ್ರಸಿದ್ಧ ನಾಟಕಗಳು ಪ್ರದರ್ಶನಗೊಳ್ಳುತ್ತಲೇ ಇರುತ್ತವೆ.

ಇದೇ ರೀತಿ 'ಗುಬ್ಬಿ ಕಂಪನಿ'ಯಷ್ಟೇ ಇತಿಹಾಸವಿರುವ, ಕನ್ನಡ ರಂಗಭೂಮಿ ಪಿತಾಮಹರಲ್ಲಿ ಒಬ್ಬರಾದ, ನಾಟಕ ಶಿರೋಮಣಿ ಎ.ವಿ. ವರದಾಚಾರ್ ಅವರ ಸ್ಮರಣಾರ್ಥ ಶೇಷಾದ್ರಿಪುರದಲ್ಲಿ 'ಎ.ವಿ. ವರದಾಚಾರ್ ರಂಗಮಂದಿರ' ಇದೆ (ನಟರಾಜ್ ಟಾಕೀಸ್ ಹಿಂದೆ). ಇಲ್ಲಿಯೂ ಅನೇಕ ಹವ್ಯಾಸೀ-ವೃತ್ತಿಪರರ ನಾಟಕಗಳು ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತಿರುತ್ತವೆ.

ಇವಲ್ಲದೆ, ಬೆಂಗಳೂರಿನ ಪ್ರತಿಯೊಂದು ಶಾಲೆ-ಕಾಲೇಜ್‌ಗಳಲ್ಲೂ ಸುಸಜ್ಜಿತ ರಂಗಭೂಮಿ ಇದೆ. ಜಯನಗರದ ಡಾ. ಎಚ್.ಎನ್. ಕಲಾಕ್ಷೇತ್ರ ಮತ್ತು ಜೆಪಿ ನಗರ ಆರ್‌ವಿ ಡೆಂಟಲ್ ಕಾಲೆಜ್ ರಂಗಮಂದಿರಗಳು ಪೂರ್ಣಪ್ರಮಾಣದ ಸಭಾಂಗಣಗಳು, ಆರ್‌ವಿ ಡೆಂಟಲ್ ಕಾಲೆಜ್ ರಂಗಮಂದಿರ ಯಾವ ಬೃಹತ್ ರಂಗಮಂದಿರಕ್ಕೂ ಕಡಮೆ ಏನಿಲ್ಲ. (ಕುವೆಂಪು ಕಲಾಕ್ಷೇತ್ರದ ನೆನಪು ತರುತ್ತದೆ). ಜೈನ್ ವಿದ್ಯಾಸಂಸ್ಥೆಗಳು ತಮ್ಮದೇ ಆದ ಅನೇಕ ಅನುಕೂಲಗಳನ್ನು ಹೊಂದಿದೆ- ರಂಗಮಂದಿರ, ಕ್ರೀಡಾಂಗಣಗಳು ಇಲ್ಲಿವೆ, ಇದು ಭವಿಷ್ಯದ ಯೋಜನೆಗಳ ಮೂಲಭೂತ ವ್ಯವಸ್ಥೆ.

■■

ಕೊರಿಯರ್ ಸೇವೆ ಫೋನ್ ನಂಬರ್‌ಗಳು

ಬ್ಲೂಡಾರ್ಟ್ ಎಕ್ಸ್‌ಪ್ರೆಸ್ - ೨೫೦೨೧೨೪೪

ಡಿಎಚ್‌ಎಲ್ - ೨೫೫೪೪೪೫೫ / ೧೬೦೦೧೧೧೪೪೫೫ ಉಚಿತ ಕರೆ

ಡಿಟಿಡಿಸಿ - ೨೫೩೫೭೪೯೯

ಪ್ರೊಫೆಷನಲ್ - ೨೩೪೬೬೬೫೩

೧೩. ನಮಸ್ಕಾರ, ಬೆಂಗಳೂರು!

ಬೆಂಗಳೂರು ನಗರ 'ಉದ್ಯಾನಗಳ ನಗರ', 'ವಿಶ್ರಾಂತರ ವಿಶ್ರಾಂತಿಧಾಮ' ಎಂದೆಲ್ಲ ಈಚಿನ ನೂರುವರ್ಷಗಳಿಂದಲೂ ಕರೆಸಿಕೊಂಡಿದೆ. ಕೆಂಪೇಗೌಡನ ಕಾಲದಿಂದಲೂ ಇಲ್ಲಿ ಹಸಿರು ನೆಲೆಸಿದೆ. ಬೆಂಗಳೂರಾಗುವ ಮೊದಲು ದಟ್ಟಕಾಡಾಗಿದ್ದ ಈ ಪ್ರದೇಶ, ಊರೂ ಆಯಿತು, ಜನರೂ ನೆಲೆಸುವಂತಾಯಿತು, ವನ್ಯಮೃಗಗಳೂ, ಕ್ರೂರಜಂತುಗಳೂ ಇರುವಂತಾಯಿತು, ಮೊನ್ನೆ ಮೊನ್ನೆ ನಲವತ್ತು-ಐವತ್ತು ವರ್ಷಗಳ ಹಿಂದೆಯೂ ಬೆಂಗಳೂರಿನ ಮನೆಗಳಲ್ಲಿ ಚೇಳು ಕಾಣಿಸುವುದು, ಹಾವು ಕಾಣಿಸುವುದು ಸರ್ವೆ ಸಾಮಾನ್ಯವಾದ ವಿಷಯವಾಗಿತ್ತು. ಜನಸ್ಸಂಖ್ಯೆ ಬೆಳೆಯುತ್ತ, ಊರು ಬೆಳೆಯುತ್ತ ಹಾವು-ಚೇಳುಗಳೂ ದೂರದೂರ ಹೊರಟುಹೋಗಿವೆ. ಆದರೂ ಬೆಂಗಳೂರು ನಗರದಲ್ಲಿ ಲಕ್ಷಾಂತರ ವಿಷಭರಿತ ಹಾವುಗಳಿವೆ ಎಂದು ಸರ್ಪಪರಿಣತರ ಹೇಳಿಕೆ. ವನ್ಯಪ್ರಾಣಿಗಳನ್ನೆಲ್ಲ ಕಾಡುಪ್ರದೇಶಗಳಲ್ಲಿ ಆವರಣಗೊಳಿಸಲಾಗಿದೆ. ಅದರೂ ಆಗಾಗ ಆನೆಗಳು ನಾಗರಿಕ ಪ್ರದೇಶಗಳಿಗೆ ತಪ್ಪುಹೆಜ್ಜೆಯಿಟ್ಟುಬಿಡುತ್ತವೆ.

ಕೆಂಪೇಗೌಡನ ಕಾಲದಲ್ಲಿ ಎಂಟುಹತ್ತು ಚದುರ ಮೈಲಿಗಳಷ್ಟು ಉದ್ದಗಲ ಮಾತ್ರ ಇದ್ದ ಬೆಂಗಳೂರು ಈಗ ೪೬೭ ವರ್ಷಗಳ ಅನಂತರ ಇದರ ನೂರುಪಟ್ಟು ಬೆಳೆದಿದೆ. ಜನಸಂಖ್ಯೆ, ವಸತಿಸಂಖ್ಯೆ, ಉದ್ಯೋಗ ಸ್ಥಳಗಳ ಸಂಖ್ಯೆ, ಬಡಾವಣೆಗಳು, ಹೋಟೆಲ್, ದೇವಾಲಯಗಳೂ ಅಷ್ಟೇ ಅಳತೆಯಲ್ಲಿ ಸೃಷ್ಟಿಯಾಗಿವೆ. ಹಸಿರು-ಕಾಡು ಪ್ರದೇಶಗಳು ಆಧುನಿಕ ಕಟ್ಟಡಗಳಿಗೆ ದಾರಿ ಮಾಡಿಕೊಟ್ಟಿವೆ. ಆದರೂ ಬೆಂಗಳೂರಿನ 'ಹಸಿರು' ವ್ಯಕ್ತಿತ್ವ ಸಂಪೂರ್ಣವಾಗಿ ಅಳಿಸಿಹೋಗಿಲ್ಲ. ಇನ್ನೂ ಧಾರಾಳವಾಗಿ, ಮರಗಿಡಗಳು, ಹೂತೋಟಗಳು, ತರಕಾರಿ ತೋಟಗಳು ಉಳಿದುಕೊಂಡಿವೆ, ಹೊಸದಾಗಿ ಸೃಷ್ಟಿಯಾಗುತ್ತಿವೆ.

ವಿಧಾನಸೌಧ, ವಿಕಾಸಸೌಧ, ಮಣಿಪಾಲ್ ಸೆಂಚರ್, ಕಾರ್ಪೊರೇಷನ್ ಆಫೀಸ್, ಸರ್ಕಾರಿ ಪಾಲಿಟೆಕ್ನಿಕ್, ಯೂನಿಟಿ ಬಿಲ್ಡಿಂಗ್-ಯುಟಿಲಿಟಿ ಬಿಲ್ಡಿಂಗ್, ಟೌನ್‌ಹಾಲ್, ರವೀಂದ್ರ ಕಲಾಕ್ಷೇತ್ರ, ಕನ್ನಡ ಭವನ, ಡಾ. ಎಚ್.ಎನ್. ಕಲಾಕ್ಷೇತ್ರ,

ಕುವೆಂಪು ಕಲಾಕ್ಷೇತ್ರ, ಚೌಡಯ್ಯ ಕಲಾಕ್ಷೇತ್ರ, ಅಂಬೇಡ್ಕರ್ ಕಲಾಭವನ, ಪಬ್ಲಿಕ್ ಲೈಬ್ರೆರಿ, ಬೆಂಗಳೂರು ಅರಮನೆ, ಗ್ಲಾಸ್‌ಹೌಸ್, ಸೆಂಟ್ರಲ್ ಕಾಲೇಜ್, ಟಾಟಾಇನ್ಸ್‌ಟಿಟ್ಯೂಟ್, ಸರ್ಕಾರಿ ವಸ್ತುಸಂಗ್ರಹಾಲಯಗಳು, ಪ್ಲಾನಟೇರಿಯಂ, ಚಿತ್ರಕಲಾಪರಿಷತ್ತು, ಪಂಚತಾರಾ ಹೋಟಲ್‌ಗಳು, ಜೊತೆಗೆ ಅದ್ಭುತವಾಗಿ-ಆಧುನಿಕವಾಗಿ ನಿರ್ಮಾಣವಾಗಿರುವ ಮಹಾನ್ ತಾಂತ್ರಿಕ ಸಂಸ್ಥೆಗಳು, ಗಗನಚುಂಬಿ ಬಹುಮಹಡಿ ಕಟ್ಟಡಗಳು, ಮೋಟಾರಾಯಲ್ ಆರ್ಕೇಡ್, ಬ್ರಿಗೇಡ್ ರಸ್ತೆ....

ಬೆಂಗಳೂರಿನ ಕಟ್ಟಡ ವೈಭವವನ್ನು ಪಟ್ಟಿ ಮಾಡಿ ಮುಗಿಸುವುದಕ್ಕೆ ಆಗುವುದಿಲ್ಲ. ಈ ಕಟ್ಟಡಗಳ ನಡನಡುವೆಯೇ ಅಂದಿನ-ಇಂದಿನ ದೇವಾಲಯಗಳು, ಚರ್ಚ್‌ಗಳು, ಮಸೀದಿಗಳು, ಗುರುದ್ವಾರಗಳು, ಜೈನ-ಗುಜರಾಥಿ ಮಂದಿರಗಳು, ಬೌದ್ಧವಿಹಾರ ಕೇಂದ್ರಗಳು ತುಂಬಿವೆ.

ಗವಿಗಂಗಾಧರೇಶ್ವರ, ದೊಮ್ಮಲೂರು ಚೊಕ್ಕನಾಥ, ಆನಂದ ಮಿಲನಾದ್ರಿ, ನರಹರಿ ರಾಯನ ಗುಡ್ಡ, ಕುಮಾರಸ್ವಾಮಿ, ರಾಮಕೃಷ್ಣಾಶ್ರಮ, ಬಸವನಗುಡಿ, ದೊಡ್ಡ ಗಣಪತಿ, ಕಾರಂಜಿ ಆಂಜನೇಯ, ತುಪ್ಪದ ಆಂಜನೇಯ, ರಾಗಿಗುಡ್ಡ ಆಂಜನೇಯ, ಗಾಳಿ ಆಂಜನೇಯ, ಬಾಣಸವಾಡಿ ಆಂಜನೇಯ, ಮಹಾಲಕ್ಷ್ಮೀ ಆಂಜನೇಯ, ಅಲಸೂರು ಸೋಮೇಶ್ವರ, ಪೇಟೆರಂಗನಾಥ ಸ್ವಾಮಿ, ಕಾಡುಮಲ್ಲೇಶ್ವರ, ಕೋಟೆ ಆಂಜನೇಯ, ಕೋಟೆ ವೆಂಕಟರಮಣ, ಧರ್ಮರಾಯನ ಗುಡಿ, ಬಳೇಪೇಟೆ ನರಸಿಂಹ ದೇವರು (ಬಳೆಬಾಗಿಲ ನರಸಿಂಹ) ಕಾಶಿ ವಿಶ್ವೇಶ್ವರ, ಗುಜರಾಥಿ ಲಾಲ್‌ಧಾಮ್, ಶಾವಿಗೆ ಮಲ್ಲೇಶ್ವರ, ಬನಶಂಕರಿ, ದೇವಗಿರಿ ಶ್ರೀನಿವಾಸ, ಜಾಲಹಳ್ಳಿ ಐಯ್ಯಪ್ಪ, ದಂಡಿನ ಮಾರಮ್ಮ, ಮೀನಾಕ್ಷಿ ದೇವಾಲಯ ಧರ್ಮರಾಯಸ್ವಾಮಿ (ದಂಡು), ಮಧುರೆಮೀನಾಕ್ಷಿ ದೇವಾಲಯ (ಹುಳಿಮಾವು), ಪುರಂದರವಿಠಲ, ಬೇಡರ ಕಣ್ಣಪ್ಪ, ಸುಬ್ರಹ್ಮಣ್ಯೇಶ್ವರ ರಾಮದೇವರು, ಸತ್ಯನಾರಾಯಣ, ತುಳಸಿ ತೋಟದ ಬೆಣ್ಣೆಕೃಷ್ಣ, ಅಣ್ಣಮ್ಮ, ವಸಂತವಲ್ಲಭರಾಯಸ್ವಾಮಿ, ಸಂಪಂಗಿರಾಮಸ್ವಾಮಿ, ಹೀಗೆಯೇ ಅನೇಕ ಶಂಕರ ಮಠಗಳು, ಬೇಕಾದಷ್ಟು ರಾಘವೇಂದ್ರಸ್ವಾಮಿ ಮಠಗಳು ಇವೆ.

ಕೆಂಪೇಗೌಡನ ಕಾಲದಲ್ಲಿ ಬೇಕಾದಷ್ಟು ದೇವಾಲಯಗಳ ನಿರ್ಮಾಣವಾಯಿತು ಮುಸ್ಲಿಮರು ಆಳಿದಾಗ ಮಸೀದಿಗಳು ನಿರ್ಮಾಣವಾದವು. ಇಂಗ್ಲಿಷರು ಆಳಿದಾಗ ಚರ್ಚ್‌ಗಳಿಗೆ ವಿಸ್ತಾರವಾದ ತಾಣಗಳು ಸಿಕ್ಕಿದವು. ಇಂಗ್ಲಿಷರು ಬೆಂಗಳೂರಿಗೆ ಬಂದಾಗ ಅವರು ತಮಗಾಗಿಯೇ ಪ್ರತ್ಯೇಕವಾಗಿ, ಕೆಂಪೇಗೌಡನ ಮತ್ತು ಮೈಸೂರು ಅರಸರ ಬೆಂಗಳೂರು ಪೇಟೆಗಿಂತಲೂ ಬೇರೆಯದೇ ಆದ, ನಡುವೆ ಕೆಲಗ್ರಾಮಗಳಿಂದ ದೂರವೇ

ಆದ ಪ್ರದೇಶದಲ್ಲಿ, ತಮಗಾಗಿ ಒಂದು ದಂಡು ಪ್ರದೇಶವನ್ನು (ಸೈನಿಕರು ಇರಲು ಜಾಗ) ನಿರ್ಮಿಸಿಕೊಂಡರು. ಈಗಿನ ಅಲಸೂರಿನ ಸುತ್ತಮುತ್ತಲ ಖಾಲಿ ಜಾಗ ಮತ್ತು ಗ್ರಾಮಗಳನ್ನೆಲ್ಲ ತಮ್ಮ ಸೈನ್ಯದ ಬ್ಯಾರಕ್‌ಗಳಾಗಿಸಿದರು. ವಸತಿ ಗೃಹಗಳಾಗಿಸಿದರು, ಮನರಂಜನಾ ತಾಣಗಳಾಗಿಸಿದರು, ತಮ್ಮ ಕೆಲಸಗಾರರಿಗೆ, ಸೇವಕರಿಗೆ ಮನೆಗಳನ್ನು ಕಟ್ಟಿಕೊಟ್ಟರು. ಇದನ್ನು ಕಂಟೋನ್ಮೆಂಟ್ (ಯುದ್ಧವಿಲ್ಲದ ಕಾಲದಲ್ಲಿ ಸೈನಿಕರನ್ನು ಇರಿಸುವ ಸ್ಥಳ) ಎಂದು ಕರೆದರು. ಈ ಇಂಗ್ಲಿಷರು ಕ್ರಿಶ್ಚಿಯನ್ನರಾದ್ದರಿಂದ ತಮಗಾಗಿ ಚರ್ಚ್‌ಗಳನ್ನು ನಿರ್ಮಿಸಿಕೊಂಡರು. ಇವೆಲ್ಲ ದೇವಾಲಯಗಳ ಹಾಗೆ ಇಕ್ಕಟ್ಟಿನ ಜಾಗಗಳಲ್ಲಿ ನಿರ್ಮಾಣವಾಗದೆ, ಹೊಸದಾದ ದಂಡು ಪ್ರದೇಶದಲ್ಲಿ ವಿಶಾಲವಾದ ಆವರಣದ ನಡುವೆ ಶಿಲ್ಪವೈಭವ ಎಂಬಂತೆಯೇ ನಿರ್ಮಾಣವಾದವು.

ಬೆಂಗಳೂರಿನ ಅತಿ ಹಳೆಯ ಚರ್ಚ್, ಸಂತಮೇರಿ ಚರ್ಚ್ ಸ್ಥಾಪನೆ ಆದಮೇಲೆ ಸುಂದರವಾದ, ಸೊಗಸಾದ ಕಟ್ಟಡ ವಿನ್ಯಾಸದ, ವಿಸ್ತಾರವಾದ ಅನೇಕ ಚರ್ಚ್‌ಗಳು ನಿರ್ಮಾಣಗೊಂಡವು. ಹಡ್ಸನ್ ಮೆಮೋರಿಯಲ್ ಚರ್ಚ್ (ಕಾರ್ಪೊರೇಷನ್ ಆಫೀಸ್ ಹತ್ತಿರ), ಸಂತ ಆ್ಯಂಡ್ರೋಸ್ ಚರ್ಚ್ (ರಾಜ್‌ಭವನ್ ರಸ್ತೆ), ಸಂತ ಫ್ರಾನ್ಸಿಸ್ ಝೇವಿಯರ್ ಕೆಥೆಡ್ರಲ್ (ಚರ್ಚ್‌ರಸ್ತೆ), ಸಂತ ಲ್ಯೂಕ್ಸ್ ಚರ್ಚ್ (ರಾಯನ್ ಸರ್ಕಲ್ ಹತ್ತಿರ), ಸಂತ ಪ್ಯಾಟ್ರಿಕ್ಸ್ ಚರ್ಚ್ (ಬ್ರಿಗೇಡ್ ರಸ್ತೆ), ದಿ ಸೇಕ್ರೆಡ್ ಹಾರ್ಟ್ ಚರ್ಚ್ (ರಿಚ್‌ಮಂಡ್ ರಸ್ತೆ), ಸಂತಮಾರ್ಕ್ಸ್ ಕೆಥೆಡ್ರಲ್ (ಸಂತ ಮಾರ್ಕ್ಸ್ ರಸ್ತೆ), ಹೋಲಿ ಟ್ರೆನಿಟಿ ಚರ್ಚ್ (ಮಹಾತ್ಮಗಾಂಧಿ ರಸ್ತೆ), ಇನ್‌ಫೆಂಟ್ ಚರ್ಚ್ (ವಿವೇಕನಗರ), ಸಂತಜಾನ್ ಚರ್ಚ್ (ಕ್ಲೀವ್‌ಲ್ಯಾಂಡ್ ಟೌನ್), ಸಂತ ಜೋಸೆಫ್ ಚರ್ಚ್ (ಬ್ರಿಯಾಂಡ್ ಸರ್ಕಲ್,) -ಎನ್ನುವ ಪ್ರಮುಖ ಪ್ರಾರ್ಥನಾ ಮಂದಿರಗಳಲ್ಲದೆ ಇನ್ನೂ ಬೇಕಾದಷ್ಟು ಚರ್ಚ್‌ಗಳಿವೆ.

ಹಾಗೇಯೇ ಮುಸ್ಲಿಮರ, ಮುಸ್ಲಿಮ್ ಅಧಿಕಾರಿಗಳ ಆಳ್ವಿಕೆಗೆ ಬೆಂಗಳೂರು ಬಂದಾಗ ಮುಸ್ಲಿಮ್ ಪ್ರಜೆಗಳು ಹೆಚ್ಚಾಗಿ, ಅವರಿಗಾಗಿ ಪ್ರಾರ್ಥನಾಮಂದಿರಗಳನ್ನು ಕಟ್ಟುವುದು ಪ್ರಾರಂಭವಾಯಿತು. ಸುಮಾರು ೩೨೦ ವರ್ಷಗಳಿಗೂ ಹಿಂದೆ ಮೊಗಲರು ತಾರಾಮಂಡಲ ಪೇಟೆಯಲ್ಲಿ ನಿರ್ಮಿಸಿದ 'ಜಾಮಿಯಾ ಮಜ್ದಿದ್' (ಈಗ ಜುಮ್ಮಾ ಮಜ್ದಿದ್) ಎನ್ನುತ್ತಾರೆ. ಅನಂತರ, ಅರಳೀಪೇಟೆಯಲ್ಲಿ 'ದರ್ಗಾ-ಎ-ಷರೀಫ್' (ಮಸ್ತಾನ ಸಾಹೇಬರ ಗುಡಿ): ಇಬ್ರಾಹಿಂ ಖಾನ್ ಸಾಹೇಬ್ ಮಜ್ದಿದ್ (ಕುಂಬಾರ ಪೇಟೆ): ಬಡೇಮಕಾನ್ ಮಸೀದಿ (ಅಲ್ ಅಮೀನ್ ಕಾಲೇಜ್ ಹಿಂದೆ, ಸಿದ್ಧಯ್ಯ ರಸ್ತೆ): ಜುಮ್ಮಾ ಮಜ್ದಿದ್ (ಶಿವಾಜಿನಗರ-ಓಲ್ಡ್‌ಪೂರ್‌ಹೌಸ್ ಸ್ಟ್ರೀಟ್); ಮಜ್ದಿದ್-ಎ-ಅಜಂ (ರಸೆಲ್ ಮಾರ್ಕೆಟ್ ಹಿಂದೆ); ಜಾಮಿಯಾ ಮಜ್ದಿದ್ (ಸಿಟಿ ಮಾರ್ಕೆಟ್ ಪ್ರದೇಶ)

-ಇವೆಲ್ಲ ಬೆಂಗಳೂರಿನ ಅತಿ ಹಿಂದಿನ ಮತ್ತು ವಿಸ್ತಾರವಾದ ಮಸೀದಿಗಳು. ಇವಲ್ಲದೆ ಕಾಲಾಕಾಲಕ್ಕೆ ನಿರ್ಮಾಣವಾದ ಅನೇಕ ಮಸೀದಿಗಳು ಬೆಂಗಳೂರಿನಲ್ಲಿವೆ.

ಹೀಗೆ ದೇವಾಲಯಗಳು, ಚರ್ಚ್‌ಗಳು, ಮಸೀದಿಗಳು ಅಲ್ಲದೆ ಬೆಂಗಳೂರಿನಲ್ಲಿ ಬುದ್ಧಧರ್ಮದವರ (ಬುದ್ಧ ವಿಹಾರ, ಫೇಜರ್‌ಟೌನ್ ಮತ್ತು ಬುದ್ಧವಿಹಾರ, ಗಾಂಧಿನಗರ), ಗುಜರಾಥಿಗಳ, ಜೈನರ, ಸಿಂಧಿಗಳ, ಸಿಕ್ಖರ (ಗುರುದ್ವಾರಾ, ಅಲಸೂರು) ಮತ್ತು ಪಾರ್ಸಿಗಳ (ಪಾರ್ಸಿ ದೇವಾಲಯ, ಕ್ವೀನ್ಸ್‌ರಸ್ತೆ) ಪ್ರಾರ್ಥನಾ ಮಂದಿರಗಳೂ ಬೆಂಗಳೂರಿನಲ್ಲಿದೆ.

ಬೆಂಗಳೂರು ನಿರ್ಮಾಣವಾದ ಜೊತೆಜೊತೆಗೇ ದೇವಾಲಯಗಳೂ ನಿರ್ಮಾಣವಾದವು. ನೂರಿನ್ನೂರು ವರ್ಷಗಳ ಹಿಂದಿನವೂ ಕೆಲವು ಇದ್ದವು. ಬೆಂಗಳೂರು ಸ್ಥಾಪನೆಗೊಂಡು ೧೫೦ ವರ್ಷಗಳಾದ ಮೇಲೆ ಮಸೀದಿಗಳು ನಿರ್ಮಾಣವಾದವು. ಮಸೀದಿಗಳು ನಿರ್ಮಾಣವಾಗಿ ಹದಿನೈದು ವರ್ಷಗಳಾದ ಮೇಲೆ ಚರ್ಚ್‌ಗಳು ನಿರ್ಮಾಣವಾದವು. ಇದಾಗಿ ೨೦೦ ವರ್ಷಗಳಾದ ಮೇಲೆ ಇತರೆ ಧರ್ಮಗಳ ಪ್ರಾರ್ಥನಾಮಂದಿರಗಳು ಸ್ಥಾಪನೆಗೊಂಡವು.

■■

ರಸ್ತೆಬದಿಯ ಆಕರ್ಷಣೆ

ರಾತ್ರಿ ಏಳು ಘಂಟೆಯಿಂದಲೇ ಬೆಂಗಳೂರು ವಿಶ್ವೇಶ್ವರಪುರದ ಒಂದು ಭಾಗದ ಎರಡು ಬೀದಿಗಳಲ್ಲಿ ಜನಜಂಗುಳಿ. ಎಲ್ಲರೂ ಕುಟುಂಬದ ಜನ, ಕಾರುಗಳಲ್ಲಿ ಬರುತ್ತಾರೆ. ಏಕೆಂದರೆ ಇಲ್ಲಿ ಬೀದಿಯುದ್ದಕ್ಕೂ ವೈವಿಧ್ಯಮಯ ಬಿಸಿಬಿಸಿ ತಿಂಡಿಗಳ ವ್ಯಾಪಾರ ಪ್ರಾರಂಭವಾಗುತ್ತದೆ. ಮಧ್ಯರಾತ್ರಿಯಾದರೂ ಇಲ್ಲಿ ಜನ ಕರಗುವುದಿಲ್ಲ. ತಿನ್ನುತ್ತಲೇ ಇರುತ್ತಾರೆ. ದಂಡು ಪ್ರದೇಶದಲ್ಲಿ ಓಲ್ಡ್‌ಪೂರ್ ಹೌಸ್ ರಸ್ತೆ ಸುತ್ತಮುತ್ತ ಇಂಥ ತಿಂಡಿತಿನಿಸು ಚಟುವಟಿಕೆಗಳಾಗುತ್ತವೆ.

ಜನಪ್ರಿಯ ನಾನ್-ವೆಜ್ ತಾಣಗಳು

ಬೆಂಗಳೂರಿನ ಅನೇಕ ಬಡಾವಣೆಗಳಲ್ಲಿರುವ ಆಂಧ್ರಶೈಲಿಯ ಹೋಟಲ್‌ಗಳೆಲ್ಲ 'ನಾನ್‌ವೆಜ್' ಊಟ-ತಿಂಡಿಗಳಿಗೆ ಜನಪ್ರಿಯ. ಜೊತೆಗೆ ಅನೇಕ ಕಿರುಹೋಟಲ್‌ಗಳಲ್ಲಿ 'ದೊನ್ನೆ ಬಿರಿಯಾನಿ' ದೊರಕುತ್ತವೆ. ಕೆಲವು ಜನಪ್ರಿಯ ನಾನ್-ವೆಜ್ ತಾಣಗಳಿವೆ: 'ದಿ ಧಾಬಾ' (ಕೋರಮಂಗಲ ಮತ್ತು ಮಾರುತಹಳ್ಳಿ); 'ಮಾರಿಬ್ರೌನ್' (ಬ್ರಿಗೇಡ್ ರಸ್ತೆ); 'ಮಾಲ್ಗುಡಿ' (ಕೃಷ್ಣರಾಜಪುರ ಮಾರುತಹಳ್ಳಿ ನಡುವೆ); 'ದಿ ಓರಿಯಂಟಲ್ ಸ್ಪೈಸ್' (ಇನ್‌ಫೆಂಟ್ರಿ ರಸ್ತೆ); 'ದಿ ಕ್ಯಾನೋಪಿ' (ಯೂಟಿಲಿಟಿ ಕಟ್ಟಡ); 'ಟಿಫಾನೀಸ್' (ರೆಸಿಡೆನ್ಸಿ ರಸ್ತೆ); 'ಬಿರಿಯಾನಿ ಮರ್ಚೆಂಟ್' (ಕ್ಯಾಸಲ್ ಸ್ಟ್ರೀಟ್). ಜೊತೆಗೆ, ಈಚಿನ ಆಕರ್ಷಣೆ: ಸುಪ್ರಸಿದ್ಧ ಚೆಟ್ಟಿನಾಡು ರಸಭರಿತ ಊಟ-ತಿಂಡಿಗಳ 'ಅಣ್ಣಾಚಿ' (ಡಿಫೆನ್ಸ್‌ಕಾಲನಿ, ಇಂದಿರಾನಗರ). ಚೈನೀಸ್ ತಿನಿಸುಗಳಿಗೆ: 'ತೈಪಾನ್' (ವುಡ್‌ಸ್ಟ್ರೀಟ್) ಮತ್ತು 'ಮೈನ್‌ಲ್ಯಾಂಡ್ ಚೈನ' (ಚರ್ಚ್ ಸ್ಟ್ರೀಟ್). ಅಲ್ಲದೆ, 'ನ್ಯೂ ಇಂಪೀರಿಯಲ್' (ಬಿಆರ್‌ವಿ ಹತ್ತಿರ - ಸೆಂಟ್ರಲ್ ರಸ್ತೆ); 'ಮೊಘಲ್' (ಎಲ್ಜಿನ್ ಟಾಕೀಸ್ ಹತ್ತಿರ), 'ಗೌಸಿಯಾ' (ಸಿಟಿಮಾರ್ಕೆಟ್) ಕೆಲವು ಜನಪ್ರಿಯ ತಾಣಗಳು.

೧೪. ಅಧ್ಯಾತ್ಮ, ಬೆಂಗಳೂರು!

ಬೆಂಗಳೂರು ಹಿಂದೆಂದಿಗೂ ಇಲ್ಲದಷ್ಟು ಈಗ ಅಧ್ಯಾತ್ಮದತ್ತ ವಾಲುತ್ತಿದೆ. ಪಂಚತಾರಾ ಸಂಸ್ಕೃತಿಯ ಹಾಗೆ ಬೆಂಗಳೂರಿನ ಮುದುಕರು- ಮಕ್ಕಳು- ಹಿರಿಯರು ಕಿರಿಯರು, ಹೆಂಗಸು ಗಂಡಸು ಎನ್ನುವ ವ್ಯತ್ಯಾಸವಿಲ್ಲದೆ 'ಮನಶ್ಶಾಂತಿ'ಯನ್ನು ಅರಸಲು ಪ್ರಾರಂಭಿಸಿದ್ದಾರೆ. ಬಹುಪಾಲು ಇದು ಹಣದಖರ್ಚಿನ ಬಾಬ್ತೇ ಆಗಿರುವುದರಿಂದ, ಸಮಾಜದ ಮೇಲುಸ್ತರದ ಜನಗಳೇ ಇಂಥ ಚಟುವಟಿಕೆಗಳು, ಸಂಸ್ಥೆಗಳು ಬೃಹತ್ತಾಗಿ ಬೆಳೆದು, ರಾಷ್ಟ್ರೀಯ-ಅಂತಾರಾಷ್ಟ್ರೀಯ ಪ್ರಚಾರ-ಮಹತ್ವ ಪಡೆದುಕೊಳ್ಳುವಂತೆ ಮಾಡಿದ್ದಾರೆ. ಇವೆಲ್ಲ ಈಚಿನ ಹದಿನೈದು ಇಪ್ಪತ್ತು ವರ್ಷಗಳ ಬೆಳವಣಿಗೆ. ಈಚಿನ ವರ್ಷಗಳಲ್ಲಿ ಇದು ವಿಶ್ವರೂಪ ತಾಳಿದೆ. 'ಉಳ್ಳವರ' ಮನಸ್ಸಿಗೆ ಹತ್ತಿರವಾಗಿ 'ಇಲ್ಲದವರ' ಜೇಬಿಗೆ ದೂರವಾಗಿದೆ.

೧೯೫೦-೬೦ರ ದಶಕದವರೆಗೂ ಬೆಂಗಳೂರಿನಲ್ಲಿ ಹರಿಕಥೆ, ಶಿವಕಥೆ, ಪುರಾಣ ಪುಣ್ಯ ಕಥಾಶ್ರವಣ ಮೊದಲಾದವು ಜನಗಳ ಅತಿ ಪ್ರಾಥಮಿಕ -ಉಚಿತ ದೈವಿಕ ಮತ್ತು ಮಾನಸಿಕ ಚಟುವಟಿಕೆಯಾಗಿತ್ತು. ಇವುಗಳನ್ನು ಅತಿಸಾಮಾನ್ಯ ಸ್ತರದಜನಗಳಿಗೂ ತಲುಪಿಸಿ ನೆಮ್ಮದಿಯನ್ನು ಹರಡುತ್ತಿದ್ದ ಬೇಕಾದಷ್ಟು ವಿದ್ವಾಂಸರು ಅತಿ ಜನಪ್ರಿಯರಾಗಿದ್ದರು. ಹರಿಕಥೆ ಪುರಾಣಗಳನ್ನೆ ತಮ್ಮ ಬದುಕಾಗಿಸಿಕೊಂಡು ತೃಪ್ತಿಯಿಂದಲೇ ಜೀವನ ನಡೆಸುತ್ತಿದ್ದರು. ಕೆಲವರಂತೂ ತುಂಬ ಸುಖವಾಗಿದ್ದರು. ಆ ಕಾಲದ ಅತ್ಯಂತ ಜನಪ್ರಿಯ ಹೆಸರುಗಳೆಂದರೆ, ವೇಣುಗೋಪಾಲ ದಾಸರು, ಕರಿಗಿರಿದಾಸರು, ಗೋಪಿನಾಥ ದಾಸರು, ವೆಂಕೋಬದಾಸರು, ಗುರುರಾಜುಲು ನಾಯ್ಡು, ಶ್ರೀನಿವಾಸ ಅಯ್ಯಂಗಾರ್, ಜಯತೀರ್ಥಚಾರ್ ಮತ್ತು ಅನಂತರ ಪ್ರಕಟವಾಗಿ ಹರಿಕಥಾ ಲೋಕವನ್ನೇ ಅಲ್ಲೋಲಕಲ್ಲೋಲ ಮಾಡಿದ ಸೋದರರಾದ, ಅಚ್ಯುತದಾಸರು ಮತ್ತು ಕೇಶವದಾಸರು: ಇವರಿಬ್ಬರ ಹರಿಕಥಾ ಕಾರ್ಯಕ್ರಮ ಸಂಗೀತಮಯವಾಗಿದ್ದು ಸಾವಿರಾರು ಅಸಕ್ತರನ್ನು ಆಕರ್ಷಿಸಿತು. ಕೇಶವದಾಸರ ದೂರದರ್ಶಿತ್ವದಿಂದ ಅದೊಂದು ಸಂಸ್ಥೆಯಾಗಿ ಬೆಳೆಯಿತು- ಹರಿಕಥಾ ತರಬೇತಿ, ಭಜನಾ ಶಿಬಿರಗಳು ಅದವು. ಬೆಂಗಳೂರು ರಾಜಾಜಿನಗರದಲ್ಲಿ 'ದಾಸಾಶ್ರಮ ಇಂಟರ್‌ನೇಶನಲ್' ಸಂಸ್ಥೆ

ಸ್ಥಾಪನೆಗೊಂಡಿತು. ಪಾಂಡುರಂಗನದೇವಾಲಯ ಸಂಕೀರ್ಣ ಜನ್ಮತಾಳಿತು. ಮತ್ತೆ ನೆಲಮಂಗಲದ ಹತ್ತಿರ ಅತಿ ವಿಸ್ತಾರವಾದ ಜಮೀನಿನಲ್ಲಿ (ಬೆಂಗಳೂರಿನಿಂದ ಸುಮಾರು ೨೪ ಕಿಲೋಮಿಟರ್ ದೂರದಲ್ಲಿ) ವಿಶ್ವರೂಪ ವಿಜಯ ವಿಠ್ಠಲ ಸನ್ನಿಧಿ ಇರುವ 'ವಿಶ್ವಶಾಂತಿ ಆಶ್ರಮ'ವನ್ನು ಸ್ಥಾಪಿಸಿದರು. ವಿಜಯ ವಿಠ್ಠಲನ ಶಿಲಾಶಿಲ್ಪ ೩೪ ಅಡಿ ಎತ್ತರವಿದೆ. ಬೆಂಗಳೂರು ಹೊರವಲಯದ ಜನಾಕರ್ಷಕ ತಾಣವಾಗಿದೆ.

ಈಗ ಅಚ್ಚುತದಾಸರೊಬ್ಬರೇ (ಸೋದರ ಸರ್ವೋತ್ತಮ ದಾಸರೊಂದಿಗೆ) ಹರಿಕಥಾಲೋಕದ ಎಲ್ಲ ಜವಾಬ್ದಾರಿಗಳನ್ನು ನಿರ್ವಹಿಸುತ್ತಿದ್ದಾರೆ. ಮೇಲೆ ಕಾಣಿಸಿದ ಯಾವ ಹೆಸರುಗಳೂ ಮತ್ತು ಹರಿಕಥೆ-ಪುರಾಣ ಚಟುವಟಿಕೆಗಳು ಈಗ ಇತಿಹಾಸವಾಗಿದೆ. ಸಾಂಪ್ರದಾಯಿಕ ಶೈಲಿಯ ಹರಿಕಥೆ ಪುರಾಣ ಎರಡೂ ಬಹುಪಾಲು ಅಂತ್ಯಕಂಡಿವೆ.

ಈಗ ಆಧುನಿಕ ಅಗತ್ಯಗಳಿಗೆ ತಕ್ಕಂತೆ ಅಧ್ಯಾತ್ಮದ ಸಾರಸರ್ವಸ್ವವನ್ನು, ಉನ್ನತ ಮಟ್ಟದಲ್ಲಿ, ಆಳ ವಿವರಗಳೊಂದಿಗೆ-ವಿಶ್ಲೇಷಣೆಗಳೊಂದಿಗೆ ಉಪನ್ಯಾಸ ರೂಪದಲ್ಲಿ ಪ್ರಸ್ತುತ ಪಡಿಸುವವರಿಗೆ ಮಾತ್ರ ಅವಕಾಶ, ಜನಬೆಂಬಲ, ಹರಿಕತೆ ಪುರಾಣ ರೀತಿಗಳು ಬೆಂಗಳೂರಿನಲ್ಲಂತೂ ದೊಡ್ಡ ಬದಲಾವಣೆಯನ್ನು ಹೊಂದಿಬಿಟ್ಟಿದೆ. ಆ ಸಾಂಪ್ರದಾಯಿಕ ಕಲೆ ನಶಿಸಿ ಹೋಗುತ್ತಿದೆ (ಹೀಗೆಯೇ ನಶಿಸಿಹೋಗಿ ಇಲ್ಲವಾಗಿಯೇ ಹೋಗಿರುವ ಬೆಂಗಳೂರು ನಗರದ ಇನ್ನೊಂದು ಕಲೆ- ಲಾವಣಿ. ನಗರದ ಜನಪ್ರಿಯ ಜನನಿಬಿಡ ಸ್ಥಳಗಳಲ್ಲಿ ನಿಂತು 'ಫಡು ಫಡಲ್ ಫಡಲ್' ಎಂದು ತಮಟೆ ಸದ್ದು ಮಾಡುತ್ತ ಸಮಕಾಲೀನ ಆಗುಹೋಗುಗಳಿಗೆಲ್ಲ ದನಿಯಾಗುತ್ತಿದ್ದ ಲಾವಣಿಗಾಯನ ಲವಲೇಶವೂ ಈಗ ಉಳಿದಿಲ್ಲ. (ಈಗಿನ ಸುಪ್ರಸಿದ್ಧ ಸಿನಿಮಾ ಸಂಗೀತ ನಿರ್ದೇಶಕ ಹಂಸಲೇಖ ಅವರು ಲಾವಣಿಯೊಂದಿಗೆಯೇ ಬೆಳೆದವರು ಎನ್ನುವುದೊಂದು ವಿಶೇಷ)

ಅಧ್ಯಾತ್ಮ ಉಪನ್ಯಾಸ, ವಿಶ್ಲೇಷಣೆ, ವೇದ ಉಪನಿಷತ್ತು ಪುರಾಣಗಳ ಒಳನೋಟ, ಮಾನಸಿಕ ಸ್ಥಿಮಿತತೆ, ಜೀವನ ನೆಮ್ಮದಿ, ದೈಹಿಕ ಆರೋಗ್ಯ -ಇವೆಲ್ಲವೂ ಈಗಿನ ಬೆಂಗಳೂರಿನ ಹಿರಿಯರ- ಕಿರಿಯರ ಹವ್ಯಾಸವಾಗಿದೆ.

ಬನ್ನಂಜೆ ಗೋವಿಂದಾಚಾರ್ಯ, ಪ್ರಭಂಜನಾಚಾರ್ಯ ಮತ್ತೂರು ಕೃಷ್ಣಮೂರ್ತಿ ಅವರ ಅಧ್ಯಾತ್ಮ ಉಪನ್ಯಾಸ ಸಭೆಗಳು ಸಾವಿರಾರು ಶ್ರೋತೃಗಳನ್ನು ಆಕರ್ಷಿಸುತ್ತವೆ. ಇವರ ಪ್ರತಿಭೆ, ಅಪಾರ ಪಾಂಡಿತ್ಯ, ವೇದ ಉಪನಿಷತ್ತು ಪುರಾಣಗಳ ಆಳವಾದ ಜ್ಞಾನ ಮತ್ತು ನಿರರ್ಗಳ ಮಾತುಗಾರಿಕೆ- ಬೆಂಗಳೂರಿಗರನ್ನೆಲ್ಲ ಸೂಜಿಗಲ್ಲಿನಂತೆ ಸೆಳೆಯುತ್ತವೆ. ಅಧ್ಯಾತ್ಮ ವಿಚಾರಗಳು ಹಿಂದೆಂದೂ ಇಂಥ ಎತ್ತರಗಳನ್ನು ಎಟುಕಿಸಿಕೊಂಡಿರಲಾರದು. ಮತ್ತೂರು ಕೃಷ್ಣಮೂರ್ತಿ ಅವರ ಕುಮಾರವ್ಯಾಸ ಭಾರತ ವಾಚನ ವಿಶ್ಲೇಷಣ ಮತ್ತು ಗಾಯನ ಕಾರ್ಯಕ್ರಮಗಳಂತೂ ಇಡೀ ನಾಡಿನಲ್ಲಿ ಸುಪ್ರಸಿದ್ಧ ಮಾತ್ರವಲ್ಲದೆ ಇವೆಲ್ಲವೂ ಇನ್ನೂರೈವತ್ತು ದನಿಸುರುಳಿಗಳಾಗಿ ಜನರ ಮುಂದಿದೆ.

ಅಧ್ಯಾತ್ಮ ವಿಚಾರಗಳ ಉಪನ್ಯಾಸಗಳು ಹೀಗೆ ಜನರನ್ನು ಆಕರ್ಷಿಸುತ್ತಿರುವ ಮೋಡಿಯನ್ನು ಕಂಡು ಅನೇಕರು ಇಂಥ ಉಪನ್ಯಾಸಗಳನ್ನು ಮಾಡುವ ಕೆಲಸದಲ್ಲಿ ತೊಡಗಿದ್ದಾರೆ. ಅವರಲ್ಲಿ ಕಾಲೆಜ್ ಪ್ರಾಧ್ಯಾಪಕರಾಗಿದ್ದ, ಈಗ ಪೂರ್ಣಾವಧಿ ದಾಸಸಾಹಿತ್ಯ ಉಪನ್ಯಾಸಕರಾಗಿರುವ ಡಾ. ಅರಳುಮಲ್ಲಿಗೆ ಪಾರ್ಥಸಾರಥಿ ಅವರು ಬಹಳ ದೂರ ಸಾಗಿಬಂದಿದ್ದಾರೆ. ಇಡೀ ಪ್ರಪಂಚಕ್ಕೆ ದಾಸಸಾಹಿತ್ಯವನ್ನು ಕೊಂಡೊಯ್ದಿದ್ದಾರೆ. ಸಂಸ್ಕೃತದ ಸಮಸಮನಾಗಿ ಕನ್ನಡದ ಕಂಪನ್ನು ವಿಶ್ವವೆಲ್ಲ ಹರಡಿಸಿದ್ದಾರೆ. ಹಿರಿಯರಾದ ಪ್ರೊ. ಎಸ್.ಕೆ. ರಾಮಚಂದ್ರರಾವ್ ಅವರ ಸರ್ವಮುಖ ಪ್ರತಿಭಾಪೂರ್ಣ ಉಪನ್ಯಾಸಗಳನ್ನು ಕೇಳುವುದೇ ಒಂದು ಸುಖ.

ಇಂಥ ಉಪನ್ಯಾಸಗಳಲ್ಲದೆ, ಅಗತ್ಯವಿದ್ದವರ ಮಾನಸಿಕ ನೆಮ್ಮದಿ ಸ್ಥಿರಗೊಳಿಸಿ, ಅವರ ವ್ಯಕ್ತಿತ್ವ ಬೆಳವಣಿಗೆ, ವೈಯಕ್ತಿಕ ಸಂಬಂಧಗಳ ಸುಧಾರಣೆ ಮೊದಲಾದವುಗಳ ಕಡೆಗೆ ಗಮನಕೊಡಲು ಕೆಲವರು ಸಾಧನಶೀಲ ಸಾಧಕರು ತಮ್ಮ ಜೀವನವನ್ನೇ ಮುಡಿಪಾಗಿರಿಸಿದ್ದಾರೆ. ಇಂಥ ಇಬ್ಬರು ಗೌರವಾನ್ವಿತರು ಬೆಂಗಳೂರು ನಗರದ ಕಿರೀಟಪ್ರಾಯರಾಗಿದ್ದಾರೆ.

'ವ್ಯಕ್ತಿತ್ವ ವಿಕಾಸ ಕೇಂದ್ರ' ಸ್ಥಾಪಿಸಿರುವ ಶ್ರೀಶ್ರೀರವಿಶಂಕರ್ ಮತ್ತು 'ಪ್ರಸನ್ನಟ್ರಸ್ಟ್'ನ ಶ್ರೀ ಸ್ವಾಮಿ ಸುಖಬೋಧಾನಂದ ಅವರು ಲೌಕಿಕದಲ್ಲಿದ್ದೂ ಅಲೌಕಿಕವಾಗಿ ಬದುಕಲು ಬೆಳಕು ತೋರಿಸುವಂಥ ಗುರುಗಳಾಗಿದ್ದಾರೆ. ಮನಸ್ಸನ್ನು ಗೆದ್ದು ದೇಹವನ್ನು ಹಿಡಿತಕ್ಕೆ ತೆಗೆದುಕೊಳ್ಳಲು ಸಾಧ್ಯವಾಗುವಂಥ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾರೆ. ಬೇಕಾದಷ್ಟು ಉಪನ್ಯಾಸಗಳು, ಸ್ಥಾನೀಯ ಕಾರ್ಯಗಾರಗಳು, ಮೊದಲಾದವುಗಳ ಮೂಲಕ ಇವರಿಬ್ಬರೂ ಬದುಕಿನ ಶಿಷ್ಟಾಚಾರ ಸಂಹಿತೆಗಳನ್ನು ಹರಡಿಸಿದ್ದಾರೆ. ಅನೇಕ ಉಪಯುಕ್ತ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಶ್ರೀ ಸ್ವಾಮಿ ಸುಖಬೋಧಾನಂದ ಅವರ ಅಪೂರ್ವ ಕೃತಿ, 'ಮನಸ್ಸೇ, ರಿಲ್ಯಾಕ್ಸ್ ಪ್ಲೀಸ್!' ಅಂತೂ ಜನಚಿಂತನೆಯಲ್ಲಿ ಮಾತ್ರವಲ್ಲ, ಕನ್ನಡ ಪುಸ್ತಕ ಮಾರಾಟದಲ್ಲಿಯು ಇತಿಹಾಸ ಸೃಷ್ಟಿಸಿಬಿಟ್ಟಿತು.

ಇಂಥದೇ ಅನೇಕ ಸಂಸ್ಥೆಗಳು ಸಹಜಮಾರ್ಗ, ಈಶ್ವರೀಯ ವಿದ್ಯಾಲಯ, ಶ್ರೀಸಾಯಿ ಮಂದಿರ, ಚಿನ್ಮಯಾಮಿಷನ್, ರಾಮಕೃಷ್ಣಾಶ್ರಮ, ಥಿಯಸಾಫಿಕಲ್ ಸೊಸೈಟಿ ಮೊದಲಾದ ಸಂಸ್ಥೆಗಳು ಭಾರತೀಯತೆಯನ್ನು ಪಸರಿಸುತ್ತಿವೆ. ಸಾರ್ಥಕ ಕೆಲಸಮಾಡುತ್ತಿವೆ.

ಬೆಂಗಳೂರಿನ ಬಹುಪಾಲು ಮಠಗಳು, ದೇವಾಲಯಗಳಲ್ಲಿ ಪ್ರತಿದಿನ ಏನಾದರೊಂದು ಅಧ್ಯಾತ್ಮ ಉಪನ್ಯಾಸ ನಡೆಯುತ್ತಲೇ ಇರುತ್ತದೆ. ರಾಜಾಜಿನಗರ (ಎನ್-ಬ್ಲಾಕ್) ದಲ್ಲಿರುವ 'ಪುಣ್ಯಧಾಮ' ಇಂಥದೊಂದು ಸಾಂಸ್ಕೃತಿಕ ತಾಣ. ಇಲ್ಲಿ

ವಿಶೇಷ ಉಪನ್ಯಾಸಗಳು ಜರುಗುತ್ತವೆ. ಭಾರತೀಯ ವಿದ್ಯಾಭವನ (ರೇಸ್‌ಕೋರ್ಸ್ ರಸ್ತೆ), ರಾಗಿಗುಡ್ಡ, ಬಸವಭವನ, ಶಿವಬಾಲಯೋಗಿ ಆಶ್ರಮ-ಇಲ್ಲೆಲ್ಲ ಇಂಥ ಅರ್ಥವತ್ತಾದ ಉಪನ್ಯಾಸ ಕಾರ್ಯಕ್ರಮಗಳು ನಡೆಯುತ್ತಲೇ ಇರುತ್ತವೆ.

ಬೆಂಗಳೂರಿನ ಜಯನಗರ ೯ನೆ ಬ್ಲಾಕ್‌ನಲ್ಲಿರುವ ರಾಗಿಗುಡ್ಡ ಪ್ರದೇಶದ ಬಗ್ಗೆ ಎರಡು ಮಾತುಗಳನ್ನು ಹೇಳಲೇಬೇಕು. ನಲವತ್ತು ವರ್ಷಗಳ ಕೆಳಗೆ ಬರೀ ಬರಡು ಬಂಡೆ- ಕಲ್ಲುಗುಡ್ಡಗಳಿದ್ದ ಪ್ರದೇಶ ಬಹುಬೇಗ ಇಡೀ ಬೆಂಗಳೂರನ್ನು ಆಕರ್ಷಿಸಿದ ದೈವಿಕ ತಾಣವಾಗಿಹೋಯಿತು. ಸ್ಥಳೀಯ ಯುವಕರ ಪರಿಶ್ರಮದ ಫಲವನ್ನು ಇಂದಿನ ತಲೆಮಾರು ಸಂತೋಷದಿಂದ ಅನುಭವಿಸುತ್ತಿದೆ. ರಾಗಿಗುಡ್ಡ ಆಂಜನೇಯನ ಸ್ಥಾಪನೆ, ಯಾಗಹೋಮಾದಿಗಳು, ಶಾಲೆ, ಆಶ್ರಮ- ಹೀಗೆ ಬೆಳೆದ ಈ ಪ್ರದೇಶ ಎರಡು ಮೂರು ತಲೆಮಾರುಗಳಿಗೆ ಬದುಕಿನ ಕ್ರಮವನ್ನು ನೇರಗೊಳಿಸಿದೆ. ಜಯನಗರ ೯ನೆ ಬ್ಲಾಕ್ ಎಂದರೇ ರಾಗಿಗುಡ್ಡ ಎನ್ನುವಂತಾಗಿಹೋಗಿದೆ. ಹೀಗೆಯೇ ಜನಪರಿಶ್ರಮದಿಂದ ಅಭಿವೃದ್ಧಿಗೊಂಡ ತಾಣ, ಮಹಾಲಕ್ಷ್ಮಿ ಮಾರುತಿ ದೇವಾಲಯ ಪ್ರದೇಶ, ಬೃಹತ್ ಪ್ರಸನ್ನ ವೀರಾಂಜನೆಯ ಮೂರ್ತಿ, ತಿರುಪತಿ ಶ್ರೀನಿವಾಸ ಆಲಯ ಬೆಂಗಳೂರಿನ ಅತ್ಯಂತ ಜನಪ್ರಿಯ ದೈವಸನ್ನಿಧಿಗಳಲ್ಲಿ ಒಂದು. ಇಲ್ಲಿ ಧ್ಯಾನಮಂದಿರವಿದೆ, ಉಪನ್ಯಾಸ ಮಂದಿರವಿದೆ.

ಮಹಾಲಕ್ಷ್ಮೀ ಬಡಾವಣೆಯ ಹತ್ತಿರವೇ ವೆಸ್ಟ್ ಆಫ್ ಕಾರ್ಡ್ ರೋಡ್‌ನಲ್ಲಿ ಇರುವ ಇಸ್ಕಾನ್- ಶ್ರೀ ಕೃಷ್ಣಬಲರಾಮ ದೇವಾಲಯ- ಕೃಷ್ಣಗಿರಿ ಬೆಂಗಳೂರಿನ ಅಚ್ಚರಿಗಳಲ್ಲಿ ಒಂದು, ಹೆಮ್ಮೆಗಳಲ್ಲಿ ಒಂದು. ತನ್ನ ಸೌಂದರ್ಯ, ದೈವಿಕತೆ, ಆಧುನಿಕತೆಗಳಿಂದ ಯಾವ ಜಾತಿ- ಸ್ಥಾನಮಾನ ಬೇಧಗಳೂ ಇಲ್ಲದಂತೆ ಎಲ್ಲರನ್ನೂ ಕೈಬೀಸಿ ಕರೆದ ಅತ್ಯಂತ ಸುಂದರ ಆಲಯ ಇದು. ಮನುಷ್ಯ ಇಲ್ಲಿ ಹೆಜ್ಜೆಹಾಕಿದಾಗ ಮಾನವ ನಿರ್ಮಿತವಾದ ಈ ದೇವಗಿರಿಯನ್ನು ನೋಡಿ ಬೆರಗಾಗಿಹೋಗುತ್ತಾನೆ. 'ಇಸ್ಕಾನ್' ಪ್ರಕಟಿಸುವ 'ಭಕ್ತಿವೇದಾಂತ ದರ್ಶನ' ಮಾಸಪತ್ರಿಕೆ ಅತ್ಯಂತ ಸುಂದರ, ಶ್ರೀಮಂತ ಮತ್ತು ಉಪಯುಕ್ತ.

ಅಧ್ಯಾತ್ಮದ ತಾಣಗಳ ಹಾಗೆಯೇ ಈಚಿನ ವರ್ಷಗಳಲ್ಲಿ ಯೋಗಾಭ್ಯಾಸವು ಎಲ್ಲರನ್ನೂ ಆಕರ್ಷಿಸಿಬಿಟ್ಟಿದೆ. ಯೋಗಾಭ್ಯಾಸವನ್ನು ತಿಳಿಸಿಕೊಡುವ ಅನೇಕ ಉನ್ನತ ಮಟ್ಟದ ಸಂಸ್ಥೆಗಳು, ಶಿಕ್ಷಕರು ಬೆಂಗಳೂರು ನಗರದಲ್ಲಿ ನೆಲೆಸಿ ಸಾವಿರಾರು ಮಂದಿಗೆ ದೈಹಿಕ ಅಧ್ಯಾತ್ಮವನ್ನು ಧಾರೆಯೆರೆಯುತ್ತಿದ್ದಾರೆ.

ಮೇರು ಸಂಸ್ಥೆಯ ಹಾಗೆ 'ಸ್ವಾಮಿ ವಿವೇಕಾನಂದ ಯೋಗ ಅನುಸಂಧಾನ ಸಂಸ್ಥಾನ, (ವ್ಯಾಸ-Vyasa), ಯೋಗದ ಸರ್ವತೋಮುಖ ಬೆಳವಣಿಗೆಗೆ ಕೆಲಸ ಮಾಡುತ್ತಿದೆ.

ಇಲ್ಲಿ ಯೋಗಕಲಿಕೆ, ಯೋಗಚಿಕಿತ್ಸೆ, ಯೋಗ ವಿಜ್ಞಾನ ವಿದ್ಯಾಭ್ಯಾಸ ವ್ಯಕ್ತಿತ್ವವಿಕಾಸ ಹೀಗೆ ಕೆಲ ದಶಕಗಳಿಂದ ಸಾರ್ಥಕ ಕೆಲಸ ನಡೆಯುತ್ತಿದೆ. (ಫೋನ್ ನಂಬರ್: ೨೬೬೧೨೬೬೯: ಫ್ಯಾಕ್ಸ್-೦೮೦- ೨೬೬೦೮೬೪೫) ಈಗ 'ವಿವೇಕಾನಂದ ಯೋಗ ಮಹಾವಿದ್ಯಾಪೀಠ' ಎಂದಾಗಿ ವಿಶ್ವವಿದ್ಯಾಲಯವೊಂದರ ಸ್ಥಾನ ಮಾನಗಳು ಇದಕ್ಕೆ ದಕ್ಕಿದೆ. ಯೋಗ ವಿದ್ಯಾಪ್ರಯೋಗಗಳು, ವಿಶಾಲವಾದ ಯೋಗ ಯೋಗವಿಜ್ಞಾನದಲ್ಲಿ ಬಿಎಸ್‌ಸಿ, ಎಂಎಸ್ಸಿ ಮತ್ತು ಪಿಎಚ್‌ಡಿ ಪದವಿಗಳಿಗೆ ದಾರಿಮಾಡಿಕೊಡುತ್ತದೆ

ಇದೇರೀತಿ 'ರಾಷ್ಟ್ರೋತ್ತಾನ ಪರಿಷತ್' ಬಹಳ ಹಿಂದಿನಿಂದಲೂ ಸದ್ದುಗದ್ದಲವಿಲ್ಲದೆ ಯೋಗಶಿಕ್ಷಣವನ್ನು. ಯೋಗಚಿಕಿತ್ಸಾ ಕ್ರಮಗಳನ್ನು ಜರುಗಿಸುತ್ತಿದೆ. ಅತ್ಯಾಧುನಿಕ ಯೋಗಶಿಕ್ಷಣ ಇಲ್ಲಿ ಲಭ್ಯವಾಗುತ್ತಿದೆ. ಇಲ್ಲಿ ಕಲಿತ ಅನೇಕ ಶಿಕ್ಷಕರು ಯೋಗವನ್ನು ಎಲ್ಲೆಲ್ಲೂ ಹರಡುತ್ತಿದ್ದಾರೆ (ಫೋನ್ ನಂಬರ್: ೨೬೬೧೨೭೨೨). ಹೀಗೆಯೇ 'ಬೆಂಗಳೂರು ಯೋಗ ಸೆಂಟರ್' ಸಂಸ್ಥೆಯೂ ಅತ್ಯುತ್ತಮವಾಗಿ ಯೋಗ ಪ್ರಸಾರ ಕೆಲಸವನ್ನು ನಿರ್ವಹಿಸುತ್ತಿದೆ. ಯುವತಲೆಮಾರಿನ ಅನೇಕ ಪರಿಣತ ಯೋಗ ಶಿಕ್ಷಕರು ಬೆಂಗಳೂರಿನಲ್ಲಿದ್ದಾರೆ.

ಯೋಗಾದಂತೆಯೇ ಲೆಕ್ಕವಿಲ್ಲದಷ್ಟು ಜಿಮ್ನಾಷಿಯಂಗಳು ಬೆಂಗಳೂರಿನಲ್ಲಿವೆ. ಯೋಗಾ, ಜಿಮ್ನಾಷಿಯಂಗಳಿಗೆ ಇಲ್ಲಿ ಸುಮಾರು ಏಳೆಂಟು ದಶಕಗಳ ಹಿನ್ನೆಲೆಯೇ ಇದ್ದರೆ, ಪೈಲ್ವಾನರನ್ನು- ಜಟ್ಟಿಗಳನ್ನು ತಯಾರಿಸುತ್ತಿದ್ದ ಗರಡಿಮನೆಗಳಿಗೆ ನೂರಾರು ವರ್ಷಗಳ ಹಿನ್ನೆಲೆಯೇ ಇತ್ತು-ಈಗ ಈ ಗರಡಿಮನೆಗಳು ನಶಿಸುತ್ತಿವೆ.

ತಾಂತ್ರಿಕತೆ ಬೆಳೆಯುತ್ತಿರುವಷ್ಟೇ ವೇಗವಾಗಿ ಬೆಳೆಯುತ್ತಿದೆ ಬೆಂಗಳೂರಿನ ಅಧ್ಯಾತ್ಮಲೋಕ!

■■

ಚಿನ್ಮಯ ಮಿಷನ್	-	೨೫೨೮೧೭೫೬
ಇಸ್ಕಾನ್	-	೨೩೩೨೧೯೫೬
ರಾಮಕೃಷ್ಣಾಶ್ರಮ	-	೨೬೬೧೩೧೪೯
ಶಿವಬಾಲಯೋಗಿ ಆಶ್ರಮ	-	೨೬೬೪೮೮೨೨
ಪ್ರಸನ್ನ ಟ್ರಸ್ಟ್	-	೨೩೪೪೪೧೧೨
ವ್ಯಕ್ತಿವಿಕಾಸ ಕೇಂದ್ರ	-	೨೬೬೪೫೧೦೬
ಸತ್ಯಸಾಯಿ ಬೃಂದಾವನ	-	೨೮೪೫೩೪೧೮೮

---

೧೫. ಸಿನಿಮಾ, ಬೆಂಗಳೂರು!

ಬೆಂಗಳೂರು ಕನ್ನಡ ಚಲನಚಿತ್ರ ಉದ್ಯಮದ ಮೂಲಕೇಂದ್ರ. ಡಾ.ರಾಜಕುಮಾರ್, ವಿಷ್ಣುವರ್ಧನ್ ಅಂಬರೀಷ್ ಅವರಿಂದ ಹಿಡಿದು ಈಗಿನ ಜಗ್ಗೇಶ್, ಕಾಶಿನಾಥ್, ಉಪೇಂದ್ರ, ಶಿವರಾಜಕುಮಾರ್, ಪುನೀತ್ ರಾಜಕುಮಾರ್‌ವರೆಗೂ ಎಲ್ಲ ಕಲಾವಿದ ಕಲಾವಿದೆಯರು, ಸುಪ್ರಸಿದ್ಧ ನಿರ್ಮಾಪಕರು, ನಿರ್ದೇಶಕರು, ತಂತ್ರಜ್ಞರು ಸಾಹಸ ಕಲಾವಿದರು, ನೃತ್ಯಕಲಾವಿದರು, ಸಂಗೀತ ನಿರ್ದೇಶಕರು, ವಾದ್ಯ ಸಂಯೋಜಕರು, ವಾದ್ಯಗಾರರು, ಗಾಯಕ, ಗಾಯಕಿಯರು,- ಹೀಗೆ ಎಲ್ಲರೂ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಇವರಲ್ಲಿ ಅನೇಕರು ಕರ್ನಾಟಕದ ಬೇರೆ ಬೇರೆ ಪ್ರದೇಶಗಳಿಂದ ಬಂದಿದ್ದರೂ ಕನ್ನಡ ಚಲನಚಿತ್ರೋದ್ಯಮ ಚಟುವಟಿಕೆ ಮೂಲಕೇಂದ್ರ ಬೆಂಗಳೂರಿನಲ್ಲಿಯೇ ಇರುವುದರಿಂದ, ಅನೇಕ ಸಾಹಸಿಗಳು ಬೆಂಗಳೂರಿಗೆ ಬಂದು ನೆಲೆಸಿದ್ದಾರೆ.

ಕನ್ನಡ ಚಿತ್ರೋದ್ಯಮ ಇಡಿಯಾಗಿ ಬೆಂಗಳೂರಿನಲ್ಲಿಯೇ ನೆಲೆಯೂರಿರುವುದರಿಂದ, ಚಲನಚಿತ್ರ ನಿರ್ಮಾಣಕ್ಕೆ ಪ್ರದರ್ಶನಕ್ಕೆ, ಹಂಚಿಕೆಗೆ ಸಂಬಂಧಿಸಿದ ಎಲ್ಲ ವಿಭಾಗಗಳೂ ಬೆಂಗಳೂರಿನಲ್ಲಿ ಅಭಿವೃದ್ಧಿಗೊಂಡಿವೆ.

ಬೆಂಗಳೂರು ಪೀಣ್ಯದ ಪ್ರಾರಂಭದಲ್ಲಿಯೇ ಅತ್ಯಂತ ಚಟುವಟಿಕೆಯ ಕಂಠೀರವ ಸ್ಟೂಡಿಯೋ ಇದೆ. ಇದು ಸರ್ಕಾರದ ಅಧೀನ ಸಂಸ್ಥೆ. ಇಲ್ಲಿ ಬಹುಪಾಲು ಕನ್ನಡ ಚಿತ್ರಗಳು ತಯಾರಾಗುತ್ತವೆ (ಈಗ ಕರ್ನಾಟಕದಲ್ಲಿ ವರ್ಷಕ್ಕೆ ಸುಮಾರು ೮೦ ಕನ್ನಡ ಚಿತ್ರಗಳು ತಯಾರಾಗುತ್ತಿವೆ.) ವಿಶಾಲವಾದ ಉದ್ಯಾನಗಳು, ರಸ್ತೆಗಳು ಇರುವ ಇಲ್ಲಿ ಎರಡು ದೊಡ್ಡ ಫ್ಲೋರ್‌ಗಳಿವೆ (ಚಿತ್ರೀಕರಣ ಅವರಣಗಳು).

ಬೆಂಗಳೂರಿನಿಂದ ೧೦-೧೨ ಕಿಲೋಮಿಟರ್ ಅಂತರದಲ್ಲಿ ಕೆಂಗೇರಿಯ ಹತ್ತಿರ, ಕನ್ನಡದ ಹಾಸ್ಯನಟ ದಿವಂಗತ ಬಾಲಕೃಷ್ಣ ನಿರ್ಮಿಸಿದ 'ಅಭಿಮಾನ್ ಸ್ಟೂಡಿಯೋ' ಇದೆ. ಇಲ್ಲೂ ಕನ್ನಡ ಚಿತ್ರ ನಿರ್ಮಾಣ ನಡೆಯುತ್ತದೆ.

ಇನ್ನೊಂದು ಸ್ಟೂಡಿಯೋ ಕನ್ನಡ ಚಿತ್ರಗಳ ನಿರ್ಮಾಪಕ, ಕಥಾಲೇಖಕ ದಿವಂಗತ ಅಬ್ಬಾಯಿ ನಾಯುಡು ಕಂಡಕನಸು 'ಅಬ್ಬಾಯಿ ಸ್ಟೂಡಿಯೋ' ಪದ್ಮನಾಭನಗರದಿಂದ

ಸ್ವಲ್ಪ ದೂರದಲ್ಲಿದೆ. ಇಲ್ಲಿಯೂ ಸಿನಿಮಾ ನಿರ್ಮಾಣ ಚಟುವಟಿಕೆ ಭರದಿಂದ ನಡೆಯುತ್ತಿರುತ್ತದೆ.

ನಿರ್ಮಾಪಕ, ಕಲಾವಿದ, ಉದ್ಯಮಪತಿ, ಧೀರ ರಾಕ್‌ಲೈನ್ ವೆಂಕಟೇಶ್ ಅವರೂ 'ರಾಕ್‌ಲೈನ್ ಸ್ಟೂಡಿಯೋ' ಸ್ಥಾಪಿಸಿದ್ದಾರೆ. ವೆಂಕಟೇಶ್ ದೊಡ್ಡ ನಿರ್ಮಾಪಕರಾಗಿರುವುದರಿಂದ, ಅವರ ಚಿತ್ರಗಳು ಮತ್ತು ಇತರರ ಚಿತ್ರಗಳ ಚಿತ್ರೀಕರಣ ಇಲ್ಲಿ ನಡೆಯುತ್ತದೆ.

(ಅತ್ಯಂತ ವೃತ್ತಿಪರತೆಯಲ್ಲಿ ನಡೆಸಲ್ಪಡುತ್ತಿದ್ದ, 'ಚಾಮುಂಡೇಶ್ವರಿ ಸ್ಟುಡಿಯೋ' ಕೆಲವರ್ಷಗಳ ಹಿಂದೆ ಮುಚ್ಚಿಹೊಯಿತು -ಇಲ್ಲಿಂದ ಧ್ವನಿಮುದ್ರಣ ಮಾತ್ರ ಇದೆ.)

ಬೆಂಗಳೂರಿನ ಈ ಸ್ಟೂಡಿಯೋಗಳಲ್ಲಿ ಅಲ್ಲದೆ, ವಿವಿಧ ಬಡಾವಣೆಗಳ ಆಧುನಿಕ ಬಂಗಲೆಗಳಲ್ಲಿ, ಮತ್ತು ನಗರದ ಉದ್ಯಾನವನಗಳು ಕೆರೆಕಟ್ಟೆ ಪರಿಸರಗಳಲ್ಲೂ ಚಿತ್ರೀಕರಣ ನಡೆಯುತ್ತದೆ.

ಚಲನಚಿತ್ರವೊಂದರ ನಿರ್ಮಾಣಕ್ಕೆ ಅಗತ್ಯವಾದ, ಸಂಕಲನ, ಧ್ವನಿ ಮತ್ತು ಸಂಗೀತ ಮುದ್ರಣ, ಚಿತ್ರದ ಪ್ರಾಕ್ಷಾಳನ ಮತ್ತು ಮುದ್ರಣ, (Processing and printing) ಪೋಸ್ಟರ್ ವಿನ್ಯಾಸ ಮತ್ತು ಮುದ್ರಣ, ಹಂಚಿಕೆ, ಪ್ರದರ್ಶನಕ್ಕೆ ಚಲನಚಿತ್ರ ಮಂದಿರಗಳು- ಎಂದು ಪರಿಪೂರ್ಣವಾಗಿ ಮೂಲಭೂತ ಅನುಕೂಲಗಳೆಲ್ಲವೂ ಇಲ್ಲಿದೆ.

ಬೆಂಗಳೂರು ಭಾರತದಲ್ಲಿಯೆ ಚಲನಚಿತ್ರ ಮಂದಿರಗಳಿಗೆ ಪ್ರಸಿದ್ಧಿ, ಅತ್ಯಂತ ಸುಂದರ, ಅಭಿರುಚಿಯ, ಆಧುನಿಕ ತಾಂತ್ರಿಕತೆಯ ಥೆಯೆಟರ್‌ಗಳು ಇಲ್ಲಿವೆ ಎನ್ನುವ ಕೀರ್ತಿ ಇದರದ್ದು. ಈಚಿನ ದಿನಗಳಲ್ಲಂತೂ ಪ್ರಪಂಚಮಟ್ಟದ ಅತ್ಯಾಧುನಿಕ ತಂತ್ರಜ್ಞಾನವನ್ನು ಪ್ರಮುಖ ಥೆಯೆಟರಗಳು ಅಳವಡಿಸಿಕೊಂಡಿವೆ. ಸುಖಾಸೀನ, ಹವಾನಿಯಂತ್ರಣ, ಚೊಕ್ಕಟಪರಿಸರ ಕೆಲ ಮಂದಿರಗಳ ವೈಶಿಷ್ಟ್ಯವಾಗಿದೆ.

ಇತ್ತೀಚಿನ ವರ್ಷಗಳವರೆವಿಗೂ ಹತ್ತಿರ ಹತ್ತಿರ ನೂರಾ ಮೂವತ್ತಕ್ಕೂ ಮಿಕ್ಕಿ ಮಂದಿರಗಳಿದ್ದ ಬೆಂಗಳೂರು ನಗರದಲ್ಲಿ ಈಗ ಸುಮಾರು ೧೧೬ ಚಿತ್ರಮಂದಿರಗಳಿವೆ. ಅನೇಕ ಚಿತ್ರಮಂದಿರಗಳನ್ನು ಒಡೆದುಹಾಕಿ ಕಾಂಪ್ಲೆಕ್ಸ್‌ಗಳನ್ನು ನಿರ್ಮಿಸಲಾಗಿದೆ. ಭವಿಷ್ಯದಲ್ಲಿ 'ಮಲ್ಟಿಪ್ಲೆಕ್ಸ್'ಗಳ ಭರಾಟೆ ಹೆಚ್ಚಾಗಿ ಸಿನಿಮಾ ಮಂದಿರಗಳು ಅರ್ಧಕ್ಕರ್ಧ ಕಡಿಮೆಯಾಗಬಹುದು.

ಕರ್ನಾಟಕದ ಮೊಟ್ಟಮೊದಲ ಮಲ್ಟಿಪ್ಲೆಕ್ಸ್ (ವಿವಿಧ ಸಂಕೀರ್ಣ) ಸಿನಿಮಾ ಸಂಕೀರ್ಣ 'ಇನೊವೇಟಿವ್ ಮಲ್ಟಿಪ್ಲೆಕ್ಸ್' ಈಚೆಗೆ ಬೆಂಗಳೂರಿನಲ್ಲಿ ಪ್ರಾರಂಭವಾಯಿತು.

ಒಂದೇ ಕಟ್ಟಡದಲ್ಲಿ ನಾಲ್ಕೈದು ಸಿನಿಮಾ ತೆರೆಗಳು ಇದ್ದು. ಬೇರೆಬೇರೆ ಶೋಗಳಲ್ಲಿ ಒಂದೇ ಸಲ ಐದಾರು ಚಲನಚಿತ್ರಗಳು ಪ್ರದರ್ಶನಗೊಳ್ಳುತ್ತವೆ. ಇಲ್ಲಿ ಅಂಗಡಿ ಸಮೂಹ, ಕ್ಯಾಂಟೀನ್, ಹೋಟಲ್, ಆಟದ ತಾಣಗಳು, ಮಕ್ಕಳ ಮನರಂಜನೆ. ಹೀಗೆ ಒಂದು ಕುಟುಂಬದ ಮನರಂಜನೆಗೆ ಬೇಕಾದ ಎಲ್ಲವೂ ಒಂದೇ ವಿಶಾಲ ಕಟ್ಟಡ ಸಂಕೀರ್ಣದಲ್ಲಿ ಇರುತ್ತದೆ.

ಬೆಂಗಳೂರಿನ ಈ ಮೊಟ್ಟಮೊದಲ ಹಲತೆರೆ ಹಲಸಿನಿಮಾಗಳ ಅತ್ಯಾಧುನಿಕ ಸಂಕೀರ್ಣ 'ಇನೋವೆಟಿವ್ ಮಲ್ಟಿಪ್ಲೆಕ್ಸ್' ಇರುವುದು ನಗರದ ಮಾರುತಹಳ್ಳಿ (ಎಚ್‌ಎಎಲ್) ಭಾಗದಲ್ಲಿ.

ಅಂದಂದಿನ ಪತ್ರಿಕೆಯಲ್ಲಿ ಇಲ್ಲಿ ನಡೆಯುತ್ತಿರುವ. ಸಿನಿಮಾಗಳ ಬಗ್ಗೆ, ಸಮಯದ ಬಗ್ಗೆ ವಿವರಗಳಿರುತ್ತವೆ. ಫೋನ್ ಮಾಡಿ ಟಿಕೆಟ್ ತರಿಸಿಕೊಳ್ಳಬಹುದು, ಸ್ಥಳ ಕಾಯ್ದಿರಿಸಬಹುದು.

ಬೆಂಗಳೂರಿನ ಹೃದಯ ಪ್ರದೇಶ ಕೆಂಪೇಗೌಡ ರಸ್ತೆ (ಮೆಜಿಸ್ಟಿಕ್) ಸಾಲಾಗಿ ಅನೇಕ ಸಿನಿಮಾ ಮಂದಿರಗಳನ್ನು ಒಳಗೊಂಡಿದೆ.

ಸ್ಟೇಟ್ಸ್, ಮೇನಕಾ, ಸಾಗರ್, ಕೆಂಪೇಗೌಡ, ಸಂತೋಷ್- ನರ್ತಕಿ, ಸಪ್ನಾ-ಕಲ್ಪನಾ, ತ್ರಿಭುವನ್-ಕ್ರೈಲಾಸ್, ಮೆಜೆಸ್ಟಿಕ್, ಅಭಿನಯ್, ಕಪಾಲಿ, ಅಪರ್ಣಾ, ತ್ರಿವೇಣಿ, ಮೂವೀಲ್ಯಾಂಡ್- ಹೀಗೆ ಮೆಜೆಸ್ಟಿಕ್ ಪ್ರದೇಶದಲ್ಲಿ ಹೆಜ್ಜೆಹಾಕಿದರೆ ಕನ್ನಡ, ಹಿಂದಿ, ತೆಲುಗು ಭಾಷೆಗಳ ಸಿನಿಮಾಗಳನ್ನು ಪ್ರದರ್ಶಿಸುವ ಥಿಯೆಟರ್‌ಗಳು ಕಾಣಸಿಗುತ್ತವೆ. ಅಂದಿನ ಪತ್ರಿಕೆಯಲ್ಲಿ ಇಲ್ಲಿ ಒಂದೊಂದರಲ್ಲೂ ನಡೆಯುತ್ತಿರುವ ಚಿತ್ರದ ಬಗ್ಗೆ ವಿವರವಿರುತ್ತದೆ. ನೋಡಿಕೊಂಡು ಹೋಗಬಹುದು.

ಹೀಗೆಯೇ, ಬಹುಪಾಲು ಎಲ್ಲ ಬಡಾವಣೆಗಳಲ್ಲೂ ಒಂದು ಅಥವಾ ಎರಡು ಥಿಯೆಟರ್‌ಗಳು ಇದ್ದೇ ಇರುತ್ತವೆ. ಇಲ್ಲೆಲ್ಲ ಬಹುಪಾಲು ಕನ್ನಡ ಚಿತ್ರಗಳೇ ಪ್ರದರ್ಶನವಾಗುತ್ತಿರುತ್ತವೆ. ಮನೆಹತ್ತಿರದಿಂದಲೇ ನಡೆದುಹೋಗಿ ಹೊಸಹೊಸ ಕನ್ನಡ ಚಿತ್ರಗಳನ್ನು ನೋಡಬಹುದು.

ಬೆಂಗಳೂರಿನಲ್ಲಿ ಕನ್ನಡ ಭಾಷೆಗೆ- ಕನ್ನಡ ಚಿತ್ರಗಳಿಗೇ ಮುಖ್ಯ ಸ್ಥಾನ. ಕನ್ನಡ ಚಿತ್ರಗಳ ಜೊತೆಗೆ, ಹಿಂದಿ, ತಮಿಳು, ತೆಲುಗು, ಇಂಗ್ಲಿಷ್ ಚಿತ್ರಗಳು ಇಲ್ಲಿ ಧಾರಾಳವಾಗಿ ನಡೆಯುತ್ತವೆ. ಈ ಭಾಷೆಗಳ ಚಲನಚಿತ್ರಗಳಿಗೆಂದೇ ಕೆಲವು ಥಿಯೆಟರ್‌ಗಳು ಮೀಸಲಾಗಿವೆ. ಇವೆಲ್ಲ ಬಹುಪಾಲು ಬೆಂಗಳೂರು ಕಂಟೋನ್ಮೆಂಟ್, ಅಂದರೆ

ಶಿವಾಜಿನಗರದ ಸುತ್ತಮುತ್ತಲ ಪ್ರದೇಶಗಳಲ್ಲಿ ಇರುವ ಥೆಯಟರ್‌ಗಳಲ್ಲಿ ಪ್ರದರ್ಶನ ಗೊಳ್ಳುತ್ತವೆ. ಕನ್ನಡ ನಾಡಿನಲ್ಲಿಯೆ ಕನ್ನಡ ಭಾಷೆಯ ದುರಂತವೇನೆಂದರೆ, ಬೆಂಗಳೂರು ನಗರ ಭಾಗದಲ್ಲಿ ಕನ್ನಡ ಭಾಷೆಗೆ- ಚಿತ್ರಗಳಿಗೆ ಪ್ರಾಶಸ್ತಿ ದೊರಕಿದರೆ, ಕಂಟೋನ್ಮೆಂಟ್ ಭಾಗದಲ್ಲಿ ಪ್ರದರ್ಶನವಾಗುವುದೆಲ್ಲ ಇಂಗ್ಲಿಷ್, ತಮಿಳು ಚಿತ್ರಗಳು. ಕೆಲವೊಮ್ಮೆ ಮಲಯಾಳಂ ಚಿತ್ರಗಳೂ ತೆರೆಕಂಡು ಜಯಭೇರಿ ಹೊಡೆಯುವುದುಂಟು. ಬೆಂಗಳೂರು ಎನ್ನುವುದು ನೂರಾರು ವರ್ಷಗಳಿಂದ ವಿಧವಿಧ ದೊರೆಗಳ ಆಳ್ವಿಕೆಗೆ ಒಳಪಟ್ಟದ್ದರಿಂದ ಅವರವರ ಭಾಷೆಗಳಿಗೆ ಆ ಕಾಲದಲ್ಲಿ ಪ್ರಾಧಾನ್ಯ ದೊರಕಿ, ಆಯಾಭಾಷೆಯ ಜನರು ಇಲ್ಲಿ ಬಂದು ಸೇರಿಕೊಂಡುಬಿಟ್ಟರು. ಹೀಗಾಗಿ, ಬೆಂಗಳೂರಿಗೆ ಒಂದು ರೀತಿಯ 'ಕಾಸ್ಮೋಪಾಲಿಟನ್' (ರಾಷ್ಟ್ರೀಯ ಪ್ರತಿಬಂಧಕವಿಲ್ಲದ) ಉದಾರ ನೀತಿಗಳ ವ್ಯಕ್ತಿತ್ವ ತಾನಾಗಿಯೇ ಬೆಳೆದುಕೊಂಡು ಬಂದುಬಿಟ್ಟಿರುವುದರಿಂದ ಈ ವಿವಿಧ ಭಾಷಾ ಭಾರತೀಯತೆಯನ್ನು ತಪ್ಪಿಸಲಾಗಿಲ್ಲ.

ಆದರೆ. ಈ ಸಂದರ್ಭದಲ್ಲಿ ಒಂದು ವಿಷಯವನ್ನು ದಾಖಲಿಸಲೇಬೇಕು: ೬೦ರ ದಶಕದಿಂದ ಬೆಂಗಳೂರಿನಲ್ಲಿ ಪ್ರಾರಂಭವಾದ 'ಕನ್ನಡ ಚಳವಳಿ' ಖಂಡಿತವಾಗಿಯೂ ಬೇರುಮಟ್ಟದಲ್ಲಿ ಪ್ರಭಾವ ಬೀರಿದೆ. ಕನ್ನಡ ಕನ್ನಡತನ ಬೆಂಗಳೂರಿನಲ್ಲಿ ಅಲ್ಲದೆ, ಇಡೀ ಕರ್ನಾಟಕದ ಎಲ್ಲ ಕಡೆಗಳಿಗೂ ಹರಡಿಕೊಂಡಿದೆ. ದುರದೃಷ್ಟವಶಾತ್, ಇಂಗ್ಲಿಷ್ ಶಾಲೆಗಳು ಮೇಲುಗೈ ಸಾಧಿಸಿ, ಹೊಸ ತಲೆಮಾರಿಗೆ ಕನ್ನಡದ ಆಳಪರಿಚಯ ಸಾಧ್ಯವಾಗದೇ ಹೋದದ್ದು ಒಂದು ದೊಡ್ಡ ದುರಂತ. ಆದರೂ ಹೊಸ ತಲೆಮಾರು ಕನ್ನಡ ಭಾಷೆ ಮತ್ತು ಕನ್ನಡನಾಡಿನ ಬಗ್ಗೆ ಅಭಿಮಾನ ಕಳೆದುಕೊಂಡಿಲ್ಲ ಎನ್ನುವುದೇ ಒಂದು ಆಶಾಕಿರಣ.

ಬೆಂಗಳೂರಿನಲ್ಲಿ ಇಂಗ್ಲಿಷ್ ಸಿನಿಮಾಗಳು: ಪ್ಲಾಜಾ (ಮಹಾತ್ಮಾಗಾಂಧಿರಸ್ತೆ); ಇನೋವೇಟಿವ್ ಮಲ್ಟಿಪ್ಲೆಕ್ಸ್, ಶಂಕರ್‌ನಾಗ್ (ಮಹಾತ್ಮಾಗಾಂಧಿರಸ್ತೆ); ವೈಭವ್ (ಸಂಜಯನಗರ); ಶ್ರೀಬಾಲಾಜಿ (ವಿವೇಕನಗರ) ರೆಕ್ಸ್ (ಬ್ರಿಗೇಡ್ ರಸ್ತೆ) ಥೆಯೆಟರ್‌ಗಳಲ್ಲಿ ಸಾಮಾನ್ಯವಾಗಿ ಬಿಡುಗಡೆಯಾಗುತ್ತವೆ. ಚಿಕ್ಕಪೇಟೆಯ ವಿಜಯಲಕ್ಷ್ಮಿ ಟಾಕೀಸ್ ಸಹ ಇಂಗ್ಲಿಷ್ ಚಿತ್ರಗಳನ್ನು ಪ್ರದರ್ಶಿಸುತ್ತಿರುತ್ತದೆ.

ಹಿಂದಿ ಚಿತ್ರಗಳು: ಕೆಂಪೇಗೌಡರಸ್ತೆಯ, ಮೇನಕಾ, ಸಾಗರ್, ಸಂತೋಷ್, ಕೈಲಾಸ್, ತ್ರಿಭುವನ್, ನರ್ತಕಿ, ಸಪ್ನಾ ಥೆಯೆಟರ್‌ಗಳಲ್ಲೂ ಮತ್ತು ನಾಗಾ (ಕಂಟೋನ್ಮೆಂಟ್); ಕಾವೇರಿ (ಪ್ಯಾಲೆಸ್ ರಸ್ತೆ); ಅಪ್ಸರ (ಸಿಟಿಮಾರ್ಕೆಟ್) ಸ್ವಾಗತ್ (ಜಯನಗರ); ಜೊತೆಗೆ ಇನ್ನೋವೇಟಿವ್ ಮಲ್ಟಿಪ್ಲೆಕ್ಸ್‌ನಲ್ಲೂ ತೆರೆಕಾಣುತ್ತದೆ.

ತಮಿಳು ತೆಲುಗು ಚಿತ್ರಗಳು: ಕೆಂಪೇಗೌಡ ರಸ್ತೆಯ 'ಮೆಜೆಸ್ಟಿಕ್'ನಲ್ಲಿ ಮತ್ತು ಹತ್ತಿರದ ಮೂವಿಲ್ಯಾಂಡ್‌ನಲ್ಲಿ ತೆಲುಗು ಚಿತ್ರಗಳು ಯಾವಾಗಲೂ ತೆರೆಕಾಣುತ್ತಿರುತ್ತವೆ. ಉಳಿದಂತೆ, ಕಂಟೋನ್ಮೋಟ್‌ನ ದೇವಿ, ಲಾವಣ್ಯ, ಲಕ್ಷ್ಮೀ, ಅಜಂತಾ; ಶೇಷಾದ್ರಿಪುರದ ನಟರಾಜ್, ಕಿನೋ ಟಾಕೀಸ್‌ಗಳಲ್ಲಿ ಬಹುಪಾಲು ತಮಿಳು ಚಿತ್ರಗಳು. ಮತ್ತೆ, ಬಡಾವಣೆಗಳ ಕೆಲವು ಟಾಕೀಸ್‌ಗಳು ತಮಿಳು- ತೆಲುಗು ಚಿತ್ರಗಳನ್ನು ಪ್ರದರ್ಶಿಸುತ್ತವೆ.

ಹಾಗಾದರೆ ಕನ್ನಡ ಚಿತ್ರಗಳಿಗೆ ಉಳಿದದ್ದೇನು ಎಂದು ಮಾತ್ರ ದಯವಿಟ್ಟು ಕೇಳಬೇಡಿ!

ಅಂದಂದಿನ ದಿನ ಪತ್ರಿಕೆಗಳನ್ನು ಬೆಳಗ್ಗೆ ಗಮನಿಸಿದರೆ ಯಾವ ಥೆಯಟರ್‌ನಲ್ಲಿ ಯಾವ ಸಿನಿಮಾ ನಡೆಯುತ್ತಿದೆ ಎನ್ನುವುದು ತಿಳಿಯುತ್ತದೆ. ನಿಮ್ಮ ಅಭಿರುಚಿಯಂತೆ ನಡೆಯಬಹುದು.

ಕೆಂಪೇಗೌಡ ರಸ್ತೆಯಲ್ಲಿರುವ 'ಅಭಿನಯ್' ಟಾಕೀಸ್‌ನಲ್ಲಿರುವ 'ಎಸ್ಕಲೇಟರ್' (ನಿಂತರೆ ಸಾಕು ಏರು-ಜಾರುಬಂಡೆಯ ಹಾಗೆ ಪ್ರೇಕ್ಷಕರನ್ನು ಮಹಡಿಗೆ ಕೊಂಡೊಯ್ದು, ಅಲ್ಲಿಂದ ಕೆಳಗಿಳಿಸುತ್ತದೆ) ಅನುಭವವನ್ನು ಪಡೆಯಲೇಬೇಕು, ಅಭಿನಯ, ಟಾಕೀಸ್‌ನ ಫಾಯರ್, (Foyer ಮಂದಿರ ಪ್ರವೇಶ ಮುನ್ನಿನ ಆರಾಮ ತಾಣ) ಅತ್ಯಂತ ಅಭಿರುಚಿಯಿಂದ ಯೋಜಿಸಲ್ಪಟ್ಟಿದೆ. ಕಲಾಚಿತ್ರಗಳು ಕಣ್ಮನ ಸೆಳೆಯುತ್ತವೆ.

'ಇನೊವೇಟಿವ್ ಮಲ್ಟಿಪ್ಲೆಕ್ಸ್' ಹೊರವಲಯ ರಿಂಗ್‌ರೋಡನಲ್ಲಿ ಮಾರುತ್‌ಹಳ್ಳಿ ಪ್ರದೇಶದಲ್ಲಿದೆ. ಇದು ಬಹುಶಃ ದಕ್ಷಿಣ ಭಾರತಕ್ಕೇ ಹೊಸದು. ಬೆಂಗಳೂರಿಗೆ ಮೊದಲನೆಯದು. ಇಲ್ಲಿ ಏಕಕಾಲಕ್ಕೆ ಐದಾರು ಚಿತ್ರಗಳು ಪ್ರದರ್ಶಿತವಾಗುತ್ತಿರುತ್ತವೆ. ಊಟ, ತಿಂಡಿ, ನೋಟ, ಆಟ, ಕೊಳ್ಳಾಟ ಎಂದು ಎಲ್ಲ ಜನರಂಜನೆಯ ಆವರಣಗಳೂ ಇಲ್ಲಿವೆ. ಅತ್ಯಾಧುನಿಕ ತಾಂತ್ರಿಕತೆ ಇಲ್ಲಿ ವಿಜೃಂಭಿಸಿದೆ.

ಎಂಟಿಆರ್ ಹೋಟಲ್ ಹತ್ತಿರವಿರುವ 'ಊರ್ವಶಿ', ಸಂಜಯನಗರದ 'ವೈಭವ' ಮತ್ತು ವಿಜಯನಗರ ಬಡಾವಣೆಯಲ್ಲಿರುವ 'ವೀರೇಶ' ಚಿತ್ರಮಂದಿರಗಳಲ್ಲಿ ಸೊಗಸಾದ ಧ್ವನಿವರ್ಧಕ ಬೆಂಬಲವಿದೆ. ಹೊಸ ಅನುಭವವನ್ನೇ ಕೊಡುತ್ತದೆ.

ಮೆಜೆಸ್ಟಿಕ್ ಪ್ರದೇಶಕ್ಕೆ ಸೇರಿಕೊಂಡಂತೆಯೇ ಇರುವ 'ಕಪಾಲಿ' ಚಿತ್ರಮಂದಿರ ಅತ್ಯಂತ ವಿಶಾಲವಾದ- ಅತ್ಯಂತ ದೊಡ್ಡ ಚಿತ್ರಮಂದಿರ. ಇದು ಪ್ರಾರಂಭವಾದಾಗ ಇದಕ್ಕೆ 'ಕಪಾಲಿ-ಸಿನೇರಮಾ' ಎಂದೇ ಹೆಸರಿತ್ತು. ಮೂರು ಪ್ರೊಜೆಕ್ಟರ್‌ಗಳಲ್ಲಿ ಮೂರು

ಭಾಗ ತೆರೆಗಳ ಮೇಲೆ ಚಿತ್ರ ಮೂಡುವ ಅದ್ಭುತ ವಿಶಾಲ ತೆರೆಯ ಅನುಭವ. ಅನಂತರ ಸಿನೇರಮಾ ಚಿತ್ರಗಳು ತಯಾರಾಗದೆ ಈ ವ್ಯವಸ್ಥೆ ಹೊರಟು ಹೋಯಿತು.

ಬೆಂಗಳೂರಿನ ಕಂಟೋನ್ಮೆಂಟ್‌ನಲ್ಲಿರುವ (ಶಿವಾಜಿನಗರ ಬಸ್‌ಸ್ಟಾಂಡ್ ಹತ್ತಿರ) ಬೆಂಗಳೂರಿನ ಮೊಟ್ಟಮೊದಲ ಅತ್ಯಂತ ಹಳೆಯ ಥೆಯೆಟರ್ 'ಎಲ್ಜಿನ್' ಇದೆ. ಬ್ರಿಟಿಷರ ಕಾಲದ ನರ್ತನ-ನಾಟಕ ಶಾಲೆಗಳ ಹಾಗೆ ಅಲಂಕಾರಿಕ ವಿನ್ಯಾಸಗಳೊಂದಿಗೆ ಇದು ನಿರ್ಮಾಣಗೊಂಡಿದೆ- ಇದಕ್ಕೀಗ ಒಂದು ನೂರು ವರ್ಷ ದಾಟಿದೆ. ಈಗಲೂ ಹಿಂದಿ-ಇಂಗ್ಲಿಷ್ ಚಿತ್ರಗಳಿಲ್ಲಿ ಪ್ರದರ್ಶನಗೊಳ್ಳುತ್ತವೆ.

ಬೆಂಗಳೂರು ಮಾಗಡಿ ರಸ್ತೆಯಲ್ಲಿ ರಾಜಾಜಿನಗರ ೭ನೆಬ್ಲಾಕ್ ಕೊನೆಗೊಳ್ಳುವ ರಸ್ತೆಯಂಚಿನಲ್ಲಿ ಇರುವ ಎರಡು ಅಣ್ಣ ತಮ್ಮ ಥೆಯೆಟರ್‌ಗಳು, 'ಪ್ರಸನ್ನ' ಮತ್ತು 'ಪ್ರಮೋದ್'. ಇಲ್ಲಿ ಕನ್ನಡ ಚಿತ್ರಗಳಿಗೇ ಪ್ರಾಶಸ್ತ್ಯ. ದಿನಕ್ಕೆ ಇಲ್ಲಿ ನಾಲ್ಕು ಭಿನ್ನಭಿನ್ನ ಕನ್ನಡ ಚಿತ್ರಗಳು ಪ್ರದರ್ಶನ ಗೊಳ್ಳುತ್ತವೆ. (ಮಾರ್ನಿಂಗ್ ಶೋಗೆ ಒಂದು ಉಳಿದಾಟಗಳಿಗೆ ಇನ್ನೊಂದು ಹೀಗೆ). ರಾಜಾಜಿನಗರ, ವಿಜಯನಗರ, ಮಾಗಡಿರಸ್ತೆ ಭಾಗದ ಜನಗಳ ಅತ್ಯಂತ ಜನಪ್ರಿಯ ಥೆಯೆಟರ್‌ಗಳು ಈ ಅವಳಿಗಳು.

ಬಹುಪಾಲು ಎಲ್ಲ ಬಡಾವಣೆಗಳಲ್ಲೂ ಒಂದೋ ಎರಡೋ ಥೆಯೆಟರ್‌ಗಳಿವೆ. ಆದರೆ, ಬೆಂಗಳೂರಿನ ಮೊದಮೊದಲ ಬಡಾವಣೆ (ಆ ಕಾಲದಲ್ಲಿ ವಿಸ್ತೀರ್ಣ-ಎಕ್ಸ್‌ಟೆನ್ಷನ್ ಎನ್ನುತ್ತಿದ್ದರು) ಬಸವನಗುಡಿಯಲ್ಲಿ ಸಿನಿಮಾ ಮಂದಿರಗಳಿಲ್ಲ. ಭರ್ಜರಿಯಾದೊಂದು ಕ್ಲಬ್ ಇದೆ. ಇದಕ್ಕೀಗ ೭೫ ವರ್ಷಗಳಾಗುತ್ತಿದೆ. ಕನ್ನಡ ಸಾಹಿತ್ಯ ಲೋಕದ ಕೀರ್ತಿವಂತ ಲೇಖಕರಾಗಿದ್ದ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರು ಇದರ ಸ್ಥಾಪಕ ಸದಸ್ಯರಾಗಿದ್ದರು. ಅನೇಕ ಸುಪ್ರಸಿದ್ಧ ಲೇಖಕರು, ಕಲಾವಿದರು, ಕ್ರೀಡಾಪಟುಗಳು, ಸಾಮಾಜಿಕ ಗೌರವಾನ್ವಿತರು ಈ ಕ್ಲಬ್‌ನ ಸದಸ್ಯರು.

ಈಗ ಚಲನಚಿತ್ರ ಮಂದಿರಗಳಲ್ಲಿ ಅಷ್ಟು 'ರಶ್' ಇರುವುದಿಲ್ಲ. ಮಂದಿರಗಳು ತುಂಬಿ ತುಳುಕಾಡುವುದಿಲ್ಲ. ಹೊಸ ಹೊಸ ಚಿತ್ರಗಳು ಬಿಡುಗಡೆಯಾದ ಕೆಲವೇ ದಿನಗಳಲ್ಲಿ 'ಹೌಸ್‌ಫುಲ್' ಆಗದೆ ಸುಲಭವಾಗಿ ಟಿಕೆಟ್ ದೊರಕುತ್ತದೆ. ಈಗ ಫೋನ್ ಮಾಡಿದರೆ ಮನೆಗೇ ಕೇಳಿದಷ್ಟು ಟಿಕೆಟ್‌ಗಳನ್ನು ತಂದುಕೊಡುವ ವ್ಯವಸ್ಥೆ ಇದೆ. ಎಲ್ಲೋ ಎರಡು ಮೂರು ಚಿತ್ರಗಳು ಭರ್ಜರಿಯಾಗಿ ನಡೆಯುತ್ತವೆ.

೧೯೩೪ರಲ್ಲಿ, ಮೊದಲ ಎರಡು ಕನ್ನಡ ಚಿತ್ರಗಳು ತಯಾರಾದವು, ಸತಿ 'ಸುಲೋಚನಾ' ಮತ್ತು 'ಭಕ್ತಧ್ರುವ' ಎನ್ನುವ ಇವೆರಡು ಚಿತ್ರಗಳು ಆ ಕಾಲದಲ್ಲಿ

ನಾಟಕಗಳನ್ನು ಮಾತ್ರ ನೋಡುತ್ತಿದ್ದ ಬೆಂಗಳೂರಿಗರಿಗೆ ಮೈನವಿರೇಳುವ ಅನುಭವವನ್ನೇ ನೀಡಿತು. ಜನ ಧಾರಾಳವಾಗಿ ಇವೆರಡು ಚಿತ್ರಗಳನ್ನು ಪ್ರೋತ್ಸಾಹಿಸಿದರು ೧೯೩೪ರಿಂದ ೨೦೦೪ರ ವರೆಗೆ ೭೦ ವರ್ಷಗಳಲ್ಲಿ ಕನ್ನಡ ಚಿತ್ರಗಳ ಸಂಖ್ಯೆ ಸುಮಾರು ೨೦೦೦. ಒಂದೊಂದು ದಶಕದಲ್ಲೂ ಒಂದೊಂದು ರೀತಿಯ ಅಭಿರುಚಿ, ಸೋಲು-ಗೆಲವು, ಏರು-ಇಳಿತಗಳು ಕಂಡ ಕನ್ನಡ ಚಲನಚಿತ್ರೋದ್ಯಮ ಈಗ ಸೋಲಿನ ದವಡೆಯಲ್ಲಿಯೂ ಕೋಟಿಕೋಟಿ ಖರ್ಚು ಮಾಡುತ್ತಿದೆ, ಕೋಟಿಕೋಟಿಗಳಿಸುತ್ತಿದೆ, ಕೋಟಿ ಕೋಟಿ ಕಳೆದುಕೊಳ್ಳುತ್ತಿದೆ.

ಸಿನಿಮಾ ಮೋಡಿಯೇ ಅಂಥದ್ದು!

■■

ಬೆಂಗಳೂರು ಪ್ರದಕ್ಷಿಣೆ!

ಬೆಂಗಳೂರು ನಗರವನ್ನು ಇಡಿಯಾಗಿ ಪ್ರದಕ್ಷಿಣೆ ಹಾಕಬಲ್ಲ '೧೦೦ ಅಡಿ ರಿಂಗ್‌ರೋಡ್' ಒಂದಿದೆ. ವಾಹನವೊಂದರಲ್ಲಿ ಕುಳಿತು ಸುಮ್ಮನೆ ಈ ವರ್ತುಲ ರಸ್ತೆಯಲ್ಲಿ ಮುಂದುವರಿದರೆ ಸಾಕು, ಬೆಂಗಳೂರಿನ ಅಷ್ಟದಿಕ್ಕುಗಳನ್ನೂ ಮುಟ್ಟಿದಂತಾಗುತ್ತದೆ. ಬನಶಂಕರಿ ಹಂತಗಳು, ಪದ್ಮನಾಭನಗರ, ಜೆಪಿನಗರ, ಬಿಟಿಎಂ ಲೇಔಟ್‌ನಿಂದ ನೇರವಾಗಿ ಕೃಷ್ಣರಾಜಪುರ, ಅಲ್ಲಿಂದ ಮುನೇಶ್ವರನಗರ, ಕಮ್ಮನಹಳ್ಳಿ, ಹೆಬ್ಬಾಳ, ಪೀಣ್ಯ, ಜಯಚಾಮರಾಜೇಂದ್ರನಗರ, ನಾಗರಭಾವಿ, ಬೆಂಗಳೂರು ವಿಶ್ವವಿದ್ಯಾಲಯ, ಮೈಸೂರು ರಸ್ತೆ -ಎಂದು ಮತ್ತೆ ಬನಶಂಕರಿಗೆ ಸೇರುತ್ತದೆ. ಈ ಹೊರವಲಯ ವರ್ತುಲ ರಸ್ತೆಯಿಂದ ಅಲ್ಲಲ್ಲಿ ಒಳವರ್ತುಲ ರಸ್ತೆಗಳಿವೆ. ಅವು ಅನೇಕ ಮುಖ್ಯ ಬಡಾವಣೆಗಳನ್ನು ಮುಟ್ಟುತ್ತವೆ.

ಈ ಹೊರ-ಒಳ ವರ್ತುಲ ರಸ್ತೆಯಲ್ಲಿ ಓಡಾಡಲು ಎರಡು ಬಸ್ ಸಂಖ್ಯೆಗಳಿವೆ: ೫೦೦ ಮತ್ತು ೫೦೧. ಈ ಬಸ್‌ಗಳು ಬೇಕಾದಹಾಗೆ ಓಡಾಡುತ್ತವೆ. ೨೫ ರೂಪಾಯಿ ಇಡೀ ದಿನದ ಟಿಕೆಟ್ ಕೊಂಡುಬಿಟ್ಟರೆ ಈ ಸುತ್ತು ಪ್ರಯಾಣ ಮಾಡಬಹುದು.

ಈ ಬಸ್‌ಗಳು ಬನಶಂಕರಿ ಬಸ್‌ಸ್ಟ್ಯಾಂಡ್‌ನಿಂದ ಪ್ರಾರಂಭವಾಗಿ ಕೊನೆಗೆ ಅದೇ ಬಸ್‌ಸ್ಟ್ಯಾಂಡ್ ಸೇರುತ್ತದೆ. ದಾರಿಯಲ್ಲಿ ನಿಮಗೆ ಬೆಂಗಳೂರು ದರ್ಶನವಾಗುತ್ತದೆ. ಪ್ರತಿ ೨೦ ನಿಮಿಷಕ್ಕೊಂದು ಬಸ್ ಇದೆ.

ಇದು ಖಂಡಿತ ಅಪರೂಪದ ಅನುಭವ!

೧೬. ಅಕ್ಷರ, ಬೆಂಗಳೂರು!

ಭಾರತವನ್ನು ಮುದ್ರಣಯಂತ್ರ ಪ್ರವೇಶಿಸಿದಕೂಡಲೇ, ಇಡೀ ದೇಶದಲ್ಲಿ ಬರೆಯುವ, ಮುದ್ರಿಸುವ ಸಂಭ್ರಮ ಪ್ರಾರಂಭವಾಯಿತು. ವಿದೇಶಿಯರಿಂದಲೇ ಇಂಗ್ಲಿಷ್ ಪತ್ರಿಕೆ ಪ್ರಾರಂಭವಾಯಿತು. ಪತ್ರಿಕೆ ಪ್ರಾರಂಭಿಸುವ ಆಸೆ-ಉತ್ಸಾಹ ಭಾರತೀಯರಲ್ಲಿ ಕಂಡಿತು.

ಪ್ರಪಂಚದ ಮೊಟ್ಟಮೊದಲ ವೃತ್ತಪತ್ರಿಕೆ, ಇಂಗ್ಲಿಷ್‌ನಲ್ಲಿ 'ಪರ್‌ಫೆಕ್ಟ್ ಡಯರ್ನಲ್' ೧೬೬೦ರಲ್ಲಿ ಪ್ರಕಟವಾಯಿತು. ಭಾರತಕ್ಕೆ ಬಹುಬೇಗ ಮುದ್ರಣ ಯಂತ್ರ ಬಂದಿತ್ತು. ಕ್ರೈಸ್ತಮತದ ಪಾದ್ರಿಗಳು ತಮ್ಮ ಮತದ ಪ್ರಚಾರಕ್ಕಾಗಿ ವಿವಿಧ ಪುಸ್ತಿಕೆಗಳನ್ನೂ-ಪುಸ್ತಕಗಳನ್ನೂ ಪ್ರಕಟಿಸಲು ಪ್ರಾರಂಭಿಸಿದ್ದರು. ಅವರು ಭಾರತೀಯ ಭಾಷೆಗಳನ್ನೂ ಚೆನ್ನಾಗಿ ಕಲಿತು ಆ ಭಾಷೆಗಳಲ್ಲಿ ಬರೆಯತೊಡಗಿದರು. ನಿಘಂಟುಗಳನ್ನು ರಚಿಸಿದರು. ಕೆಲ ಪುಸ್ತಕಗಳನ್ನೂ ಪ್ರಕಟಿಸಿದರು. ಕನ್ನಡದಲ್ಲಿ ಇಂಥ ಕೆಲಸ ಕೆಲವು ಪಾದ್ರಿಗಳಿಂದ ನಡೆಯತೊಡಗಿತು.

೨೯ ಜನವರಿ ೧೭೮೦ರಿಂದ ಭಾರತದ ಮೊಟ್ಟಮೊದಲ ವೃತ್ತಪತ್ರಿಕೆ 'ದಿ ಬೆಂಗಾಲ್ ಗೆಜೆಟ್' ಇಂಗ್ಲಿಷ್‌ನಲ್ಲಿ ಪ್ರಾರಂಭವಾಯಿತು. ಮುಂದೆ ಭಾರತೀಯ ಪತ್ರಿಕೋದ್ಯಮದ ದಾರಿದೀಪವಾಯಿತು. ಕರ್ನಾಟಕದಲ್ಲಿ ೧೮೨೬ರ ವೇಳೆಗೆ ಬಳ್ಳಾರಿಯಲ್ಲಿ ಮೊಟ್ಟಮೊದಲ ಮುದ್ರಣಾಲಯ ಸ್ಥಾಪನೆಗೊಂಡಿತು. ಇದನ್ನು ಸ್ಥಾಪಿಸಿದವರು ಜರ್ಮನ್ ಪಾದ್ರಿಗಳು. ಇವರು ಕ್ರೈಸ್ತಧರ್ಮ ಪ್ರಚಾರಕ್ಕಾಗಿ ಕನ್ನಡ ಕಲಿತು, ಕನ್ನಡದಲ್ಲಿ ಬರೆದು, ಪುಸ್ತಕ ರೂಪದಲ್ಲಿ ಮುದ್ರಿಸಿದರು. ಇವರೇ ಮಂಗಳೂರಿನಲ್ಲಿ ಕನ್ನಡದ ಮೊಟ್ಟಮೊದಲ ವೃತ್ತಪತ್ರಿಕೆ 'ಮಂಗಳೂರ್ ಸಮಾಚಾರ್'ವನ್ನು ೧-೭-೧೯೪೩ರಿಂದ ಪ್ರಾರಂಭಿಸಿದರು. ವಿದೇಶಿಯರು ಒಂದುನೂರಅರವತ್ತು ವರ್ಷಗಳಿಗೂ ಹಿಂದೆ ಬೀಜನೆಟ್ಟ ಕನ್ನಡ ಪತ್ರಿಕೋದ್ಯಮ ಇಂದು ಬೃಹತ್ ವೃಕ್ಷವಾಗಿ ಬೆಳೆದಿದೆ. ಈ ಅವಧಿಯಲ್ಲಿ ಸಾವಿರಾರು ಪ್ರಯತ್ನಗಳು ಆಗಿಹೋಗಿವೆ. ಪ್ರತಿಯೊಂದು ಜಿಲ್ಲೆ, ತಾಲ್ಲೂಕು ಮಟ್ಟದಲ್ಲೂ ಪತ್ರಿಕೋದ್ಯಮದಲ್ಲಿ ದುಡಿಯುವ ಆಕರ್ಷಣೆ ಅನೇಕರನ್ನು ಸೆಳೆದಿದೆ. ಈ ಒಂದೂವರೆ ಶತಮಾನದ ಅವಧಿಯಲ್ಲಿ ಕರ್ನಾಟಕ ಪತ್ರಿಕೋದ್ಯಮ ಅದ್ಭುತ ಸಾಧನಶೀಲರನ್ನು ಕಂಡಿದೆ.

ಈಗ ಪತ್ರಿಕೋದ್ಯಮ ತಾಂತ್ರಿಕವಾಗಿ ವಿಶ್ವರೂಪ ತಾಳಿದೆ. ಈ ಬೆಳವಣಿಗೆ ಕನ್ನಡ ಪತ್ರಿಕೋದ್ಯಮಕ್ಕೂ ಪ್ರವೇಶಿಸಿದೆ. ಕನ್ನಡದಲ್ಲಿ ಅತ್ಯುತ್ತಮವಾದ ಪತ್ರಿಕೆಗಳು ಪ್ರಕಟವಾಗುತ್ತಿವೆ.

'ಪ್ರಜಾವಾಣಿ', 'ಕನ್ನಡ ಪ್ರಭ', 'ವಿಜಯ ಕರ್ನಾಟಕ', 'ಉದಯವಾಣಿ', 'ಸಂಯುಕ್ತ ಕರ್ನಾಟಕ', -ಕರ್ನಾಟಕದ ಪ್ರಮುಖ ಕನ್ನಡ ದಿನಪತ್ರಿಕೆಗಳು 'ಸಂಯುಕ್ತ ಕರ್ನಾಟಕ'ವಂತೂ ಭಾರತೀಯ ಪತ್ರಿಕೋದ್ಯಮದ ಜೊತೆಜೊತೆಗೇ ಬೆಳೆದಿದೆ. 'ಪ್ರಜಾವಾಣಿ' ಅರ್ಧಶತಮಾನ ಸೇವೆ ದಾಟಿದೆ. 'ಕನ್ನಡಪ್ರಭ' 'ಉದಯವಾಣಿ' ಪತ್ರಿಕೆಗಳು ನಾಲ್ಕು ದಶಕಗಳ ಆಸುಪಾಸಿನಲ್ಲಿವೆ. 'ವಿಜಯಕರ್ನಾಟಕ' ಮೊನ್ನೆ ಮೊನ್ನೆ ಪ್ರಾರಂಭವಾದದ್ದು ಮನೆಮನೆಗಳನ್ನೂ ರಾರಾಜಿಸುತ್ತಿದೆ. ಈ ದಿನಪತ್ರಿಕೆಗಳ ಹಾಗೆಯೇ, 'ಸುಧಾ', 'ತರಂಗ', 'ಕರ್ಮವೀರ', ವಾರಪತ್ರಿಕೆಗಳು ಅತ್ಯಂತ ಜನಪ್ರಿಯ ವಾರಪತ್ರಿಕೆಗಳು. 'ಕರ್ಮವೀರ' ಅತ್ಯಂತ ಹಳೆಯ ಪತ್ರಿಕೆ. ಅದಕ್ಕೆ ಎಂಟುದಶಕಗಳ ಇತಿಹಾಸವಿದೆ. 'ಸುಧಾ' ಅರವತ್ತರ ದಶಕದ ಪತ್ರಿಕೆ- ನಲವತ್ತುವರ್ಷ ದಾಟುತ್ತಿದೆ. 'ತರಂಗ' ೧೯೮೩ರಲ್ಲಿ ಪ್ರಾರಂಭವಾಗಿ ಬಹುಬೇಗ ಜನಪ್ರಿಯತೆ ಸಂಪಾದಿಸಿತು.

ವಾರಪತ್ರಿಕೆಗಳ ಹಾಗೆಯೇ ಮಾಸಪತ್ರಿಕೆಗಳಾದ, 'ಕಸ್ತೂರಿ', 'ಉತ್ಥಾನ', 'ಮಲ್ಲಿಗೆ', 'ಮಯೂರ', 'ತುಷಾರ', -ಅತ್ಯಂತ ಜನಪ್ರಿಯ ಪತ್ರಿಕೆಗಳು. ವಿಷಯ ವೈವಿಧ್ಯಗಳ ಉತ್ತಮ ಪ್ರಯತ್ನಗಳಾಗಿ ಉಳಿದುಕೊಂಡಿವೆ.

ಬೆಂಗಳೂರಿನಲ್ಲಿ ಇವೆಲ್ಲ ದಿನ, ವಾರ, ಮಾಸಪತ್ರಿಕೆಗಳು ನಿಮ್ಮ ಜ್ಞಾನಭಂಡಾರವನ್ನು, ಸುದ್ದಿ-ಸಮಾಚಾರಗಳ ಕಾತರತೆಯನ್ನು ತುಂಬಿಸುತ್ತವೆ.

ಈಗ ಎಲ್ಲ ಕನ್ನಡ ದಿನಪತ್ರಿಕೆಗಳೂ ಪ್ರತಿದಿನವೂ ಒಂದೊಂದು ವಿಶೇಷ ಪುರವಣಿಯನ್ನು ನೀಡುತ್ತಿವೆ. ಎಲ್ಲವೂ ಈಗ ವರ್ಣಮಯ. ಪ್ರತಿಶುಕ್ರವಾರ ಬರುವ ಸಿನಿಮಾ ಪುರವಣಿ ಅತ್ಯಂತ ಜನಪ್ರಿಯ, ಓದಲು ಸ್ವಾರಸ್ಯ, ನೋಡಲು ವರ್ಣಮಯ. ಇದರಲ್ಲಿ ಕನ್ನಡ ಸಿನಿಮಾ ಪ್ರಪಂಚದ ಎಲ್ಲ ಸುದ್ದಿ ಸ್ವಾರಸ್ಯಗಳೂ ಇರುತ್ತವೆ. ರಂಗುರಂಗಿನ ನಕ್ಷತ್ರಲೋಕದ ಮಿನುಗುಗಳೆಲ್ಲವೂ ಅಲ್ಲಿ ಕಾಣಿಸುತ್ತವೆ. ಬೆಂಗಳೂರಿನ ಸಿನಿಮಾ ಮಂದಿರಗಳಲ್ಲಿ ಯಾವ ಯಾವ ಸಿನಿಮಾಗಳು ನಡೆಯುತ್ತಿವೆ ಎಂಬುದನ್ನು ಈ ಪುರವಣಿಗಳು ಕಾಣಿಸುತ್ತವೆ.

'ಸಿನಿಮಾ ಪುರವಣಿ'ಗಳಿಗೆ ಸಿನಿಮಾ ಜಾಹಿರಾತು ಕೊಡಲು ಪ್ರಚಾರಕರಿರುತ್ತಾರೆ. ಹಾಗೆಯೇ, ಸಿನಿಮಾ ತಯಾರಿಕೆಯ ವಿವಿಧ ಹಂತಗಳ ಕುರಿತು ಸ್ವಾರಸ್ಯವಾದ ರಸಭರಿತ ಸುದ್ದಿಗಳನ್ನು ಪತ್ರಿಕೆಗಳಿಗೆ 'ಪಿಆರ್‌ಓ' (ಪಬ್ಲಿಕ್ ರಿಲೇಷನ್ ಆಫೀಸರ್-ಸಾರ್ವಜನಿಕ ಸಂಪರ್ಕ ಅಧಿಕಾರಿ) ಎಂದು ಕರೆಯಲಾಗುವ ಉತ್ಸಾಹಿಗಳಿರುತ್ತಾರೆ. ಇವರನ್ನು ಸಿನಿಮಾ ಸುದ್ದಿ ಪ್ರಸಾರಕ್ಕಾಗಿಯೇ ಆಯಾಚಿತ್ರಗಳ ನಿರ್ಮಾಪಕರು ನೇಮಿಸಿಕೊಳ್ಳುತ್ತಾರೆ. ಇವರು ಪ್ರತಿದಿವಸ ಚಿತ್ರೀಕರಣ ತಾಣಗಳಿಗೆ ಭೇಟಿನೀಡಿ ಅಲ್ಲಿ ನಡೆದ ಚಿತ್ರೀಕರಣ ಸಂಬಂಧಿತ

ವಿಷಯಗಳನ್ನು ಶೇಖರಿಸಿ, ಬರೆದು ಶುಕ್ರವಾರದ ಪುರವಣಿಗೆಗಳಿಗೆ ಕೊಡುತ್ತಾರೆ. ವರ್ಣರಂಜಿತ ಫೋಟೋಗಳನ್ನು ಸರಬರಾಜು ಮಾಡುತ್ತಾರೆ. ಮತ್ತು, ಆಗಾಗ ಸಿನಿಮಾ ಪತ್ರಕರ್ತರನ್ನು ಚಿತ್ರೀಕರಣ ತಾಣಗಳಿಗೆ ಕರೆದೊಯ್ದು ಆ ಸಿನಿಮಾ ಬಗ್ಗೆ ಪತ್ರಕರ್ತರಿಂದ ಬರೆಸುತ್ತಾರೆ. ಸ್ವಾರಸ್ಯ ಓದು ನೀಡುವ ಪತ್ರಿಕೆಗಳು ಜನಪ್ರಿಯತೆಯನ್ನೂ ಪ್ರಸಾರವನ್ನೂ ಹೆಚ್ಚಿಸಿಕೊಳ್ಳುತ್ತವೆ.

ಎರಡು-ಮೂರು ರೂಪಾಯಿಗಳಿಗೆ ಓದುಗರ ಮುಂದೆ ಇಡೀ ವಿಶ್ವವನ್ನೇ ತಂದು ನಿಲ್ಲಿಸುವ, ವೈವಿಧ್ಯಲೋಕವನ್ನೇ ಸೃಷ್ಟಿಮಾಡುವ ಪತ್ರಿಕೆಗಳ ಹಿಂದೆ ಕೋಟ್ಯಂತರ ರೂಪಾಯಿ ವ್ಯವಹಾರ ನಡೆದಿರುತ್ತದೆ. ಅಸಂಖ್ಯಾತ ಪತ್ರಕರ್ತರ, ಚಿತ್ರಕಾರರ, ವಿನ್ಯಾಸಕಾರರ, ಮುದ್ರಣಕಾರರ, ವಿತರಕರ, ಮಾರಾಟಗಾರರ ಸೇವೆ ನಡೆದಿರುತ್ತದೆ. ಪತ್ರಿಕೋದ್ಯಮ ಈಗೊಂದು ದೊಡ್ಡ ಸಂಬಳದ ವೃತ್ತಿಯೂ ಆಗಿದೆ. ಉನ್ನತ ಶಿಕ್ಷಣ ಪಡೆದವರಿಗೆ ಒಂದು ಬೆಳವಣಿಗೆಯ ತಾಣವೂ ಆಗಿದೆ.

ಪತ್ರಿಕೋದ್ಯಮದ ಹಾಗೆಯೇ ಕನ್ನಡ ಪುಸ್ತಕೋದ್ಯಮವೂ ಬೆಂಗಳೂರಿನಲ್ಲಿ ನೆಲೆಯೂರಿದೆ. ಧಾರವಾಡ, ಮಂಗಳೂರು, ಮೈಸೂರುಗಳಲ್ಲಿ ಉತ್ತಮ ಅಭಿರುಚಿಯ ಪ್ರಕಾಶಕರಿದ್ದಾರೆ. ಮುದ್ರಣಾಲಯಗಳಿವೆ. ಬೆಂಗಳೂರಿನಲ್ಲಿ ನೂರಾರು ಪ್ರಕಾಶಕರಿದ್ದಾರೆ. ಪುಸ್ತಕೋದ್ಯಮ ದೊಡ್ಡದಾಗಿ ಬೆಳೆದಿದೆ. ಬೆಂಗಳೂರಿನಲ್ಲಿಯೇ ಹೆಸರಾಂತ ಲೇಖಕರೆಲ್ಲರೂ ವಾಸಿಸುತ್ತಿರುವುದೂ ಇದಕ್ಕೊಂದು ಕಾರಣವಾಗಿರಬಹುದು.

ಕಥೆ, ಕಾದಂಬರಿ, ನಾಟಕ, ಹಾಸ್ಯ, ವ್ಯಕ್ತಿತ್ವ ವಿಕಸನ, ಕವನ -ಹೀಗೆ ವೈವಿಧ್ಯಮಯವಾದ ಪುಸ್ತಕಗಳ ರಾಶಿಯೇ ಈಗ ಮಾರುಕಟ್ಟೆಯಲ್ಲಿದೆ. ಮುದ್ರಣ ತಾಂತ್ರಿಕತೆ ಬೆಳೆದು ಪತ್ರಿಕೋದ್ಯಮ ಆಧುನಿಕವಾದಂತೆ, ಪುಸ್ತಕೋದ್ಯಮವೂ ಅತ್ಯಂತ ಸುಂದರವಾಗಿ ಅತ್ಯುತ್ತಮ ವಿನ್ಯಾಸದೊಂದಿಗೆ, ಕಂಪ್ಯೂಟರ್ ನೆರವಿನ ಮುಖಚಿತ್ರದೊಂದಿಗೆ ಪ್ರಕಟಣೆ ಜಾರಿಯಲ್ಲಿಟ್ಟಿದೆ. ಪ್ರತಿವರ್ಷವೂ ಲಕ್ಷಾಂತರ ರೂಪಾಯಿ ಮೌಲ್ಯದ ಕನ್ನಡ ಪುಸ್ತಕಗಳು ಪ್ರಕಟವಾಗುತ್ತಿವೆ. ಈಚಿನ ದಿನಗಳ ವಿಶೇಷವೆಂದರೆ, ವ್ಯಕ್ತಿತ್ವ ವಿಕಸನಕ್ಕೆ ಸಂಬಂಧಿಸಿದ ಪುಸ್ತಕಗಳು ಮತ್ತು ಮಕ್ಕಳ ಪುಸ್ತಕಗಳು ಬಹಳ ಬೇಡಿಕೆಯಲ್ಲಿವೆ.

ಬೆಂಗಳೂರಿನಲ್ಲಿ ಕನ್ನಡ ಪುಸ್ತಕಗಳ ಪ್ರಕಟಣೆ, ವಿತರಣೆ, ಮಾರಾಟವನ್ನು ದೊಡ್ಡ ಮಾರಾಟ ಮಳಿಗೆಗಳ ಮೂಲಕ ಮೂರು-ನಾಲ್ಕು ಸಂಸ್ಥೆಗಳು ಮಾಡುತ್ತಿವೆ.

ಸಪ್ನಾ ಬುಕ್ ಹೌಸ್ (ಮೆಜೆಸ್ಟಿಕ್-ಗಾಂಧಿನಗರ ಪ್ರದೇಶದಲ್ಲಿದೆ) ಏಷ್ಯಾದಲ್ಲೆ ಅತಿ ದೊಡ್ಡ ಪುಸ್ತಕ ಭಂಡಾರ ಎನ್ನುವ ಕೀರ್ತಿಯೊಂದಿಗೆ ಕನ್ನಡ ಪುಸ್ತಕಗಳ ಪ್ರಕಟಣೆ ಮಾರಾಟವನ್ನು ದೊಡ್ಡ ಮಟ್ಟದಲ್ಲಿ ಮಾಡುತ್ತಿದೆ. ಬಹುಶಃ, ಇದರ ಶೋರೂಂಗೆ ಭೇಟಿಯಿಟ್ಟರೆ ಆ ಪುಸ್ತಕ ಲೋಕವನ್ನು ನೋಡಿ ಮೈಮರೆಯುವಂತಾಗಬಹುದು. ಕೆಲ ಮಾಳಿಗೆಗಳ ತುಂಬಾ ಪುಸ್ತಕಗಳು ಹರಡಿಕೊಂಡಿವೆ:

ನವಕರ್ನಾಟಕ ಪುಸ್ತಕ ಪ್ರಕಾಶಕರು ಮತ್ತು ಮಾರಾಟಗಾರರು ವ್ಯಾಪಕವಾಗಿ ಪುಸ್ತಕ ಪ್ರಕಾಶನ-ಮಾರಾಟದಲ್ಲಿ ತೊಡಗಿಕೊಂಡಿರುವ ಇನ್ನೊಂದು ದೊಡ್ಡ ಹೆಸರು. ಬಹುಪಾಲು ಕನ್ನಡ ಪುಸ್ತಕಗಳನ್ನೇ ಪ್ರಕಟಿಸುತ್ತಿರುವ ನವಕರ್ನಾಟಕ ರೇಸ್‌ಕೋರ್ಸ್‌ಗೆ ಮೊದಲು ಎಂಬೆಸಿ ಕಟ್ಟಡದಲ್ಲಿ (ಕರ್ನಾಟಕ ಚಲನಚಿತ್ರ ವಾಣಿಜ್ಯ ಸಂಸ್ಥೆ ಎದುರು) ತನ್ನ ವಿಸ್ತಾರವಾದ ಮಳಿಗೆಯನ್ನು, ಕಛೇರಿಯನ್ನು ಹೊಂದಿದೆ. ಬಹುಶಃ ದಿನಕ್ಕೆ ಒಂದು-ಎರಡು ಪುಸ್ತಕ ಪ್ರಕಟಿಸುತ್ತಿದೆಯೇನೋ ಎಂಬಂತೆ, ಯಾವಾಗ ಗಮನಿಸಿದರೂ ಹೊಸದೊಂದು ನವಕರ್ನಾಟಕ ಪುಸ್ತಕ ಕಾಣಿಸುತ್ತದೆ. ಕರ್ನಾಟಕದ ಎಲ್ಲ ಜಿಲ್ಲಾಕೇಂದ್ರಗಳಲ್ಲೂ ಮುಖ್ಯ ಊರುಗಳಲ್ಲೂ ನವಕರ್ನಾಟಕ 'ಪುಸ್ತಕ ಪ್ರದರ್ಶನ ಮಾರಾಟ'ವನ್ನು ಏರ್ಪಡಿಸುತ್ತಲೇ ಇರುತ್ತದೆ. ಜನರಿಗೆ ಹೊಸ ಪುಸ್ತಕವನ್ನು ಅವರಿದ್ದಲ್ಲಿಗೇ ಕೊಂಡೊಯ್ದು ತೋರಿಸುತ್ತದೆ.

ಬೆಂಗಳೂರಿನ ಮಹಾತ್ಮಾಗಾಂಧಿ ರಸ್ತೆಯಲ್ಲಿರುವ **'ಗಂಗಾರಾಮ ಬುಕ್ ಬ್ಯೂರೋ'** ಇನ್ನೊಂದು ಬೃಹತ್ ಪುಸ್ತಕ ಮಳಿಗೆ. ಇವರು ಅತ್ಯುತ್ತಮ ಪುಸ್ತಕಗಳನ್ನು ಮಾರಾಟಕ್ಕೆ ಇರಿಸಿದ್ದಾರೆ. ಅದೊಂದು ಪುಸ್ತಕಸ್ವರ್ಗ. ಅಲ್ಲಿ ನಡೆದಾಡಿದರೆ ಪುಸ್ತಕಪ್ರಪಂಚದ ಪರಿಚಯವಾಗುವುದಲ್ಲದೆ, ವಿವಿಧ ವಿಷಯಗಳ ಬಗ್ಗೆ ಕಾಣುವ ಸಾವಿರಾರು ಪುಸ್ತಕಗಳು ಬೆರಗುಂಟುಮಾಡುತ್ತವೆ. ನಿಮಗೆ ಇಂಥ ವಿಷಯದ ಬಗ್ಗೆ ಪುಸ್ತಕ ಬೇಕೆಂದರೆ ಅದು ಅಲ್ಲಿರುತ್ತದೆ.

ಪ್ರತಿವರ್ಷವೂ ಬೇಕಾದಷ್ಟು ಉತ್ತಮ ಪುಸ್ತಕಗಳನ್ನು ಪ್ರಕಟಿಸುತ್ತ, ಮಾರಾಟ ಮಾಡುತ್ತಿರುವ ಅನೇಕ ಉತ್ತಮ ಪ್ರಕಟನ ಸಂಸ್ಥೆಗಳು ಬೆಂಗಳೂರಿನಲ್ಲಿ ಇವೆ. ವಸಂತ ಪ್ರಕಾಶನ, ಹೇಮಂತ ಪ್ರಕಾಶನ, ಅಭಿನವ ಪ್ರಕಾಶನ, ಭಾವನಾ ಪ್ರಕಾಶನ ('ಹಾಯ್, ಬೆಂಗಳೂರು' ಪತ್ರಿಕೆ), ಸಿವಿಜಿ ಪಬ್ಲಿಕೇಶನ್, ಪುರೋಗಾಮಿ ಪ್ರಕಾಶನ, ಗೀತಾಂಜಲಿ ಪಬ್ಲಿಕೇಶನ್ಸ್, ಸಾಗರ ಪ್ರಕಾಶನ, ಐಬಿಎಚ್ ಪ್ರಕಾಶನ, ಭಾಗ್ಯಲಕ್ಷ್ಮೀ ಪ್ರಕಾಶನ, ಪ್ರಕಾಶ ಸಾಹಿತ್ಯ, ಪುಸ್ತಕಶಕ್ತಿ ಪ್ರಕಾಶನ, ವಿಸೀ ಸಂಪದ, ಲಿಪಿ ಪ್ರಕಾಶನ, ವಾಸನ್ ಪಬ್ಲಿಕೇಶನ್ಸ್, ಪ್ರಿಸಂ ಬುಕ್ಸ್, ಸ್ಟ್ಯಾಂಡ್‌ಬುಕ್ ಷಾಪ್, ನಾಗಶ್ರೀ ಪ್ರಕಾಶನ -ಹೀಗೆ ಅನೇಕ ಪುಸ್ತಕ ಪ್ರಕಟನ ಸಂಸ್ಥೆಗಳು ಇದ್ದು ಇನ್ನೂ ಅನೇಕ ಪ್ರಕಾಶಕರು ಇದ್ದಾರೆ. ಬೆಂಗಳೂರಿನ ಬಹುತೇಕ ದೊಡ್ಡ ಕಾಲೇಜ್‌ಗಳಲ್ಲಿ ಅವರದೇ ಪ್ರಕಟನ ವಿಭಾಗ ಇದೆ (ಮೆಚ್ಚಿಕೊಳ್ಳಬೇಕಾದ ವಿದ್ಯಾಸಂಸ್ಥೆ : ಕ್ರೈಸ್ಟ್ ಕಾಲೇಜ್). ಇಲ್ಲಿ ಎಲ್ಲ ಹೆಸರುಗಳನ್ನೂ ದಾಖಲಿಸಲಾಗಿಲ್ಲ.

'ಅಂಕಿತ ಪುಸ್ತಕ' ಗಾಂಧಿಬಜಾರ್‌ನಲ್ಲಿ ವಿಶಾಲವಾದ ಪುಸ್ತಕ ಮಾರಾಟ ಮಳಿಗೆ ಹೊಂದಿದೆ ಮತ್ತು ಅತ್ಯುತ್ತಮ ಪುಸ್ತಕಗಳನ್ನು ಪ್ರಕಟಿಸುತ್ತಿದೆ.

ಇವೆಲ್ಲ ಸಂಸ್ಥೆಗಳು ಕಥೆ, ಕಾದಂಬರಿ, ಹಾಸ್ಯ, ಕವನ ಅಲ್ಲದೆ ಕನ್ನಡ ಸಾಹಿತ್ಯ, ವಿಜ್ಞಾನ, ವ್ಯಕ್ತಿತ್ವ ವಿಕಸನ, ಮಕ್ಕಳ ಪುಸ್ತಕ ಎಂದು ಮೌಲಿಕ ಪುಸ್ತಕಗಳನ್ನು ಪ್ರಕಟಿಸುತ್ತಿವೆ.

'ಕನ್ನಡ ಸಾಹಿತ್ಯ ಪರಿಷತ್ತು', 'ಕನ್ನಡ ಪುಸ್ತಕ ಪ್ರಾಧಿಕಾರ' ಮತ್ತು ಸರ್ಕಾರದ ಬೆಂಬಲದ ವಿವಿಧ ಅಕೆಡೆಮಿಗಳು, (ಸಾಹಿತ್ಯ, ಸಂಗೀತ, ನೃತ್ಯ, ನಾಟಕ, ಪತ್ರಿಕಾ ಮೊದಲಾದವು) ಅತ್ಯುತ್ತಮ ಅಧ್ಯಯನ ಕೃತಿಗಳನ್ನು ಪ್ರಕಟಿಸುತ್ತಿವೆ. ಬೆಂಗಳೂರು ವಿಶ್ವವಿದ್ಯಾಲಯದಲ್ಲಿ 'ಪ್ರಕಟನ ವಿಭಾಗ' ಇದೆ. 'ಬಿಎಂಶ್ರೀ ಪ್ರತಿಷ್ಠಾನ' ಮೇಲ್ಮಟ್ಟದ ಅಧ್ಯಯನ ಕೃತಿಗಳನ್ನು ಪ್ರಕಟಿಸುತ್ತಿದೆ -ಹೀಗೆ ಪುಸ್ತಕಲೋಕದ ಬೆಳವಣಿಗೆಗೆ ಇನ್ನೂ ಅನೇಕ ಸಂಸ್ಥೆಗಳು ಸೇವೆಸಲ್ಲಿಸುತ್ತಿವೆ.

ಬೆಂಗಳೂರಿನ ಅತಿಹಳೆಯ ಪುಸ್ತಕ ಪ್ರಕಾಶನ, ವಿತರಣೆ, ಮಾರಾಟಸಂಸ್ಥೆ ಬಳೇಪೇಟೆಯ **'ಗೀತಾ ಏಜೆನ್ಸೀಸ್'**. ಐದು ದಶಕಗಳಿಗೂ ಮಿಂರಿ ಈ ಸಂಸ್ಥೆ ಪುಸ್ತಕೋದ್ಯಮದಲ್ಲಿ ತೊಡಗಿದೆ. ಬಳೇಪೇಟೆ ಚೌಕದ ಹತ್ತಿರವೇ ಮೊದಲ ಮಹಡಿಯಲ್ಲಿ ಇದರ ಮಾರಾಟ ಮಳಿಗೆ ಇದೆ.

ಡಾ. ಎಸ್.ಎಲ್. ಭೈರಪ್ಪ ಅವರ ಎಲ್ಲ ಪುಸ್ತಕಗಳನ್ನೂ ಪ್ರಕಟಿಸಿರುವ **'ಸಾಹಿತ್ಯಭಂಡಾರ'** ಬಳೇಪೇಟೆಯ ಗಲ್ಲಿಯೊಂದರಲ್ಲಿದೆ ಎಂದರೆ ಕನ್ನಡಿಗರಿಗೆ ಆಶ್ಚರ್ಯವಾಗಬಹುದು. ಭೈರಪ್ಪನವರ 'ವಂಶವೃಕ್ಷ'ದಿಂದ ಹಿಡಿದು ಈಗಿನ ಪುಸ್ತಕದವರೆಗೆ ಏಕಾಂಗಿಯಾಗಿ ಪ್ರಕಟಣೆ- ಮಾರಾಟ ಮಾಡಿದ ಕೀರ್ತಿ 'ಸಾಹಿತ್ಯಭಂಡಾರ'ದ್ದು. ಬೇರೆ ಅನೇಕ ಪುಸ್ತಕಗಳನ್ನೂ ಇವರು ಪ್ರಕಟಿಸಿದ್ದಾರೆ. **ನ್ಯಾಷನಲ್ ಬುಕ್ ಟ್ರಸ್ಟ್** ಪ್ರಕಟಿತ ಅತ್ಯುತ್ತಮ ಪುಸ್ತಕಗಳ ಭಂಡಾರ ಬನಶಂಕರಿ ೨ನೇ ಹಂತದ ಹತ್ತಿರ ಇರುವ ಅವರದೇ ಮಳಿಗೆಯಲ್ಲಿ ಕಾಣಸಿಗುತ್ತದೆ.

ಬೆಂಗಳೂರಿನ **'ರಾಷ್ಟ್ರೋತ್ಥಾನ ಪರಿಷತ್ತು'** ಮೌಲ್ಯಾಧಾರಿತ-ಚಿಂತನಶೀಲ ಪುಸ್ತಕಗಳ ಆಗರ. ನಾಲ್ಕು ದಶಕಗಳಿಂದ ಅತ್ಯುತ್ತಮ-ಅತ್ಯುಪಯುಕ್ತ ಪುಸ್ತಕಗಳನ್ನು ರಾಷ್ಟ್ರೋತ್ಥಾನ ಪ್ರಕಟಿಸಿದೆ. ಚಾಮರಾಜಪೇಟೆ ೫ನೇ ಬೀದಿಯಲ್ಲಿ ಪ್ರಾರಂಭದಲ್ಲೇ 'ಕೇಶವ ಶಿಲ್ಪ' ಕಟ್ಟಡ ಇದೆ. ಪುಸ್ತಕ ಮಾರಾಟ ಮಳಿಗೆಯೂ ಇದೆ.

ಹೀಗೆ ಅನೇಕ ಕನ್ನಡ ಪುಸ್ತಕ ಪ್ರಕಟನ ಸಂಸ್ಥೆಗಳ ಅತ್ಯುತ್ತಮ ಪುಸ್ತಕಗಳು ನಿಮ್ಮ ಆಯ್ಕೆಗೆ ದೊರಕಿ ನಿಮಗೆ ಹೊಸ ಜ್ಞಾನಭಂಡಾರದ ಲೋಕವನ್ನೇ ತೆರೆದಿವೆ.

■■

ಬೆಂಗಳೂರಿನ ಆರ್ಟ್ ಗ್ಯಾಲರಿಗಳು

ಬೆಂಗಳೂರಿನ ಚಿತ್ರಕಲಾ ಪರಿಷತ್ತು, ವೆಂಕಟಪ್ಪ ಆರ್ಟ್ ಗ್ಯಾಲರಿಗಳಲ್ಲದೆ ಅನೇಕ ಖಾಸಗಿ ಆರ್ಟ್ ಗ್ಯಾಲರಿಗಳಿವೆ: ದೃಷ್ಟಿ, ಮಹುವಾ, ಟೈಂ ಅಂಡ್ ಸ್ಪೇಸ್, ಸಮೃದ್ಧಿ.

೧೭. ಪ್ರವಾಸೀ, ಬೆಂಗಳೂರು!

ಬೆಂಗಳೂರಿನಲ್ಲೇ ಉಳಿದುಕೊಂಡು ಒಂದು ನೂರು ಕಿಲೋಮೀಟರ್ ದೂರದ ಪ್ರವಾಸೀ ತಾಣದಿಂದ ಹಿಡಿದು ಐನೂರು ಕಿಲೊಮೊಟರ್ ದೂರದ ಊರಿನವರೆಗೂ ಹೋಗಿ ಬರಬಹುದು. ಬಹುತೇಕ ಎಲ್ಲ ಊರುಗಳಿಗೂ ಕರ್ನಾಟಕ ರಾಜ್ಯ ಸರ್ಕಾರದ 'ಕೆಎಸ್ಆರ್‌ಟಿಸಿ' ಬಸ್- ಗಳಲ್ಲದೆ, ಬೇಕಾದಷ್ಟು ಖಾಸಗಿ ಬಸ್‌ಗಳೂ ಓಡಾಡುತ್ತವೆ. ಇವೆಲ್ಲ ಬಸ್‌ಗಳೂ ಪ್ರತಿರಾತ್ರಿ ಯಾವುದಾದರೊಂದು ಊರಿಗೆ 'ರಾತ್ರಿಸೇವೆ' ಬಸ್‌ಗಳನ್ನು ಓಡಿಸುತ್ತವೆ. ಈ ರಾತ್ರಿಸೇವೆ ಬಸ್‌ಗಳೆಲ್ಲ ಸುಖಾಸೀನವಾಗಿದ್ದು, ಕೆಲವು ಹವಾನಿಯಂತ್ರಿತವೂ ರಾತ್ರಿ ಮಲಗಲು ಅವಕಾಶವೂ, ಬಸ್‌ನಲ್ಲಿಯೇ ಶೌಚಕ್ಕೆ ಅನುಕೂಲವೂ ಇರುವಂತಹುದಾಗಿವೆ. ಖಾಸಗಿ ಸ್ಪರ್ಧೆಯಿಂದ ಸರ್ಕಾರಿ ಬಸ್‌ಗಳೂ ಸೊಗಸಾದ ಹೊಸಬಸ್‌ಗಳನ್ನು ಓಡಿಸುತ್ತಿದೆ.

ಜೊತೆಗೆ, 'ಕರ್ನಾಟಕ ರಾಜ್ಯ ಪ್ರವಾಸ ನಿಗಮ' ತನ್ನ ಬೇರೆ ಬೇರೆ ಪ್ರವಾಸ ಯೋಜನೆಗಳ ಮೂಲಕ ಇಡೀ ಕರ್ನಾಟಕ ರಾಜ್ಯದ ಸುಪ್ರಸಿದ್ಧ, ಜನಪ್ರಿಯ, ಐತಿಹಾಸಿಕ ತಾಣಗಳನ್ನೆಲ್ಲ ತೋರಿಸಿಕೊಂಡು ಬರುವ ವ್ಯವಸ್ಥೆ ಇಟ್ಟುಕೊಂಡಿದೆ. ಬೆಂಗಳೂರಿನ ಎರಡು ಕಛೇರಿಗಳಲ್ಲಿ ಇದರ ವಿವರಗಳೆಲ್ಲವೂ ದೊರಕುತ್ತದೆ: ಕರ್ನಾಟಕ ಪ್ರವಾಸ, ಖನಿಜ ಭವನ-ಫೋನ್: ೨೨೩೫೨೮೨೮ ಮತ್ತು ಬಾದಾಮಿ ಕಟ್ಟಡ: ಫೋನ್ ನಂಬರ್: ೨೨೨೭೫೮೬೯, ೨೨೨೧೨೦೯೮. ಕರ್ನಾಟಕ ರಾಜ್ಯ ಪ್ರವಾಸ ನಿಗಮದ 'ಕೌಂಟರ್'ಗಳು ಬೆಂಗಳೂರು ವಿಮಾನ ನಿಲ್ದಾಣ, ಬೆಂಗಳೂರು ಸಿಟಿ ರೈಲ್ವೇಸ್ಟೇಷನ್‌ಗಳಲ್ಲೂ ಇವೆ. ಪ್ರವಾಸ ಇಲಾಖೆ-ಫೋನ್ ನಂಬರ್: ೨೨೨೩೬೮೫೫ ಎಂಬಲ್ಲಿಯೂ ವಿಚಾರಿಸ ಬಹುದು. ಬೆಂಗಳೂರು ಮುಖ್ಯ ಬಸ್ ನಿಲ್ದಾಣ-ಮೆಜೆಸ್ಟಿಕ್, ಇಲ್ಲಿ ಬಂದು ವಿಚಾರಿಸಿದರೆ, ಅಂದಂದು ಬೇರೆ ಬೇರೆ ಊರುಗಳಿಗೆ ಹೋಗುವ ಬಸ್ ಸಮಯದ ಬಗ್ಗೆ ತಿಳಿದುಕೊಳ್ಳಬಹುದು.

ಟೆಲಿಫೋನ್ ಡೈರೆಕ್ಟರಿಯನ್ನು ತಿರುವಿಹಾಕಿ, ಟೂರ್ ಆಪರೇಟರ್ಸ್ (TOUR OPERATORS) ಎಂಬಲ್ಲಿ ನೋಡಿದರೆ, ವಿವಿಧ ಪ್ರವಾಸಗಳನ್ನು ಏರ್ಪಡಿಸುವ ಟೂರಿಸಂ ಸಂಸ್ಥೆಗಳ ಹೆಸರು, ವಿಳಾಸ, ಫೋನ್ ನಂಬರ್ ಸಿಗುತ್ತವೆ. ಇಲ್ಲಿಗೆ

ಪಟ್ಟದಕಲ್ಲು ಶಿಲಾವೈಭವ!



ಸೋಮನಾಥಪುರ - ಶಿಲ್ಪಕಲಾ ದೇಗುಲ

ಕಡಲತೀರದಲ್ಲಿ ಮುರುಡೇಶ್ವರ ದೇವಾಲಯ

ಸಂಪರ್ಕಗೊಂಡು ವಿವಿಧ ಪ್ರೇಕ್ಷಣೆಯ ಸ್ಥಳಗಳ ಪ್ರವಾಸದ ಬಗ್ಗೆ ವಿಚಾರಿಸಬಹುದು. ನಿಮಗೆ ಕಾರು, ಮಿನಿಬಸ್ಸು, ಕ್ವಾಲಿಸ್ ವಾಹನಗಳೇನಾದರೂ ಬಾಡಿಗೆಗೆ ಬೇಕಾಗಿದ್ದರೆ ವಿಚಾರಿಸಬಹುದು. ದರಗಳೆಲ್ಲವೂ ಏಕರೀತಿಯಾಗಿ ನಿಗದಿಯಾಗಿರುವುದರಿಂದ ಮೋಸಹೋಗುವ ಸಾಧ್ಯತೆ ಕಡಿಮೆ.

ಕರ್ನಾಟಕ ರಾಜ್ಯ ಪ್ರವಾಸ ನಿಗಮ ಅತ್ಯಂತ ಸುಂದರವಾದ ಪುಸ್ತಿಕೆಗಳನ್ನು ಪ್ರಕಟಿಸಿದೆ. ಇವುಗಳಲ್ಲಿ ವರ್ಣಚಿತ್ರಗಳ ಸಮೇತ ಪ್ರವಾಸೀತಾಣಗಳ ಕುರಿತಾದ ವಿವರಗಳು ದೊರಕುತ್ತವೆ. ಇವೆಲ್ಲ ತುಂಬ ಉಪಯುಕ್ತ ಮಾಹಿತಿಗಳು.

ಶ್ರೀರಂಗಪಟ್ಟಣ, ಶಿವನಸಮುದ್ರ, ತಲಕಾಡು, ಕಾವೇರಿ- ಬಿಳಿಗಿರಿರಂಗನ ಬೆಟ್ಟ, ಕದ್ರಿಮಂಜುನಾಥ, ಕುಕ್ಕೆಸುಬ್ರಹ್ಮಣ್ಯ, ಬೆಂಗಳೂರಿನಿಂದ ಮೈಸೂರಿಗೆ, ಉಡುಪಿ-ಮಂಗಳೂರು, ಧರ್ಮಸ್ಥಳ-ಕೊಲ್ಲೂರು, ಹಾಸನ-ಶಿವಮೊಗ್ಗ, ಬೇಲೂರು-ಹಳೇಬೀಡು-ಶ್ರವಣಬೆಳಗೊಳ-ಸೋಮನಾಥಪುರ, ಟಿ. ನರಸೀಪುರ, ನಂಜನಗೂಡು, ಕಾರವಾರ-ಗೋಕರ್ಣ- ಶಿರಸಿ ಮಾರಿಕಾಂಬ- ಮುರುಡೇಶ್ವರ -ಚಿತ್ರದುರ್ಗ-ಹರಿಹರ, ಬನವಾಸಿಯ ಮಧುಕೇಶ್ವರ ದೇವಾಲಯ, ಶೃಂಗೇರಿ, ಮೇಲುಕೋಟೆ, ಬಾದಾಮಿ-ಪಟ್ಟದಕಲ್ಲು-ಐಹೊಳೆ, ಹಂಪೆ, ಬಿಜಾಪುರ ಗೊಳಗುಮ್ಮಟ -ಎಂದೆಲ್ಲ ಸುತ್ತಬಹುದು.

ಟೂರಿಸ್ಟ್ ಕಾರು ಮಾಡಿಕೊಂಡು ಬೆಳಗ್ಗೆ ಹೊರಟರೆ, ಬೆಂಗಳೂರಿನಿಂದ ಮಳೂರು, ಶಿವನಸಮುದ್ರ, ಶ್ರೀರಂಗಪಟ್ಟಣ, ಮೈಸೂರು, ನಂಜನಗೂಡು ನೋಡಿಕೊಂಡು ರಾತ್ರಿ ಹಿಂದಿರುಗಬಹುದು.

ಬೆಂಗಳೂರು-ಚನ್ನಪಟ್ಟಣದ ಮಾರ್ಗದಲ್ಲಿರುವ ಮಳೂರಿನಲ್ಲಿ ಅಪ್ರಮೇಯ ಸ್ವಾಮಿ ದೇವಾಲಯ, ಅಂಬೆಗಾಲು ಕೃಷ್ಣ ಆಲಯಗಳಿವೆ. ಪುರಂದರದಾಸರು 'ಆಡಿಸಿದಳೆಶೋದ ಜಗದೋದ್ಧಾರನ' ದೇವರ ನಾಮವನ್ನು ಈ ಅಂಬೆಗಾಲು ಕೃಷ್ಣನನ್ನು ನೋಡಿ ಹಾಡಿದರೆಂದು ಹೇಳಲಾಗಿದೆ. ಅತ್ಯಂತ ಸುಂದರ ದೇವಾಲಯ. ಬೆಂಗಳೂರು-ಮೈಸೂರು ಪ್ರವಾಸ ಮಾಡುವ ಎಲ್ಲರೂ ಇಲ್ಲಿ ಇಳಿದು ಕೃಷ್ಣದರ್ಶನ ಮಾಡುತ್ತಾರೆ.

ಇಲ್ಲೇ ಕೊಕ್ರೆಬೆಳ್ಳೂರು ಹತ್ತಿರದಲ್ಲಿ ಕಣ್ವನದಿ, 'ಕಣ್ವ ರಿಸರ್‌ವಾಯರ್' ಇದೆ. ನೋಡಬಹುದು. ಇಲ್ಲಿಂದ ಮುಂದಕ್ಕೆ ಮಂಡ್ಯ-ಮಳವಳ್ಳಿ ಮೂಲಕ ಶಿವನಸಮುದ್ರ ಜಲಪಾತ ಪ್ರದೇಶಕ್ಕೆ ಭೇಟಿನೀಡಬಹುದು. ಇಲ್ಲಿ ಕಾವೇರಿ ನದಿ ಸುಮಾರು ೨೪೦ ಅಡಿಗಳಷ್ಟು ಎತ್ತರದಿಂದ ಭೋರೆಂದು ಸುರಿಯುತ್ತದೆ. ನೊರೆನೊರೆಯಾಗಿ ಕೆಳಗಿಳಿದು

ಕೆಳಗೆಲ್ಲ ಹರಡಿಕೊಂಡು ಹರಿಯುತ್ತದೆ. ಭರಚುಕ್ಕಿ ಮತ್ತು ಗಗನಚುಕ್ಕಿ ಎನ್ನುವ ಎರಡು ಹೆಸರುಗಳಲ್ಲಿ ಸುಂದರ ಜಲಪಾತಗಳಾಗಿ ಕವಲೊಡೆಯುತ್ತದೆ. ಜಲಪಾತಗಳಿಗೆ ಹೋಗುವ ಮೊದಲೇ ಸುಂದರವಾದ ರಂಗನಾಥಸ್ವಾಮಿ ದೇವಾಲಯ ಸಿಗುತ್ತದೆ. ಇದರಲ್ಲಿ ಶಯನ ಭಂಗಿಯಲ್ಲಿ ರಂಗನಾಥ ಪವಡಿಸಿದ್ದಾನೆ.

ಶಿವನಸಮುದ್ರದಿಂದ ಮತ್ತೆ ಮಳವಳ್ಳಿ-ಮಂಡ್ಯಕ್ಕೆ ಹಿಂತಿರುಗಿ ಮುಖ್ಯ ಮೈಸೂರು ರಸ್ತೆಯಲ್ಲಿ ಶ್ರೀರಂಗ ಪಟ್ಟಣಕ್ಕೆ ಹೋಗಬೇಕು. ಇಲ್ಲಿಯೂ ಕಾವೇರಿ ನದಿ ಸುತ್ತುವರಿದಿದೆ. ೧೨೦೦ ವರ್ಷಗಳಷ್ಟು ಹಳೆಯದಾದ ಸುಂದರ ಶ್ರೀರಂಗನಾಥ ಸ್ವಾಮಿ ದೇವಾಲಯ ಇದೆ. ಟೀಪೂ ಸಮಾಧಿ ಇರುವ ಗೋಲ್‌ಗುಂಬಜ್ ಸುಂದರ ದರಿಯಾದೌಲತ್ ತೋಟದಲ್ಲಿದೆ. ಇಲ್ಲಿ ಟೀಪುವಿನ ವಸ್ತುಗಳನ್ನು ಪ್ರದರ್ಶಿಸುವ ಒಂದು ವಸ್ತುಸಂಗ್ರಹಾಲಯವಿದೆ. ಹತ್ತಿರದಲ್ಲೇ ಕಾವೇರಿ ಸಂಗಮವಿದೆ. 'ರಂಗನತಿಟ್ಟು ಪಕ್ಷಿಧಾಮ' ಇದೆ. ಇಲ್ಲಿ ದೋಣಿಯಲ್ಲಿ ಕುಳಿತು ಸಂಚರಿಸುತ್ತ ಅಕ್ಕಪಕ್ಕದ ಮರಗಿಡದ ಮೇಲೆ ದೇಶವಿದೇಶಗಳಿಂದ ಬಂದ ಅಪರೂಪದ ಪಕ್ಷಿಗಳು ಸಂಸಾರ ಸಾಗಿಸುತ್ತಿರುವುದನ್ನು ನೋಡಬಹುದು.

ಶ್ರೀರಂಗಪಟ್ಟಣದಿಂದ ಮೈಸೂರು ನಗರಕ್ಕೆ ಬಂದು ಸಂಜೆಯವೇಳೆ ಆಗುತ್ತಿದ್ದರೆ ನೇರವಾಗಿ 'ಬೃಂದಾವನ ಉದ್ಯಾನ'ಕ್ಕೆ ಹೋಗಿಬಿಡಬಹುದು ಬಹಳ ಕಾಲದಿಂದ ಮುಚ್ಚಿದ್ದ ಈ ಕೃಷ್ಣರಾಜಸಾಗರ ಅಣೆಕಟ್ಟಿನ ಸ್ವರ್ಗಸದೃಶ 'ಬೃಂದಾವನ ಗಾರ್ಡನ್ಸ್'ನ್ನು ಈಚೆಗೆ (ಜುಲೈ ೨೦೦೪) ಸುಂದರಗೊಳಿಸಿ ಪ್ರವಾಸಿಗಳ ದರ್ಶನಕ್ಕೆ ಸಿದ್ಧಗೊಳಿಸಿದ್ದಾರೆ. ಭಾರತದಲ್ಲೇ ಇಷ್ಟು ಮನಮೋಹಕ, ಅತಿಸುಂದರ ಬಣ್ಣಬಣ್ಣದ ನೀರಿನೋಟಗಳು, ಕಾರಂಜಿಗಳು, ಸಂಗೀತ ಕಾರಂಜಿ, ದೋಣಿಪಯಣ ತಾಣ ಇನ್ನೊಂದಿರಲಾರದು. 'ಬೃಂದಾವನ' ಭೂಲೋಕಸ್ವರ್ಗದ ಅನುಭವ ನೀಡುತ್ತದೆ. ಮನಸ್ಸು ಉಲ್ಲಾಸಗೊಳ್ಳುತ್ತದೆ. ಭಾವನಾಲೋಕದಲ್ಲಿ ತೇಲಾಡುತ್ತದೆ. ಅದೂ ಸಂಜೆ ನಸುಗತ್ತಲಾಗಿ ದಿಢೀರನೆ ಬೃಂದಾವನದಲ್ಲೆಲ್ಲಾ ದೀಪಾಲಂಕಾರ ಮೂಡಿದಾಗ ಮೈನವಿರೇಳುತ್ತದೆ. ಮನಸ್ಸು ಮೈಮರೆಯುತ್ತದೆ.

ಬೃಂದಾವನದಿಂದ ರಾತ್ರಿ ಹೊರಟು ಮೈಸೂರು ತಲುಪಿ ಅಲ್ಲಿ ರಾತ್ರಿ ತಂಗಬಹುದು. ನಗರದ ಹೃದಯ ಭಾಗದಲ್ಲಿರುವ 'ದಾಸಪ್ರಕಾಶ್ ಹೋಟೆಲ್'ನಲ್ಲಿ ತಂಗಬಹುದು. ಬೆಳಗ್ಗೆ ಬೇಗ ಎದ್ದು ಚಾಮುಂಡಿ ಬೆಟ್ಟಕ್ಕೆ ಹೋಗಿ ಚಾಮುಂಡೇಶ್ವರಿ ದೇವಿಯನ್ನು ದರ್ಶನಮಾಡಿಕೊಂಡು 'ಸ್ವಾಚ್ಯೂಸ್ಕ್ವೇರ್'ಗೆ ಬಂದು, ದೇವರಾಜಅರಸ್ ರಸ್ತೆಯಲ್ಲಿರುವ 'ನಳಪಾಕ'ದಲ್ಲಿ ಫಲಹಾರ ಮಾಡಬಹುದು. ಇಲ್ಲಿ ತಿಂಡಿತಿನಿಸು ಕಾಫಿ ಸೊಗಸಾಗಿರುತ್ತದೆ. ಫಲಹಾರ ಮುಗಿಸಿ ನೇರವಾಗಿ ನಂಜನಗೂಡಿಗೆ

ಹೊರಟುಬಿಡಬೇಕು. ಅಲ್ಲಿ ಶ್ರೀಕಂಠೇಶ್ವರನ ದರ್ಶನ ಪಡೆದು ಮತ್ತೆ ಮೈಸೂರಿಗೆ ಹಿಂತಿರುಗುವಾಗ ಸುಮಾರು ಮಧ್ಯಾಹ್ನ ಹನ್ನೆರಡು ಘಂಟೆ ಆಗಬಹುದು. ನಗರ ಪ್ರವೇಶಿಸಿದ ಕೂಡಲೇ 'ಮೈಸೂರು ನಗರದರ್ಶನ' ಪ್ರಾರಂಭಿಸಿಬಿಡಬಹುದು.

ಮೊದಲು 'ಜಗನ್ಮೋಹನ ಅರಮನೆ'ಯಲ್ಲಿನ (ಚಾಮರಾಜೇಂದ್ರ ಆರ್ಟ್ ಗ್ಯಾಲರಿ) ಕಲಾವೈಭವವನ್ನು ನೋಡಬೇಕು. ಅನಂತರ ಭೋಜನ ಮುಗಿಸಬಹುದು. 'ನಳಪಾಕ'ದಲ್ಲಾಗಲಿ, 'ದಾಸ್‌ಪ್ರಕಾಶ್ ಹೋಟೆಲ್'ನಲ್ಲಾಗಲಿ ಒಳ್ಳೆಯ ಊಟ ಸಿಗುತ್ತದೆ. 'ಐಯ್ಯಂಗಾರ್ ಊಟದ ಹೋಟೆಲ್' ಇದೆ. ಪ್ರಯತ್ನಿಸಬಹುದು. ಊಟ ಮುಗಿಸಿ 'ಜೂ'ಗೆ ಹೋಗಬಹುದು. ಅಲ್ಲಿನ ಮೃಗ ಪಕ್ಷಿ ಲೋಕವನ್ನು ನಿಧಾನವಾಗಿ ನೋಡಿ ಆನಂದಿಸಿ, ಸಂಜೆವೇಳೆಗೆ, ದೇವರಾಜಾ ಮಾರ್ಕೆಟ್‌ಗೆ ಭೇಟಿಕೊಟ್ಟು, ಮೈಸೂರು ಬದನೆಕಾಯಿ, ಮೈಸೂರು ಚಿಗುರು ವಿಳ್ಳೇದೆಲೆ, ಮೈಸೂರು ಮಲ್ಲಿಗೆ ಕೊಂಡು ಮತ್ತೆ 'ನಳಪಾಕ'ಕ್ಕೊ, 'ದಾಸಪ್ರಕಾಶ'ಕ್ಕೊ ತಿಂಡಿ-ಕಾಫಿಗೆ ಬರಬಹುದು. ಸುತ್ತಮುತ್ತಲೂ ಬೇರೆ ಉತ್ತಮ ತಿಂಡಿ ಹೋಟೆಲ್‌ಗಳಿವೆ. ಹೊಸದಾಗಿ ಆದ ಆಧುನಿಕ ನೋಟದ ಕೆಲವು ಹೋಟೆಲ್‌ಗಳು ಬಹಳ ಚೆನ್ನಾಗಿದೆ.

ತಿಂಡಿ ಕಾಫಿ ಮುಗಿಸಿ ಹಾಯಾಗಿ ಬೆಂಗಳೂರಿನ ದಾರಿ ಹಿಡಿಯಬಹುದು. ದಾರಿಯಲ್ಲಿ 'ಸಂತ ಫಿಲೋಮಿನ ಚರ್ಚ್'ನ ಸುಂದರ ಕಟ್ಟಡವನ್ನು ನೋಡಬಹುದು. ರಾತ್ರಿ ಒಂಭತ್ತರ ವೇಳೆಗೆ ಬೆಂಗಳೂರಿನ ನಿಮ್ಮ ಮನೆಯಲ್ಲಿರಬಹುದು. ಪ್ರವಾಸದ ಸುಂದರ ಸವಿ-ಸ್ವಾರಸ್ಯ ನೆನಪುಗಳನ್ನು ಮೆಲುಕು ಹಾಕುತ್ತಾ ಮಲಗಿ ನಿದ್ರೆ ಮಾಡಬಹುದು.

ಹೀಗೆಯೇ ಇನ್ನೊಂದು ದಿವಸ ಒಂದು ಪ್ರವಾಸ ಸರಪಳಿಯ ಆಲೋಚನೆ ಮಾಡಬಹುದು. ಬೆಂಗಳೂರಿನ ಚಿತ್ರದುರ್ಗಕ್ಕೆ ಬೆಳಗ್ಗೆ ಬೇಗ ಸರ್ಕಾರಿ ಬಸ್ ಹತ್ತಿ ಹೋದರೆ, ಸುಮಾರು ಹನ್ನೊಂದು ಘಂಟೆ ವೇಳೆಗೆ ಚಿತ್ರದುರ್ಗ ತಲುಪಬಹುದು. ಅಲ್ಲಿಯೇ ಒಂದು ಹೋಟಲ್‌ನಲ್ಲಿ ತಿಂಡಿ-ಕಾಫಿ ಮುಗಿಸಿ, ಚಿತ್ರದುರ್ಗದ ಕೋಟೆ ಹತ್ತಿಬಿಡಬಹುದು. ಮದಕರಿನಾಯಕ ಆಳಿದ ಕಲ್ಲಿನ ಕೋಟೆಯಲ್ಲಿ ಅಡ್ಡಾಡಬಹುದು. ಅಲ್ಲಿನ ಐತಿಹಾಸಿಕ ಬಾಗಿಲುಗಳನ್ನು ದಾಟುತ್ತ, ದೇವಾಲಯಗಳನ್ನು ದರ್ಶಿಸುತ್ತ, ಕಲ್ಲಿನ ಕಂಭ, ಉಯ್ಯಾಲೆ ಕಂಬಗಳನ್ನು ನೋಡುತ್ತ, ಓಬವ್ವನ ಕಿಂಡಿಯನ್ನು ನೋಡಬಹುದು. ದೇಹಕ್ಕೆ ಎಷ್ಟು ಸಾಧ್ಯವಾಗುತ್ತದೊ ಅಷ್ಟು ಓಡಾಡಿ ಬೆಟ್ಟದಿಂದ ಕೆಳಗಿಳಿಯಬಹುದು. ಸುಮಾರು ಮಧ್ಯಾಹ್ನ ಮುಗಿದಿರುತ್ತದೆ. ಅಲ್ಲೇ ಹೋಟಲ್‌ನಲ್ಲಿ ಊಟಮಾಡಿಕೊಂಡು ದಾವಣಗೆರೆಗೆ ಬಸ್ ಹತ್ತಬಹುದು. ಮುಂದಿನ ಒಂದು ಘಂಟೆಯಲ್ಲಿ ದಾವಣಗೆರೆ ನಗರ ಆಧುನಿಕವಾಗಿ, ದೊಡ್ಡ ವ್ಯಾಪಾರದ ತಾಣವಾಗಿ ಅಭಿವೃದ್ಧಿಗೊಳ್ಳುತ್ತಿರುವುದನ್ನು ನೋಡಬಹುದು. ಅಲ್ಲೇ ಒಂದು ಆಟೋ ಮಾಡಿಕೊಂಡು

ಹರಿಹರಕ್ಕೆ ಹೋಗಿ ಬರಬಹುದು. ಹರಿಹರದಲ್ಲಿ ಹರಿಹರೇಶ್ವರ ಮತ್ತು ತುಂಗಭದ್ರಾ ನದಿಯ ದಡದಲ್ಲಿರುವ ರಾಘವೇಂದ್ರ ಗುರುಗಳ ಗುಡಿ ನೋಡಿಕೊಂಡು ದಾವಣಗೆರೆಗೆ ಹಿಂತಿರುಗಬಹುದು. ದಾವಣಗೆರೆಯಲ್ಲಿ ರಾತ್ರಿ ಬಸ್ ಹತ್ತಿ ಹುಬ್ಬಳ್ಳಿಗೆ ಹೋಗಬೇಕು. ಬೆಳಿಗ್ಗೆ ಹುಬ್ಬಳ್ಳಿ ತಲುಪಿದ ಮೇಲೆ ಅಲ್ಲಿ 'ಸಿದ್ಧರೂಢಾಶ್ರಮ'ಕ್ಕೆ ಹೋಗಿ ಮುಖಕೈಕಾಲು ತೊಳೆದು ಸ್ನಾನಮಾಡಿ ದೇವಾಲಯ ದರ್ಶನ ಮಾಡಿ, ತಿಂಡಿ ಮುಗಿಸಿ ಬೆಳಗಿನ ಬಸ್ ಹತ್ತಿ ಬಾದಾಮಿಗೆ ಹೋಗಬೇಕು. ಅಲ್ಲಿನ ಅದ್ಭುತವಾದ ಗುಹಾಂತರ ದೇವಾಲಯಗಳನ್ನು ದರ್ಶನ ಮಾಡಬಹುದು. ಅಲ್ಲಿ ಸುಮಾರು ಎರಡು ಘಂಟೆಗಳಾದರೂ ಇರಬೇಕಾಗುತ್ತದೆ. ಅನಂತರ ಅಲ್ಲೇ ಒಂದು ಆಟೋ ಅಥವಾ ಮಿನಿಬಸ್ ಹಿಡಿದು ಬನಶಂಕರಿಗೆ ಬರಬೇಕು. ಬನಶಂಕರಿ ದೇವಿಯ ದರ್ಶನಮಾಡಿದ ಮೇಲೆ, ದೇವಾಲಯದ ಆಫೀಸ್‌ನಲ್ಲಿಯೇ ಕೋರಿ ಹಣ ಕಟ್ಟಿದರೆ ಅವರೇ ಊಟ ಹಾಕುತ್ತಾರೆ. ಅಥವಾ ಹೊರಗೆ 'ಮೊಸರು ಮಾರುವ ಹೆಂಗಸರು' ಇರುತ್ತಾರೆ. ಅವರು ರುಚಿಯಾದ ಜೋಳದರೊಟ್ಟಿ, ಮೊಸರು ತಂದಿರುತ್ತಾರೆ. ತಿಂದು ಹೊಟ್ಟೆ ತುಂಬಿಸಿಕೊಳ್ಳಬಹುದು.

ಬನಶಂಕರಿಯಿಂದ ಮಿನಿಬಸ್‌ಗಳು ಸಿಗುತ್ತವೆ. ಹತ್ತಿ ಪಟ್ಟದಕಲ್‌ಗೆ ಹೋಗಬೇಕು. ಅದ್ಭುತವಾದ ಶಿಲಾದೇಗುಲಗಳ ಬೀಡು ಇದು. ಮೈಮರೆಸುವಂಥ ಶಿಲ್ಪಸೊಗಸು. ಇದನ್ನು ದರ್ಶನ ಮಾಡಿ ಮತ್ತೆ ಬಸ್ ಹಿಡಿದು ಐಹೊಳೆಗೆ ಬರಬೇಕು. ಇಲ್ಲಿ ನೂರಕ್ಕೂ ಹೆಚ್ಚು ದೇವಾಲಯಗಳಿವೆ. ಒಂದಾನೊಂದು ಕಾಲದಲ್ಲಿ ಇದು ಶಿಲ್ಪಕಲಾ ತರಬೇತಿಯ ಬೀಡು, ಶಿಲಾದೇಗುಲ ಶಿಲ್ಪಿಗಳ ನಾಡು. ಹೀಗಾಗಿ ಅನೇಕ ಶೈಲಿಗಳ ಶಿಲಾಕೃತಿಗಳು ಇಲ್ಲಿ ಸೃಷ್ಟಿಯಾಗಿವೆ, ಉಳಿದುಕೊಂಡಿವೆ. ನೋಡಿದಷ್ಟು ಶಿಲ್ಪಗಳಿವೆ. ಚಿಕ್ಕದೊಡ್ಡ ದೇವಾಲಯ ಮಾದರಿಗಳಿವೆ.

ಐಹೊಳೆಯಿಂದ, ಭಕ್ತಿಭಂಡಾರಿ ಬಸವಣ್ಣನವರ ಐಕ್ಯಕ್ಷೇತ್ರ 'ಕೂಡಲ ಸಂಗಮ' ಬಹಳ ದೂರವೇನಿಲ್ಲ. ಬಸ್ಸುಗಳು ಸಿಗುತ್ತವೆ. ರಾತ್ರಿ ವೇಳೆಗೆ ಕೂಡಲಸಂಗಮ ತಲುಪಿದರೂ ಪರವಾಗಿಲ್ಲ. ಉಳಿದುಕೊಳ್ಳಲು ಬೇಕಾದಷ್ಟು ವಸತಿ ಸೌಕರ್ಯಗಳಿವೆ. ಅತಿ ಕಡಿಮೆ ಬೆಲೆಯಲ್ಲಿ ಒಳ್ಳೆಯ ರೂಮುಗಳು ಸಿಗುತ್ತವೆ, ಇಂಥದೊಂದು ರೂಮನ್ನು ಸಂಪಾದಿಸಿ, ಅಲ್ಲಿ ಊಟದ ವ್ಯವಸ್ಥೆಯೂ ಇದೆ. ಊಟಮಾಡಿ ಹಾಯಾಗಿ ನಿದ್ರೆ ಮಾಡಬಹುದು.

ಬೆಳಿಗ್ಗೆ ಬೇಗೆದ್ದು ಸ್ನಾನಮುಗಿಸಿ, ಕೂಡಲಸಂಗಮ ದರ್ಶನಕ್ಕೆ ಹೆಜ್ಜೆ ಹಾಕಬಹುದು. ಸಂಗಮೇಶ್ವರ ದೇವಾಲಯವಿದೆ. ಮೇಲೆ ಟಿಕೆಟ್ ಕೊಂಡು ಕಿರು ಸೇತುವೆಯಂತಿರುವ ಮೆಟ್ಟಿಲುಗಳನ್ನು ಹತ್ತಿ, ಸುತ್ತು ಮೆಟ್ಟಿಲುಗಳಲ್ಲಿ ಇಳಿದು ಬಸವೇಶ್ವರರ ಐಕ್ಯಸ್ಥಾನ

ಕನ್ನಡ ಸಾಹಿತ್ಯ ಪರಿಷತ್ತು

ಅಲಸೂರು ಕೆರೆ ದೋಣಿವಿಹಾರ

ಬೈಸಿಕಲ್ ಬಿಲ್ಲು

ಬಿಲ್ಲು ಬಾಣ

ದರ್ಶಿಸಬಹುದು. ಇಲ್ಲಿ ಕೃಷ್ಣಾನದಿ ಮತ್ತು ಮಲಪ್ರಭಾ ನದಿಗಳ ಸಂಗಮದಲ್ಲಿ ಈ ನೆಲಕ್ಷೇತ್ರ ಇದೆ. ಸಿವಿಲ್ ಇಂಜಿನಿಯರಿಂಗ್ ಅದ್ಭುತ ಎಂದೇ ಎನಿಸುವ ಈ ಯೋಜನೆಗಾಗಿ ಕರ್ನಾಟಕ ಸರ್ಕಾರವನ್ನು ಅಭಿನಂದಿಸಲೇಬೇಕು.

ಬೆಳಿಗ್ಗೆ ಒಂಭತ್ತು ಘಂಟೆಗೆಲ್ಲ ಹೊರಡಲು ಸಿದ್ಧರಾಗಿಬಿಡಬಹುದು. ಅಲ್ಲಿಂದ ಬಸ್‌ಹತ್ತಿ ಹುನಗುಂದ-ಇಳಕಲ್-ಕುಷ್ಟಗಿ ಮಾರ್ಗವಾಗಿ ಹೊಸಪೇಟೆಗೆ ಬರಬೇಕು. ಹೊಸಪೇಟೆಯಲ್ಲಿ ಒಳ್ಳೆಯ ಊಟದ ಹೋಟಲ್ ಇದೆ. ಊಟ ಮುಗಿಸಿಕೊಂಡು ಒಂದು ಆಟೋ ಮಾತನಾಡಿಕೊಂಡು, ತುಂಗಭದ್ರ ಅಣೆಕಟ್ಟು ನೋಡಿ-ಓಡಾಡಿ, ಹಂಪೆ ತಲುಪಬೇಕು.

ವಿಜಯನಗರ ಸಾಮ್ರಾಜ್ಯ, ದಕ್ಷಿಣಭಾರತದ ವೈಭವದ ಸಾಮ್ರಾಜ್ಯದ ರಾಜಧಾನಿ ಇಂದು ಹಾಳು ಹಂಪೆಯಾಗಿದೆ. ಈಗಲೂ ಅಲ್ಲಿರುವ ಶಿಥಿಲ ಶಿಲ್ಪಕಲಾವೈಭವವನ್ನು, ಊರಿನ ರಸ್ತೆಗಳನ್ನು, ಅಂಗಡಿ ಪ್ರದೇಶಗಳನ್ನು ನೋಡಿದಾಗ ಹೃದಯ ಹಿಂಡಿ ಬರುತ್ತದೆ. ಹೊಸಪೇಟೆಯಿಂದ ಹಂಪೆವರೆಗೂ ಆ ಕಾಲದ ನಗರಯೋಜನೆಯ ಪಳೆಯುಳಿಕೆಗಳನ್ನು, ಕೊಳವೆಗಳ ಮೂಲಕ ನೀರು ಸರಬರಾಜು ಮಾಡುವ ಅದ್ಭುತವನ್ನೂ ಕಲ್ಪಿಸಿಕೊಳ್ಳಬಹುದು.

ಹಂಪೆ ಬಂಗಾರದ ಲೇಪವಾದಂತೆ ಬಿಸಿಲಿಗೆ ಕಂಗೊಳಿಸುತ್ತದೆ. ಸುತ್ತಲೂ ಶಿಲಾಬೆಟ್ಟದ ಸಾಲು. ನಡುವೆ, ವಿರೂಪಾಕ್ಷ ದೇವಾಲಯ ಸೇರಿದಂತೆ ನಿಶ್ಚಲವಾಗಿ ಬಿದ್ದುಕೊಂಡಿರುವ ಹಾಳು ಹಂಪೆ. ದೈವತಾಣಗಳು, ಶಿಲ್ಪ ಸೊಗಸು ಹಂಪೆ ಏಕೆ ವಿಶ್ವ ಪ್ರವಾಸಿಗಳನ್ನು ಆಕರ್ಷಿಸುತ್ತದೆ ಎನ್ನುವುದು ಅರ್ಥವಾಗುತ್ತದೆ.

ಮತ್ತೆ, ಹೊಸಪೇಟೆಗೆ ವಾಪಸ್ಸಾಗಿ, ಊಟ ಮುಗಿಸಿ, ನೇರವಾಗಿ ಬೆಂಗಳೂರಿಗೆ ಬಸ್ ಅಥವಾ ರೈಲು ಹತ್ತಿಬಿಡಬಹುದು. ಮರುಬೆಳಿಗ್ಗೆ ಬೆಂಗಳೂರು.

ಇನ್ನೊಂದು ದಿವಸ-ರಾತ್ರಿ ಬಸ್‌ನಲ್ಲಿ ಉಡುಪಿಗೆ ಹೋಗಬೇಕು. ಬೆಳಗ್ಗೆ ಉಡುಪಿ ಸೇರಿದ ಮೇಲೆ ಅಷ್ಟಮಠಗಳ ಯಾವುದಾದರೊಂದು ಅತಿಥಿಗೃಹದಲ್ಲಿ ರೂಮುಸಿಗುತ್ತದೆ. ಬೆಳಗ್ಗೆ ಸ್ನಾನ ಮಾಡಿ ಮುಗಿಸಿ, ಶ್ರೀಕೃಷ್ಣನ ದರ್ಶನ ಮಾಡಬಹುದು. ಈಗಲೂ ಕಿಂಡಿಯ ಮೂಲಕವೇ ಗೋಪಾಲಕನ ದರ್ಶನ. ಬೆಳಗ್ಗೆ ಅಲ್ಲಿ ವೇದಘೋಶ ಕಿವಿಗೆ ಬೀಳುತ್ತದೆ. ಪರ್ಯಾಯ ಸ್ವಾಮಿಗಳು ಬಂದು ಪೂಜೆ ಮಾಡುತ್ತಾರೆ.

ಶ್ರೀ ಕೃಷ್ಣ ದರ್ಶನವಾದ ಮೇಲೆ, ಎದುರಿನಲ್ಲೇ ಇರುವ ಚಂದ್ರಮೌಳೀಶ್ವರ ಮತ್ತು ಅನಂತೇಶ್ವರ ದೇವಾಲಯಗಳನ್ನು ದರ್ಶಿಸಬಹುದು. ಅಲ್ಲೇ ರಾಘವೇಂದ್ರ ಗುರುಗಳ ಮಠ ಇದೆ. ದರ್ಶಿಸಬಹುದು.

ಆ ಸುತ್ತಿನಲ್ಲಿಯೇ 'ಮಿತ್ರ ಸಮಾಜ' ತಿಂಡಿ ಹೋಟೆಲ್ ಇದೆ. ಸೊಗಸಾದ ತಿಂಡಿ-ಕಾಫಿ ಹೋಟೆಲ್ ಅದು. ಹೊಟ್ಟೆ ತುಂಬಿಸಿಕೊಂಡು ಒಂದಿಷ್ಟು ನಡೆದರೆ, ಸಿಟಿಬಸ್‌ಸ್ಟಾಂಡ್ ಸಿಗುತ್ತದೆ. ಅಲ್ಲಿ ಅಂಬಲಪಾಡಿಗೆ ಹೋಗುವ ಬಸ್ ಹತ್ತಬೇಕು. ಅಂಬಲ ಪಾಡಿಯಲ್ಲಿ ಜನಾರ್ಧನ ದೇವಾಲಯ ಮತ್ತು ಈಚಿನ ವರ್ಷಗಳಲ್ಲಿ ಜೀರ್ಣೋದ್ಧಾರಗೊಂಡ ಮಹಾಕಾಳಿ ಗುಡಿ ಇದೆ. ಇದನ್ನೆಲ್ಲ ನೋಡಿ, ದೈವದರ್ಶನ ಮಾಡಿಕೊಂಡು ಮುಖ್ಯರಸ್ತೆಗೆ ಬಂದು ಮತ್ತೆ ಉಡುಪಿಗೆ ಬಸ್ ಹತ್ತಬೇಕು. ಉಡುಪಿ ಸಿಟಿಬಸ್ ಸ್ಟಾಂಡ್‌ನಲ್ಲಿ ಇಳಿದು ಮತ್ತೆ ನಡೆದು ಉಡುಪಿ ದೇವಾಲಯದ ಆವರಣಕ್ಕೆ ಬರಬಹುದು. ಆ ಸಮಯ ಕೃಷ್ಣಮಠದಲ್ಲಿ ಸರಿಯಾಗಿ ಊಟದ ಸಮಯ. ಪಂಚೆ ಉಟ್ಟುಕೊಂಡು ಊಟಕ್ಕೆ ಹೋಗಬೇಕು. ಷರ್ಟ್ ತೆಗೆದು ಕುಳಿತುಕೊಳ್ಳಬೇಕು.

ಊಟಮುಗಿಸಿ ಒಂದಿಷ್ಟು ಸುಧಾರಿಸಿಕೊಂಡು ಮತ್ತೆ ಸಿಟಿಬಸ್ ಸ್ಟಾಂಡ್‌ಗೆ ನಡೆದು ಬಂದು, ಮಲ್ಪೆ ಬೀಚ್‌ಗೆ ಹೋಗುವ ಬಸ್ ಹತ್ತಬೇಕು. ಮಲ್ಪೆ ಬೀಚ್‌ನಲ್ಲಿಳಿದು ಅಲ್ಲೇ ಹತ್ತಿರದಲ್ಲಿರುವ ಮಿನುಮಾರುಕಟ್ಟೆ ಬಳಿ ಬಂದರೆ, 'ಸಂತ ಮೇರಿ ದ್ವೀಪ'ಕ್ಕೆ ಮೋಟಾರ್ ಬೋಟ್‌ಗಳು ಸಿಗುತ್ತವೆ. ಅದರಲ್ಲಿ ಕುಳಿತು ಹೋದರೆ ಅದ್ಭುತ-ಆಶ್ಚರ್ಯ ಎನ್ನಬಹುದಾದ ಸಮುದ್ರದ ಅಲೆಗಳು ಬಂದು ಬಡಿಯುವ ಕಪ್ಪು ಶಿಲಾಲೋಕ ಕಾಣಿಸುತ್ತದೆ. ಜೀವನದಲ್ಲಿ ಇಂಥದ್ದನ್ನು ನೋಡಿಯೇ ಇಲ್ಲ ಎನಿಸುವಂಥ ಅದ್ಭುತ-ಸುಂದರ ಪರಿಸರ (ಉತ್ತರ ಕನ್ನಡ ಜಿಲ್ಲೆಯ ಯಾಣ ಶಿಲಾಪ್ರದೇಶಕ್ಕೆ ಹೋದಾಗಲೂ ಇಂಥದೇ ಬೆರಗುಂಟಾಗಬಹುದೇನೋ?). ಇಲ್ಲಿಂದ ಸಂಜೆ ಹಿಂತಿರುಗಿ ಮತ್ತೆ ಮಲ್ಪೆ ಸಮುದ್ರ ತೀರಕ್ಕೆ ಬಂದು ಮರಳಿನಮೇಲೆ ಕುಳಿತು ಸೂರ್ಯಾಸ್ತ ನೋಡಬಹುದು. ಸಮುದ್ರದ ಅಲೆಗಳೊಂದಿಗೆ ಆಟವಾಡಬಹುದು.

ಸೂರ್ಯಾಸ್ತ ನೋಡಿ ಮುಗಿಸಿ ಅಲ್ಲಿಂದ ನಡೆದು ಅಥವಾ ಆಟೋದಲ್ಲಿ ಹೊರಟು ಮುಖ್ಯರಸ್ತೆಗೆ ಬರಬಹುದು. ಅಲ್ಲಿ ಉಡುಪಿಗೆ ಬಸ್ ಸಿಗುತ್ತದೆ. ಉಡುಪಿಗೆ ಹಿಂತಿರುಗಿ ಮತ್ತೆ ಶ್ರೀಕೃಷ್ಣ ಮಠಕ್ಕೆ ಬನ್ನಿರಿ. ಅಲ್ಲಿ ಸಂಜೆ-ರಾತ್ರಿಯ ಪೂಜೆಪುನಸ್ಕಾರಗಳು ವೈಭವದಿಂದ ನಡೆಯುತ್ತವೆ. ವೇದಮಂತ್ರಗಳ ಘೋಶ, ದೇವರ ನಾಮಗಳ ಹಾಡುಗಾರಿಕೆ, ಪಲ್ಲಕ್ಕಿ ಸೇವೆ ಎಣ್ಣೆ ದೀಪಾಲಂಕಾರ ಮೊದಲಾದವೆಲ್ಲ ಸಂತೃಪ್ತಿಯ ಅನುಭವವನ್ನು ನೀಡುತ್ತವೆ.

ರಾತ್ರಿಯೂ ಮಠದಲ್ಲಿ ಊಟಮಾಡಬಹುದು.

ಬೆಳಿಗ್ಗೆ ಒಂದು ಟೂರಿಸ್ಟ್ ಕಾರು ಟ್ಯಾಕ್ಸಿ ಗೊತ್ತುಮಾಡಿಕೊಂಡು ಕೆಲವು ಪ್ರವಾಸೀ ದೇವತಾಣಗಳಿಗೆ ಹೋಗಿ ಬರಬಹುದು.

ಬೆಳಿಗ್ಗೆ ಬೇಗ ಟಿಫನ್ ಮುಗಿಸಿ ಉಡುಪಿಯಿಂದ ಹೊರಟು ಕುಂದಾಪುರ, ಮರವಂತೆ, ಕೊಲ್ಲೂರು, ಭಟ್ಕಳ, ಮುರುಡೇಶ್ವರ, ಗೋಕರ್ಣದವರೆಗೂ ಹೋಗಿ ರಾತ್ರಿ ಮತ್ತೆ ಉಡುಪಿ ಸೇರಬಹುದು.

ಕುಂದಾಪುರ ಮಾರ್ಗದಲ್ಲಿ ಆನೆಗುಡ್ಡೆ ಗಣಪತಿ ದೇವಾಲಯ ಸಿಗುತ್ತದೆ. ಈಚೆಗೆ ಈ ದೇವಾಲಯ ಪರಿಸರವನ್ನು ಜೀರ್ಣೋದ್ಧಾರ ಮಾಡಿದ್ದಾರೆ. ತುಂಬ ಪ್ರಸಿದ್ಧ, ಜನಪ್ರಿಯ ಗಣಪ, ಇಲ್ಲಿನ ಕಡಬು ಸೇವೆ ವಿಶಿಷ್ಟವಾದದ್ದು. ಗಣಪತಿ ದರ್ಶನಮಾಡಿಕೊಂಡು ನೇರವಾಗಿ ಹೊರಟು ದಾರಿಯಲ್ಲಿ ಮರವಂತೆ ಕಡಲತೀರ-ಹಿನ್ನೀರು ಪ್ರದೇಶದ ಸೊಗಸು ನೋಡಿಕೊಂಡು ಕೊಲ್ಲೂರು ಮುಕಾಂಬಿಕೆಯ ದರ್ಶನಕ್ಕೆ ಹೊರಟು ಬಿಡಬೇಕು. ಅಲ್ಲಿಗೆ ತಲುಪಲು ಒಂದೂವರೆ-ಎರಡು ಘಂಟೆಗಳೇ ಆಗುತ್ತದೆ. ಅಲ್ಲಿ 'ಕ್ಯೂ'ನಲ್ಲಿ ನಿಂತು ಮೂಕಾಂಬಿಕೆಯ ದರ್ಶನಮಾಡಬೇಕು. ವರಪ್ರದೆದೇವಿ ಮೂಕಾಂಬಿಕೆ ಸಿದ್ಧಿದೇವಿ, ದರ್ಶನ ಪ್ರಾರ್ಥನೆ ಸಲ್ಲಿಸಿ ಕುಂಕುಮ-ಪ್ರಸಾದ ಪಡೆದು ಅನಂತರ ಅಲ್ಲೇ ಭೋಜನಕ್ಕೆ ನಿಲ್ಲಬಹುದು. ಊಟ ಮಾಡಿಕೊಂಡು ಮತ್ತೆ ಬೈಂದೂರು-ಭಟ್ಕಳ ರಾಷ್ಟ್ರೀಯ ಹೆದ್ದಾರಿಗೆ ಬಂದು ಮುರುಡೇಶ್ವರ ತಲುಪಬಹುದು.

ಕಡಲ ಕಿನಾರೆಯಲ್ಲಿರುವ ಮುರುಡೇಶ್ವರ ಅತ್ಯಂತ ಸುಂದರ ದೇವಾಲಯ. ಪುರಾಣದ ಕಾಲದ್ದು. ಗೋಕರ್ಣಕ್ಷೇತ್ರದಲ್ಲಿ ರಾವಣ ಆತ್ಮಲಿಂಗ ನೆಲಕಚ್ಚಿದ್ದನ್ನು ನೋಡಿ ಕೋಪದಿಂದ ಲಿಂಗವನ್ನು ಎಳೆದಾಡಿದಾಗ ಕೈಗೆ ಬಂದ ವಸ್ತುವನ್ನು ಅವನು ಎಸೆದದ್ದು ಬಿದ್ದ ಜಾಗವೇ ಮುರುಡೇಶ್ವರವಾಯಿತೆಂದು ಸ್ಥಳಪುರಾಣ ಹೇಳುತ್ತದೆ. ಈಚೆಗೆ ಅಲ್ಲಿನ ಪ್ರಸಿದ್ಧ ಉದ್ಯಮಿಗಳಾದ ಆರ್.ಎನ್. ಶೆಟ್ಟಿ ಅವರ ದಾನಗಳಿಂದ ಈ ದೇವಾಲಯ ಆಕರ್ಷಕ ರೂಪಕಂಡಿದೆ. ಸುಂದರ ಗೋಪುರ, ಸುತ್ತಲೂ ಹಸಿರು, ಹಸಿರಿನ ನಡುವೆ ಬೃಹತ್ ಶಿವವಿಗ್ರಹವೂ ಸೇರಿ ಅನೇಕ ವಿಗ್ರಹಗಳಿವೆ. ಆಲಯಕ್ಕೆ ಹತ್ತಿ ಹೋಗುವ ದಾರಿಯೇ ಸುಂದರವಾಗಿದೆ. ಆಧುನಿಕವಾಗಿದೆ.

ಮುರುಡೇಶ್ವರ ಆಲಯ ಕಡಲ ತುದಿಗೆ ಅಂಟಿದಂತೆ ಇದೆ. ಶಾಂತ ಸಾಗರದ ಏಳುಬೀಳು ಸೌಮ್ಯ ಅಲೆಗಳು ಆಲಯದ ಗೋಡೆಗೆ ಬಂದು ಬಡಿಯುತ್ತವೆ.

ಆರ್.ಎನ್. ಶೆಟ್ಟಿ ಅವರು ಕಟ್ಟಿಸಿರುವ 'ಸಮುದ್ರಮುಖಿ' ಬೃಹತ್ ತೇಲುವ ಹೋಟಲ್ ಒಂದಿದೆ. ಇಲ್ಲಿ ಊಟ-ತಿಂಡಿ-ಕಾಫಿ ಸಿಗುತ್ತದೆ.

ಮುರುಡೇಶ್ವರ ಕ್ಷೇತ್ರ ದರ್ಶನ ಬೇಗ ಮುಗಿದರೆ ಅಲ್ಲಿಂದ ಗೋಕರ್ಣಕ್ಕೆ ಹೋಗಿ ಬಂದುಬಿಡಬಹುದು.

ಶಿವನನ್ನು ಕುರಿತು ಘೋರ ತಪಸ್ಸು ಮಾಡಿ ರಾವಣ ತಂದ ಆತ್ಮಲಿಂಗವನ್ನು ವಿನಾಯಕ ನೆಲದಲ್ಲಿ ಬೇರೂರುವಂತೆ ಮಾಡಿದ ಪುಣ್ಯಕ್ಷೇತ್ರ ಗೋಕರ್ಣ. ಈ ರಾವಣ ಆತ್ಮಲಿಂಗವನ್ನು ನಾವೇ ಮುಟ್ಟಿ ಆರಾಧಿಸಿ ಪೂಜೆಮಾಡಬಹುದು. ದೇವಾಲಯದ ಹೊರಗೆ ರಸ್ತೆಯಂಚಿನಲ್ಲಿ 'ಗೋಕರ್ಣ ಗಣಪತಿ'ಯ ವಿಶಿಷ್ಟ ಶಿಲ್ಪ ಇದೆ.

ಗೋಕರ್ಣದ ಕಡಲತೀರ ಸುಂದರವಾಗಿದೆ. ಹೋಗಿ ಸ್ವಲ್ಪ ಹೊತ್ತು ಕುಳಿತು ಬರಬಹುದು. ಆನಂತರ ಬಂದ ದಾರಿಯಲ್ಲಿಯೇ ಉಡುಪಿಗೆ ಹಿಂತಿರುಗಬಹುದು. ಶ್ರೀಕೃಷ್ಣ ಮಠದೂಟದ ಸಮಯ ಮುಗಿದಿರುತ್ತದೆ. 'ಮಿತ್ರಸಮಾಜ'ದಲ್ಲಿ ಬಿಸಿಬಿಸಿ ಊಟ-ತಿಂಡಿ ಅಂತೂ ಸಿಗುತ್ತದೆ. ತಿಂದು ಹಾಯಾಗಿ ಮಲಗಿ ನಿದ್ರೆಮಾಡಬಹುದು.

ಉಡುಪಿವಾಸ ಮುಗಿಸಿ 'ಮಿತ್ರ ಸಮಾಜ' ತಿಂಡಿ ಮುಗಿಸಿ ಆಟೋ ಹತ್ತಿ 'ಗೌರ್ನಮೆಂಟ್‌ಬಸ್‌ಸ್ಟಾಂಡ್‌ಗೆ' ಹೋಗಿ ಅಲ್ಲಿ ಬಸ್ ಹತ್ತಿ ಮಂಗಳೂರಿಗೆ ಬಂದುಬಿಡಿ.

ಮಂಗಳೂರಿನಲ್ಲಿ ಅನೇಕ ಲಾಡ್ಜ್‌ಗಳು, ಸಸ್ಯಾಹಾರಿ ಮಧ್ಯಮವರ್ಗದ ಹೋಟೆಲ್‌ಗಳಿವೆ. ಮಂಗಳಾದೇವಿ ಸ್ಟೇಡಿಯಂ ಹತ್ತಿರ 'ಜನತಾ ಹೋಟೆಲ್'. ಇಲ್ಲಿ ವಸತಿ-ಊಟೋಪಚಾರಗಳು ಉತ್ತಮ ಮಟ್ಟದಲ್ಲಿದೆ. ಹೀಗೆ ಬಂದು ವಸತಿಯನ್ನು ಮೊದಲು ಮಾಡಿಕೊಳ್ಳಬೇಕು. ಅನಂತರ ಮಂಗಳೂರು ನಗರ ದರ್ಶನ ಮಾಡಬಹುದು. ಮಂಗಳಾದೇವಿ, ಕದ್ರಿ ಮಂಜುನಾಥೇಶ್ವರ ದೇವಾಲಯಗಳ ದರ್ಶನ ಮಾಡಲೇಬೇಕು. ಅನಂತರ ನಗರ ಸಾರಿಗೆ ಬಸ್‌ನಲ್ಲಿ ಅಥವಾ ಆಟೋದಲ್ಲೊ ಓಡಾಡಿ ಮಂಗಳೂರು ನಗರ ನೋಟವನ್ನು ಸವಿಯಬಹುದು. ಮೈಸೂರು-ಬೆಂಗಳೂರು ನಗರಗಳಿಗಿಂತಲೂ ಭಿನ್ನವಾದ ವ್ಯಕ್ತಿತ್ವ-ಬದುಕಿನ-ನಡವಳಿಕೆಯ ನಗರ ಇದು. ಈಚಿನ ವರ್ಷಗಳಲ್ಲಿ ಬಹಳ ಆಧುನಿಕವಾಗಿ ಬೆಳೆದಿದೆ. ಬಹುಶಃ, ಬೆಂಗಳೂರಿನ ಅನಂತರ ಇದೇ ಆಧುನಿಕ-ಬೆಳವಣಿಗೆ ಕಾಣುತ್ತಿರುವ ನಗರದಂತೆ ಅನ್ನಿಸುತ್ತದೆ. ನೂರಾರು ವರ್ಷಗಳ ಮಂಗಳೂರು ಶೈಲಿ ಮನೆಗಳ ನಡುವೆಯೇ ಆಧುನಿಕ ಗಗನಚುಂಬಿ ವಾಸಸಂಕೀರ್ಣಗಳು, ಬಹುಮಹಡಿ ವ್ಯಾಪಾರ ಕೇಂದ್ರಗಳು, ದೊಡ್ಡದೊಡ್ಡ ಸಂಸ್ಥೆಗಳ ಶಾಖೆಗಳು, ಚರ್ಚ್‌ಗಳು-ಮಸೀದಿಗಳು, ಪಂಚತಾರಾ ಹೋಟಲ್‌ಗಳು, ಶಾಲಾ-ಕಾಲೇಜ್‌ಗಳು, ಉತ್ತಮವಾದ ನಗರ ಸಾರಿಗೆ-ಇವೆಲ್ಲ ಮಂಗಳೂರಿಗೆ ಆಧುನಿಕ ನಗರದ ರೂಪ ನೀಡಿದೆ. ಕೋಟ್ಯಂತರ ರೂಪಾಯಿ ಹೂಡುವವರೂ, ಚಲಾಯಿಸುವವರೂ ತುಂಬಿಕೊಂಡಿದ್ದಾರೆ. ಅನೇಕ ಬಡಾವಣೆಗಳ ಮೂಲಕ ಮಂಗಳೂರು ನಗರ ವ್ಯಾಪ್ತಿ ವಿಸ್ತಾರಗೊಂಡಿದೆ. ಆಕಾಶವಾಣಿ ಕೇಂದ್ರದ ಎದುರಿನ ಉದ್ಯಾನ ನೋಡಬಹುದು.

ಸಂಜೆ ಉಳ್ಳಾಲ ಸಮುದ್ರ ತೀರಕ್ಕೆ ಬಂದು ಕುಳಿತುಕೊಳ್ಳಬಹುದು. ಅತ್ಯಂತ ರಭಸದಿಂದ ಬಂಡೆಗಳಿಗೆ ಬಂದು ಬಡಿಯುವ, ನೊರೆಧಾರೆಯಾಗಿ ಮರಳಿಗೆ ಥಟ್ಟನೆದ್ದು ಬಂದು ಬಡಿಯುವ ಅಲೆಗಳನ್ನು ನೋಡುವುದೇ ಒಂದು ಚಂದ. ಮತ್ತೆ ನಿಮ್ಮ ಹೋಟಲ್-ಊಟ-ನಿದ್ರೆ.

ಮರುದಿನ ಬಸ್ ಹತ್ತಿ ಧರ್ಮಸ್ಥಳಕ್ಕೆ ಹೋಗಿ ಮಂಜುನಾಥೇಶ್ವರನ, ಭೂತರಾಜನ, ಗೊಮ್ಮಟೇಶ್ವರನ ದರ್ಶನ ಮಾಡಬಹುದು. ದೈವದದರ್ಶನ ಆದಮೇಲೆ

ಅಲ್ಲಿನ 'ವಸ್ತು ಸಂಗ್ರಹಾಲಯ' ನೋಡಲು ಮರೆಯಬಾರದು. ಅತಿ ಅಪೂರ್ವ ಐತಿಹಾಸಿಕ ತಾಂತ್ರಿಕ-ಜಾನಪದ ಸಂಗ್ರಹಾಲಯ ಅದು. ಧರ್ಮಸ್ಥಳದ ಹೆಗ್ಗಡೆಯವರ ಸಾಮಾಜಿಕ-ಧಾರ್ಮಿಕ ಚಿಂತನೆಯ ಪ್ರತೀಕವಾಗಿ ಧರ್ಮಸ್ಥಳ ಜನಸಾಮಾನ್ಯರ ಗೌರವದ ತಾಣವಾಗಿದೆ. ಧರ್ಮಸ್ಥಳದಿಂದ ಕುಕ್ಕೆ ಸುಬ್ರಹ್ಮಣ್ಯಕ್ಕೆ ಬಸ್‌ಗಳಿವೆ. ಟ್ಯಾಕ್ಸಿಗಳಿವೆ. ಊಟಮುಗಿಸಿಕೊಂಡು ಹೋಗಿ ಸುಬ್ರಹ್ಮಣ್ಯನ ದರ್ಶನ ಮಾಡಿಕೊಂಡು ಹಿಂತಿರುಗಬಹುದು. ಅಲ್ಲಿ ನರಸಿಂಹದೇವರ ಗುಡಿಯೂ ಇದೆ.

ಧರ್ಮಸ್ಥಳದಿಂದ ಮತ್ತೆ ಮಂಗಳೂರಿಗೆ ಸಂಜೆ ಹಿಂತಿರುಗಬಹುದು. ಸಂಜೆಯೇ ಶೃಂಗೇರಿಗೆ ಬಸ್ ಹತ್ತಬಹುದು. ರಾತ್ರಿವೇಳೆಗೆ ಶೃಂಗೇರಿ ತಲುಪಿಬಿಡಬಹುದು. ಶೃಂಗೇರಿಯಲ್ಲಿ ಉಳಿದುಕೊಳ್ಳಲು ಅತಿಥಿಗೃಹಗಳು, ಲಾಡ್ಜ್‌ಗಳೂ ಇವೆ. ಊಟ-ತಿಂಡಿ ಅನುಕೂಲಗಳೂ ಇವೆ.

ಮರುಬೆಳಗ್ಗೆ ಸ್ನಾನ ಮುಗಿಸಿ ಶಾರದಾಂಬಾ ದೇವಾಲಯ ಭೇಟಿ-ದರ್ಶನ ಮುಗಿಸಿ, ವಿದ್ಯಾಶಂಕರ ದೇವಾಲಯವನ್ನು ನೋಡಬಹುದು. ಅತ್ಯಂತ ಸುಂದರ ಶಿಲ್ಪಕಲೆಯ ದೇವಾಲಯ ಸೊಬಗು ಇದು. ತುಂಗಾ ನದಿ ಸುಂದರವಾಗಿ ಹರಿಯುತ್ತದೆ. ಅಲ್ಲಿ ದೊಡ್ಡ ದೊಡ್ಡ ಮೀನುಗಳಿವೆ. ಭಕ್ತರು ಹಾಕುವ ಪುರಿಯನ್ನು ಗಬಕ್ಕನೆ ಹಿಡಿಯುತ್ತದೆ. ನದಿಯ ಸೇತುವೆಮೇಲೆ ನಡೆದುಹೋದರೆ ಸ್ವಾಮಿಗಳು ಇರುವ ಬಂಗಲೆ ಸಿಗುತ್ತದೆ. ಅಲ್ಲಿ ಸ್ವಾಮಿಗಳನ್ನು ಭೇಟಿಮಾಡಿ, ನಮಸ್ಕರಿಸಿ, ಮಾತನಾಡಬಹುದು. ಈ ಕಟ್ಟಡದ ಸುತ್ತಲೂ ಸುಂದರ ವನಪ್ರದೇಶವಿದೆ. ಮಠದಲ್ಲೇ ಊಟಮಾಡಬಹುದು.

ಶೃಂಗೇರಿಯಿಂದ ಬಸ್ ಹತ್ತಿ ಹೊರಟು ಕಳಸ-ಹೊರನಾಡುವಿಗೆ ಬಂದು ಅನ್ನಪೂರ್ಣೆಶ್ವರಿ ದೇವಿಯನ್ನು ದರ್ಶಿಸಬಹುದು. ಬಂದವರಿಗೆಲ್ಲ ಸಂತೃಪ್ತ ಭೋಜನ ಉತ್ತಮ ಸುಖವಸತಿ ಅನುಕೂಲ ನೀಡುವ ಪುಣ್ಯಸ್ಥಳ ಇದು. ದಟ್ಟಕಾಡಿನ ಪರಿಸರ. ಪಟ್ಟಣದವರಿಗೆ ಎಲ್ಲವೂ ವಿಶೇಷವಾಗಿಯೇ ಕಾಣಿಸಬಹುದು. ಅಂದು ರಾತ್ರಿ ಅಲ್ಲೇ ಉಳಿದು ಮರುದಿನ ಬೆಳಗ್ಗೆ ಹೊರಟು ಬಸ್‌ನಲ್ಲಿ ಚಿಕ್ಕಮಗಳೂರು ತಲುಪಬೇಕು. ಅಲ್ಲೊಂದು ಕಿರುಹೋಟಲ್‌ನಲ್ಲೊ ಲಾಡ್ಜ್‌ನಲ್ಲೊ ಉಳಿದುಕೊಂಡು ಆ ದಿನವೇ ಮೂರು ಸುಂದರ ಗಿರಿಧಾಮ, ವನ್ಯಪ್ರದೇಶಗಳನ್ನು ನೋಡಬಹುದು. ಇವುಗಳೆಂದರೆ: ಕೆಮ್ಮಣ್ಣುಗುಂಡಿ, ಬಾಬಾಬುಡನಗಿರಿ ಮತ್ತು ಹೆಬ್ಬೆ ಜಲಪಾತ.

ಚಿಕ್ಕಮಗಳೂರಿಗೆ ಬಹಳ ಹತ್ತಿರದಲ್ಲೇ ವಿಶ್ವಪ್ರಸಿದ್ಧ ಶಿಲ್ಪಕಲಾವೈಭವದ ದೇಗುಲಗಳಾದ ಬೇಲೂರು-ಹಳೇಬೀಡು ಇದೆ. ಬೇಲೂರು-ಹಳೇಬೀಡು ಎರಡು ಕಡೆಯೂ ಲಾಡ್ಜ್‌ಗಳು ಇವೆ. ಇಡೀ ಒಂದು ದಿವಸ ಸಾವಕಾಶವಾಗಿ ಇವೆರಡು ಶಿಲ್ಪಸಂಭ್ರಮಗಳನ್ನು ನೋಡಬಹುದು.

ಬೇಲೂರಿನದೊಂದು ರೀತಿಯ ಶಿಲ್ಪ ಸೌಂದರ್ಯವಾದರೆ, ಹಳೇಬೀಡಿನದು ಒಂದು ರೀತಿ ಶಿಲ್ಪಲೋಕ, ಇಲ್ಲಿ ಎಷ್ಟೊಂದು ವೈವಿಧ್ಯಮಯವಾದ, ಅಪೂರ್ವವಾದ ಶಿಲಾಖನಿಗಳಿವೆ ಎಂದು ವರ್ಣಿಸುವುದು ಕೂಡ ಕಷ್ಟ. ಮೈಮರೆಸುವಂಥ ನಳಿನತೆ, ಸೊಗಸು, ಸೂಕ್ಷ್ಮತೆ. ಹಳೇಬೀಡು ದೇವಾಲಯ ಮುಖ್ಯರಸ್ತೆಯ ಬದಿಗೇ ಇದೆ. ಇದರ ಎದುರಿನ ಕಾಂಪೌಂಡ್‌ನಲ್ಲಿ ಅತಿಥಿಗೃಹವಿದೆ. ಉತ್ತಮ ಎನ್ನಬಹುದಾದ ವಸತಿ ಸೌಕರ್ಯ ಅದು. ರಾತ್ರಿ ಎಲ್ಲ ಕಡೆಯೂ ಅಂಧಕಾರ ಆವರಿಸಿಕೊಂಡಾಗ, ಈ ಅತಿಥಿಗೃಹದ ಕಾಂಪೌಂಡ್‌ನಲ್ಲಿ ನಿಂತು ದೇವಾಲಯವನ್ನು ಗಮನಿಸಿದಾಗ ಮನಸ್ಸಿನಲ್ಲಿ ಸಣ್ಣದೊಂದು ದಿಗಿಲು ಏಳುತ್ತದೆ. ಬೆಳಿಗ್ಗೆ-ಸಂಜೆ ಇಡೀ ಪ್ರಪಂಚದ ಕಲಾರಸಿಕರನ್ನು ಸೆಳೆಯುವ ಅದು ರಾತ್ರಿ ಹೊತ್ತು ಶತ್ರುಗಳು ಸೂರೆಗೊಂಡ ರಾಜಧಾನಿಯ ಹಾಗೆ ಕಾಣಿಸುತ್ತದೆ. ಆ ಅಂಧಕಾರದಲ್ಲಿ ಅಲ್ಲಿಯ ಸಾವಿರಾರು ಶಿಲ್ಪಗಳು ಒಳಗೆಲ್ಲ ಓಡಾಡುತ್ತವೇನೊ ಎನ್ನುವಂಥ ಭ್ರಾಂತಿ ಕಾಡುತ್ತದೆ.

ಮರುದಿವಸ ಬೇಲೂರಿನಿಂದ ಬಸ್ ಹತ್ತಿ ಹಾಸನಕ್ಕೆ ಹೋಗಿ ಅಲ್ಲಿಂದ ಶ್ರವಣಬೆಳಗೊಳಕ್ಕೆ ಹೋಗಬಹುದು. ಬೆಟ್ಟದ ಮೇಲೆ ನಿಂತಿರುವ, ಜಗವನ್ನು ತ್ಯಜಿಸಿದ ಕಾರುಣ್ಯಮೂರ್ತಿ ಗೊಮ್ಮಟೇಶ್ವರನನ್ನು ದರ್ಶಿಸಬಹುದು. ಹತ್ತಲು ಸ್ವಲ್ಪ ಆಯಾಸದ ವಿಷಯವೇ ಎನಿಸುವಂಥ ಮೆಟ್ಟಿಲುಗಳನ್ನು ಹತ್ತಿ ಅವನ ಪದತಲವನ್ನು ತಲುಪಿ ಅವನನ್ನು ಕೆಳಗಿನಿಂದ ಮೇಲಿನವರೆಗೆ ನೋಡಿದಾಗ ನಮಗೂ ಈ ಜಗತ್ತು ಮರೆತುಹೋಗುತ್ತದೆ. ಶ್ರವಣಬೆಳಗೊಳದಿಂದ ಬೆಂಗಳೂರಿಗೆ ಆ ದಿನವೇ ಹಿಂತಿರುಗಬಹುದು.

ಕರ್ನಾಟಕದಲ್ಲಿ ನೂರಾರು ಪ್ರವಾಸೀ ಕ್ಷೇತ್ರಗಳಿವೆ. ಅವೆಲ್ಲವನ್ನೂ ಬೆಂಗಳೂರಿನಿಂದ ಹೊರಟು ನೋಡಬಹುದು.

ಬಂಡಿಪುರ ರಾಷ್ಟ್ರೀಯ ಉದ್ಯಾನ, ನಾಗರಹೊಳೆ ರಾಷ್ಟ್ರೀಯ ಉದ್ಯಾನ, ಬಿಳಿಗಿರಿರಂಗನ ಬೆಟ್ಟ ಮತ್ತು ಕಾವೇರಿ ಮೃಗಧಾಮ, ರಂಗನತಿಟ್ಟು-ಕೊಕ್ರೆಬೆಳ್ಳೂರು ಪಕ್ಷಿಧಾಮ, ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನ, ದಾಂಡೇಲಿ ಮೃಗಧಾಮ, ಗುಡವಿ ಪಕ್ಷಿಧಾಮ, ಭದ್ರಾಮೃಗಧಾಮ, ಕುದ್ರೇಮುಖ ರಾಷ್ಟ್ರೀಯ ಉದ್ಯಾನ.

ಮಡಿಕೇರಿ, ಆಗುಂಬೆ, ಕುಂದಾದ್ರಿ-ಕೊಡಚಾದ್ರಿ, ಜೋಗಜಲಪಾತ, ಮಾಗೋಡು ಜಲಪಾತ, ಶಿವನಸಮುದ್ರ ಜಲಪಾತ, ಅಬ್ಬೆ ಜಲಪಾತ, ಇರ್ಪು ಜಲಪಾತ, ಇತ್ಯಾದಿ ಅನೇಕ ಪ್ರಕೃತಿಧಾಮಗಳು.

ದೇವರಾಯನದುರ್ಗ, ಘಾಟಿಸುಬ್ರಹ್ಮಣ್ಯ-ವಿದುರಾಶ್ವತ್ಥ, ಗೊರವನಹಳ್ಳಿ ಮಹಾಲಕ್ಷ್ಮೀ, ಹೊಗನೇಕಲ್ಲು ಜಲಪಾತ, ಕೈವಾರ, ಕೋಟಿಲಿಂಗೇಶ್ವರ ಆಲಯ,

ಮಾಗಡಿ ರಂಗನಾಥ, ಶಿವಗಂಗೆ, ಕೈದಾಳ, ಗೂಳೂರುಗಣೇಶ, ಸಾವನದುರ್ಗ, ಮಲೆಮಹದೇಶ್ವರ, ಮೇಕೆದಾಟು, ಟಿ.ನರಸೀಪುರ-ಸೋಮನಾಥಪುರ, ತಲಕಾಡು, ಎಡೆಯೂರು ಶ್ರೀ ಸಿದ್ಧಲಿಂಗೇಶ್ವರ -ಇವೆಲ್ಲವೂ ಕನ್ನಡಿಗರು ನೋಡಲೇಬೇಕಾದ ಪ್ರದೇಶಗಳು.

ಉಡುಪಿ-ಶೃಂಗೇರಿಗಳ ಹಾಗೆಯೇ ಮಂಡ್ಯ-ಪಾಂಡವಪುರದ ಹತ್ತಿರವೇ ಇರುವ ಮೇಲುಕೋಟೆ, ಶ್ರೀರಾಮನುಜಾಚಾರ್ಯರು ಸ್ಥಾಪಿಸಿದ, ವಾಸಿಸಿದ ದೈವ-ಗುರುಸನ್ನಿಧಿ, ಬೆಂಗಳೂರಿನಿಂದ ಸುಮಾರು ೧೨೦ಕಿಲೋಮೀಟರ್ ದೂರ ಆಗುತ್ತದೆ. ಶ್ರೀ ತಿರುನಾರಾಯಣ ದೇವಾಲಯ ಇಲ್ಲಿನ ಪ್ರಮುಖ ದೇವತಾಣ, ಇಲ್ಲಿ ಪ್ರತಿವರ್ಷ ಮಾರ್ಚ್-ಏಪ್ರಿಲ್ ತಿಂಗಳಲ್ಲಿ 'ವೈರಮುಡಿ' ಉತ್ಸವ ನಡೆಯುತ್ತದೆ. ಅಪೂರ್ವ ವಜ್ರಕಿರೀಟವನ್ನು, ಆಭರಣಗಳನ್ನು ಅಂದು ಶ್ರೀ ತಿರುನಾರಾಯಣನಿಗೆ (ಶ್ರೀ ಚೆಲುವರಾಯ ಸ್ವಾಮಿ) ಸಮರ್ಪಿಸಿ ಅಲಂಕರಿಸಲಾಗುತ್ತದೆ. ಮೇಲುಕೋಟೆ ದೇವಸ್ಥಾನ ವಿಸ್ತಾರವಾಗಿ ಬೃಹತ್ತಾಗಿಯೇ ಶಿಲ್ಪ ಕಲಾದೇಗುಲವಾಗಿಯೇ ಕಂಗೊಳಿಸುತ್ತದೆ. ಸುತ್ತಲ ಪರಿಸರ ಅತ್ಯಂತ ಆಕರ್ಷಕ. ಎದುರಿನಲ್ಲೇ ಬೆಟ್ಟದ ಮೇಲೆ ಯೋಗಾನರಸಿಂಹಸ್ವಾಮಿ ದೇವಾಲಯವಿದೆ.

ಮೇಲು ಕೋಟೆಯಿಂದ ಸುಮಾರು ೩೦ ಕಿಲೋಮೀಟರ್ ಅಂತರದಲ್ಲಿ ತೊಣ್ಣೂರು ಇದೆ. ಇಲ್ಲಿ ನಂಬಿನಾರಾಯಣ ಆಲಯವಿದೆ. ಶ್ರೀರಾಮಾನುಜರು ಅನುಗ್ರಹಿಸಿದ ಅತಿ ವಿಸ್ತಾರವಾದ ತೊಣ್ಣೂರು ಕೆರೆ ಇದೆ. ಈಚೆಗೆ ಈ ಕೆರೆಯಲ್ಲಿ 'ದೋಣಿ ವಿಹಾರ'ವನ್ನು ಏರ್ಪಡಿಸಲಾಗಿದೆ.

-ಹೀಗೆ ಕರ್ನಾಟಕವನ್ನು ಎಷ್ಟು ಬೇಕಾದರೂ ನೋಡಬಹುದು, ಎಲ್ಲಿ ಬೇಕಾದರೂ ನೋಡಬಹುದು. ಸಾವಿರ ಸಾವಿರ ದೈವತಾಣಗಳು, ಪ್ರಕೃತಿಪ್ರದೇಶಗಳು, ಬೆಟ್ಟಗುಡ್ಡಗಳು, ನದಿ, ಸಮುದ್ರ, ಕೆರೆ, ಸರೋವರಗಳು, ಶಿಲ್ಪಕಲಾ ವೈಭವಗಳು ತುಂಬಿ ತುಳುಕಾಡುತ್ತಿವೆ. ಇವೆಲ್ಲವನ್ನೂ ನೋಡಿರುವ ಕನ್ನಡಿಗರೇ ಧನ್ಯರು, ನಿಜವಾದ ಪ್ರವಾಸ ಪ್ರಿಯರು.

■■

ಬೆಂಗಳೂರು ರಸ್ತೆ ಭೂಪಟ ಪುಸ್ತಕದ ಅಂಗಡಿಗಳಲ್ಲಿ ಅಥವಾ ಬೆಂಗಳೂರು ಮುಖ್ಯ ಬಸ್‌ಸ್ಟಾಂಡ್‌ನಲ್ಲಿ ವಿಚಾರಿಸಿ ಕೊಂಡುಕೊಳ್ಳಿ. ಇದು ನಿಮಗೆ ತುಂಬಾ ಉಪಯೋಗಕ್ಕೆ ಬರುತ್ತದೆ. ಕರ್ನಾಟಕದ ಭೂಪಟವೂ ಸಿಗುತ್ತದೆ.

---

೧೮. ಸಾಧನೆ, ಬೆಂಗಳೂರು!

ಬೆಂಗಳೂರು ಎನ್ನುವ ಹೊಸ ಊರು ಸ್ಥಾಪನೆಗೊಂಡಕೂಡಲೇ ಕಂಡದ್ದು, ಕೆಂಪೇಗೌಡ ಎನ್ನುವ ಕನಸುಗಾರನನ್ನು, ಪ್ರಜಾಪರಿಪಾಲಕನನ್ನು ಮತ್ತು ಒಬ್ಬ ದೈವಭಕ್ತ, ಪರಮಸಾಹಸಿಯನ್ನು. ಸುತ್ತಮುತ್ತಲು ಎಲ್ಲೂ ಇಂಥ ಊರು ಇನ್ನೊಂದು ಇರಬಾರದು ಎಂದು ಕನಸುಕಂಡ, ಯೋಜಿಸಿದ ಬೆಂಗಳೂರು ನಿರ್ಮಿಸಿದ ಈ ಮಹನೀಯ, ಈ ಊರು ಕಂಡ ಮೊಟ್ಟ ಮೊದಲ ಸಾಧನಶೀಲ. ಬೆಂಗಳೂರಿನ ಅದೃಷ್ಟವೊ ಏನೊ! ಇದು ಸ್ಥಾಪನೆಗೊಂಡಾಗಿನಿಂದಲೂ ಕನಸುಗಾರರನ್ನು, ಸಾಧನಶೀಲರನ್ನೂ ಇಂದಿನವರೆಗೂ ಕಾಣಿಸುತ್ತಲೇ ಬರುತ್ತಿದೆ. ಶತ್ರುಗಳಾಗಿ ಬಂದು ಈ ಊರನ್ನು ಆಕ್ರಮಿಸಿಕೊಂಡವರೂ ಕೂಡ ಈ ನಗರವನ್ನು ಪ್ರೀತಿಸಿದ್ದಾರೆ. ಬಿಜಾಪುರ ಸುಲ್ತಾನ ದಂಡೆತ್ತಿ ಬಂದು ಬೆಂಗಳೂರನ್ನು ಆಕ್ರಮಿಸಿಕೊಂಡಾಗ ಇದು ಮರಾಠಿಗರ ಪಾಲಾಯಿತು. ಷಹಜಿ ರಾಜ ಇದನ್ನು ತನ್ನ ಹೃದಯದ ಹೆಮ್ಮೆಯ ಊರಾಗಿಸಿದ, ಯಾವ ಊರನ್ನು ಬಿಟ್ಟರೂ ಈ ಊರನ್ನು ಬಿಡಲಾರೆ ಎಂದ. ಅವನ ಮಗ ಶಿವಾಜಿ ಈ ಊರಲ್ಲಿ ಎರಡು ವರ್ಷ ವಾಸವಾಗಿದ್ದವನು ಇದನ್ನು ಸೋದರನಿಂದ ತನ್ನ ವಶವಾಗಿಸಿಕೊಳ್ಳಲು ಎಲ್ಲ ಪ್ರಯತ್ನಗಳನ್ನೂಪಟ್ಟ. ಮೈಸೂರು ಮಹಾರಾಜರ ಕಣ್ಣು ಇದರ ಮೇಲೆ ಬಿದ್ದಿತು. ದೆಹಲಿಯ ದೊರೆ ಔರಂಗಜೇಬನ ದೃಷ್ಟಿ ಇದರ ಮೇಲೆ ಬಿದ್ದಿತು. ಹೈದರಾಲೀ-ಟೀಪೂಸುಲ್ತಾನ ಇದನ್ನು ತಮ್ಮ ಸ್ವತ್ತೆಂದು ಭಾವಿಸಿ ಇದನ್ನು ಭದ್ರಗೊಳಿಸಿದರು. ಅನಂತರ ಬಂದ ಇಂಗ್ಲಿಷರು 'ಬೆಂಗಳೂರು ಇಂಗ್ಲೆಂಡಿನ ಹಾಗಿದೆ!' ಎಂದು ಇಲ್ಲಿನ ಪರಿಸರ, ವಾತಾವರಣ, ಹಸಿರು ನೋಡಿ ಇದನ್ನೇ ತಮ್ಮ ಆಡಳಿತದ ತಾಣವನ್ನಾಗಿ ಸ್ವೀಕರಿಸಿದ್ದೇ ಅಲ್ಲದೆ, ಬೆಂಗಳೂರನ್ನು ನೀತಿನಿಯಮಗಳ, ಉತ್ತಮ ಆಡಳಿತದ ಒಂದು ಊರನ್ನಾಗಿಸಿ, ಇದಕ್ಕೊಂದು ನಗರದ ವ್ಯಕ್ತಿತ್ವಕೊಟ್ಟರು. ಮೈಸೂರು ಮಹಾರಾಜರು ಅತಿ ಪ್ರೀತಿ ಹೆಮ್ಮೆಗಳಿಂದ ಈ ಊರನ್ನು ಬೆಳೆಸಿದರು. ಇಡೀ ದೇಶದಲ್ಲಿ ವಿದ್ಯುತ್ ಮೊಟ್ಟಮೊದಲು ಬಂದದ್ದು ಬೆಂಗಳೂರಿಗೆ-ಇದು ಮಹಾರಾಜರ ಕೊಡುಗೆ.

ಹೀಗೆ ಐತಿಹಾಸಿಕವಾಗಿ ಗಮನಿಸಿದಾಗ ಬೆಂಗಳೂರಿನ ಬೆಳವಣಿಗೆಗೆ ಈ ಎಲ್ಲ ಕನಸುಗಾರರ-ಸಾಧನಶೀಲರ ಕೊಡುಗೆ ಅತ್ಯಂತ ಮಹತ್ವವಾದದ್ದು. ಆ ಕಾಲದ ಬೃಹತ್

ಕಟ್ಟಡಗಳಾದ, ಬೆಂಗಳೂರು ಅರಮನೆ, ಟೀಪೂ ಅರಮನೆ, ಅಠಾರಾ ಕಛೇರಿ, ನ್ಯೂ ಪಬ್ಲಿಕ್ ಆಫೀಸ್, ಲಾಲ್‌ಬಾಗ್-ಕಬ್ಬನ್‌ಪಾರ್ಕ್, ಮ್ಯೂಜಿಯಂ, ಶಿಕ್ಷಣದ ದೊಡ್ಡ ಪ್ರಗತಿ. ಊರಿಂದೂರಿಗೆ ರಸ್ತೆಗಳು-ಇವೆಲ್ಲ ಈ ಮಹನೀಯರ ಪರಿಶ್ರಮ.

ಅನಂತರ ಬೆಂಗಳೂರು ಮೈಸೂರು ದಿವಾನರ ಕೂಸಾಯಿತು. ಇಂಗ್ಲಿಷರಿಂದ ಮೈಸೂರು ಮಹಾರಾಜರ ಆಡಳಿತಕ್ಕೆ ಬೆಂಗಳೂರು ಬಂದ ಕೂಡಲೇ, ಇದರ ವ್ಯಕ್ತಿತ್ವವೇ ಬದಲಾಯಿತು. ರಂಗಾಚಾರ್ಯ, ಶೇಷಾದ್ರಿಐಯ್ಯರ್, ಸರ್.ಎಂ.ವಿಶ್ವೇಶ್ವರಯ್ಯ, ಸರ್ ಮಿರ್ಜಾ ಇಸ್ಮಾಯಿಲ್ ಮೊದಲಾದ ಮೈಸೂರು ದಿವಾನರ ಕೊಡುಗೆ ತುಂಬಾ ದೊಡ್ಡದು. ಇವರೆಲ್ಲರ ದುಡಿಮೆಯಿಂದ ಮೈಸೂರು ರಾಜ್ಯ ದೇಶದಲ್ಲೇ ಮಾದರಿ ನಗರವಾದದ್ದಲ್ಲದೆ, ಬೆಂಗಳೂರು ನಗರ ದೇಶದ ಬಂದು ಮುಖ್ಯ-ಸುಂದರ ನಗರವೆನಿಸಿಕೊಂಡಿತು. ಭಾರತಕ್ಕೆ ಸ್ವಾತಂತ್ರ್ಯ ಬರುವವರೆವಿಗೂ ಮೈಸೂರು ದಿವಾನರುಗಳು ನಿಸ್ವಾರ್ಥ ಸೇವೆ ಸಲ್ಲಿಸಿದ್ದಾರೆ. ಅಂದು ಅವರು ಹಾಕಿದ ಬೆಳವಣಿಗೆಯ ಬೀಜ, ಆಳವಾಗಿ ಬೇರುಬಿಟ್ಟು ಮಹಾವೃಕ್ಷವಾಗಿ ಇಂದಿಗೂ, ಮುಂದಿಗೂ ಬೆಂಗಳೂರಿನ ಅಭಿವೃದ್ಧಿ-ಕೀರ್ತಿಗಳಿಗೆ ಕಾರಣವಾಗುವಂತೆ ಭದ್ರವಾಗಿ ನಿಂತಿದೆ.

ಆಧುನಿಕ ಯುಗದಲ್ಲಿ ಬೆಂಗಳೂರು ಅನೇಕ ಸಾಧನಶೀಲರನ್ನು, ಕೀರ್ತಿವಂತರನ್ನು, ಹಿರಿಯ ಮಹನಿಯರನ್ನು ಕಂಡಿತು. ಇವರೆಲ್ಲರೂ ಬೆಂಗಳೂರನ್ನು ಕೀರ್ತಿಶಿಖರದತ್ತ ಒಯ್ಯುವ ಕೆಲಸಗಳನ್ನು ಮಾಡಿದರು. ಇಂಥ ಸಾಧನಶೀಲರ-ಕನಸುಗಾರರ ಸರಪಳಿ ಇನ್ನೂ ಹಿಗ್ಗುತ್ತಲೇ ಇದೆ. ಮಹಾನ್ ವ್ಯಕ್ತಿಗಳು ಹುಟ್ಟಿಕೊಳ್ಳುತ್ತಲೇ ಇದ್ದಾರೆ.

ಬಹುಶಃ ಆಧುನಿಕ ಯುಗದ ಸಾಧನಶೀಲರಲ್ಲಿ ಮೊದಲ ಹೆಸರು. ಸರ್.ಎಂ. ವಿಶ್ವೇಶ್ವರಯ್ಯ ಅವರದೇ ಆಗುತ್ತದೇನೊ? ಕನ್ನಡ ನಾಡಿನ ಸರ್ವತೋಮುಖ ಬೆಳವಣಿಗೆಗೆ ಕಾರಣವಾಗಿ, ಕೃಷ್ಣರಾಜ ಅಣೆಕಟ್ಟು ನಿರ್ಮಿಸಿ, ನಾಡಿನ ಉಳುಮೆಗಾರರ ದೈವವಾಗಿ, ಬೃಂದಾವನವೆನ್ನುವ ಭೂಸ್ವರ್ಗವನ್ನು ಅವರು ಸೃಷ್ಟಿಸಿದರು ಇವೆಲ್ಲವೂ ಇಂದಿಗೂ ಉಳಿದುಕೊಂಡು ಅವರ ಹೆಸರನ್ನು ಪ್ರಾತಃ ಸ್ಮರಣೆಯಗೊಳಿಸಿದೆ. ಸರ್.ಎಂ.ವಿ. ಅವರು ತಮ್ಮ ಕೊನೆಗಾಲವನ್ನು ಬೆಂಗಳೂರಿನಲ್ಲಿ ಕಳೆದು, ತಾಂತ್ರಿಕವಾಗಿ ನಗರವನ್ನು ಬೆಳೆಸಿದರು.

ಬೆಂಗಳೂರು ನಗರವನ್ನು ೧೯ನೇ ಶತಮಾನದ ಅನಂತರ ಬೇಕಾದಷ್ಟು ವಿಜ್ಞಾನಿಗಳು, ಆಡಳಿತಗಾರರು, ವಿದ್ಯಾಗುರುಗಳು, ಕಲಾವಿದರು, ಪತ್ರಿಕೋದ್ಯಮಿಗಳು, ಲೇಖಕರು, ವ್ಯವಹಾರೋದ್ಯಮಿಗಳು, ಕ್ರೀಡಾಪಟುಗಳು, ಗಾಯಕರು, ಸಾರ್ವಜನಿಕ ಮಹನೀಯರು ಸಾಹಿತ್ಯಕವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಬೆಳೆಸಿದ್ದಾರೆ, ಶ್ರೀಮಂತಗೊಳಿಸಿದ್ದಾರೆ.

ನೋಬೆಲ್ ಪಾರಿತೋಷಕ ಪಡೆದ ವಿಜ್ಞಾನಿ ಡಾ. ಸರ್.ಸಿ.ವಿ. ರಾಮನ್ ಬೆಂಗಳೂರು ವಾಸಿಯಾಗಿದ್ದರು. ಅವರಂತೆಯೇ ಮುಂದೆ ಡಾ. ಚಂದ್ರಶೇಖರ್, ಡಾ.ವಿ.ಆರ್ ಘಾಟ್ಗೆ, ಡಾ. ಸಿ.ಎನ್.ಆರ್. ರಾವ್, ಡಾ. ರಾಜಾರಾಮಣ್ಣ, ಡಾ. ಪ್ರಹ್ಲಾದ್ ಮೊದಲಾದವರು ವಿಜ್ಞಾನ ಸಂಶೋಧನೆಗೆ ಮತ್ತು ಅಧ್ಯಯನಕ್ಕೆ ಮುಂದಿನ ಪೀಳಿಗೆಗೆ ಮಾದರಿಯಾಗಿದ್ದಾರೆ.

ಕನ್ನಡದಲ್ಲಿ ಪತ್ರಿಕೋದ್ಯಮ, ಪುಸ್ತಕೋದ್ಯಮ, ನಾಟಕೋದ್ಯಮ ಎಲ್ಲವೂ ಸುಮಾರು ಏಕಕಾಲಕ್ಕೆ ಪ್ರಾರಂಭವಾದವು. ಮೊದಮೊದಲ ಬೆಂಗಳೂರು ಪತ್ರಿಕೆ ಪ್ರಾರಂಭಿಸಿದವರು, ಭಾಷ್ಯಂ ತಿರುಮಲಾಚಾರ್ಯ ಅವರು, ಅನಂತರ ಅವರ ಪುತ್ರಭಾಷ್ಯಂ ಭಾಷ್ಯಾಚಾರ್ಯ ಅವರದನ್ನು ಮುಂದುವರಿಸಿದರು. ತಿ.ತಾ.ಶರ್ಮಾ, ಸುಬೋಧಾ ರಾಮರಾಯರು, ಪಿ.ಆರ್.ರಾಮಯ್ಯ, ವೀರಕೇಸರಿ ಸೀತಾರಾಮ ಶಾಸ್ತ್ರೀ, ಬಿ.ಎನ್. ಗುಪ್ತಾ, ಟಿ.ಎಸ್. ರಾಮಚಂದ್ರರಾವ್ ಕನ್ನಡ ಪತ್ರಿಕೋದ್ಯಮದ ದೊಡ್ಡ ಹೆಸರುಗಳು. ಕೆ.ಎನ್. ಗುರುಸ್ವಾಮಿ ಅವರು 'ಡೆಕ್ಕನ್ ಹೆರಾಲ್ಡ್' 'ಪ್ರಜಾವಾಣಿ' ಪ್ರಾರಂಭಿಸಿ ಬೆಂಗಳೂರು ಆಧುನಿಕ ಪತ್ರಿಕೋದ್ಯಮಕ್ಕೊಂದು ಗಟ್ಟಿಯಾದ ತಳಪಾಯ ಹಾಕಿದರು. ಅನಂತರ ಅವರ ಮಗ, ನೆಟ್ಟಕಲ್ಲಪ್ಪ ಅವರು ಪತ್ರಿಕೆಗಳನ್ನು ವ್ಯವಸ್ಥಿತವಾಗಿ ಬೆಳೆಸಿದರು. ಬೆಂಗಳೂರಿನವರದೇ ಪತ್ರಿಕಾ ಬಳಗವಾದ ಇದು ಕೀರ್ತಿಶಾಲಿಯಾಗಿ ಭದ್ರಬುನಾದಿ ಮೇಲೆ ನಿಂತಿದೆ.

ಸಾಧನಶೀಲ ಲೇಖಕರಲ್ಲಿ ಕೈಲಾಸಂ, ದೇವುಡು, ಡಿವಿಜಿ, ಮಾಸ್ತಿ, ಗೊರುರು, ಕೆ.ವಿ.ಅಯ್ಯರ್, ರಾಜರತ್ನಂ, ವಿಸೀ, ಅನಕೃ, ಪುತಿನ, ಕೆಎಸ್‌ನ ಬೆಂಗಳೂರಿನಲ್ಲಿಯೇ ಕೊನೆಯವರೆಗೂ ವಾಸಮಾಡಿ ಸಾಹಿತ್ಯ-ಸಂಸ್ಕೃತಿ ಹರಡಿಸಿದರು.

ಬೆಂಗಳೂರಿನ ಕಲಾಲೋಕ ಕಾಣಿಸಿದ ಹಿರಿಯ ಕಲಾವಿದರಲ್ಲಿ, ಎಚ್.ಎಸ್. ಇನಾಮತಿ, ರುಮಾಲೆ ಚನ್ನಬಸವಯ್ಯ, ಶಿಲ್ಪಿವೆಂಕಟಪ್ಪ, ಅ.ನ. ಸುಬ್ಬರಾವ್, ನಂಜುಂಡರಾವ್, ಹಡಪದ್, ವೈ. ಸುಬ್ರಹ್ಮಣ್ಯರಾಜು, ಎಂ.ಟಿ.ವಿ. ಆಚಾರ್ಯ ಮೈಸೂರು ಚಿತ್ರಕಲೆಯನ್ನು ದೊಡ್ಡದಾಗಿ ಬೆಳೆಸಿ, ಉಳಿಸಿದವರು. ಇವರ್ಯಾರೂ ಈಗ ನಮ್ಮೊಂದಿಗಿಲ್ಲ.

ಜ್ಯೋತಿಷ್ಯ ಶಾಸ್ತ್ರವನ್ನು ಬೆಳೆಸಿದ ಕೀರ್ತಿಯ ಕುಟುಂಬದಿಂದ ಬಂದ ಡಾ.ಬಿ.ವಿ.ರಾಮನ್ ಅವರು ರಾಷ್ಟ್ರೀಯ-ಅಂತಾರಾಷ್ಟ್ರೀಯ ಜ್ಯೋತಿಷ್ಯ ವಿಜ್ಞಾನಿಯಾಗಿ ಬೆಳೆದು ದೊಡ್ಡ ಸೇವೆ ಮಾಡಿದವರು 'ಅಸ್ಟ್ರಲಾಜಿಕಲ್ ಮ್ಯಾಗಜೀನ್' ಎನ್ನುವಂಥ ವಿಶಿಷ್ಟ ಪತ್ರಿಕೆಯನ್ನು ಪ್ರಕಟಿಸಿ ನಡೆಸಿದವರು.

ಕನ್ನಡ ಹಾಸ್ಯ ಸಾಹಿತ್ಯವನ್ನು ಸರಿಯಾದ ಚೌಕಟ್ಟಿಗೆ ತಂದು 'ಕೊರವಂಜಿ' ಹಾಸ್ಯಮಾಸಪತ್ರಿಕೆಯನ್ನು ಪ್ರಾರಂಭಿಸಿ (೧೯೪೨) ನೂರಾರು ಹಾಸ್ಯಲೇಖಕರ ಸೃಷ್ಟಿಗೆ ಕಾರಣರಾದವರು, ಮತ್ತು ಅತ್ಯುತ್ತಮ ವೈದ್ಯರು, ಬೆಂಗಳೂರಿನ ಮೊಟ್ಟ ಮೊದಲ ವೈದ್ಯಕೀಯ ಕಾಲೇಜ್ 'ಬೆಂಗಳೂರು ಮೆಡಿಕಲ್ ಕಾಲೇಜ್' ಪ್ರಾರಂಭಿಸಿದವರು ಆದ, ಡಾ. ಆರ್ ಶಿವರಾಂ ಅವರು. ಕನ್ನಡ ವ್ಯಂಗ್ಯಚಿತ್ರ ಲೋಕಕ್ಕೆ ಸುಪ್ರಸಿದ್ಧ ಕಾರ್ಟೂನಿಸ್ಟ್ ಆರ್.ಕೆ. ಲಕ್ಷ್ಮಣ್ ಅವರನ್ನು ಪರಿಚಯಿಸಿದವರು. ಒಂದು ರೀತಿ 'ಕೊರವಂಜಿ'ಯಿಂದಲೇ ಪ್ರಭಾವಿತರಾದ ಬಿ.ವಿ. ರಾಮಮೂರ್ತಿ ಅನಂತರ 'ಡೆಕ್ಕನ್ ಹೆರಾಲ್ಡ್ - ಪ್ರಜಾವಾಣಿ' ಸೇರಿ ದಕ್ಷಿಣ ಭಾರತದ ಮುಖ್ಯ ವ್ಯಂಗ್ಯಚಿತ್ರಕಾರರಲ್ಲಿ ಒಬ್ಬರಾಗಿ ಬೆಳೆದರು.

ಸಂಗೀತ-ನೃತ್ಯ-ನಾಟಕ ಲೋಕಗಳಲ್ಲಿ ಬೆಂಗಳೂರು ದಿಗ್ಗಜರನ್ನು ಕಂಡಿದೆ. ಗುಬ್ಬಿವೀರಣ್ಣ, ಹಿರಣ್ಣಯ್ಯ, ಸುಬ್ಬಯ್ಯನಾಯ್ಡು, ಆರ್.ನಾಗೇಂದ್ರರಾವ್, ಮಾಸ್ಟರ್ ಹಿರಣ್ಣಯ್ಯ ಕನ್ನಡ ರಂಗಭೂಮಿ ಬೆಳಗಿದವರು. ಮಾಯಾರಾವ್ (ಕಥಕ್), ಯು.ಎಸ್. ಕೃಷ್ಣರಾವ್ ಮತ್ತು ಚಂದ್ರಭಾಗಾದೇವಿ (ಭರತ್ಯನಾಟ್ಯ) ನೃತ್ಯಲೋಕದ ತಾರೆಯರಾದರು. ಡಾ.ವಿ.ದೊರೆಸ್ವಾಮಿ ಅಯ್ಯಂಗಾರ್, ಆರ್.ಕೆ. ಶ್ರೀಕಂಠನ್ ಅವರು ಶಾಸ್ತ್ರೀಯ ಸಂಗೀತದಲ್ಲೂ, ಪಿ.ಕಾಳಿಂಗರಾವ್, ಮೈಸೂರು ಅನಂತಸ್ವಾಮಿ, ಸಿ. ಅಶ್ವತ್ಥ್ ಅವರು ಸುಗಮಸಂಗೀತದಲ್ಲೂ ದೊಡ್ಡ ಹೆಸರು ಮಾಡಿದವರು.

ಕರ್ನಾಟಕ ಕ್ರೀಡಾಲೋಕ ವಿಶ್ವಮಟ್ಟದ ಕ್ರೀಡಾಪಟುಗಳನ್ನು ಕಾಣಿಸಿದೆ. ಅತ್ಯಂತ ಜನಪ್ರಿಯ ಕ್ರೀಡೆ ಕ್ರಿಕೆಟ್‌ನಲ್ಲಿ, ಬ್ರಿಜೇಶ್ ಪಟೇಲ್, ಪ್ರಸನ್ನ, ಚಂದ್ರಶೇಖರ, ಕಿರ್ಮಾನಿ, ರೋಜರ್ ಬಿನ್ನಿ, ವಿಶ್ವನಾಥ್, ಕುಂಬ್ಳೆ, ಶ್ರೀನಾಥ್, ದ್ರಾವಿಡ್, ವೆಂಕಟೇಶಪ್ರಸಾದ್ ಪ್ರಪಂಚ ಪ್ರಸಿದ್ಧರಾಗಿಹೋಗಿದ್ದಾರೆ. ಷಟಲ್ ಕ್ರೀಡೆಯಲ್ಲಿ ಪ್ರಪಂಚದ ಅನೇಕ ಪ್ರಶಸ್ತಿಗಳನ್ನು ಗೆದ್ದುಕೊಂಡ ಪ್ರಕಾಶ್ ಪಡುಕೋಣೆ ಬೆಂಗಳೂರು ನಗರವನ್ನು ಲೋಕಪ್ರಸಿದ್ಧಿಗೊಳಿಸಿದರು ಮತ್ತು ಬೆಂಗಳೂರು ವಾಸಿಯಾಗಿದ್ದುಕೊಂಡು ಕ್ರೀಡೆಗೆ ದೊಡ್ಡ ಬೆಂಬಲ ನೀಡುತ್ತಿದ್ದಾರೆ. ರಾಷ್ಟ್ರೀಯ ಮಹಿಳಾ ಕ್ರಿಕೆಟ್ ಕ್ಯಾಪ್ಟನ್ ಆಗಿದ್ದ ಶಾಂತಾರಂಗಸ್ವಾಮಿ ಬೆಂಗಳೂರು ಮಹಿಳೆ ಬೆಳೆದೊಂದು ಎತ್ತರ.

ಕನ್ನಡ ರಂಗಭೂಮಿ-ಚಲನಚಿತ್ರದ 'ಸೂಪರ್ ಸ್ಟಾರ್' ಆಗಿರುವವರು, ಕರ್ನಾಟಕರತ್ನ-ಪದ್ಮಭೂಷಣ ಡಾ. ರಾಜಕುಮಾರ್ ಅವರು ರಂಗಭೂಮಿಯ ಕೂಸಾಗಿಯೇ ಬೆಳೆದು, ಅಲ್ಲಿ ತಂದೆಯವರೊಂದಿಗೆ ಅಭಿನಯ ಮೈಗೂಡಿಸಿ ಕೊಂಡರು. ಡಾ. ರಾಜಕುಮಾರ್ ಅವರು ಕನ್ನಡ ಚಿತ್ರರಂಗ ಪ್ರವೇಶಿಸಿ ಇದೀಗ 'ಚಿನ್ನದ ಸಂಭ್ರಮ'

ನಡೆದಿದೆ (೧೯೫೪-೨೦೦೪). ಕರ್ನಾಟಕ ಕಂಡ ಅತ್ಯಂತ ಜನಪ್ರಿಯ ಮತ್ತು ಅತ್ಯಂತ ಎತ್ತರ ಎಟುಕಿಸಿಕೊಂಡ ಕಲಾವಿದ ಅವರು, ಸಾರ್ವಜನಿಕವಾಗಿ ಕನ್ನಡಿಗರ ಪರಿಪೂರ್ಣ ಅಭಿಮಾನವನ್ನವರು ಗಳಿಸಿ ಕೊಂಡಿದ್ದಾರೆ.

'ವಿಧಾನ ಸೌಧ' ನಿರ್ಮಿಸಿದ ಕೆಂಗಲ್ ಹನುಮಂತಯ್ಯ ಅವರು ಬೆಂಗಳೂರು ಇತಿಹಾಸಕ್ಕೆ ದಾಖಲಾಗಿದ್ದಾರೆ. ಅವರು ಅತಿ ಪ್ರೀತಿಯಿಂದ ನಿರ್ಮಿಸಿದ 'ವಿಧಾನಸೌಧ' ಇಂದು ಬೆಂಗಳೂರಿನ ಪ್ರವಾಸೀ ತಾಣಗಳಲ್ಲಿ ಒಂದಾಗಿ ನಿಂತಿದೆ. ಇದೀಗ ಎರಡನೆ ವಿಧಾನಸೌಧ ಎನಿಸಿಕೊಳ್ಳಲಿರುವ 'ವಿಕಾಸ ಸೌಧ'ವನ್ನು ನಿರ್ಮಿಸಿರುವ ಎಸ್.ಎಂ. ಕೃಷ್ಣ ಅವರೂ ಸಹ ಬೆಂಗಳೂರು ಇತಿಹಾಸದ ಸುವರ್ಣ ಪುಟಗಳನ್ನು ಸೇರಿಕೊಳ್ಳಲಿದ್ದಾರೆ. 'ವಿಕಾಸ ಸೌಧ'ವೂ ಬೆಂಗಳೂರಿನ ಪ್ರವಾಸೀ ತಾಣಗಳಲ್ಲಿ ಒಂದಾಗಲಿದೆ. ಆಶ್ಚರ್ಯವೆನಿಸುವಂಥ ಸಾಮ್ಯವೆಂದರೆ, ಬೆಂಗಳೂರು ನಿರ್ಮಾತ ಕೆಂಪೇಗೌಡ, ವಿಧಾನಸೌಧ ನಿರ್ಮಾತ ಹನುಮಂತಯ್ಯ ಮತ್ತು 'ವಿಕಾಸ ಸೌಧ' ನಿರ್ಮಾತ ಎಸ್.ಎಂ. ಕೃಷ್ಣ ಇವರೆಲ್ಲರೂ ಒಂದೇ ಪಂಗಡಕ್ಕೆ ಸೇರಿದವರು.

ಬೆಂಗಳೂರನ್ನು ಒಂದು 'ಸೇವಾ ತಾಣ'ವನ್ನಾಗಿಸಿದ ಹಿರಿಮೆ, ಜನಪ್ರಿಯ ಹೋಟೆಲ್‌ಗಳನ್ನು ಪ್ರಾರಂಭಿಸಿದ ಮಹನಿಯರಿಗೆ ಸೇರುತ್ತದೆ. ದೊಡ್ಡಪೇಟೆ-ಚಿಕ್ಕಪೇಟೆ ಸಂಧಿ ತಾಣದಲ್ಲಿ ೧೮೯೮ಕ್ಕೂ ಹಿಂದೆ ಹೋಟಲ್ ಪ್ರಾರಂಭಿಸಿದ ಅವನಿ ನರಸಿಂಹರಾವ್, ಅನಂತರ ಆರ್ಕಾಟ್ ಶ್ರೀನಿವಾಸಾಚಾರ್ ಬೀದಿಯಲ್ಲಿ ವೆಂಕಟಣ್ಣನ ಹೋಟಲ್ ಪ್ರಾರಂಭವಾಯಿತು. ಹೋಟೆಲ್‌ನ್ನು ಒಂದು ಜನಸೇವೆಯಾಗಿಯೇ ಭಾವಿಸಿ, ಡಿ.ವಿ. ಗುಂಡಪ್ಪನವರ ಪ್ರೋತ್ಸಾಹ- ಬೆಂಬಲದಿಂದ (ಮೊದಲು ಆರ್ಕಾಟ್ ಶ್ರೀನಿವಾಸಾಚಾರ್ ಬೀದಿಯಲ್ಲಿ, ಅನಂತರ) ಆನಂದರಾವ್ ಸರ್ಕಲ್‌ನಲ್ಲಿ 'ಮಾಡ್ರನ್ ಹಿಂದೂ ಹೋಟಲ್' (೧೮೯೮) ಪ್ರಾರಂಭಿಸಿದವರು ಕೆ.ಟಿ. ಅಪ್ಪಣ್ಣ. ಇಲ್ಲಿ 'ಮೈಸೂರು ಭೋಜನ' ವಿಶೇಷವಾಗಿತ್ತು. ದಕ್ಷಿಣ ಭಾರತದ ಎಲ್ಲ ಕಲಾವಿದರು, ಸಂಗೀತಗಾರರು ಈ ಸಾಂಪ್ರದಾಯಿಕ ಶೈಲಿಯ ಹೋಟಲ್‌ನ್ನು ಆಶ್ರಯಿಸುತ್ತಿದ್ದರು. ಹೋಟಲ್ ವ್ಯಾಪಾರವನ್ನು ನಕ್ಷತ್ರಮಟ್ಟಕ್ಕೆ ತೆಗೆದುಕೊಂಡು ಹೋದವರು, ಶ್ರೀಶಾಸ್ತ್ರೀ ಅವರು. ಬೆಂಗಳೂರಿನ ಚಿಕ್ಕಪೇಟೆಯಲ್ಲಿ 'ಶಾಸ್ತ್ರೀಸ್ ಹೋಟೆಲ್' ಪ್ರಾರಂಭಿಸಿದ ಅವರು, ಗಾಂಧಿನಗರದಲ್ಲಿ 'ತಾಜ್‌ಮಹಲ್' ಹೋಟಲ್ ಪ್ರಾರಂಭಿಸಿ, ಅನಂತರ ಹೈಗ್ರೌಂಡ್ಸ್ ಪ್ರದೇಶದಲ್ಲಿ 'ಹೋಟೆಲ್ ಅಂಬಾಸಿಡರ್' ಪ್ರಾರಂಭಿಸಿ, ಬೆಂಗಳೂರಿನ ಹೋಟಲ್ ಉದ್ಯಮಕ್ಕೊಂದು ವಿಸ್ತಾರ ಕಾಣಿಸಿದರು. ಇವರ ಮಕ್ಕಳು ಬೆಂಗಳೂರು ಬಸವನಗುಡಿ, ಗಾಂಧಿಬಜಾರ್‌ನಲ್ಲಿ 'ಹೋಟಲ್ ಆತಿಥ್ಯ' ಪ್ರಾರಂಭಿಸಿ ಜನಪ್ರಿಯವಾಗಿ ನಡೆಸುತ್ತಿದ್ದಾರೆ.

ಬೆಂಗಳೂರು ದಂಡಿನಲ್ಲಿ ಕ್ರಿಶ್ಚಿಯನ್ ಪಾದ್ರಿಗಳು ವಿದ್ಯಾಕೇಂದ್ರಗಳನ್ನು ಸ್ಥಾಪಿಸಿದರೆ, ಬೆಂಗಳೂರು ನಗರದಲ್ಲಿ ವಿದ್ಯಾಭಿಮಾನಿಗಳು, ವ್ಯವಹಾರಸ್ಥರು ವಿದ್ಯಾಕೇಂದ್ರಗಳನ್ನು ಪ್ರಾರಂಭಿಸಿ, ಅವು ಈಗ ಹೆಮ್ಮರಗಳಾಗಿ ಬೆಳೆದಿವೆ. ಎಸ್. ಅನಂತರಂಗಾಚಾರ್, ಬಿ.ಎಂ. ಶ್ರೀನಿವಾಸಯ್ಯ, ಎಂ.ಎಸ್. ರಾಮಯ್ಯ, ಮೇಧಾಕಸ್ತೂರಿರಂಗಶೆಟ್ಟಿ, ಡಾ. ಎಂ.ಆರ್. ದೊರೆಸ್ವಾಮಿ (ಪಿಇಎಸ್ ಶಿಕ್ಷಣ ಸಂಸ್ಥೆಗಳು)- ಬೆಂಗಳೂರಿನಲ್ಲಿ ಖಾಸಗಿ ಉನ್ನತ ಶಿಕ್ಷಣ ಸಂಸ್ಥೆಗಳನ್ನು ಕಟ್ಟಿ ಯಶಸ್ವಿಯಾದವರು. ಇವರೆಲ್ಲ ನಿರ್ಮಿಸಿದ ಶಿಕ್ಷಣ ಸಂಸ್ಥೆಗಳು ಇಂದಿಗೂ ಜ್ಞಾನದೇಗುಲಗಳಾಗಿ ಬೆಳಗುತ್ತಿವೆ. ದಿವಂಗತ ಕೆ. ಸಂಪದ್ಗಿರಿರಾವ್ ಅವರು ಬೆಂಗಳೂರು ಕಂಡ ಆದರ್ಶ ಮಹಾಶಿಕ್ಷಕರು ಆಗಿದ್ದವರು.

ಖ್ಯಾತ ಅರ್ಥಶಾಸ್ತ್ರಜ್ಞರಾದ ಡಾ. ವಿ.ಕೆ.ಆರ್.ವಿ. ರಾವ್, ಡಾ. ಪಿ.ಎಂ. ನಂಜುಂಡಪ್ಪ, ಡಾ. ಪಿ.ಆರ್. ಬ್ರಹ್ಮಾನಂದ ಮತ್ತು ಡಾ. ವೆಂಕಟಗಿರಿಗೌಡ ಅವರ ಹೆಸರು ಅರ್ಥಲೋಕ-ಅರ್ಥ ಶಿಕ್ಷಣ ಲೋಕದಲ್ಲಿ ಚಿರಸ್ಥಾಯಿಯಾಗಿ ಉಳಿಯುತ್ತದೆ. ಬೆಂಗಳೂರು ರಸ್ತೆಬದಿಗಳಲ್ಲಿ ಉದ್ಯಾನಗಳನ್ನು ಯೋಜಿಸಿದ ಶ್ರೀ ಎನ್. ಲಕ್ಷ್ಮಣರಾವ್ ಅವರನ್ನಂತೂ ಮರೆಯುವಂತೆಯೇ ಇಲ್ಲ.

ಕೆಳಸ್ತರದಿಂದ, ಬಡತನದಿಂದ ಮೇಲೆ ಬಂದು, ಸರಳತೆಯೇ ಮೈವೆತ್ತಂತೆ ಉತ್ತಮ ಉದಾಹರಣೆಯಾಗಿ ಬದುಕುತ್ತಿರುವ, ಡಾ. ಎಚ್. ನರಸಿಂಹಯ್ಯ ಅವರ ವಿದ್ಯಾಸೇವೆ ಮತ್ತು ಸಮಾಜಮುಖಿ ಅನಿಸಿಕೆಗಳು, ವೈಜ್ಞಾನಿಕ ನೋಟಗಳು ಮತ್ತು ಖಚಿತ ನಿರ್ಧಾರಗಳ ಜೀವನ ಮುಂದಿನವರಿಗೆ ಮಾದರಿಯಾಗುವಂಥದ್ದು.

ಹೊಸಶತಮಾನ ಆಕಾಶದೆತ್ತರದ ಸಾಧನಶೀಲರನ್ನು ಕಾಣಿಸಿದೆ. ಇನ್‌ಫೋಸಿಸ್ ಸ್ಥಾಪಕರಾದ ಎನ್. ನಾರಾಯಣ ಮೂರ್ತಿ, ವಿಪ್ರೋ ಮುಖ್ಯಸ್ಥರಾದ ಅಜೀಂಪ್ರೇಮ್‌ಜೀ ಮತ್ತು ಬಯೋಕಾನ್ ಸ್ಥಾಪಕರಾದ ಕಿರಣ ಮಜುಮ್‌ದಾರ್, ಚಲನಚಿತ್ರ ನಿರ್ದೇಶಕ-ನಿರ್ಮಾಪಕ ಜಿ.ವಿ. ಅಯ್ಯರ್ ಬೆಂಗಳೂರಿನ ಸಾಧನಶೀಲರ, ಸ್ಮರಣೀಯರ ಪಟ್ಟಿಯಲ್ಲಿ ಸೇರುತ್ತಾರೆ.

ನಮ್ಮನ್ನೂ ಸಾಧನಶೀಲರಾಗುವಂತೆ, ಎತ್ತರಗಳನ್ನು ಎಟುಕಿಸಿಕೊಳ್ಳುವಂತೆ ಮಾಡಲು ಬೆಂಗಳೂರಿನ ಇಷ್ಟೊಂದು ಮಾದರಿಗಳಿಗಿಂತಲೂ ಬೇರೆ ಬೇಕೆ?

(ಖಂಡಿತವಾಗಲೂ ಇನ್ನೂ ನೂರಾರು ಹೆಸರುಗಳಿವೆ!)

■■

ನಿಮ್ಮ ಮನೆಯಲ್ಲಿ 'ಗ್ಯಾಸ್' ಸಂಬಂಧಿತ ಸಮಸ್ಯೆಗಳಿಗೆ
ಫೋನ್ ಮಾಡಿ : ೨೩೩೪೯೦೧೧

೧೯. ೨೦೨೦, ಬೆಂಗಳೂರು!

೧೫೩೭ರಲ್ಲಿ ಕೆಂಪೇಗೌಡ ಸ್ಥಾಪಿಸಿದ ಬೆಂಗಳೂರು ಆಮೆಯ ನಿಧಾನಗತಿ ಅಲ್ಲದಿದ್ದರೂ ಮೊಲದ ವೇಗದಲ್ಲಂತೂ ಮೊದಲ ೩೦೦ ವರ್ಷಗಳು ಬೆಳೆಯಲಿಲ್ಲ. ೧೮೦೦ರ ತರುವಾಯ ಬೆಂಗಳೂರು ಬೆಳವಣಿಗೆ ಪ್ರಾರಂಭವಾದದ್ದು ಇಂದಿಗೂ ನಿಂತಿಲ್ಲ. ಯಾರಿಂದಲೂ ಈ ಬೆಳವಣಿಗೆಯನ್ನು ತಡೆಯಲು ಆಗಿಲ್ಲ. ೧೯೫೦ರ ಅನಂತರ ಬೆಂಗಳೂರು ಒಂದು ಮಹಾನಗರದ ಲಕ್ಷಣಗಳನ್ನು ಕಾಣಿಸುತ್ತ ಬೆಳೆಯಿತು. ಈ ಬೆಳವಣಿಗೆ ರಾಕೆಟ್ ವೇಗದಲ್ಲಿ ಮುಂದುವರಿದು ಈಗ ಬರೀ ಐದೈದು ವರ್ಷಗಳಲ್ಲಿ ಹೊಸಮುಖವನ್ನು ಕಾಣಿಸುತ್ತದೆ. ಹಾಗೆ ನೋಡಿದರೆ ಬೆಂಗಳೂರು ಜನಬದುಕು ೧೯೮೦ರ ಆನಂತರ ದೊಡ್ಡ ಬದಲಾವಣೆಯನ್ನು ಕಾಣಲು ಪ್ರಾರಂಭಿಸಿತು. ಹೊಸತಲೆಮಾರು ಹೆಚ್ಚು ಉನ್ನತ ವಿದ್ಯಾವಂತರನ್ನು ಕಾಣಿಸಿತು. ವಿದೇಶ ಪ್ರಯಾಣ-ಉನ್ನತ ಉದ್ಯೋಗ ಪ್ರಾರಂಭವಾಯಿತು. ೧೯೯೦ ಕಂಪ್ಯೂಟರ್ ಲೋಕವನ್ನು ಕೈಗೆಟುಕಿಸಿತು. ಇಪ್ಪತ್ತು-ಇಪ್ಪತ್ತೆರಡು ವಯಸ್ಸಿನ ಮಕ್ಕಳು ತಮ್ಮ ಕುಟುಂಬ ಎಂದೆಂದಿಗೂ ಕಾಣದ ವರಮಾನ ಕೈಗೆಟುಕಿಸಿಕೊಂಡಿರುವುದನ್ನು ಹಿರಿಯರು ಕಂಡರು. ಹೊಸಶತಮಾನ ಪ್ರಾರಂಭ ಬೆಂಗಳೂರಿಗರ ಪಾಲಿಗೆ ಶುಭಾರಂಭವಾಯಿತು. ಲಕ್ಷಾಧಿಪತಿಗಳು, ದಶಲಕ್ಷಾಧಿಪತಿಗಳು, ಕೋಟ್ಯಧಿಪತಿಗಳು ಸಮಾಜದ ಸಹಜ ಒಡನಾಡಿಗಳಾದರು. ಪರೀಕ್ಷೆ ಪಾಸ್ ಮಾಡಿದ ಕೂಡಲೇ ಕೆಲಸ ಸಿಗುವುದು, ಕನಿಷ್ಠ ಎಂಟು-ಹತ್ತು ಸಾವಿರ ಸಂಬಳ ಬರುವುದು ಸಾಮಾನ್ಯವಾಯಿತು. ಯುವಪೀಳಿಗೆಯ ಆತ್ಮವಿಶ್ವಾಸ ಗಗನಕ್ಕೇರಿತು. ಅವರ ಖರ್ಚು ಮಾಡುವ, ಕೊಳ್ಳುವ ಶಕ್ತಿ ಹಿಂದೆಂದೂ ಕಾಣದ ಎತ್ತರಕ್ಕೇರಿತು. ಇದರ ಫಲಿತಾಂಶ ಆಧುನಿಕ ಬೆಂಗಳೂರು ಕಾಣುತ್ತಿದೆ.

ಪಂಚತಾರಾ ಹೋಟೆಲ್‌ಗಳು ಶಕ್ತಿಮೀರಿ ದುಡಿಯುತ್ತಿವೆ. ಬಡಾವಣೆ-ಗೊಂದರಂತೆ ಸರ್ವವಸ್ತು ಭಂಡಾರಗಳು ಹುಟ್ಟಿಕೊಂಡಿವೆ. ಕಂಪನಿ ನಿರ್ಮಿತ ವಸ್ತುಗಳು ಎಲ್ಲರಿಗೂ ತಲುಪುತ್ತಿದೆ. ಮನೆಹತ್ತಿರದ ಹೋಟೆಲ್, ಮನೆ ಹತ್ತಿರದ ಸೆಲೂನ್, ದರ್ಜಿ, ದಿನಸಿ ಅಂಗಡಿ ಯಾರಿಗೂ ಬೇಕಾಗಿಲ್ಲ. 'ಫುಡ್ ವರ್ಲ್ಡ್', 'ವೇರ್ ಹೌಸ್', 'ಲೆವಿಸ್', 'ಶಾಪರ್ಸ್ ಸ್ಟಾಪ್', 'ರೀಬಾಕ್', 'ಆ್ಯರೊ', 'ವೀಕೆಂಡರ್', 'ರಹೇಜಾ ಪಾಯಿಂಟ್', 'ಜಾಕಿ', 'ಸ್ಯಾಮ್‌ಸಂಗ್', 'ಬಿಗ್‌ಬಜಾರ್', 'ನೋಕಿಯಾ-ಏರ್‌ಟೆಲ್'

'ಮ್ಯಾಕ್‌ಡೊನಾಲ್ಡ್ಸ್', 'ಪಿಜ್ಜಾಕಾರ್ನರ್', -ಎಂದು ಸುಪ್ರಸಿದ್ಧ-ಅತಿಬೆಲೆಯ 'ಬ್ರಾಂಡೆಡ್' ವಸ್ತುಗಳನ್ನೇ ಯುವಜನ ಬಯಸುತ್ತಿದ್ದಾರೆ. ಬೆಂಗಳೂರು ಜನತೆಯ ಅಭಿರುಚಿ ಬದಲಾಗುತ್ತಿರುವುದು ಇಡೀ ಪ್ರಪಂಚದ ಗಮನ ಸೆಳೆದಿದೆ. ವಿಶ್ವದ ಶ್ರೀಮಂತ ಸಂಸ್ಥೆಗಳೆಲ್ಲ ತಮ್ಮ ವ್ಯವಹಾರಗಳನ್ನು ಬೆಂಗಳೂರಿನಿಂದ ಪ್ರಾರಂಭಿಸಿದೆ. ಮನೆ, ಮನೆಯೂಟ, ಮನೆತಿಂಡಿ ಎನ್ನುವುದು ಅನಿವಾರ್ಯ ಅಗತ್ಯಗಳಾಗಿವೆ. ವಾರಾಂತ್ಯ ಪಿಕ್‌ನಿಕ್ ಹೋಗುವುದು, ಹೊರಗಡೆ ಊಟತಿಂಡಿ ಮಾಡುವುದು, ಮಹಾಭಂಡಾರಗಳಿಗೆ ಹೋಗುವುದು, ಬೆಲೆಬಾಳುವ ಮೋಟಾರ್ ಸೈಕಲ್, ಮೋಟರ್ ಕಾರುಗಳನ್ನು ಕೊಳ್ಳುವುದು -ಇವೆಲ್ಲ ಹೊಸ ತಲೆಮಾರಿನ ಸಾಮಾನ್ಯ ವಿಷಯಗಳಾಗಿವೆ.

ಎಲ್ಲ ಬದಲಾವಣೆಗಳು ಬೆಂಗಳೂರನ್ನು ವಿಶ್ವವ್ಯಕ್ತಿತ್ವಕ್ಕೆ ಹತ್ತಿರ ತಂದುಬಿಟ್ಟಿದೆ: ಇಡೀ ಪ್ರಪಂಚಕ್ಕೆ 'ಕಾಲ್ ಸೆಂಟರ್'ಗಳ ಮೂಲಕ ಬೆಂಗಳೂರಿನ ಯುವದನಿ ತಲುಪುತ್ತಿದೆ.

ಆಧುನಿಕ ಬದುಕಿಗೆ ತಕ್ಕಂತೆ ಆಧುನಿಕ ನೋಟವನ್ನು ಕಾಣಿಸುವುದು ಬೆಂಗಳೂರಿಗೆ ಕಡ್ಡಾಯವಾಗಿ ಹೋಗಿದೆ. ರಸ್ತೆಗಳು-ಪುಟ್‌ಪಾತ್‌ಗಳು ಚೊಕ್ಕವಾಗಿ ಇರಲೇಬೇಕಾಗಿದೆ, ನಗರ ಸಿಂಗಪುರದಂತೆ ಕಾಣಿಸಬೇಕಾದರೆ ಎಲ್ಲೂ ಕಸಕೊಳೆ ಕಾಣಬಾರದಾಗಿದೆ, ಮನೆಗಳವರು ಬೀದಿಯಲ್ಲಿ ಕಸ ಬಿಸಾಡುವಂತಿಲ್ಲ, ರಸ್ತೆಯಲ್ಲಿ ಎಲ್ಲೆಂದರಲ್ಲಿ ಹೆಜ್ಜೆ ಹಾಕುವಂತಿಲ್ಲ. ಎಲ್ಲೆಂದರಲ್ಲಿ ವಾಹನಗಳನ್ನು ನಿಲ್ಲಿಸುವಂತಿಲ್ಲ.... ಹೀಗೆ ನಿಯಮಗಳು ಜನ ಬದುಕನ್ನು ಒಂದು ಶಿಸ್ತಿನ ಚೌಕಟ್ಟಿಗೆ, ದೊಡ್ಡಸ್ತಿಕೆಯ ಎತ್ತರಕ್ಕೆ ಕೊಂಡೊಯ್ಯುತ್ತಿದೆ.

ಪ್ರಪಂಚ ಮಾದರಿ ಕಟ್ಟಡಗಳು, ಸಂಬಂಧಗಳು, ಕಛೇರಿಗಳು, ಉಡುಪುಗಳು ಕಾಣತೊಡಗಿವೆ. ಫ್ಯಾಷನ್ ಅತಿಕ್ರಮಿಸಿದೆ. ಪಾಶ್ಚಾತ್ಯ ಸಂಗೀತ ಅಪ್ತವಾಗಿದೆ. ದೈಹಿಕವಾಗಿ-ಮಾನಸಿಕವಾಗಿ ಶಕ್ತಿಯುತವಾಗಬೇಕು ಎನ್ನುವ ಭಾವನೆ ಯುವ ಮಿಡಿತದ ಭಾಗವಾಗಿದೆ. ಸಂಗೀತಕ್ಕೊಂದು ಅಭಿಮಾನಿ ವರ್ಗ ಸೃಷ್ಟಿಯಾಗುತ್ತಿದೆ.

ವ್ಯಕ್ತಿತ್ವ ಬೆಳವಣಿಗೆ, ಮಾನಸಿಕ ಸ್ಥಿಮಿತತೆ, ಭಾರತೀಯತೆ, ಭಾರತ ಸಂಸ್ಕೃತಿ, ಔಷಧೋಪಚಾರ - ಯೋಗಾ - ಆಯುರ್ವೇದ - ತತ್ವಜಿಜ್ಞಾಸೆ -ಇವೆಲ್ಲದರಲ್ಲೂ ಯುವಜನತೆ ಆಸಕ್ತಿ ತೋರಿಸುತ್ತಿದ್ದಾರೆ. ಅಷ್ಟೇ ಅಲ್ಲ ಸಾವಿರಾರು ರೂಪಾಯಿ ಖರ್ಚು ಮಾಡಿ ಇದನ್ನೆಲ್ಲ ಬಳಸಲು ತೊಡಗಿದ್ದಾರೆ. ಸ್ವತಂತ್ರ ಮನೋಭಾವದ ಜೊತೆಜೊತೆಗೂ ಸಂಪ್ರದಾಯದ ಚೌಕಟ್ಟಿನೊಳಗೆ ಉಳಿಯುವ ಆಸಕ್ತಿಯೂ ಮೈಗೂಡಿದಂತಿದೆ.

ಎಲ್ಲವೂ ಬದಲಾಗಿದೆ. ನಗರ ಬದಲಾಗಿದೆ. ನಗರದ ವ್ಯಕ್ತಿತ್ವ ಬದಲಾಗಿದೆ. ಜನ ಬದಲಾವಣೆ ಬಯಸುತ್ತಿದ್ದಾರೆ. ಸ್ವಾಗತಿಸುತ್ತಿದ್ದಾರೆ. ಯುವಜನರು ಭವಿಷ್ಯದ ಕಡೆ ಗಮನ ಹರಿಸಿದ್ದಾರೆ. ವೈಯಕ್ತಿಕವಾಗಿ ಬೆಳೆಯಲು ಎಲ್ಲ ಪ್ರಯತ್ನಗಳನ್ನೂ ಮಾಡುತ್ತಿದ್ದಾರೆ. ಬೆಲೆಗಳು ಬದಲಾಯಿಸಿದೆ, ವ್ಯಾಪಾರದ ರೀತಿನೀತಿಗಳು ಬದಲಾಗಿವೆ. ವಾಸದ ಮತ್ತು ವ್ಯವಹಾರದ ಕಟ್ಟಡಗಳು ವಿನ್ಯಾಸಗಳು ಬದಲಾಗಿವೆ.

ಕೋಟ್ಯಂತರ ರೂಪಾಯಿ ವಹಿವಾಟು ನಡೆಸುತ್ತಿರುವ ಆಧುನಿಕ ಕಂಪನಿಗಳ ಮಾಲಿಕರು-ಮುಖ್ಯಸ್ಥರು ಬೆಂಗಳೂರು ನಗರ ನೈರ್ಮಲ್ಯ, ವಿದ್ಯಾಭ್ಯಾಸ, ರಸ್ತೆ, ಫುಟ್‌ಪಾತ್, ವೃಕ್ಷಸಮೂಹ-ಪರಿಸರ ಕುರಿತು ಆಸಕ್ತಿ ತೋರಿಸುತ್ತಿದ್ದಾರೆ. ಈ ಸಂಬಂಧದ ಅಭಿವೃದ್ಧಿ ಕೆಲಸ ಕಾರ್ಯಗಳಲ್ಲಿ ಸ್ವತಃ ತೊಡಗಿಕೊಳ್ಳುತ್ತಿದ್ದಾರೆ.

ಇವರೆಲ್ಲರೂ 'ಬೆಂಗಳೂರು ೨೦೨೦' ಕುರಿತು ಕನಸುಕಾಣುತ್ತಿದ್ದಾರೆ, ಭವಿಷ್ಯ ನುಡಿಯುತ್ತಿದ್ದಾರೆ. (VISION -2020)

೨೦೨೦ರ ಬೆಂಗಳೂರು ಪ್ರಪಂಚದಲ್ಲೇ ಒಂದು ಅತ್ಯಾಧುನಿಕ ನಗರವಾಗಿರುತ್ತದೆ. ಸುಂದರ ವಿಶಾಲವಾದ ರಸ್ತೆಗಳು, ಎಲ್ಲೆಲ್ಲಿ ನೋಡಿದರೂ ಹಸಿರು, ಸುಂದರ ನಿರ್ಮಲ ಕೆರೆಗಳು, ಪುಷ್ಪೋದ್ಯಾನಗಳು, ಅತ್ಯುತ್ತಮ ನಗರ ಸಾರಿಗೆ ವ್ಯವಸ್ಥೆ-ಬಸ್‌ಗಳು, ಆಂತರಿಕ ರೈಲು ಸರಪಳಿ, ಮೆಟ್ರೋರೈಲು, ಮತ್ತು ಎಲ್ಲೆಲ್ಲಿ ಜನಸಂದಣಿ-ವಾಹನ ಸಂದಣಿ ಇದೆಯೊ ಅಲ್ಲೆಲ್ಲ ಮೇಲುಸೇತುವೆಗಳು, ಎರಡು ಮಹಾರಸ್ತೆಗಳನ್ನು ಸೇರಿಸಲು ಸುರಂಗ ಮಾರ್ಗಗಳು, ವಾಹನ ನಿಲುಗಡೆಗೆ ಅತ್ಯುತ್ತಮವಾದ ಬಹುಮಹಡಿ ನಿರ್ಮಾಣ ವ್ಯವಸ್ಥೆ, ರಸ್ತೆ-ಫುಟ್ ಪಾತ್‌ಗಳಲ್ಲಿ ಎಲ್ಲೂ ಕಸಕೊಳೆ ಇಲ್ಲದಿರುವುದು, ಸರಾಗವಾದ ಚರಂಡಿ ವ್ಯವಸ್ಥೆ, ಕುಡಿಯುವ ನೀರು ಮತ್ತು ವಿದ್ಯುತ್ ೨೪ ಘಂಟೆಗಳ ಪೂರೈಕೆ, ಪರಿಪೂರ್ಣವಾದ ರಾಷ್ಟ್ರೀಯ ಹೆದ್ದಾರಿಗಳು, ಎಲ್ಲರಿಗೂ ವಸತಿ-ಎಲ್ಲರಿಗೂ ವಿದ್ಯಾಭ್ಯಾಸ-ಬಡತನದ ಗೆರೆಯಿಂದ ಮೇಲಿದ್ದ ಕೆಳಸ್ತರದವರು, ಎಲ್ಲಮಕ್ಕಳಿಗೂ ಹತ್ತನೆಯ ತರಗತಿಯವರೆಗೂ ಉಚಿತ ವಿದ್ಯಾಭ್ಯಾಸ, ಉಚಿತ ಮಧ್ಯಾಹ್ನದ ಊಟ, ಸಮವಸ್ತ್ರಗಳು, ಅತ್ಯುತ್ತಮ ಶಿಕ್ಷಣ, ಪರಿಣತ ಶಿಕ್ಷಕರು, ಕಂಪ್ಯೂಟರ್ ಕಲಿಕೆ ಮತ್ತು ಬೆಂಗಳೂರು ಬರೀ ಭಾರತದ ಮುಖ್ಯನಗರ ಮಾತ್ರವಲ್ಲ, ಪ್ರಪಂಚದ ಒಂದು ಮುಖ್ಯ ನಗರವಾಗುತ್ತದೆ.

ನಿರುದ್ಯೋಗಿಗಳಾಗಿ ಯಾರೂ ಇರುವುದಿಲ್ಲ, ಎಲ್ಲರಿಗೂ ಮನೆಯಲ್ಲೇ ಕುಳಿತು ಮಾಡುವ ಕೆಲಸಗಳು ಸೃಷ್ಟಿಯಾಗುತ್ತವೆ, ಕಾಗದವೇ ಇಲ್ಲದ ಕಛೇರಿ ವಹಿವಾಟುಗಳು, ಬಹುಪಾಲು ಆಫೀಸುಗಳೇ ಇರುವುದಿಲ್ಲ, ಎಲ್ಲರೂ ತಮ್ಮತಮ್ಮ ಮನೆಗಳಿಂದಲೇ ವೃತ್ತಿನಿರತರಾಗುತ್ತಾರೆ. ಯಾವ ಆಫೀಸು ಹನ್ನೊಂದರಿಂದ ಆರು ಎನ್ನುವಂತಿರುವುದಿಲ್ಲ, ಯಾರು ಯಾವಾಗಬೇಕಾದರೂ ಆಫೀಸ್‌ಗೆ ಬರಬಹುದು, ಹೋಗಬಹುದು, ಅವರವರಿಗೆ ಕೊಟ್ಟಿರುವ ಕೆಲಸಗಳು ಆ ಸಮಯಕ್ಕೆ ಸರಿಯಾಗಿ ಮಾಡಿ ಮುಗಿಸಿದರೆ ಸರಿ, ಎಲ್ಲರೂ ಪರಸ್ಪರ 'ಟೆಲಿ ಕಾನ್‌ಫರೆನ್ಸ್' ಮೂಲಕವೇ ಚರ್ಚಿಸುತ್ತಾರೆ. ನಿರ್ಧರಿಸುತ್ತಾರೆ. ನಿರ್ದೇಶನಗಳನ್ನು ಕೊಡುತ್ತಾರೆ. ಮೀಟಿಂಗ್‌ಗಳು, ಸದಸ್ಯರನ್ನು ಸೇರಿಸುವುದು, ಕೋರಂ ಇವೆಲ್ಲ ಇರುವುದೇ ಇಲ್ಲ.

ಇದಕ್ಕೆ ಅನುಗುಣವಾಗಿ ಪ್ರಸಾರ ಮಾಧ್ಯಮ, ಮುದ್ರಣ ಮಾಧ್ಯಮ, ಶ್ರವಣ ಮಾಧ್ಯಮ ಪರಿವರ್ತನೆಗೊಳ್ಳುತ್ತವೆ. ಜನಗಳು ಯಾವಾಗಲೂ ವೃತ್ತಿನಿರತ-ರಾಗಿರುವುದರಿಂದ ಈ ಮಾಧ್ಯಮಗಳು ಅವರಿಗೆ ಕಾಣುವುದಿಲ್ಲ, ಬದಲಾಗಿ, ಪಬ್ ಸಂಸ್ಕೃತಿ, ಕ್ಲಬ್ ಸಂಸ್ಕೃತಿ, ಪ್ರವಾಸ ಸಂಸ್ಕೃತಿ, ಡಿಸ್ಕೊತೆಕ್ ಸಂಸ್ಕೃತಿ ಗರಿಗೆದರಬಹುದು. ಬ್ರಹ್ಮಚಾರಿಗಳು ಬ್ರಹ್ಮಚಾರಿಣಿಗಳು ಸಮಾಜದಲ್ಲಿ ಹೆಚ್ಚಬಹುದು. ಮದುವೆಯಾಗದೆಯೇ ಮಗುವೊಂದನ್ನು ದತ್ತುಸಾಕುವುದು ಮತ್ತೆ ಗಂಡುಹೆಣ್ಣಿನ ಮಿಲನ ಎನ್ನುವುದು ಪ್ರೀತಿಪ್ರೇಮದ ಭಾವುಕ 'ಶಾಶ್ವತ' ಸಂಬಂಧವಾಗದೆ, ಅಂದಂದಿನ ಒಂದು ಕಾರ್ಯಕ್ರಮವಾಗುತ್ತದೆ. ಕೆಲದಿನಗಳ ಬೇಕಾಗುವರೆಗಿನ ಸ್ನೇಹವಾಗುತ್ತದೆ. ಶಾಶ್ವತ ಗಂಟುಯಾರಿಗೂ ಬೇಕಾಗುವುದಿಲ್ಲ.

-ಇಂತೆಲ್ಲ ಬುದ್ಧಿಜೀವಿಗಳು ಭವಿಷ್ಯ ನುಡಿದಿದ್ದಾರೆ. ಅದನ್ನೇ ಸರಿಯೆಂದು ಒಪ್ಪಿಕೊಂಡಿದ್ದಾರೆ. ಹೀಗೆಲ್ಲ ಆಗುತ್ತಿರುವುದಕ್ಕಾಗಿ ಮತ್ತು ಸಂಪ್ರದಾಯದ ಅಣೆಕಟ್ಟು ಒಡೆದು ಹೋಯಿತು ಎಂದು ಗೋಳಾಡಲು ಹಳೆ ತಲೆಮಾರಿನ ಬಹುಪಾಲು ಮಂದಿ ಇರುವುದಿಲ್ಲ. ಮಧ್ಯದ ತಲೆಮಾರು ಕಣ್ಣುಮುಚ್ಚಿಕೊಂಡು ಕುಳಿತುಕೊಳ್ಳುತ್ತದೆ. ಹೊಸ ತಲೆಮಾರು ವಿಜೃಂಭಿಸುತ್ತದೆ.

ಆಧುನಿಕತೆ-ತಾಂತ್ರಿಕ ತ್ರಿವಿಕ್ರಮಾವತಾರದ ವರಪ್ರಸಾದ ಇದು!

ಎಲ್ಲ ಶತಮಾನಗಳೂ ಇಂಥ ಪರಿವರ್ತನೆಗಳನ್ನು ಕಂಡಿವೆ!

ಕೆಂಪೇಗೌಡನ ಬೆಂಗಳೂರು ಪೇಟೆ ಮತ್ತು ಈಗಿನ ಬೆಂಗಳೂರು ಮಹಾನಗರ ಎಲ್ಲ ಪರಿವರ್ತನೆಗಳಿಗೆ ಸಾಕ್ಷಿಯಾಗಿರುವಂತೆ ಚಲನಶೀಲ ಜನರ ಬರವು-ಹೋಗುಗಳನ್ನು ಕಾಣಿಸುತ್ತ-ಕಾಣುತ್ತ ನಿಂತಿದೆ.

■■

ಬೆಂಗಳೂರಿನ ಮೇಲುಸೇತುವೆಗಳು

ರಸ್ತೆಯ ಮೇಲೆ ರಸ್ತೆ!

ಇದು ಈಚಿನವರೆಗೂ ಬೆಂಗಳೂರಿನಲ್ಲಿ ಇರಲಿಲ್ಲ. ಈಗ ಆಗಿಹೋಗಿವೆ. ಭಾರತದ ಮಹಾನಗರಗಳಿಗೆಲ್ಲ ಈ ಬೆಳವಣಿಗೆ ಅಂಟಿಕೊಂಡಿದೆ. ಈಗ ಬೆಂಗಳೂರು ಹಿಂದುಳಿದಿಲ್ಲ!

'ಮೇಲುಸೇತುವೆ' (ಫ್ಲೈ ಓವರ್‌ಗಳು) ಇದ್ದಕ್ಕಿದ್ದ ಹಾಗೆಯೆ ಬೆಂಗಳೂರುನಗರ ಬೆಳವಣಿಗೆಯಲ್ಲಿ ಒಂದು ಅನಿವಾರ್ಯ ವಿಷಯವಾಗಿಹೋಗಿದೆ. ಬೆಂಗಳೂರು ನಗರದಲ್ಲಿ ಪಾದಚಾರಿಗಳ ಬಳಕೆಗಾಗಿ ಎಂದೇ ನಿರ್ಮಿಸಲಾದ ಸೇತುವೆಗಳು (ಕೆಂಪೇಗೌಡ ರಸ್ತೆ ಮತ್ತು ಬೆಂಗಳೂರು ಬಸ್‌ಸ್ಟಾಂಡ್) ಮತ್ತು ಸುರಂಗಗಳು ಜನಗಳಿಂದ ಸರಿಯಾಗಿ ಉಪಯೋಗಗೊಳ್ಳುತ್ತಿಲ್ಲ. ಇದೇ ರೀತಿಯೇ ಈ ಹೊಸ ಮೇಲುಸೇತುವೆಗಳನ್ನು ಜನಗಳು-ವಾಹನಗಳು ಅಷ್ಟಾಗಿ ಉಪಯೋಗಿಸುತ್ತಿಲ್ಲ ಎಂದು ಮಾತು ಬರುತ್ತಿದೆ. ಈ ಮೇಲುಸೇತುವೆಗಳು ಬೇಕಾಗಿಯೇ ಇಲ್ಲ ಎನ್ನುತ್ತಾರೆ. 'ಆದರೆ, ವಾಹನ ದಟ್ಟಣೆಯನ್ನು ಹತೋಟಿಗಿಡಲು ಮೇಲುಸೇತುವೆಗಳು ಬೇಕೇಬೇಕು!' ಎನ್ನುತ್ತಾರೆ ಆಡಳಿತದವರು. ಅಂತೂ ಬೆಂಗಳೂರಿನಲ್ಲೀಗ ಅನೇಕ ಮೇಲುಸೇತುವೆಗಳು ಬಂದುಬಿಟ್ಟಿದೆ. ಇನ್ನೂ ಇದರ ದುಪ್ಪಟ್ಟು ಬರಲಿವೆ. ಭವಿಷ್ಯದ ಬೆಂಗಳೂರು ಪ್ರಧಾನ ರಸ್ತೆಗಳಲ್ಲೆಲ್ಲ ಮೇಲುಸೇತುವೆಗಳನ್ನು ಒಳಗೊಂಡರೆ ಆಶ್ಚರ್ಯವೇನಿಲ್ಲ!

೨೦. ಬೈ, ಬೈ ಬೆಂಗಳೂರು!

ಓಹ್, ಇಷ್ಟು ಬೇಗ ನಿಮ್ಮ 'ಬೆಂಗಳೂರು ದರ್ಶನ' ಮುಗಿದು ಹೋಯಿತೇ? ಸಮಯ ಹೋಗಿದ್ದೇ ಗೊತ್ತಾಗಲಿಲ್ಲ, ಅಲ್ಲವೇ?

ಬೆಂಗಳೂರಿನಲ್ಲಿ ಓಡಾಟ ನಿಮಗೆ ಸಂತೋಷವನ್ನುಂಟುಮಾಡಿರಬೇಕು, ಬೇಕಾದಷ್ಟು ವಿವರ-ವಿಷಯಗಳನ್ನು ತಿಳಿಸಿರಬೇಕು. ಯಾವುದೊ ಕೆಲವು ತಾಣಗಳು, ಕ್ಷಣಗಳು, ಅನುಭವಗಳು, ಮತ್ತೆಮತ್ತೆ ನಿಮ್ಮನ್ನು ಕೈಬೀಸಿ ಕರೆಯುತ್ತಿರ ಬಹುದು. ಮತ್ತೆ ಬಂದು ಈ ತಾಣಗಳನ್ನು ನೋಡುತ್ತ ಕಾಲಕಳೆಯಬೇಕು ಎಂದು ನಿಮಗನ್ನಿಸಿರಬಹುದು.

ವಿದ್ಯಾರ್ಥಿಭವನ-ಉಡುಪಿ ಕೃಷ್ಣಭವನದ ಮಸಾಲೆ ದೋಸೆ, ಎಂಟಿ ಆರ್ ತಿಂಡಿ-ಊಟ, ನ್ಯೂಮಾಡ್ರನ್ ಹೋಟಲ್ ಆತ್ಮೀಯತೆ- ಸವಿ, ಜನಾರ್ಧನ ಹೋಟಲ್‌ನ ಸರಳತೆ- ಸಾಂಪ್ರದಾಯಿಕತೆ; ಕೆಂಪೇಗೌಡ ರಸ್ತೆ- ಬ್ರಿಗೇಡ್‌ರಸ್ತೆ- ಮಹಾತ್ಮಾಗಾಂಧಿ ರಸ್ತೆ- ಕಮರ್ಶಿಯಲ್ ರಸ್ತೆಗಳ ಆಧುನಿಕತೆ, ದೀಪಗಳ ಝಗಝಗ; ಸಂಪಿಗೆರಸ್ತೆ- ಗಾಂಧಿಬಜಾರ್‌ಗಳ ಜನಓಡಾಟ; ದೇವಾಲಯಗಳು, ಇಸ್ಕಾನ್‌ನ ಸೊಗಸು, ದೊಡ್ಡಗಣೇಶ- ಕೋಟೆ ವೆಂಕಟರಮಣ ದೇವಾಲಯಗಳ ಭಕ್ತಜನಪ್ರಿಯತೆ, ಸಂತ ಮೇರಿ ಚರ್ಚ್‌ನ ಗಾಂಭೀರ್ಯ, ಸಿಟಿಮಾರ್ಕೆಟ್‌ನ ದೊಡ್ಡ ಜಾಮಿಯಾ ಮಸೀದಿಯ ಭವ್ಯವಿಸ್ತಾರ, ಸಿಕ್ಖರ ಗುರುದ್ವಾರ ಮೊದಲಾದವುಗಳಲ್ಲಿನ ದೈವಿಕತೆ ನಿಮ್ಮ ಮನಸೆಳೆದಿರಬಹುದು.

ಬೆಂಗಳೂರು ನಗರ ಸಂಚಾರ ಹೊರವಲಯಗಳಲ್ಲಿರುವ ತಾಣಗಳು, ಬೆಂಗಳೂರಿನಿಂದ ಹೋಗಿ, ನೋಡಿ ಬರಬಹುದಾದಂಥ ಪ್ರವಾಸೀ ಕೇಂದ್ರಗಳು ನಿಮ್ಮ ಮನಸ್ಸಿನಲ್ಲೊಂದು ನೆನಪಿನ ಚುಕ್ಕೆಯಾಗಿ ಮೂಡಿರಬಹುದು.

ಬೆಂಗಳೂರಿನ ತಂಪು ವಾತಾವರಣ, ಹತ್ತಿರದಲ್ಲೇ ಇರುವ ನಂದಿದುರ್ಗ ತಂಪುಧಾಮದ ಸುಖಪರಿಸರದಲ್ಲಿ ಓಡಾಟ ನಿಮ್ಮನ್ನು ಉಲ್ಲಸಿತರನ್ನಾಗಿಸಿರ ಬಹುದು. ನಂದಿದುರ್ಗದಲ್ಲಿ ಬೆಟ್ಟದ ತುದಿಯಲ್ಲಿ ನಿಂತಾಗ ಬಿಳಿಕಪ್ಪು ಮೋಡಗಳು ದಟ್ಟವಾಗಿ.

ನಿಮ್ಮ ಕೈಗೆಟುಕಿಸುವಷ್ಟು ಹತ್ತಿರವೇ ಸರಿಯುತ್ತಿರುವಂತನ್ನಿಸುತ್ತದೆ. ಬೆಳ್ಳಂಬೆಳಗ್ಗೆ ಇಂಥ ಮನೋಹರ ಅನುಭವವನ್ನು ಪಡೆದುಕೊಂಡಿದ್ದರೆ ನೀವು ಧನ್ಯರು.

ಬೆಂಗಳೂರಿನಲ್ಲಿ ಎಲ್ಲವೂ ಇದೆ, ಏನೂ ಇಲ್ಲ! ಎನ್ನುವವರೂ ಉಂಟು ನೋಡುವ ಕಣ್ಣು ಇದ್ದರೆ ಅನುಭವ ವೈವಿಧ್ಯಕ್ಕೆ ಮಿತಿಯೇ ಇಲ್ಲ. ಬೆಂಗಳೂರಿನ ಎಲ್ಲವೂ ನೋಡುವಂಥದ್ದೇ ಎನಿಸುತ್ತದೆ. ಒಮ್ಮೊಮ್ಮೆ ಬೆಂಗಳೂರಿಗರೇ ಯಾವುದೊ ಒಂದು ಪರಿಚಿತ ಜಾಗದಲ್ಲಿಯೇ ನಿಂತು ಸಾಕಷ್ಟು ನೋಡಿದ್ದನ್ನೇ ಮತ್ತೆ ಮತ್ತೆ ನೋಡುತ್ತಾರೆ ಆನಂದಿಸುತ್ತಾರೆ.

ಲಾಲ್‌ಬಾಗ್ ಕಬ್ಬನ್ ಪಾರ್ಕ್ ಬೆಂಗಳೂರಿನವರ ಹಸಿರು ತಾಣ ಇಲ್ಲಿ ಪ್ರತಿದಿವಸ ಓಡಾಡುವವರೂ ಇದ್ದಾರೆ. ಆಗಾಗ ಮತ್ತೆ ಮತ್ತೆ ಬರುವವರೂ ಇದ್ದಾರೆ. ಒಂದೊಂದು ಭೇಟಿಯಲ್ಲೂ ಇಲ್ಲಿ ಒಂದೊಂದು ವಿಶೇಷಗಳು ಕಾಣಿಸುತ್ತವೆ. ಮರಗಿಡಗಳ ನೆರಳಿನಲ್ಲಿ ಹಾಯಾಗಿ ಕುಳಿತಾಗ, ಸುತ್ತಲೂ ಓಡಾಡುತ್ತಿರುವ ವರ್ಣಮಯ ಜನಸಂದಣಿ, ಅದರ ಹಿನ್ನೆಲೆಯೆಲ್ಲ ಹಸಿರು, ಕುಳಿರ್ಗಾಳಿ- ಪ್ರತಿಸಲವು ಒಂದೊಂದು ಹೊಸ ಮಿಡಿತವನ್ನು ಎಬ್ಬಿಸುತ್ತದೆ. ನವವಿವಾಹಿತರಿಗೆ. ನವಪ್ರೇಮಿಗಳಿಗೆ ಈ ಫಲಪುಷ್ಪ ಪರಿಸರ ಬೇರೆ ಲೋಕಕ್ಕೇ ಕೊಂಡೊಯ್ಯುತ್ತದೆ. ಮನಸ್ಸು ಸಂತಸದಿಂದ ಉಯ್ಯಾಲೆಯಾಡುತ್ತಿರುತ್ತದೆ. ಹೃದಯದ ಮಾತುಗಳು ಹೃದಯದಲ್ಲಿ ನಿಂತು ಮೌನ ಮಾತನಾಡುತ್ತಿರುತ್ತದೆ.

ಬೆಂಗಳೂರಿನಲ್ಲಿ ಓಡಾಡಿದಮೇಲೆ ನೋಡುವುದರೊಂದಿಗೆ ಕೊಳ್ಳುವುದೂ ನಡೆಯುತ್ತದೆ. ಬೆಂಗಳೂರಿನ ಪ್ರವಾಸ ನೆನಪಿಗಾಗಿ 'ಸ್ಮರಣಿಕೆ'ಯಾಗಿ ಕೊಂಡೊಯ್ಯಲು ಬೇಕಾದಷ್ಟು ವಸ್ತುಗಳಿವೆ.

ಅತ್ಯುನ್ನತ ಮಟ್ಟದ, ಅತಿ ಸುಂದರ ಆಧುನಿಕ ವಿನ್ಯಾಸಗಳ ರೇಷ್ಮೆ ಸೀರೆಗಳಿವೆ. ಮನಸೆಳೆಯುವ ವರ್ಣಗಳು ನಿಮ್ಮ ದೃಷ್ಟಿಪಟಲದಲ್ಲಿ ಉಳಿದುಬಿಡುತ್ತವೆ. ಒಳ್ಳೆಯ ನಂಬಿಕೆಯ ಅಂಗಡಿಗಳಲ್ಲಿ ನೀವು ವ್ಯಾಪಾರ ಮಾಡಬಹುದು. ಅವೆನ್ಯೂರಸ್ತೆ ಕಮರ್ಷಿಯಲ್ ರಸ್ತೆಗಳಲ್ಲಿ ಬೆಳ್ಳಿ, ಬಂಗಾರ, ವಜ್ರವೈಢೂರ್ಯ ನವರತ್ನಗಳ ವೈಭವವೇ ಇದೆ. ಕಮರ್ಷಿಯಲ್ ರಸ್ತೆಯಲ್ಲಿರುವ ಕೃಷ್ಣಯ್ಯ ಶೆಟ್ಟಿ, ಇನ್‌ಫೆಂಟ್ರಿರಸ್ತೆಯಲ್ಲಿರುವ ಗಂಜಾಂ, 'ಮಣಿಪಾಲ್ ಸೆಂಟರ್' ಪಕ್ಕದಲ್ಲಿರುವ ಅತ್ಯಾಧುನಿಕ ಕಟ್ಟಡದಲ್ಲಿರುವ 'ತಾನಿಷ್ಕಾ', ಮೊದಲಾದ ಶೋ-ರೂಂಗಳು ನಿಮ್ಮನ್ನೊಂದು ಭ್ರಮಾಲೋಕಕ್ಕೆ ಕೊಂಡೊಯ್ಯಬಹುದು. ಇಲ್ಲಿ ಚಿನ್ನಕ್ಕೆ ಕೈಹಾಕಲು ನೂಕುನುಗ್ಗಲು. ಅತ್ಯಾಧುನಿಕ ವಿನ್ಯಾಸಗಳು ಚಿನ್ನದ ಹರಳುಗಳ, ನವರತ್ನಗಳ, ವಜ್ರಗಳ ಮಿನುಗುಗಳಲ್ಲಿ

ಪ್ರದರ್ಶನಗೊಂಡಿರುತ್ತವೆ. ಕಾಣಲು ಎರಡು ಕಣ್ಣು ಸಾಲದು, ಕೊಳ್ಳಲು ಎರಡು ಜೇಬುಗಳು ಸಾಲದು.

'ಬ್ರಾಂಡೆಡ್' ಸಿದ್ಧ ಉಡುಪುಗಳು ಇಲ್ಲಿ ಇನ್ನೊಂದು ಆಕರ್ಷಣೆ, ವೈವಿಧ್ಯಮಯ ಡಿಸೈನರ್ ವಿನ್ಯಾಸದ ಉಡುಪುಗಳು ಯುವಪೀಳಿಗೆಯನ್ನು ಆತ್ಮವಿಶ್ವಾಸದ ಲೋಕಕ್ಕೆ ಕೊಂಡೊಯ್ಯುತ್ತವೆ. ಇದಕ್ಕೆ ತಕ್ಕ ಶೂಗಳು- ದೊಡ್ಡ ಕಂಪನಿಯವು ರಪ್ಪುಬಗೆಯವು ಆಕರ್ಷಕವಾಗಿ ಕಾಲು ಸೆಳೆಯುತ್ತವೆ. ರೆಡಿಮೇಡ್ ಷರ್ಟುಗಳು ಇಲ್ಲಿ ಸಾವಿರಸಾವಿರ ರೀತಿಗಳಿವೆ. ಅತಿ ಕಡಮೆ ಬೆಲೆಯಿಂದ ಅತಿ ಹೆಚ್ಚು ಬೆಲೆಯವರೆಗೂ ದೊರಕುತ್ತವೆ. ಉಲ್ಲನ್ ಉಡುಪುಗಳು ವಿಶೇಷವಾಗಿ ದೊರಕುತ್ತವೆ.

'ಹ್ಯಾಂಡಿಕ್ರಾಫ್ಟ್' ವಸ್ತುಗಳು, 'ಆ್ಯಂಟಿಕ್ಸ್' ಎನ್ನುವ ಹಳೆಯ ಕಾಲದದಂತೆ ಕಾಣುವ ಅಪೂರ್ವ ವಸ್ತುಗಳಿಗೆ ಬೆಂಗಳೂರು ದೊಡ್ಡ ಮಾರುಕಟ್ಟೆಯನ್ನು ಹೊಂದಿದೆ. ಜಯನಗರ, ಎಂಜಿರಸ್ತೆ ರೆಸಿಡೆನ್ಸಿರಸ್ತೆ ಇನ್‌ಫೆಂಟ್ರಿರಸ್ತೆ, ಕನ್ನಿಂಗ್ ಹ್ಯಾಂ ರಸ್ತೆ, ಏರ್‌ಪೋರ್ಟ್ ರಸ್ತೆ, ಬ್ರಿಗೇಡ್ ರಸ್ತೆಗಳಲ್ಲಿ ಇವನ್ನೆಲ್ಲ ಕಾಣಬಹುದು.

ಮಹಾತ್ಮಾಗಾಂಧಿ ರಸ್ತೆಯ 'ನಟೇಶನ್ಸ್ ಆಂಟಿಕ್ವಾಟ್ಸ್ ' ಮತ್ತು ಕಾವೇರಿ ಆರ್ಟ್ ಅಂಡ್ ಕ್ರಾಫ್ಟ್ಸ್ ಎಂಪೋರಿಯಂ, ಸೆಂಟ್ರಲ್ ಕಾಟೇಜ್ ಇಂಡಸ್ಟ್ರೀಸ್ ಎಂಪೋರಿಯಂ ಮತ್ತು ಬ್ರಿಗೇಡ್ ರಸ್ತೆಯ 'ಪೂಂಪುಹಾರ್' ಅದ್ಭುತ ವಸ್ತುಗಳ ವಿಶಾಲವಾದ ಶೋರೂಂಗಳು.

ಬೆಂಗಳೂರಿನಲ್ಲಿ ಬಹುಬೇಗ ಬೇರೂರಿ ದೊಡ್ಡ ವ್ಯಾಪಾರ ಮಳಿಗೆಗಳಾಗಿ ಬೆಳೆದಿರುವುದು 'ಕಿಡ್ಸ್‌ಕೆಂಪ್' ಸಮೂಹ, ಕೆಂಪೇಗೌಡ ರಸ್ತೆಯಲ್ಲಿ ಚಿಕ್ಕದಾಗಿರುವುದು ಮಹಾತ್ಮಾಗಾಂಧಿ ರಸ್ತೆಯಲ್ಲಿ ಶೋರೂಂನಲ್ಲಿ ಆಟದ ವಸ್ತುಗಳು ವಿಶೇಷ. ಮಹಾತ್ಮಾ ಗಾಂಧಿ ರಸ್ತೆ ಮಳಿಗೆಯ ಶ್ರೀಮಂತ ವೈಭವವನ್ನು ನೋಡಿಯೇ ತಿಳಿದುಕೊಳ್ಳಬೇಕು. ಏರಪೋರ್ಟ್ ಮಳಿಗೆ ಅವರಣದಲ್ಲಿ ಬೆಂಗಳೂರಿನ ಅತಿದೊಡ್ಡ ತಪಸ್ವೀಶಿವ ಮೂರ್ತಿ ಇದ್ದು ಕಣ್ಣುಗಳಿಗೆ ಹಬ್ಬವನ್ನುಂಟು ಮಾಡುತ್ತದೆ.

ಬೆಂಗಳೂರಿನ ಖಾದಿ ಭಂಡಾರಗಳು ಭಾರತೀಯ ಭಾವನೆಯ ವಸ್ತುಗಳನ್ನು ಕಾಣಿಸುತ್ತವೆ. ಜನವರಿ, ಅಕ್ಟೋಬರ್‌ಗಳಲ್ಲಿ ಪ್ರತಿವರ್ಷ ಇಲ್ಲಿ ಶೇ. ೩೦ ರಷ್ಟು ಇಳುವರಿ ನೋಡಬಹುದು ಊದುಬತ್ತಿ, ಶುದ್ಧ ಜೇನುತುಪ್ಪ, ಬೆಡ್‌ಷೀಟ್ ಸಿದ್ಧ ಉಡುಪುಗಳು- ಪೈಜಾಮ ಜುಬ್ಬ, ಚಪ್ಪಲಿಗಳು, ಚರ್ಮದವಸ್ತುಗಳು, ಹಣ್ಣಿನ ರಸ ಮತ್ತು ತಯಾರಿಕೆಗಳು ಇಲ್ಲಿ ವಿಶೇಷವಾಗಿ ಸಿಗುತ್ತವೆ.

ಬೆಂಗಳೂರನ್ನು ಬಿಟ್ಟು, 'ಬೈಬೈ' ಹೇಳಿಹೋಗುವಾಗ ಕರ್ನಾಟಕದ ಹೆಮ್ಮೆ 'ಮೈಸೂರು ಸ್ಯಾಂಡಲ್ ಸೋಪು' ಕೊಳ್ಳದೇ ಹೋಗಬಾರದು. ಎಲ್ಲ ದೊಡ್ಡ ಅಂಗಡಿಗಳಲ್ಲಿ ಎರಡು ಮೂರು ವಿಧಗಳಲ್ಲಿ ಇದು ಸಿಗುತ್ತದೆ. ಯಶವಂತಪುರದಲ್ಲಿರುವ ಸೋಪ್ ಕಾರ್ಖಾನೆಯ ಗೇಟಿನ ಬಳಿಯೇ ಇರುವ ಪುಟ್ಟ ಮಳಿಗೆಯಲ್ಲಿ ಎಲ್ಲ ತಯಾರಿಕೆಗಳಿಗೂ ರಿಯಾಯಿತಿ ಬೆಲೆಯಲ್ಲಿ ದೊರಕುತ್ತವೆ. ಇಲ್ಲಿಯ ನೋಟವೇ ಬೇರೊಂದು ಪ್ರಪಂಚ.

ಬೆಂಗಳೂರು ಅಯ್ಯಂಗಾರ್ ಬೇಕರಿಗಳಿಂದ ಅತಿರುಚಿ, ಸ್ವಾದಿಷ್ಟ ಬೆಣ್ಣೆ ಬಿಸ್ಕತ್ತು, ಉಪ್ಪಿನ ಬಿಸ್ಕತ್ತು, ಖಾರದ ಬಿಸ್ಕತ್ತು, ಓಂ ಬಿಸ್ಕತ್ತುಗಳನ್ನು ಕೊಂಡೊಯ್ಯಲು ಮರೆಯಬೇಡಿ. ವಾಪಸ್ಸು ಪ್ರಯಾಣದಲ್ಲಿ ತಿನ್ನಲಿಕ್ಕಾಗುತ್ತದೆ, ಊರಿಗೆ ಹೋಗಿ ಮನೆಮಂದಿಯೊಂದಿಗೆಲ್ಲ ತಿನ್ನಲಿಕ್ಕಾಗುತ್ತದೆ.

ನಮ್ಮ ಬೆಂಗಳೂರನ್ನು ನೋಡಲು ಬಂದದ್ದಕ್ಕಾಗಿ, ನೋಡಿಮುಷಿಪಟ್ಟು ಹಿಂತಿರುಗುತ್ತಿರುವುದಕ್ಕಾಗಿ ಧನ್ಯವಾದಗಳು. ಮತ್ತೆ ಮತ್ತೆ ಬರುತ್ತಿರಿ, ಒಂದೊಂದು ಸಲ ಬಂದಾಗಲೂ ಬೆಂಗಳೂರು ನಿಮಗೆ ಹೊಸಹೊಸದಾಗಿ ಕಾಣಿಸುತ್ತಿರುತ್ತದೆ.

ಬೈ ಬೈ! ಹ್ಯಾಪಿ ಜರ್ನಿ!

■■

ನಮೋ ನಮೋ....!

* ಬೆಂಗಳೂರಿನಲ್ಲಿ ಹುಟ್ಟಿ ಬೆಳೆದು ಅರ್ಧಶತಮಾನ ದಾಟಿದ ಸ್ವಂತ ಅನುಭವದಲ್ಲಿ ಇಲ್ಲಿ ಎಷ್ಟೋ ವಿಷಯ-ವಿವರಗಳನ್ನು ರಸಮಯವನ್ನಾಗಿಸಲು ಸಾಧ್ಯವಾಗಿದೆ.

* ಬೆಂಗಳೂರಿನ ಬಗ್ಗೆ ಅತ್ಯುತ್ತಮವಾದ 'ಗೆಜೆಟಿಯರ್' ಪ್ರಕಟವಾಗಿದೆ. ಸಂಪಾದಕರು, ಗೌರವಾನ್ವಿತ ಹಿರಿಯ ವಿದ್ವಾಂಸರಾದ ಡಾ. ಸೂರ್ಯನಾಥ ಕಾಮತ್ ಅವರು. ಯಾವ ವಿವರ ಬೇಕಾದರೂ ಈ ಬೃಹತ್ ಸಂಪುಟವನ್ನು ತಿರುವಿಹಾಕಿದರೆ ಸಾಕು ಸಿಗುತ್ತದೆ.

* ಬೆಂಗಳೂರು ಕುರಿತು ಬರೆದಿರುವ ಅನೇಕ ಲೇಖಕ - ಸಂಶೋಧಕರ ಉಪಯುಕ್ತ ಕೃತಿಗಳು -ನನಗೆ ಆಕರವಾಗಿವೆ. ಎಲ್ಲರಿಗೂ ಕೃತಜ್ಞತೆಗಳು.

* ಫೋಟೋಗಳನ್ನು ಒದಗಿಸಿದ ಮಿತ್ರರಾದ ಬಿ. ವಿಶ್ವನಾಥ್, ಕೆ.ಎನ್. ನಾಗೇಶ್ ಕುಮಾರ್, ವೈ.ಕೆ. ಮೋಹನ್, ಬಿ.ಎನ್. ರಾಜಶೇಖರ್ ಮತ್ತು ವಿ. ಗೋಪಾಲ್ ಅವರಿಗೆ ಆತ್ಮೀಯ ಧನ್ಯವಾದಗಳು.

* ಈ ಕೃತಿರಚನೆಗೆ ಸ್ನೇಹದಿಂದ ಬೆಂಬಲಿಸಿದ ಆತ್ಮೀಯರಾದ ಶ್ರೀ ಜಗನ್ನಾಥ ಪ್ರಕಾಶ್ (ವಾರ್ತಾ ಇಲಾಖೆ ಸಹಾಯ ನಿರ್ದೇಶಕರು) ಮತ್ತು ಶ್ರೀ ಎಚ್.ಟಿ. ರತ್ನಾಕರ್ (ಕರ್ನಾಟಕ ಪ್ರವಾಸೀ ನಿಗಮದ ಸಾರ್ವಜನಿಕ ಸಂಪರ್ಕಾಧಿಕಾರಿ) ಅವರಿಗೆ ಕೃತಜ್ಞತೆಗಳು.

-'ಚಿರಂಜೀವಿ'

'ತುರ್ತು' ನೆರವು ಸಂಪರ್ಕ

ಬೆಂಗಳೂರಿನಲ್ಲಿ ತುರ್ತು ಸಂದರ್ಭಗಳಿಗೆ ಸಹಾಯಕ್ಕೆ ಬರಲು ಅನೇಕ ವಿಭಾಗಗಳು ತುದಿಗಾಲಮೇಲೆ ನಿಂತಿರುತ್ತವೆ. ಸಹಾಯ ಕೋರಿ, ತೊಂದರೆ-ಅನಾರೋಗ್ಯಗಳಿಗೆ ಚಿಕಿತ್ಸೆ ಕೋರಿ ಕೂಡಲೇ ಈ ಟೆಲಿಫೋನ್ ನಂಬರುಗಳನ್ನು ಸಂಪರ್ಕಿಸಬಹುದು.

ಪೋಲಿಸ್ -ನಂ. ೧೦೦

ಅಗ್ನಿಶಾಮಕ -ನಂ. ೧೦೧

ಆಂಬುಲೆನ್ಸ್ -ನಂ. ೧೦೨

ಆಕಸ್ಮಿಕ -ನಂ. ೧೦೩

ಪೋಲಿಸ್ ಕಂಟ್ರೋಲ್ ರೂಂ-೧೦೯೦

ಮಕ್ಕಳ ಸಹಾಯವಾಣಿ -೧೦೯೮

ಮಹಿಳಾ ಸಹಾಯವಾಣಿ -೧೦೯೧

ಅಬಲಾಶ್ರಮ (ಅನಾಥ ಮಹಿಳೆಯರಿಗಾಗಿ) -೨೬೬೭೮೯೪

ಅನಾಥ ಶಿಶುನಿವಾಸ (ಅನಾಥ ಶಿಶುಗಳಿಗಾಗಿ) -೨೬೫೦೮೬೪೧

ಸಹಾಯ ಹಸ್ತ (ಮಾನಸಿಕ-ದೈಹಿಕ ವಿಕಲಾಂಗರಿಗೆ) -೨೩೩೩೦೨೦೦

ಕರುಣಾಶ್ರಯ (ಕ್ಯಾನ್ಸರ್ ರೋಗಿಗಳಿಗೆ) -೨೮೪೭೬೧೩೩, ೨೮೪೭೬೬೫೦೯

ನಾರಾಯಣ ಹೃದಯಾಲಯ (ಹೃದಯ ಚಿಕಿತ್ಸೆಗೆ) -೨೭೮೩೫೦೦೦, ೨೭೮೩೫೦೧೮

ಅಭಯಾಶ್ರಮ (ವೃದ್ಧರ ಆಶ್ರಮ) -೨೬೬೬೫೧೧೦, ೨೬೫೨೪೮೬೬೨

ಆಶಾಜೀವನ (ವೃದ್ಧಾಶ್ರಮ) -೨೬೬೩೮೧೫೪, ೨೬೩೪೫೬೬೨೦.

ಬೆಂಗಳೂರು ಆಸ್ಪತ್ರೆ -೨೬೫೬೨೭೫೩

ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆ -೨೫೫೯೧೩೨೫, ೨೫೫೯೧೩೬೨

ಕೆ.ಸಿ. ಜನರಲ್ ಆಸ್ಪತ್ರೆ -೨೩೩೪೩೭೯೧

ನಿಮ್ಹಾನ್ (ಮೆದುಳು ಸಂಬಂಧಿತ) -೨೬೬೯೫೦೦೦

ಸಂತ ಮಾರ್ಥಾಸ್ ಆಸ್ಪತ್ರೆ -೨೨೨೭೪೫೪೧

ವಿಕ್ಟೋರಿಯಾ ಆಸ್ಪತ್ರೆ -೨೬೭೦೧೧೫೦

ರಕ್ತನಿಧಿ -ಭಾರತೀಯ ರೆಡ್‌ಕ್ರಾಸ್ ಸಂಸ್ಥೆ -೨೨೨೬೪೪೪೩, ೨೨೨೬೪೪೨೦೫

ರಕ್ತನಿಧಿ - ರಾಷ್ಟ್ರೋತ್ಥಾನ ರಕ್ತನಿಧಿ -೨೬೬೧೨೭೩೦

ಕಿಮ್ಸ್ ಆಸ್ಪತ್ರೆ -೨೬೬೭೩೦೫೬

೨೪ ಘಂಟೆಗಳ ಔಷಧಿ ವ್ಯಾಪಾರ

ಬೌರಿಂಗ್ ಮತ್ತು ಲೇಡಿಕರ್ಜನ್ ಆಸ್ಪತ್ರೆ -೨೫೫೯೧೩೨೫, ೨೫೫೯೧೩೬೨

ಹಾಸ್ಮಟ್ -೨೫೫೯೧೩೨೫

ಜನತಾಬಜಾರ್ (ವಿಕ್ಟೋರಿಯಾ ಆಸ್ಪತ್ರೆ) -೨೫೫೯೩೭೩೬

ಕಿಮ್ಸ್ ಆಸ್ಪತ್ರೆ -೨೬೬೭೩೦೫೬

ಸಿಂಧಿ ಚಾರಿಟಬಲ್ ಆಸ್ಪತ್ರೆ -೨೨೨೩೭೧೧೭

ಬೆಂಗಳೂರು ಮಹಾನಗರ ಪಾಲಿಕೆ- ೨೨೨೨ ೧೧೪೪, ೨೨೨೩೭೩೧೫

ದಂತ ಚಿಕಿತ್ಸೆ -ಬೆಂಗಳೂರು ಇನ್ಸ್ ಟಿಟ್ಯೂಟ್ ಆಫ್

ಡೆಂಟಲ್ ಸೈನ್ಸ್ ಅಂಡ್ ಹಾಸ್ಪಿಟಲ್ -೨೬೫೬೨೭೭೭

ದಂತ ಚಿಕಿತ್ಸೆ -ಸರ್ಕಾರೀ ಡೆಂಟಲ್ ಕಾಲೇಜ್ -೨೬೭೦೫೦೫೩.

ನೇತ್ರ ಚಿಕಿತ್ರೆ -ಅಗರವಾಲ್ ಐ ಹಾಸ್ಪಿಟಲ್ -೨೨೨೪೦೨೦೦

ಸರ್ಕಾರಿ ಮಿಂಟೋ ಆಸ್ಪತ್ರೆ -೨೬೭೦೭೧೬

ಪ್ರಭಾ ಐ ಕ್ಲಿನಿಕ್ -೨೬೬೩೭೦೪೧

ನಾರಾಯಣ ನೇತ್ರಾಲಯ -೨೨೩೩೨೫೩೧

ಬೆಂಗಳೂರು 'ರೆಸಾರ್ಟ್'ಗಳು (ಆರೋಗ್ಯವಿರಾಮ ತಾಣ)

ಗೋಲ್ಡನ್ ಪಾಮ್ಸ್ ರೆಸಾರ್ಟ್ ಅಂಡ್ ಸ್ಪಾ	-	೨೩೭೧೨೨೨೨
ಅಂಗ್‌ಸಾನ ಓಯಸಿಸ್ ಸ್ಪಾ ಅಂಡ್ ರೆಸಾರ್ಟ್	-	೨೮೪೬೮೮೬೮
ತಾಜ್ ಕುಟೀರಮ್	-	೨೮೪೬೬೩೨೬
ದಿ ವಿಲೇಜ್ ರೆಸಾರ್ಟ್	-	೨೮೪೩೮೨೪೧
ರಮಣಶ್ರೀ ಕ್ಯಾಲಿಫೋರ್ನಿಯಾ ಕ್ಲಬ್ ಅಂಡ್ ರೆಸಾರ್ಟ್	-	೨೮೪೬೧೨೫೦
ದಿ ಸಿಲ್ವನ್ ವಿಲ್ಲಾ ಸಂಭ್ರಮ ಹೋಟೆಲ್ಸ್	-	೦೮೧೫೧-೬೩೪೧೪
ಸನ್ ವ್ಯಾಲಿ ಕ್ಲಬ್	-	೨೩೪೮೦೩೪೨
ಶಕ್ತಿ ಶ್ರೀ ಶಂಕರ ಆಯುರ್ವೇದ ಹೆಲ್ತ್ ರೆಸಾರ್ಟ್	-	೨೮೬೦೧೮೦೦
ಗ್ರೀನ್ ವ್ಯಾಲಿ	-	೨೭೬೫೯೦೪೬
ದಿ ಕ್ಲಬ್	-	೨೮೬೦೦೬೬೫
ಎಂಎಸ್ ರೆಸಾರ್ಟ್ಸ್ ಅಂಡ್ ಫಾರಂಸ್	-	೨೭೨೮೫೪೪೨೫
ಎಮರಾಲ್ಡ್ ಐಲ್ ರೆಸಾರ್ಟ್	-	೨೫೩೦೨೨೨೧

ನಿಮ್ಮ ನೆರವಿಗೆ ಕೆಲ ಫೋನ್ ನಂಬರ್‌ಗಳು
ಹಾವು ಹಿಡಿದುಕೊಂಡು ಹೋಗಿ ರಕ್ಷಿಸುವವರು: ಮೊಹಮ್ಮದ್ ಅನೀಸ್ ೯೮೪೪೪೦ ೩೭೪೨೪ ರೇಡಿಯೋ ಟ್ಯಾಕ್ಸಿ: ೨೩೫೨೩೬೩೬ ಫೋನ್ ಮಾಡಿ ವಿಚಾರಿಸಿ: ೨೩೩೨೦೧೫೨ - ಗೋಪಿನಾಥ್ ರೇಡಿಯೋ ಸಿಟಿ ಟ್ಯಾಕ್ಸಿ
ಕೆಲವು ಟೂರಿಸ್ಟ್ ಸಂಸ್ಥೆಗಳು -ಕಾರುಗಳಿಗೂ ವಿಚಾರಿಸಬಹುದು
ವಿಷ್ಣು ಟ್ರಾವೆಲ್ -೨೬೬೭೦೯೯೪ ವಿಷ್ಣು ಟ್ರಾವೆಲ್ ಲೈನ್ಸ್ -೨೬೫೭೫೦೪೫ ಜನತಾ ಟೂರಿಸ್ಟ್ -೨೨೨೬೧೪೪೦, ೨೨೨೬೫೫೭೭ ನ್ಯಾಷನಲ್ ಟ್ರಾವೆಲ್ಸ್ -೨೨೪೭೬೨೭೦ ನಿರ್ಮಲ ಟ್ರಾವೆಲ್ಸ್ -೨೩೬೪೧೪೪೦ ಶರ್ಮಾ ಟ್ರಾನ್ಸ್‌ಪೋರ್ಟ್ -೨೬೭೦೪೭೬೫ ಎಸ್‌ಆರ್‌ಎಸ್ ಟ್ರಾವೆಲ್ಸ್ -೨೬೭೦೩೩೦೪ ಶ್ರೀ ಚೈತನ್ಯ ಟ್ರಾವೆಲ್ಸ್ -೨೬೫೦೪೯೨೫
ಕರ್ನಾಟಕ ರಾಜ್ಯ ಪ್ರವಾಸ ನಿಗಮ
ಪ್ರವಾಸದ ಎಲ್ಲ ಅಗತ್ಯಗಳನ್ನು ಪೂರೈಸುವ ಕರ್ನಾಟಕ ರಾಜ್ಯ ಸರ್ಕಾರದ ವಿಭಾಗ ಇಲ್ಲಿಗೆ ಸಂಪರ್ಕಗೊಂಡು ನಿಮ್ಮ ಪ್ರವಾಸ ಯೋಜನೆಯನ್ನು ನಿರ್ಧರಿಸ ಬಹುದು ೨೨೩೫೨೯೦೨ -ಖನಿಜ ಭವನ ೨೨೨೭೫೫೪೬೯ -ಬಾದಾಮಿಕಟ್ಟಡ ೨೨೨೫೭೪೨೧ -ಬೆಂಗಳೂರು ಬಸ್ ನಿಲ್ದಾಣ ೨೨೪೭೦೦೬೪ -ಬೆಂಗಳೂರು ಸಿಟಿ ರೈಲ್ವೇ ನಿಲ್ದಾಣ.

ಕೆಲವು ರೈಲು ಸಂಚಾರ ಸಮಯಗಳು

	ಹೊರಡುವುದು	ಬರುವುದು
ಕರ್ನಾಟಕ ಎಕ್ಸ್‌ಪ್ರೆಸ್	೧೮೩೦	೧೩೫೫
ರಾಜಧಾನಿ ಎಕ್ಸ್‌ಪ್ರೆಸ್	೧೮೩೫	೦೭೫೫
(ಸೋ, ಬು, ಗು, ಭಾನುವಾರ)		
ಉದ್ಯಾನ್ ಎಕ್ಸ್‌ಪ್ರೆಸ್	೨೦೦೦	೦೯೦೫
ಬೃಂದಾವನ ಎಕ್ಸ್‌ಪ್ರೆಸ್	೧೪೩೦	೧೩೨೦
ತಂಜಾವೂರು ಎಕ್ಸ್‌ಪ್ರೆಸ್	೧೯೦೦	೧೪೪೫
ತಿರುಪತಿ ವೇಗ ಎಕ್ಸ್‌ಪ್ರೆಸ್	೦೭೩೫	೦೭೨೫
ಟೀಪೂ ಎಕ್ಸ್‌ಪ್ರೆಸ್	೧೪೧೫	೧೩೪೫
ಚಾಮುಂಡಿ ಎಕ್ಸ್‌ಪ್ರೆಸ್	೧೪೧೫	೦೯೪೦
ಮೈಸೂರು ಪ್ಯಾಸೆಂಜರ್	೧೬೩೦	೨೧೫೫
	೨೩೪೫	೦೪೦೦
	೦೫೩೦	೧೨೧೫
ಜನಶತಾಬ್ದಿ ಎಕ್ಸ್‌ಪ್ರೆಸ್	೦೬೦೦	೨೧೩೦
ರಾಣಿ ಚೆನ್ನಮ್ಮ ಎಕ್ಸ್‌ಪ್ರೆಸ್	೨೧೦೦	೦೭೪೦
ಹುಬ್ಬಳ್ಳಿ ಇಂಟರ್ ಸಿಟಿ	೧೪೩೦	೧೩೫೦
ಅರಸಿಕೆರೆ ಪ್ಯಾಸೆಂಜರ್	೧೪೧೫	೦೯೨೦
ಕನ್ಯಾಕುಮಾರಿ ಎಕ್ಸ್‌ಪ್ರೆಸ್	೨೧೦೦	೦೫೦೦
ತ್ರಿವೇಂಡ್ರಂ ಎಕ್ಸ್‌ಪ್ರೆಸ್	೧೪೪೫	೦೯೪೦
ಹಂಪಿ ಎಕ್ಸ್‌ಪ್ರೆಸ್	೨೨೦೦	೦೬೨೫

ಬೆಂಗಳೂರು ನಗರ ರೈಲ್ವೇ ನಿಲ್ದಾಣ: ಫೋನ್: ೨೨೨೦೦೯೭೧
ಫೋನ್ ನಂ. ೧೩೧
ರಿಸರ್ವೇಷನ್. ೧೩೨ ಸಾರ್ವಜನಿಕ ಸಂಪರ್ಕ: ೨೨೨೦೩೩೩೭೩

ಬೆಂಗಳೂರು ವಿಮಾನ ನಿಲ್ದಾಣ: ೨೫೨೨೭೯೪೪
ಡೆಕ್ಕನ್ ಏವಿಯೇಷನ್: ೨೪೫೬೧೩೭೪
ಇಂಡಿಯನ್ ಏರ್‌ಲೈನ್ಸ್: ೨೨೨೧೧೯೧೪
ಜೆಟ್‌ಏರ್‌ವೇಸ್: ೨೫೨೨೧೯೨೯
ಸಹಾರಾಏರ್‌ಲೈನ್ಸ್: ೨೫೫೪೩೯೩೭

ಇ-ಮೈಲ್ ಸಂಪರ್ಕ

ಈಗ ಸಾಮಾನ್ಯ ಪ್ರಜೆ ಕೂಡ ಮುಖ್ಯಮಂತ್ರಿಯೂ ಸೇರಿ ಹಿರಿಯ ಅಧಿಕಾರಿಗಳೊಂದಿಗೆ ಸಂಪರ್ಕ ಇಟ್ಟುಕೊಳ್ಳಬಹುದು. ತನ್ನ ದೂರುಗಳನ್ನು ಕೊಂಡೊಯ್ಯಬಹುದು. ಕೆಲವು ಮುಖ್ಯ ಈ-ಮೈಲ್ ವಿಳಾಸಗಳು

Chief Minister: cm@kar.nic.in
BWSSB: chaiman@bwssb.org
BCC: commissioner@blrbmp.com
BDA: bda@vsnl.com
BMTC: bmtc@bmtcinfo.com
Police: addlcptr@rediffmail.com
Telecom: gmbgtd@bangaloretelecom.com
BESCOM: mdbescom@bescom.org
BATF: contactus@blrforward.org

WEBSITES

CET: www.kar.nic.in/cet
POLICE: www.bangalorecitypolice.org
BDA: www.indiawatch.org.in/bda
Southern Railway: www.srailway.com
Passport Office: www.kar.nic.in/passport

ಆರೋಗ್ಯ ಕೇಂದ್ರಗಳು

ಆಯುರ್ವೇದಗ್ರಾಂ ಹೆರಿಟೇಜ್ ವೆಲ್‌ನೆಸ್‌ಸೆಂಟರ್	-	೨೭೯೪೫೪೨೮
ಚಿರಾಯು ಆಯುರ್ವೇದಿಕ್ ಹೆಲ್ತ್ ಅಂಡ್ ರಿಜುವನೇಶನ್ ಸೆಂಟರ್	-	೨೫೫೦೦೪೫೫
ಇನ್ಸ್‌ಟಿಟ್ಯೂಟ್ ಆಫ್ ನ್ಯಾಚುರೊಪತಿ ಅಂಡ್ ಯೋಗಿಕ್ ಸೈನ್ಸಸ್, ಜಿಂದಾಲ್	-	೨೩೭೧೭೭೭೭
ಸೌಖ್ಯ, ದಿ ಇಂಟರ್‌ನ್ಯಾಷನಲ್ ಹೋಲಿಸ್ಟಿಕ್ ಹೆಲ್ತ್ ಸೆಂಟರ್	-	೨೭೯೪೫೦೦೧
ಸ್ವಾಮಿ ವಿವೇಕಾನಂದ ಯೋಗ ಅನುಸಂಧಾನ ಸಂಸ್ಥಾನ	-	೨೬೬೧೨೬೬೯




ACC. No.
5811
DATE:



ಬೆಂಗಳೂರು ಭಾರತದ ಅತಿಸುಂದರ, ಭವಿಷ್ಯದ ನಗರ: ನೆಹರೂ

ಈ ಮಹಾನ್ ನಗರವನ್ನು ಮತ್ತು ವಾಸಿಸುತ್ತಿರುವವರನ್ನು ನೋಡಿಕೊಳ್ಳುವುದು, ಅಲ್ಲದೆ ಇದನ್ನು ಅತಿ ಸುಂದರವಾಗಿ ಉಳಿಸಿಕೊಂಡು ಅದೇ ಸಮಯದಲ್ಲಿ ಪ್ರಜೆಗಳಿಗೆ ಅಗತ್ಯವಾದ ಎಲ್ಲ ಅನುಕೂಲಗಳನ್ನು ಮಾಡಿಕೊಡುವುದು ಸುಲಭದ ಕೆಲಸವೇನಲ್ಲ. ಈಚಿನ ಕೆಲವರ್ಷಗಳಲ್ಲಿ ಅಚ್ಚರಿಯಾಗುವಷ್ಟು ಅಗಾಧವಾಗಿ ಬೆಳೆದಿರುವ ಬೆಂಗಳೂರು ನಗರದ ಉಸ್ತುವಾರಿ ನಿಜವಾಗಲೂ ಸಂಬಂಧಿಸಿದವರಿಗೆ ದೊಡ್ಡ ಭಾರವಾದ ವಿಷಯವೇ ಆಗಿದೆ. ಈಗ ಬೆಂಗಳೂರು ಭಾರತದ ಉಳಿದ ನಗರಗಳ ಹಾಗಿಲ್ಲ. ಇತರ ಬಹುಪಾಲು ನಗರಗಳು ವರ್ತಮಾನ ಮತ್ತು ಭವಿಷ್ಯ ಕಾಲವನ್ನು ಕಾಣಿಸುತ್ತವೆ ಆದರೆ ಮುಖ್ಯವಾಗಿ ಭೂತಕಾಲ. ಆದರೆ ಬೆಂಗಳೂರು, ಈಗಾಗಲೇ ನಾನು ಹೇಳಿದಂತೆ, ಬೇರೆಲ್ಲ ನಗರಗಳಿಗಿಂತಲೂ ಭವಿಷ್ಯ ಭಾರತದ ಚಿತ್ರವನ್ನು ಕಾಣಿಸುತ್ತದೆ; ಬೆಂಗಳೂರಿನ ಬೃಹತ್ ವಿಜ್ಞಾನ, ತಾಂತ್ರಿಕತೆ ಮತ್ತು ಕೈಗಾರಿಕೆಗಳ ದಟ್ಟನೆಲೆ ಎದ್ದು ಕಾಣಿಸುತ್ತದೆ. ಹೀಗಾಗಿ ಭವಿಷ್ಯಕ್ಕಾಗಿ ಈ ನಗರವನ್ನು ಬೆಳೆಸುವುದು, ಬರಲಿರುವ ಭವಿಷ್ಯ ಕಾಲಕ್ಕಾಗಿ ಯೋಜಿಸುವುದು ನಿಮ್ಮೆಲ್ಲರಿಗೂ ಬಹಳ ಮುಖ್ಯವಾದ ವಿಷಯ. ಬಹುಪಾಲು ಭಾರತೀಯ ಮುಖ್ಯ ನಗರಗಳು ಭೂತಕಾಲವನ್ನು ಪ್ರತಿನಿಧಿಸುತ್ತವೆ; ಇತಿಹಾಸವನ್ನು ಪ್ರತಿನಿಧಿಸುತ್ತವೆ. ಆದರೆ, ನಿಮ್ಮ ಈ ನಗರ ನಾವು ರೂಪಿಸುತ್ತಿರುವ ಭವಿಷ್ಯವನ್ನು ಪ್ರತಿನಿಧಿಸುತ್ತದೆ. ಇಂಥ ನಗರದ ಉಸ್ತುವಾರಿ ಹೊತ್ತಿರುವುದಕ್ಕಿಂತಲೂ ಅಸಾಧಾರಣವಾದ, ಆಕರ್ಷಕವಾದ ಕೆಲಸ ಬೇರೊಂದಿಲ್ಲ. ಬೆಂಗಳೂರು ಬರೀ ಭವಿಷ್ಯದ ನಗರ ಮಾತ್ರವಲ್ಲ, ಭಾರತದಲ್ಲೆ ಒಂದು ಅತಿ ಸುಂದರ ನಗರ!

– ಭಾರತದ ಮೊದಲ ಪ್ರಧಾನಿ, ಪಂಡಿತ ಜವಹರಲಾಲ ನೆಹರೂ
ಬೆಂಗಳೂರು ನಗರಸಭೆ ಬಿನ್ನವತ್ತಳೆಗೆ ಉತ್ತರಿಸುತ್ತ : 17 ಜುಲೈ 1962